" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

20ನೇ ಜೂನ್ 2017
ಮಂಗಳವಾರ

## ವಿಷಯಾನುಕ್ರಮಣಿಕೆ

1. **ಪ್ರಶ್ನೋತ್ತರಗಳು**

**ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

1941- ಅಂಬೇಡ್ಕರ್ ಭವನಗಳ ನಿರ್ಮಾಣ -ಶ್ರೀ ಆರ್.ಧರ್ಮಸೇನ
1887-ಚಿಕ್ಕಮಗಳೂರು ಜಿಲ್ಲೆಗೆ ಗಿರಿಜನ ಅಭಿವೃದ್ಧಿ ಯೋಜನೆಯಡಿಯಲ್ಲ ನೀಡಲಾಗಿರುವ ಅನುದಾನದ ಬಗ್ಗೆ. -ಶ್ರೀಮತಿ ಮೋಟಮ್ಮ
1951-ಕೊಡಗು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯದ ವಿದ್ಯಾರ್ಥಿಯ ಪ್ರತಿ ದಿನದ ವೆಚ್ಚ ಕುರಿತು -ಶ್ರೀಮತಿ ವೀಣಾ ಅಚ್ಚಯ್ಯ

2. **ರೈತರಿಗೆ ತೊಗರಿ ಬಾಕಿ ಪಾವತಿಸುವ ಬಗ್ಗೆ.**
3. **ವಿಶೇಷ ಪ್ರಸ್ತಾವಗಳು**

*ನಿಯಮ 330 ಎ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಗಳು*

**ಅ) ಕೊಡಗು ಜಿಲ್ಲೆಯ ದುಬಾರೆ ಆನೆ ಶಿಬಿರದಿಂದ ಆನೆಗಳನ್ನು ಸ್ಥಳಾಂತರಿಸುವ ಬಗ್ಗೆ.**
ಶ್ರೀಮತಿ ವೀಣಾ ಅಚ್ಚಯ್ಯ
ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

**ಆ) ಎನ್.ಎ.ಮುತ್ತಣ್ಣ ಸ್ಮಾರಕ ಪೋಲೀಸ್ ಮಕ್ಕಳ ವಸತಿ ಶಾಲೆ ಧಾರವಾಡ ಇಲ್ಲಿ ಕಾರ್ಯ ನಿರ್ವಹಿಸಿದ ದೈಹಿಕ ಮತ್ತು ಯೋಗ ಶಿಕ್ಷಕರನ್ನು ವಜಾ ಮಾಡಿರುವ ಬಗ್ಗೆ.**
ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

**ಇ) ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಕನ್ನಡಿಗರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕುರಿತು.**
ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)
ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

**ಈ) ಕರ್ನಾಟಕ ನರ್ಸಿಂಗ್ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಕರ್ನಾಟಕ ಹೊರತುಪಡಿಸಿ ಬೇರೆ ರಾಜ್ಯಗಳಲ್ಲಿ ಮಾನ್ಯತೆ ಇಲ್ಲವೆಂಬ ಬಗ್ಗೆ.**
ಶ್ರೀ ಐವನ್ ಡಿ'ಸೋಜಾ
ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

4. **ಸಭೆಯ ಮುಂದಿಡಲಾದ ಕಾಗದ ಪತ್ರಗಳು.**
5. **ವರದಿಗಳನ್ನೊಪ್ಪಿಸುವುದು.**
6. **ಶೂನ್ಯವೇಳೆಯಲ್ಲಿ ಪ್ರಸ್ತಾಪವಾಗಿರುವ ವಿಷಯಕ್ಕೆ ಸರ್ಕಾರದಿಂದ ಉತ್ತರವನ್ನು ಕೊಡಿಸಬೇಕೆನ್ನುವ ಬಗ್ಗೆ.**
7. **ನಿಯಮ 68ರ ಮೇರೆಗೆ**

**ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮುಂದುವರೆದ ಚರ್ಚೆ**

ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು)
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಸೋಮಣ್ಣ ಮ.ಬೇವಿನಮರದ
ಶ್ರೀ ಪುಟ್ಟಣ್ಣ

8. **ಪ್ರಕಟಣೆ**
9. **ಹಣಕಾಸು ವಿಧೇಯಕಗಳನ್ನು ಹೊರತುಪಡಿಸಿ ಇನ್ನುಳಿದ ವಿಧೇಯಕಗಳನ್ನು 2-3 ದಿವಸ ಮುಂಚಿತವಾಗಿ ಮಾನ್ಯ ಸದಸ್ಯರಿಗೆ ಸರ್ಕ್ಯುಲೇಟ್ ಮಾಡಬೇಕೆನ್ನುವ ಬಗ್ಗೆ.**

10. **ನಿಯಮ 68ರ ಮೇರೆಗೆ**

**ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ**

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)
ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು)
ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಸೋಮಣ್ಣ ಮ.ಬೇವಿನಮರದ
ಶ್ರೀ ರಮೇಶ್ ಬಾಬು

11. **ಚುನಾವಣಾ ಪ್ರಸ್ತಾವಗಳು**

12. **ಗಮನ ಸೆಳೆಯುವ ಸೂಚನೆ.**

**ಸರ್ಕಾರದ ಹಾಗೂ ಖಾಸಗಿಯವರಿಂದ ನಡೆಸುತ್ತಿರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳು ಹಾಗೂ ಅವುಗಳು ಸಂಸ್ಕರಣೆ ಮಾಡುತ್ತಿರುವ ಘನತ್ಯಾಜ್ಯದ ಹಾಗೂ ವಿಲೇವಾರಿಗಾಗಿ ಮೀಸಲಿಟ್ಟಿರುವ ಹಣದ ಕುರಿತು.**

ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಈಶ್ವರ್ ಖಂಡ್ರೆ(ಪೌರಾಡಳಿತ ಸಚಿವರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್

13. **ಪ್ರಕಟಣೆಗಳು**

<><><>

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(832):11.00:20-06-2017:ಎಂವಿ:ಎಂಡಿ**

**ಕರ್ನಾಟಕ ವಿಧಾನ ಪರಿಷತ್ತು**

**ಮಂಗಳವಾರ, *20ನೇ ಜೂನ್, 2017.***

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಬೆಳಿಗ್ಗೆ 11 ಗಂಟೆ 09 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ರವರು**
**ಪೀಠದಲ್ಲಿ ಉಪಸ್ಥಿತರಿದ್ದರು.**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

## 1. ಪ್ರಶ್ನೋತ್ತರಗಳು

**ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**ಸಭಾಪತಿಯವರು:–** ಇದು ಮುಂದುವರೆದ ಅಧಿವೇಶನವಾಗಿರುವುದರಿಂದ ಪ್ರಶ್ನೋತ್ತರ ಅವಧಿಯೆಂದು ಇರುವುದಿಲ್ಲ. ಆದರೆ, ತಡೆಹಿಡಿಯಲಾದ ನಾಲ್ಕು ಪ್ರಶ್ನೆಗಳನ್ನು ಪಟ್ಟಿ ಮಾಡಿದ್ದೇವೆ. ಅದರಲ್ಲಿ ಮೂರು ಪ್ರಶ್ನೆಗಳು ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಸಂಬಂಧಿಸಿದ್ದು, ನಾಲ್ಕನೇ ಪ್ರಶ್ನೆ ಯಾವುದೆಂದು ನೋಡುತ್ತೇನೆ. ಹಾಗಾಗಿ ಆ ನಾಲ್ಕು ಜನರ ಹೆಸರನ್ನು ಕರೆಯುತ್ತೇನೆ.

**(ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 196 (1998)**

(ಮಾನ್ಯ ಸದಸ್ಯರಾದಂತಹ ಶ್ರೀಯುತ ಎಂ.ಡಿ.ಲಕ್ಷ್ಮೀನಾರಾಯಣರವರು ಗೈರು ಹಾಜರಿದ್ದರು)

(ಮುಂದು...)

(833) 20.06.2017 11.10 LL-MD

**ಪ್ರಶ್ನೆ ಸಂಖ್ಯೆ:1941**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೆ, ಕಳೆದ 3 ವರ್ಷಗಳಲ್ಲಿನ ಡಾ||ಬಿ.ಆರ್.ಅಂಬೇಡ್ಕರ್ ಭವನಗಳ ನಿರ್ಮಾಣದ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ, ನನ್ನ ಪ್ರಶ್ನೆ ಈ ಅಂಬೇಡ್ಕರ್ ಭವನಗಳಿಗೆ ಸರ್ಕಾರ ಅನುದಾನ ಕೊಡುವುದಕ್ಕೆ ಮುಂಚೆ, ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳು ಹಣ ಕೊಡುತ್ತಿದ್ದರು. ಹಿಂದೆ ಅನುದಾನ ಕೊಟ್ಟಂತಹ ಅಂಬೇಡ್ಕರ್ ಭವನಗಳ ಕಟ್ಟಡ ಕಾಮಗಾರಿಗಳು ಸುಮಾರು 15–20 ವರ್ಷಗಳಿಂದ ಪೂರ್ಣವಾಗದೇ ನಿಂತಿವೆ. ದಯಮಾಡಿ, ಅದು ಕೂಡ ಸರ್ಕಾರದ್ದೇ ಹಣ. ಈ ಬಗ್ಗೆ ನಾನು ಮಾನ್ಯ ಸಚಿವರಲ್ಲಿ ಒಂದು ಬಾರಿ ಪ್ರಸ್ತಾಪಿಸಿ 'ಸರ್, ದಯಮಾಡಿ ಅರ್ಧಕ್ಕೆ ನಿಂತಿರತಕ್ಕ ಭವನಗಳನ್ನು ಪೂರ್ಣಗೊಳಿಸಿ ಕೊಡಿ' ಎನ್ನುವಂತಹ ಮಾತನ್ನು ಹೇಳಿದ್ದೆನು. ಆದರೆ, ಅವರು 'ಶಾಸಕರು, ಸಂಸದರುಗಳ ಅನುದಾನದಲ್ಲಿಯೇ ಅದನ್ನು ಪೂರ್ಣಗೊಳಿಸಿ' ಎನ್ನುವಂತಹ ಮಾತನ್ನು ಹೇಳಿದ್ದರು. ಆದರೆ, ನಮ್ಮ ಅನುದಾನದಲ್ಲಿ 1 ಲಕ್ಷ ಅಥವಾ 2 ಲಕ್ಷ ಅನುದಾನ ಕೊಡಬಹುದೇ ಹೊರತು 50 ಲಕ್ಷ ಅಥವಾ 20 ಲಕ್ಷ ಕೊಡುವುದಕ್ಕೆ ನಮ್ಮ ಕೈಯಲ್ಲಿ ಅಸಾಧ್ಯ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಯಮಾಡಿ, ಯಾವ ಯಾವ ಹಳೆಯ ಭವನಗಳು ಅರ್ಧಕ್ಕೆ ನಿಂತಿವೆ ಅಂತಹವುಗಳನ್ನು ಪೂರ್ಣಗೊಳಿಸಬೇಕಾಗಿದೆ. ಉದಾಹರಣೆಗೆ, ಅಂಬೇಡ್ಕರ್ ಭವನ, ಜಗಜೀವನರಾಮ್ ಭವನ ಅಥವಾ ವಾಲ್ಮೀಕಿ ಭವನ ಇರಬಹುದು, ಇವೆಲ್ಲದಕ್ಕೂ ಪ್ರಾಶಸ್ತ್ಯ ಕೊಟ್ಟು ಮುಗಿಸಬೇಕು. ನಾನು ಎರಡು ಜಿಲ್ಲೆ ಬಗ್ಗೆ ಕೇಳಿದ್ದೇನೆ. ಆದರೆ, ರಾಜ್ಯಾದ್ಯಂತ ಬಹಳಷ್ಟಿವದ ಎನ್ನತಕ್ಕಂತಹದ್ದು ನನ್ನ ಗಮನದಲ್ಲಿದೆ. ದಯಮಾಡಿ, ಮಾನ್ಯ ಸಚಿವರು ಇದಕ್ಕೆ ಒತ್ತನ್ನು ಕೊಡಬೇಕು ಮತ್ತೆ ನಾನು ನಮ್ಮ ಪ್ರಧಾನ ಕಾರ್ಯದರ್ಶಿಗಳನ್ನು ಕೇಳಿದ್ದೇನೆ. ಅವರು 200 ಕೋಟಿ ರೂಪಾಯಿಗಳು ಬೇಕು ಎಂದು ಹೇಳಿದ್ದಾರೆ. 200 ಕೋಟಿ ರೂಪಾಯಿಗಳು ಈ ಹಳೆಯ ಭವನಗಳಿಗೆ ಕೊಡತಕ್ಕಂತಹದ್ದು ದೊಡ್ಡ ವಿಚಾರವಲ್ಲ. ಆದುದರಿಂದ, ದಯಮಾಡಿ ಮಾನ್ಯ ಸಚಿವರು ಇದನ್ನು ಪೂರ್ಣಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್. ಆಂಜನೇಯ:–** ಮಾನ್ಯ ಸಭಾಪತಿಯವರೆ, ನಾವು ಒಂದು ಮಾರ್ಗಸೂಚಿಯನ್ನು ಸಿದ್ಧ ಮಾಡಿಕೊಂಡಿದ್ದೇವೆ. ಈಗ ಗ್ರಾಮೀಣ ಪ್ರದೇಶಗಳಲ್ಲಿ, ಹಳ್ಳಿಗಳಲ್ಲಿ ಒಂದು ಸಮುದಾಯ ಭವನ ಚಿಕ್ಕದಾಗಿ ಮಾಡುವುದಾದರೆ ಅದಕ್ಕೆ 10 ಲಕ್ಷ ಅಥವಾ 12 ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ. ಅದಕ್ಕೆ 12 ಲಕ್ಷ ರೂಪಾಯಿ ಸರ್ಕಾರದಿಂದ ಅನುದಾನ ಕೊಟ್ಟಿರುತ್ತೇವೆ. ಆದರೆ, ಶಾಸಕರು ಏನು ಮಾಡುತ್ತಾರೆಂದರೆ, 12 ಲಕ್ಷ ಕಡಿಮೆಯಾಯಿತು. ನಾನು ಹಣ ಕೊಡುತ್ತೇನೆ ಎಂದು ಹೇಳಿ ಆ ನಂತರ ಬೇರೆ ಬೇರೆ ಮೂಲಗಳಿಂದ ಹಣ ಸಂಗ್ರಹಿಸಿ ದೊಡ್ಡ ಭವನ ನಿರ್ಮಾಣ ಮಾಡೋಣವೆಂದು ಹೋಗುತ್ತಾರೆ. ಹೀಗಾಗಿ ಅಂತಹ ಭವನಗಳು ಪೂರ್ಣಗೊಳ್ಳುವುದಿಲ್ಲ. ನಾವು ಕೊಟ್ಟಿರುವಂತಹ ಹಣದ ವೆಚ್ಚದಲ್ಲಿಯೇ ಅದನ್ನು ಪೂರೈಸಿಕೊಳ್ಳಬೇಕು. ಈಗ ತಾಲ್ಲೂಕು ಮಟ್ಟದಲ್ಲಿ 1.50 ಕೋಟಿ ರೂಪಾಯಿ ಅನುದಾನದಲ್ಲಿ ಭವನಗಳನ್ನು ನಿರ್ಮಾಣ ಮಾಡಲಿಕ್ಕೆ ಮತ್ತು ಜಿಲ್ಲಾ ಮಟ್ಟದಲ್ಲಿ 2.50 ಕೋಟಿ ರೂಪಾಯಿಗಳ ಅನುದಾನ ಕೊಡುತ್ತಿದ್ದೇವೆ. ಅಲ್ಲಿಯೂ ಕೂಡ ಇದೇ ರೀತಿ ಆಗಿದೆ. ನಾವು ಭವನಗಳ ನಿರ್ಮಾಣಕ್ಕಾಗಿ 2.50 ಕೋಟಿ ರೂಪಾಯಿ ಅನುದಾನ ಕೊಟ್ಟರೆ, ಇವರು 5 ಕೋಟಿ ರೂಪಾಯಿ ಅಂದಾಜು ಮಾಡಿಕೊಂಡು, ಮುನಿಸಿಪಾಲಿಟಿಯಿಂದ ನಾವು ತೆಗೆದುಕೊಳ್ಳುತ್ತೇವೆ, ಸಂಸದರಿಂದ ಹಣವನ್ನು ಪಡೆಯುತ್ತೇವೆಂದು ಹೇಳುವುದರಿಂದ ಇವೆಲ್ಲವೂ ಕೂಡ ಸ್ಥಗಿತಗೊಳ್ಳುತ್ತವೆ. ತದನಂತರ ನಮ್ಮ ಹತ್ತಿರ ಬರುತ್ತಾರೆ. ಅದಕ್ಕಾಗಿಯೇ ನಾನು ಏನು ಮಾಡಿದ್ದೇನೆಂದರೆ, ಇವರ ಸಹವಾಸವೇ ಬೇಡವೆಂದು ನಾನೇ ನೇರವಾಗಿ, ...

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಚಿವರೆ, ತಮಗೆ ಯಾರ ಸಹವಾಸ ಬೇಡ?

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಅವರ ಹತ್ತಿರ ಹಾಕಿಸುತ್ತೇನೆ. ಇವರ ಹತ್ತಿರ ಹಾಕಿಸುತ್ತೇನೆ. ಮುನಿಸಿಪಾಲಿಟಿಯಿಂದ ಹಣ ತರುತ್ತೇವೆಂದು ಹೇಳುತ್ತಾರೆ, ಅದು ಬೇಡ. ನಾವೇ plan, estimate ಮಾಡಿ, ತಾಲ್ಲೂಕು ಭವನ 1.50 ಕೋಟಿ ರೂಪಾಯಿ ಅಥವಾ 2 ಕೋಟಿ ರೂಪಾಯಿ ಅನುದಾನದಲ್ಲಿ ಮಾಡುವುದಾದರೆ, ನಿರ್ದಿಷ್ಟವಾಗಿ ಒಂದು ಕಾಲಮಿತಿಯೊಳಗೆ ಅಂದರೆ, ಸುಮಾರು 18 ತಿಂಗಳೊಳಗಾಗಿ ಅಥವಾ 12 ತಿಂಗಳೊಳಗಾಗಿಯೇ ಆ ಭವನವನ್ನು ಪೂರೈಸಬೇಕು. ಅದಕ್ಕೆ ಎಷ್ಟು ದುಡ್ಡು ಬೇಕೋ plan, estimate ಪ್ರಕಾರ ನಾವು ಮಂಜೂರು ಮಾಡಿ ಟೆಂಡರ್ ಕರೆದು ಅದನ್ನು ಅವಧಿಯೊಳಗಾಗಿಯೇ ಪೂರ್ಣಗೊಳಿಸುವುದಕ್ಕೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಮಾನ್ಯ ಧರ್ಮಸೇನರವರ ಕಳಕಳಿ ನನಗೆ ಅರ್ಥವಾಗುತ್ತದೆ. ಎಲ್ಲೆಲ್ಲಿ ಆ ರೀತಿ ಅಂಬೇಡ್ಕರ್ ಭವನಗಳು ಅರ್ಧಂಬರ್ಧವಾಗಿ ನಿಂತು ಹೋಗಿವೆ ಅದಕ್ಕೆ ಎಷ್ಟು ಹಣ ಬೇಕು ಎನ್ನುವಂತಹ ವರದಿಯನ್ನು ತರಿಸಿಕೊಂಡು ಆ ಹಣವನ್ನು ಬಿಡುಗಡೆ ಮಾಡಲಿಕ್ಕೆ ನಾವು ತಯಾರಿದ್ದೇವೆ. ಆ ವಿಚಾರದಲ್ಲಿ ಯಾವುದೇ ತೊಂದರೆಯಿಲ್ಲ. ಸುಮಾರು 200 ಕೋಟಿ ರೂಪಾಯಿಗಳಷ್ಟು ಹಣ ಬೇಕು. ಹೌದು ನಿಜ, ಅದಕ್ಕಾಗಿ ನಾನು ಬೇರೆ ಬೇರೆ ಮೂಲಗಳಿಂದ ಹಣವನ್ನು ಕ್ರೋಢೀಕರಿಸಿಕೊಂಡು ಈ ಭವನಗಳನ್ನು ಪೂರ್ಣಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಮಾಜ ಕಲ್ಯಾಣ ಸಚಿವರ ಕಳಕಳಿ ನಮಗೆ ಅರ್ಥವಾಗುತ್ತದೆ. ಆದರೆ, ಸರ್ಕಾರ ಈ ದಲಿತರ ಬಗ್ಗೆ ಮತ್ತು ಹಿಂದುಳಿದವರ ಬಗ್ಗೆ ಏತಕ್ಕೆ ಇಷ್ಟೊಂದು ತಾತ್ಸಾರ ಮಾಡುತ್ತಿದೆಯೆನ್ನುವುದು ನನಗೆ ಅರ್ಥವಾಗುತ್ತಿಲ್ಲ? ಮೈಸೂರು ಜಿಲ್ಲೆಗೆ 3 ವರ್ಷಕ್ಕೆ ಒಟ್ಟು ಮಂಜೂರಾಗಿರುವ ಅನುದಾನ 1,758 ಕೋಟಿ ರೂಪಾಯಿಗಳು. ವೆಚ್ಚ ಆಗಿರುವುದು 860.50 ಕೋಟಿ ರೂಪಾಯಿಗಳು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇದು ಲಕ್ಷ, ಕೋಟಿ ಅಲ್ಲ. ಚಾಮರಾಜನಗರಕ್ಕೆ ಮಂಜೂರಾಗಿರುವ ಅನುದಾನ 1123.50 ಲಕ್ಷ ರೂಪಾಯಿ, ಖರ್ಚಾಗಿರುವುದು 331.50 ಲಕ್ಷ ರೂಪಾಯಿ. ಸರಿಸುಮಾರು ಶೇಕಡಾ 25ರಷ್ಟು ಮೈಸೂರು ಜಿಲ್ಲೆ, ಶೇಕಡಾ 50ರಷ್ಟು ಚಾಮರಾಜನಗರ ಜಿಲ್ಲೆ. ಏತಕ್ಕೆ ಈ ತಾರತಮ್ಯ? ಏಕೆಂದರೆ, ಈಗ ದಲಿತರಿಗೆ ಮತ್ತು ಹಿಂದುಳಿದವರ ಬಗ್ಗೆ ಸಾಕಷ್ಟು ಆಸಕ್ತಿ ಇಟ್ಟುಕೊಂಡಿರುವ ಸರ್ಕಾರ, ಮಾನ್ಯ ಸಚಿವರು ಕೂಡ ಒದ್ದಾಡುತ್ತಿದ್ದಾರೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ ಮಂಜೂರಾಗಿರುವಂತಹ ಹಣದಲ್ಲಿ 3 ವರ್ಷಕ್ಕೆ ಶೇಕಡಾ 25ರಷ್ಟು, 40ರಷ್ಟು, 50ರಷ್ಟು ಖರ್ಚಾದರೆ ಇದಕ್ಕೆ ಯಾರು ಜವಾಬ್ದಾರಿ? ಮಾನ್ಯ ಸಭಾಪತಿಗಳೆ, ದಯಮಾಡಿ ತಾವು ಸಹ ಇದನ್ನು ಗಮನಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲಾಧಿಕಾರಿಗಳಿಗೆ, ನೀವು ಸರಿಯಾಗಿ ಕೆಲಸ ಮಾಡಿಲ್ಲವೆಂದರೆ ನಿಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಅದು ಮಾಡುತ್ತೇವೆ, ಇದು ಮಾಡುತ್ತೇವೆ. ಎಂದು ಮೇಲಿಂದ ಮೇಲೆ ಚಾರ್ಜ್ ಮಾಡುತ್ತಾರೆ. ಇದಕ್ಕೆ ನಾವು ಏನು ಹೇಳಬೇಕು? ಶೇಕಡಾ 50ರಷ್ಟು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುದಾನ ಖರ್ಚಾಗಿಲ್ಲ. ಈ ಚಾಮರಾಜನಗರ ಜಿಲ್ಲೆಗೆ ಸುಮಾರು ಶೇಕಡಾ 25ರಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ದಲಿತರ ಬಗ್ಗೆ ಸರ್ಕಾರಕ್ಕೆ ಇದೇನಾ ಆಸಕ್ತಿ? ಯಾವ ಅಧಿಕಾರಿಗಳು ಈ ರೀತಿ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ? ಈಗ ಉದಾಹರಣೆಗೆ, ಮೈಸೂರು ಜಿಲ್ಲೆಗೆ 1,758 ಲಕ್ಷ ರೂಪಾಯಿ ಅನುದಾನ ಮಂಜೂರಾಗಿ, 1,205 ಲಕ್ಷ ರೂಪಾಯಿ ಬಿಡುಗಡೆಯಾಗಿದೆ. ಆದರೆ, ಖರ್ಚಾಗಿರುವುದು 860.50 ಲಕ್ಷ ರೂಪಾಯಿಗಳು ಮಾತ್ರ. ಅದೇ ರೀತಿ ಚಾಮರಾಜನಗರಕ್ಕೆ 1,123.50 ಲಕ್ಷ ರೂಪಾಯಿ ಅನುದಾನ ಮಂಜೂರು ಮಾಡಿ, 522.50 ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದರೆ, ಖರ್ಚಾಗಿರುವುದು 331.50 ಲಕ್ಷ ರೂಪಾಯಿಗಳು. ಏತಕ್ಕೆ ಈ ರೀತಿಯಾಗಿದೆ? ಇಷ್ಟೊಂದು ಬೇಜವಾಬ್ದಾರಿ ಏತಕ್ಕೆ? ಮಾನ್ಯ ಮುಖ್ಯಮಂತ್ರಿಗಳು ಮೇಲಿಂದ ಮೇಲೆ video conference ಅನ್ನು ಮಾಡುತ್ತಿರುವುದನ್ನು ನಾನು ನೋಡಿದ್ದೇನೆ ಮತ್ತು ಮಾನ್ಯ ಸಚಿವರು ಕೂಡ ಸಂಬಂಧಪಟ್ಟ ಜಿಲ್ಲೆಯ ಅಧಿಕಾರಿಗಳನ್ನು ಕರೆದು ಮಾತನಾಡುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಆದರೂ ಕೂಡ ಶೇಕಡಾ 25ರಷ್ಟು, 30ರಷ್ಟು ಅನುದಾನವನ್ನು ಖರ್ಚು ಮಾಡುತ್ತಿದ್ದರೆ, ಈ ರೀತಿ ಪಟ್ಟಿ ಕೊಟ್ಟ ನಂತರವೂ ನಾವು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕೇ? ಆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾನ್ಯ ಸಚಿವರು financial target, physical target ಇಟ್ಟಿಲ್ಲವೇ? ಇಷ್ಟನ್ನು ಮುಟ್ಟಲಿಲ್ಲವೆಂದರೆ ಶಿಸ್ತು ಕ್ರಮ ಜರುಗಿಸಲಾಗುವುದು, 3 ತಿಂಗಳಿಗೆ ಇಷ್ಟು ಖರ್ಚು ಮಾಡಬೇಕು. ಇಷ್ಟು ಕೆಲಸವಾಗಿರಬೇಕು. ಅಷ್ಟು ಕೆಲಸ ಆಗಲಿಲ್ಲವೆಂದರೆ ನಿಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿಲ್ಲವೆ? ಯಾವುದಾದರೂ ಒಬ್ಬ ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತಹ ಶಕ್ತಿ ಈ ಸರ್ಕಾರಕ್ಕಿದೆಯೇ ಎನ್ನುವುದು ನನ್ನ ನೇರವಾದ ಪ್ರಶ್ನೆ. ಕೇವಲ ಮೊಸಳೆ ಕಣ್ಣೀರು ಒರೆಸುವುದನ್ನು ನಾನು ಒಪ್ಪುವುದಿಲ್ಲ. ಹಣ ಬಿಡುಗಡೆ ಮಾಡಿದ್ದಾರೆ, ಆದರೆ ಅದು ಖರ್ಚಾಗಿಲ್ಲ. ಖರ್ಚಾಗಿಲ್ಲವೆನ್ನುವುದಕ್ಕೆ ನೇರ ಕಾರಣ ಅಧಿಕಾರಿಗಳು. ಹಾಗಾಗಿ ಒಬ್ಬ ಅಧಿಕಾರಿಗೆ ರಾಜ್ಯದಲ್ಲಿ ಈ ರೀತಿ ಕ್ರಮ ತೆಗೆದುಕೊಂಡರೆ ಇಡೀ ರಾಜ್ಯದಲ್ಲಿ ಎಲ್ಲಾ ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೆ. ನಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆಂದು ಅಧಿಕಾರಿಗಳಲ್ಲಿ ಭಯವಿರಬೇಕು. ಈ ದಿಕ್ಕಿನಲ್ಲಿ ಒಬ್ಬ ಅಧಿಕಾರಿಯ ವಿರುದ್ಧವಾದರೂ ಕ್ರಮ ಕೈಗೊಳ್ಳುವುದಕ್ಕೆ ಈ ಸರ್ಕಾರಕ್ಕೆ ಇಚ್ಛಾಶಕ್ತಿ ಇದೆಯೇ ಎನ್ನುವುದು ನನ್ನ ಪ್ರಶ್ನೆ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಈ ಭವನಗಳಿಗೆ ಅನುದಾನ ಮಂಜೂರು ಮಾಡಬೇಕೆಂದು ಮಾನ್ಯ ಶಾಸಕರು, ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು ಬರುತ್ತಾರೆ. ಈ ಊರಿಗೆ 4 ಭವನ ಕೊಡಿ ಎಂದು ಕೇಳುತ್ತಾರೆ, ಮಾನ್ಯ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರ ಕೋರಿಕೆಯ ಮೇರೆಗೆ ಇವರಿಗೆ ಅಂಬೇಡ್ಕರ್ ಭವನ ಮಂಜೂರು ಮಾಡಿದ್ದೇನೆಂದು ನಾನು ಅನುದಾನ ಮಂಜೂರು ಮಾಡುತ್ತೇನೆ. ಮಂಜೂರು ಮಾಡಿ ಹಣ ಬಿಡುಗಡೆಯಾಗಿರುತ್ತದೆ. ಹಣ ಬಿಡುಗಡೆಯಾದ ನಂತರ ನಮ್ಮ ಅಧಿಕಾರಿಗಳು ಹೋಗಿ, ಅಂಬೇಡ್ಕರ್

ಭವನವನ್ನು ಎಲ್ಲಿ ಕಟ್ಟಬೇಕು, ಜಾಗ ಕೊಡಿ ಎಂದು ಕೇಳುತ್ತಾರೆ. ಇಲ್ಲಿ ಬಂದಿರುವುದು ಜಾಗದ ಪ್ರಶ್ನೆ, ಹಣ ಖರ್ಚು ಮಾಡುವುದಲ್ಲ. 47 ಭವನಗಳಿಗೆ ಜಾಗ ಸಿಕ್ಕಿಲ್ಲ. ಮೈಸೂರಿನಲ್ಲಿ ಒಂದು ಕಡೆ ಅದೇ ರೀತಿ ಸುಮಾರು 26 ಕಡೆ ಜಾಗ ಸಿಕ್ಕಿಲ್ಲ. ಅಲ್ಲಿ ನಮ್ಮ ಇಲಾಖೆ ಜಾಗ ಕೊಡಬೇಕು. ಇಲ್ಲ ಸರ್ಕಾರ ಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇಲ್ಲ. ಮಾನ್ಯ ಸಚಿವರು ಒಂದು ನಿಮಿಷ ನಾನು ಹೇಳುವುದನ್ನು ಕೇಳಬೇಕು.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಹಣ ಖರ್ಚು ಮಾಡುವುದಕ್ಕೆ...

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇಲ್ಲ. ದಯವಿಟ್ಟು ...

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ದಲಿತರ ಬಗ್ಗೆ ಕಳಕಳಿ ...

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೆ, ದಯವಿಟ್ಟು ಕೇಳಿ. ತಮ್ಮ ಉಪನ್ಯಾಸವಾಗಲಿ ಭಾಷಣವಾಗಲಿ ನನಗೆ ಬೇಡ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ಜಾಗ ಇಲ್ಲ ...

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ದಯಮಾಡಿ ಕೇಳಿ. ನಾನು ಅದಕ್ಕಾಗಿಯೇ ಹೇಳುತ್ತಿರುವುದು. ಅನುದಾನ ಮಂಜೂರು ಮಾಡುವುದನ್ನು ತಾವು ಮಾಡುತ್ತೀರಿ. ಹಣ ಬಿಡುಗಡೆ ಮಾಡಿದ ಮೇಲೆ ವೆಚ್ಚ ಮಾಡುವುದಕ್ಕೆ, ಇಲ್ಲಿ ಎರಡು ಅಂಶಗಳನ್ನು ಕೊಟ್ಟಿದ್ದಾರೆ. ನಿವೇಶನ ಇಲ್ಲವಾದರೆ ವೆಚ್ಚ ಮಾಡುತ್ತಾರೆಯೇ? ನಿವೇಶನ ಇಲ್ಲವಾದರೆ ಹೇಗೆ? **(ಗೊಂದಲ)** ದಯವಿಟ್ಟು ಕೇಳಿ ಸ್ವಾಮಿ, ಇಲ್ಲಿ ಮಾನ್ಯ ಸಚಿವರು ಯಾರನ್ನೋ ರಕ್ಷಣೆ ಮಾಡುವುದಕ್ಕೆ ಹೋಗುವ ಪ್ರಯತ್ನ ಬೇಡ. ರೂ.1,205 ಲಕ್ಷ ಅನುದಾದನ ಬಿಡುಗಡೆ ಮಾಡಿದ ಮೇಲೆ ಖರ್ಚಾಗಿರುವುದು ರೂ. 860.50 ಲಕ್ಷ. ಅದೇ ರೀತಿ ರೂ. 522.50 ಲಕ್ಷ ಬಿಡುಗಡೆಯಾದ ನಂತರ ಖರ್ಚಾಗಿರುವುದು 331.50 ಲಕ್ಷ ರೂಪಾಯಿಗಳು. ಖರ್ಚಾಗಿರಬೇಕಾದರೆ, ಸೈಟ್ ಇಲ್ಲದೆಯೇ ಹಣ ಖರ್ಚು ಮಾಡುತ್ತಾರೆಯೇ? ನಾನು ಅದಕ್ಕಾಗಿಯೇ ಹೇಳುತ್ತಿರುವುದು, ಸುಮ್ಮನೆ ಉತ್ತರ ಕೊಡುವುದು ಬೇಡ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಮಾನ್ಯ ಸಚಿವರು ಯಾರನ್ನೋ ವಹಿಸಿಕೊಂಡು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾತನಾಡಬಾರದು. ಏತಕ್ಕೆ ಖರ್ಚು ಮಾಡಲಿಲ್ಲ? ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆಯೇ? ನಾನು ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ಬಗ್ಗೆ ಗೊತ್ತಿದೆ. ಅವರು ಹಿರಿಯ ಸದಸ್ಯರಿದ್ದಾರೆ. ಇಲ್ಲಿ ಏನಾಗುತ್ತದೆಯೆಂದರೆ, ನಾವು ಶಾಸಕರುಗಳಾಗಿ ಮಾನ್ಯ ಸಚಿವರಿಗೆ ಒಂದು ಪತ್ರ ಕೊಟ್ಟು ಅಂಬೇಡ್ಕರ್ ಭವನವೆಂದು ಅನುದಾನ ಮಂಜೂರು ಮಾಡಿಸುತ್ತೇವೆ. ಆ ನಂತರ ಹೋಗಿ ಜಾಗಕ್ಕಾಗಿ ಹುಡುಕಾಡುತ್ತೇವೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ದಯಮಾಡಿ ನಾನು ಹೇಳುವುದನ್ನು ಕೇಳಿಸಿಕೊಳ್ಳಿ. ಈ ರೀತಿಯಾಗಿ ಏನಾಗಿದೆಯೆಂದರೆ, ...

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಉತ್ತರದಲ್ಲಿರುವಂತೆ, Chamarajanagar : completed – 04, work under progress – 24, expenditure – Rs. 331.50 lakhs. ಇಲ್ಲಿ ನಿವೇಶನದ ಪ್ರಶ್ನೆಯೇ ಬರುವುದಿಲ್ಲ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೆ, ಹೌದು. ಅದನ್ನೇ ನಾನು ಹೇಳುತ್ತಿದ್ದೇನೆ. ಮಾನ್ಯ ಸಚಿವರು ಈ ಬಗ್ಗೆ ಹೇಳಿದರೆ ಅವರು ಸಮಜಾಯಿಷಿ ಮಾಡಿದಂತಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದು ಹಾಗಲ್ಲ ಸ್ವಾಮಿ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಮಾನ್ಯ ಸದಸ್ಯರು ನನ್ನ ಮಾತನ್ನು ಕೇಳಲಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರ ಹೇಳಲಿ. ನಾನು ಖಂಡಿತ ನಿಮ್ಮ ಮಾತನ್ನು ಒಪ್ಪುತ್ತೇನೆ. ನಾನು ಹೇಳುವುದಕ್ಕೆ ಹೊರಟಿರುವುದು ಏನೆಂದರೆ, ನಾನು ಸರ್ಕಾರದ ಬಗ್ಗೆ ಇಲ್ಲಿ ಪ್ರಶ್ನೆ ಕೇಳುತ್ತಿಲ್ಲ. ಇಲ್ಲಿ ಇಚ್ಛಾಶಕ್ತಿ ಸರ್ಕಾರಕ್ಕಿದ್ದರೂ ಕೂಡ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ತಾವು ಏನು ನಿವೇಶನ ಇಲ್ಲವೆಂದು ಹೋಗುತ್ತಾರೆ. ಅದು ಬೇರೆ. ತಾವು ನಿವೇಶನ ಇರುವ ಕಡೆ ದುಡ್ಡು ಬಿಡುಗಡೆ ಮಾಡಿದ್ದೀರಿ, ಅದನ್ನು ಖರ್ಚು ಸಹ ಮಾಡಿದ್ದೀರಿ. ನಿವೇಶನ ಇಲ್ಲದೇ ಇದ್ದರೆ ಹಣ ಹೇಗೆ ಖರ್ಚು ಮಾಡುವುದಕ್ಕಾಗುತ್ತದೆ? ಅದನ್ನು ಹೇಳಲಿ ನೋಡೋಣ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೆ, ಕೆಲವು ಬಾರಿ ಏನಾಗುತ್ತದೆಯೆಂದರೆ, ನಾನು ನನ್ನ ಉತ್ತರವನ್ನು ಹೇಳಿಬಿಡುತ್ತೇನೆ. ಅದನ್ನು ಸ್ವಲ್ಪ ತಾಳ್ಮೆಯಿಂದ ಒಂದೆರೆಡು ನಿಮಿಷ ಕೇಳಿಸಿಕೊಂಡರೆ ಒಳ್ಳೆಯದು. ಇದರಲ್ಲಿ ನಾನಾ ರೀತಿಯ ಸಮಸ್ಯೆಗಳಿರುತ್ತವೆ. ಮಾನ್ಯ ಸಚಿವರು ಹೇಳಿದರೆ ಅವರು ಸಮಜಾಯಿಸಿ ಮಾಡಿಕೊಳ್ಳುತ್ತಿದ್ದಾರೆಂದು ಮಾನ್ಯ ಸದಸ್ಯರು ಭಾವಿಸಬಹುದು. ನಾನು ಇಲ್ಲಿ ಕುಳಿತುಕೊಂಡು ನೋಡುತ್ತಿರುವುದರಿಂದ ನಮ್ಮ ಅನುಭವವನ್ನು ತಮ್ಮ ಜೊತೆ ಹಂಚಿಕೊಳ್ಳುತ್ತಿದ್ದೇನೆ. ಎಷ್ಟೋ ಕಡೆ ನಿವೇಶನ ಇಲ್ಲದೇ ಹೋದರೂ ಸಹ ನಾವೇ ಅನುದಾನ ಮಂಜೂರು ಮಾಡಿಸುತ್ತೇವೆ. ಆ ನಂತರ ನಿವೇಶನಗಳಿಗೆ ಹುಡುಕಿಕೊಂಡು ಹೋಗುತ್ತೇವೆ. ಇದರಿಂದಾಗಿ ಹೆಚ್ಚಿನ ಪ್ರಕರಣಗಳಲ್ಲಿ ವಿಳಂಬವಾಗುತ್ತಿರುವುದಕ್ಕೆ ಇದು ಮುಖ್ಯವಾಗಿ ಕಾರಣ. ಎರಡನೆಯದಾಗಿ ಕೆಲವೊಮ್ಮೆ ಏನಾಗುತ್ತದೆಯೆಂದರೆ, ಮಾನ್ಯ ಸಚಿವರು ಹೇಳಿರುವಂತೆ ನನ್ನ ಕ್ಷೇತ್ರದಲ್ಲಿ ಹಾಗೂ ಎಲ್ಲರ ಕ್ಷೇತ್ರಗಳಲ್ಲಿಯೂ ಸಹ ಸರ್ಕಾರ ರೂ. 10 ಲಕ್ಷ ಅನುದಾನ ಕೊಟ್ಟರೆ, ರೂ. 10 ಲಕ್ಷ ತೆಗೆದುಕೊಳ್ಳುತ್ತೇವೆ. ಆ ನಂತರ ಅಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಿಸಿ ಪುನಃ ಹೋಗಿ ಇಲ್ಲ, ಸಾಲುವುದಿಲ್ಲ ರೂ. 30 ಲಕ್ಷ ಕೊಡಿ ಎಂದು ನಾವುಗಳೇ ಹೋಗಿ ಕೇಳಿಕೊಳ್ಳುತ್ತೇವೆ. **(ಗೊಂದಲ)** ಕೇಳಿಸಿಕೊಳ್ಳಿ. ದಯಮಾಡಿ ಕೇಳಿಸಿಕೊಳ್ಳಿ.

(ಮುಂದುವರೆದಿದೆ...)

**(834) 20-06-017 LM (SK)-AK 11.20**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳುತ್ತಿರುವುದು practical ಅಲ್ಲ, ದಯವಿಟ್ಟು ಮಾನ್ಯ ಸಚಿವರು ನಾನು ಹೇಳುವುದನ್ನು ಕೇಳಬೇಕಾಗುತ್ತದೆ. ಏಕೆಂದರೆ ಹೊಸದುರ್ಗ ತಾಲ್ಲೂಕು, ಬಾಗೂರು ಗ್ರಾಮ, ಅದು ಅವರ ಜಿಲ್ಲೆ ತಾನೇ? ಅಲ್ಲಿ ಹಿಂದುಳಿದ ವರ್ಗದವರ ಒಂದು ಸಮುದಾಯ ಭವನ ನಿರ್ಮಾಣವಾಗುತ್ತಿದೆ. ಮೊನ್ನೆ ದಿನ ನಾನು ಅಲ್ಲಿಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಸರ್ಕಾರದಿಂದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸುಮಾರು 42.5 ಲಕ್ಷ ರೂಪಾಯಿಗಳಷ್ಟು ಹಣ ಮಂಜೂರಾಗಿದೆ. ನಾಲ್ಕು ವರ್ಷಗಳ ಕೆಳಗಡೆ 22.5 ಲಕ್ಷ ರೂಪಾಯಿಗಳಂತೆ ಶೇಕಡಾ 50 ರಷ್ಟು ಹಣ ಬಿಡುಗಡೆಯಾಗಿತ್ತು. ಇನ್ನುಳಿದ 22.5 ಲಕ್ಷ ರೂಪಾಯಿಗಳಿಗೆ, ನಾನು ಇಲ್ಲಿ ಆ ಪದವನ್ನು ಬಳಸಬಾರದು. ಆ ಒಂದು ಆಡಳಿತ ಮಂಡಳಿಯವರು 'ನಾಯಿಯಂತೆ ಅಲೆದಾಡುತ್ತಿದ್ದಾರೆ.' ಆ ಸರ್ಟಿಫಿಕೇಟ್ ತೆಗೆದುಕೊಂಡು ಬರಬೇಕು; ಅದನ್ನು ತೆಗೆದುಕೊಂಡು ಬನ್ನಿ, ಇದನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಆದರೆ ಕೆಲಸ ಮಾತ್ರ ಮೇಲ್ನೋಟಕ್ಕೆ ಎಲ್ಲಾ ಆಗಿದೆ. ಮೊದಲನೇ ಸುತ್ತಿನಲ್ಲಿ ಸರ್ಕಾರದ ಪದ್ಧತಿ ಏನಿರುತ್ತದೆ? ಮಾನ್ಯ ಕೃಷ್ಣಭೈರೇಗೌಡರೇ, ಮೊದಲನೇ ಸುತ್ತಿನಲ್ಲಿ ಹಣವನ್ನು ಬಿಡುಗಡೆ ಮಾಡುತ್ತೀರಿ. ಅದರ Utilization Certificate ಹಾಜರುಪಡಿಸಿದ ಮೇಲೆ ಇನ್ನೊಂದು ಸುತ್ತಿನಲ್ಲಿ ಹಣವನ್ನು ಬಿಡುಗಡೆ ಮಾಡುತ್ತೀರಿ. ಇದರಲ್ಲಿ ಏನು ಪ್ರಶ್ನೆಯೇ ಇಲ್ಲ. ಹಣ ಮಂಜೂರಾಗಿ, ಎಲ್ಲಾ ಆಗಿ ಅವರು ಬಾಯಿ ಬಿಟ್ಟು ಕೇಳಿದ್ದಾರೆ. ನಿನ್ನ ಬಾಯಿಗೆ ಏನಾದರೂ ಮಣ್ಣು ಹಾಕಬೇಕೇನಪ್ಪ, ಲಂಚ ಕೊಡಬೇಕೇನಪ್ಪ; ಹಾಗೇನಾದರೂ ಇದ್ದರೆ ಹೇಳಿ ಎಂದು ಕೇಳಿದ್ದಾರೆ. ಆದರೂ ಬೇಜವಾಬ್ದಾರಿತನ ತೋರಿ ಆ ಕೆಲಸವನ್ನು ಮಾಡುವುದಿಲ್ಲ. ದಯವಿಟ್ಟು ಅರ್ಥ ಮಾಡಿಕೊಳ್ಳಿ. ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟ ಒಬ್ಬ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡು ನೋಡಿ, ಆಗ ಬಿಡುಗಡೆಯಾದ ಹಣವೆಲ್ಲಾ ಪ್ರಮಾಣಿಕವಾಗಿ ಖರ್ಚಾಗುತ್ತದೆ. ನೀವು defend ಮಾಡಿಕೊಳ್ಳುತ್ತಾ ಹೋದರೆ, ಅವರಿಗೆ ಹೇಗಿದ್ದರೂ ಗೊತ್ತು, ನೀವು defend ಮಾಡಿಕೊಂಡೆ ಮಾಡಿಕೊಳ್ಳುತ್ತೀರಿ ಎಂದು. ಹೀಗಾಗಿ ಅವರು ತಮ್ಮ ಪ್ರವೃತ್ತಿಯನ್ನು ಮುಂದುವರೆಸುತ್ತಾರೆ.

**ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಈ ತರಹ ಆಗಿಲ್ಲ ಎಂದು ನಾನು ಹೇಳುತ್ತಿಲ್ಲ. ಅದಕ್ಕೆ ಕಾರಣ ಇದೆ. ನಾವು ಅದನ್ನು ಇಲ್ಲ ಎಂದು ಹೇಳುತ್ತಿಲ್ಲ. ಅದರ ಜೊತೆಗೆ ಬೇರೆ ಕಾರಣಗಳು ಸಹ ಇವೆ. ತಮಗೆ ಬೇಕಾದರೆ ಒಂದು ನಿರ್ದಿಷ್ಟವಾದ ಉದಾಹರಣೆಯನ್ನು ಕೊಡುತ್ತೇನೆ. ಈಗ ನಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಉಸ್ತುವಾರಿ ಸಚಿವನಾಗಿದ್ದೇನೆ. ದೇವನಹಳ್ಳಿ ತಾಲ್ಲೂಕಿನಲ್ಲಿ ಒಂದು ಅಂಬೇಡ್ಕರ್ ಭವನವನ್ನು ನಿರ್ಮಿಸಿದ್ದೇವೆ. ಇದು ಯಾವ ಕಾಲದಲ್ಲಿ ಶುರುವಾಗಿತ್ತು ಎಂದರೆ, ನಾವು ಅದಕ್ಕೆ ಎಷ್ಟು ಹಣವನ್ನು ಕೊಡುತ್ತೇವೆ ಅಷ್ಟಕ್ಕೆ ಮಾತ್ರ ಕಟ್ಟಡವಾಗಿದೆ. ಕಂಪೌಂಡ್ ಕಟ್ಟುವುದಕ್ಕೆ ಹಣ ಬೇಕೆಂದು ಮತ್ತೆ ಹೋಗುತ್ತೇವೆ. ಇದರಲ್ಲಿ ಒಳಗಡೆ ವಿನ್ಯಾಸ ಎಂದರೆ, interiors ಮಾಡಿಲ್ಲವೆಂದು ಹೇಳಿಬಿಟ್ಟು ಅದಕ್ಕೆ ಇನ್ನೊಂದು ಸಲ ಹಣ ಬಿಡುಗಡೆ ಮಾಡಿದರೂ ಕೂಡ ಸುಮಾರು ಐದು ವರ್ಷಗಳಾದರೂ ಸಹ ಇವತ್ತು ಅಂಬೇಡ್ಕರ್ ಭವನವನ್ನು ದೇವನಹಳ್ಳಿಯಲ್ಲಿ ಪೂರ್ಣ ಮಾಡುವುದಕ್ಕೆ ಆಗಿಲ್ಲ. ನಾನು ಉಸ್ತುವಾರಿ ಸಚಿವನಾಗಿದ್ದರೂ ಈ ತರಹ ಸಮಸ್ಯೆಯಾಗಿಲ್ಲ ಮತ್ತು ವಿಳಂಬವಾಗಿಲ್ಲ ಎಂದು ಹೇಳುತ್ತಿಲ್ಲ ಮತ್ತು ಅಧಿಕಾರಿಗಳ ನಿರ್ಲಕ್ಷ್ಯವಿಲ್ಲ ಎಂದು ಹೇಳುತ್ತಿಲ್ಲ. ನಿಮ್ಮ ಸರ್ಕಾರ ಅಥವಾ ನಮ್ಮ ಸರ್ಕಾರ ಮಾಡಲಿ ಎಲ್ಲರೂ ಸಹ ಈ ತರಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯನ್ನು ಎದುರಿಸಬೇಕಾಗಿದೆ. ನೀವು ಹೇಳುತ್ತಿರುವ ಆದರೆ ಸಾಕಷ್ಟು ಅಂಕಿ ಸಂಖ್ಯೆಗಳಿಗೆ ಪೂರಕವಾಗಿ ಅದು ಕಾರಣವಾದರೆ, ಅನೇಕ ಕಡೆ ಈ ತರಹ ಕಾರಣ ಇದೆ. ಆಮೇಲೆ ಏನು ಮಡುತ್ತೇವೆ. ಆರಂಭದಲ್ಲಿ ನಮ್ಮದೆಲ್ಲಾ ಹಣವನ್ನು ಹಾಕಿ ಕಟ್ಟುತ್ತೇವೆಂದು ಹೇಳುತ್ತೇವೆ. ಆಮೇಲೆ ಮತ್ತೆ ಹೋಗಿ ಸಮಾಜ ಕಲ್ಯಾಣ ಇಲಾಖೆಯವರಿಗೆ ಕೊಡಿ ಎಂದು ಕೇಳುತ್ತೇವೆ. ಹಾಗೂ ಸಹ ಸರ್ಕಾರ ನಿವೇಶನಗಳು ಇಲ್ಲ ಎಂದು ನಾವು ಏನು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಪ್ರತಿ ಬಾರಿ ಮುಖ್ಯ ಮಂತ್ರಿಗಳು, ಜಿಲ್ಲಾಧಿಕಾರಿಗಳ ಸಮ್ಮೇಳನ ಮಾಡಿದಾಗ ಕಟ್ಟುನಿಟ್ಟಾಗಿ ಎಷ್ಟು ಬಾಕಿ ಇದೆ. ....(ಗೊಂದಲ)..... ಒಂದೇ ಒಂದು ನಿಮಿಷ ನನ್ನ ಮಾತನ್ನು ಪೂರೈಸುತ್ತೇನೆ. ಈಗ ಪೂರ್ತಿಯಾಗಿ ಕೇಳಿಸಿಕೊಳ್ಳಿ ಸಾರ್. ಈಗ ತಾವೆಲ್ಲಾ ಹಿರಿಯರಿದ್ದೀರಿ. ನಾವು ನಿಮಗೆ ಉತ್ತರ ಕೊಡಲೇಬೇಕು. ನಾವು ಉತ್ತರವನ್ನು ಕೊಡದೇ ಎಲ್ಲಿಯೂ ಹೋಗುವುದಕ್ಕೆ ಆಗುವುದಿಲ್ಲ. ನಾವು ಏನು ಹೇಳಿತ್ತೀದ್ದೇವೆಂದು ಕೇಳಿಸಿಕೊಂಡು ಆಮೇಲೆ ಹೇಳಿ ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು D.C. Conference ಮಾಡಿದಾಗ ಕಟ್ಟುನಿಟ್ಟಾಗಿ deadline ಕೊಟ್ಟಿದ್ದಾರೆ. ಮೊರಾರ್ಜಿ ಶಾಲೆ, ಅಂಬೇಡ್ಕರ್ ಭವನ ಮತ್ತು ಹಾಸ್ಟೆಲ್‌ಗಳಿಗೆ ನಿವೇಶನಗಳ ಕೊರತೆಯಿದೆ. ಮುಂದಿನ D.C. Conference ಒಳಗಡೆ ಅಷ್ಟನ್ನು ಪೂರೈಸಬೇಕೆಂದು ಹೇಳಿ, ನಿವೇಶನಗಳನ್ನು ಮಂಜೂರು ಮಾಡಬೇಕೆಂದು ಎರಡು-ಮೂರು ಸಭೆಯಿಂದ ನಾವು ಸರ್ಕಾರದ ಮಟ್ಟದಲ್ಲಿ ಮಾನ್ಯ ಕಂದಾಯ ಸಚಿವರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಇಬ್ಬರನ್ನು ಸಹ ಕೋರಿಕೊಂಡು ನಿವೇಶನಗಳನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತಿದ್ದೇನೆ. ಈ ರೀತಿ ಆ ನಿವೇಶನಗಳ ಸಮಸ್ಯೆಯನ್ನು ಪರಿಹಾರ ಮಾಡುವಂತಹದ್ದನ್ನು ಮಾಡುತ್ತಿದ್ದೇವೆ. ನೀವು ಹೇಳುವ ತರಹ ಸ್ವಲ್ಪ ಮಟ್ಟಿಗೆ ಅಧಿಕಾರಿಗಳು ಇದರಲ್ಲಿ ವಿಳಂಬ ಮತ್ತೊಂದು-ಮಗದೊಂದು ಮಾಡುವಂಥದ್ದಿದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಜರಿಯತಕ್ಕಂತಹದು ಏನು ಇಲ್ಲ. ವಿಳಂಬಕ್ಕೆ ಬೇರೆ ಕಾರಣಗಳಿವೆ ಎಂದಷ್ಟೇ ನಾನು ಹೇಳುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಒಂದು ಸಲಹೆ ಏನೆಂದರೆ, ...

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನೀವು ಹೇಳುವಂತಹ ಕಾರಣಗಳನ್ನು ಅವರು ಹೇಳಿದರು. ನಾನು ಹೇಳುವುದೇನೆಂದರೆ ಒಂದು ಭವನ ಬೇಕು ಎಂದು ಯಾರೋ ಬರುತ್ತಾರೆ. ಅದನ್ನು ನೀವು ಅಂದಾಜು ಮಾಡಿಕೊಂಡು ಬನ್ನಿ ಎಂದು ಹೇಳಿದರೆ, ಅದಕ್ಕೆ ಅಂದಾಜು ಆಗುವಷ್ಟು ಹಣವನ್ನು ಬಿಡುಗಡೆ ಮಾಡಬೇಕು. ಇಲ್ಲದೇ ಹೋದರೆ ನೀವು ಎಷ್ಟು ಹಣ ಬಿಡುಗಡೆ ಮಾಡುತ್ತೀರೋ, ಅದಕ್ಕೆ ತಕ್ಕಂತಹ ಭವನವನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಟ್ಟುವುದಕ್ಕೆ ಒಂದು ಸಾಮಾನ್ಯ ಯೋಜನೆ ಮಾಡಬೇಕು. You must do a common plan for every village. ನೀವು 15 ಲಕ್ಷ ಕೊಡುತ್ತೀರೋ, 20 ಲಕ್ಷ ಕೊಡುತ್ತೀರೋ ಅಥವಾ 10 ಲಕ್ಷ ಕೊಡುತ್ತೀರೋ ಅದಕ್ಕೆ ತಕ್ಕಂತಹ ಯೋಜನೆಯನ್ನು ನೀವು ಮಾಡಿ. ಇದೇ ರೀತಿಯಲ್ಲಿ ಕಟ್ಟಬೇಕೆಂದು ಹೇಳಿದರೆ ಮಾತ್ರ ಅದು ಸಾಧ್ಯ. ಇಲ್ಲದೇ ಇದ್ದರೆ ಅವರಿವರು ಬಂದು ಕೈ ಹಾಕಿ ಎಲ್ಲಾ ಕೆಡಿಸುತ್ತಾರೆ.

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಶಾಸಕರು, ಸಾರ್ವಜನಿಕರು, ಎಂ.ಪಿ.ಗಳು ಬಂದು ಕೇಳುತ್ತಾರೆ. ಅವರಿಗೆ ಆಡಳಿತಾತ್ಮಕವಾಗಿ ಮಂಜೂರು ಮಾಡುತ್ತೇವೆ. ಮಂಜೂರು ಮಾಡಿದ ಮೇಲೆ ನಮ್ಮ ಇಲಾಖಾಧಿಕಾರಿಗಳು ಹೋಗಿ, ಸ್ಥಳ ಪರಿಶೀಲನೆ ಮಾಡುತ್ತಾರೆ. ಈಗ ನಾವು ಮಾಡಿರುವುದು ಯೋಜನೆ, ಅಂದಾಜು ಹಾಗೂ ಜಾಗ ಇದೆ ಎಂದು ಬಂದರೆ ಮಾತ್ರ ಅವರಿಗೆ ಹಣವನ್ನು ಬಿಡುಗಡೆ ಮಾಡುತ್ತೇವೆ. ಇಲ್ಲಿ ಮಂಜೂರು ಮಾಡಿದ್ದೇವೆ. ಉಳಿದಂತಹವುಗಳಿಗೆ ಜಾಗ ಸಿಕ್ಕಿಲ್ಲ. ಆ ಕಾರಣಕ್ಕಾಗಿ ವಿಳಂಬವಾಗಿದೆ. ಮಾನ್ಯ ಸದಸ್ಯರು ಕೇಳಿದ ಹಾಗೆ ನಾವು 12 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇವರು ಜಾಸ್ತಿ ಮಾಡಿದ್ದಾರೆಂಬುದು ಎಷ್ಟಿದೆ ಎಂಬುದರ ಬಗ್ಗೆ ನಾವು ಸರ್ವೆ ಮಾಡಿಸಿ ಪೂರ್ಣಗೊಳಿಸುವುದಕ್ಕೆ ಎಷ್ಟು ಹಣ ಬೇಕು ಎಂಬುದನ್ನು ಅಧಿಕಾರಿಗಳಿಂದ ಒಂದು ಪ್ರಸ್ತಾವನೆಯನ್ನು ತರಿಸಿಕೊಂಡು ಮಂಜೂರು ಮಾಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದೇ ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಈಗಾಗಲೇ ಇಪ್ಪತ್ತು ನಿಮಿಷವಾಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಆಂಜನೇಯರವರು ಮತ್ತು ಮಾನ್ಯ ಕೃಷ್ಣ ಭೈರೇಗೌಡರು ಹೇಳುತ್ತಿರುವುದಕ್ಕೂ ಮತ್ತು ಅವರು ಕೊಟ್ಟಿರುವಂತಹ ಉತ್ತರಕ್ಕೂ ಏನು ಸಂಬಂಧವಿಲ್ಲ. ಮಾನ್ಯ ಆಂಜನೇಯರವರೇ, ದಯವಿಟ್ಟು ಗಮನಿಸಿ. ನೀವು ಕೊಟ್ಟಿರುವಂತಹ ಉತ್ತರಕ್ಕೂ ನೀವು defend

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿಕೊಂಡಿರುವುದಕ್ಕೂ ಏನೇನೂ ಸಂಬಂಧವಿಲ್ಲ. ನೀವು ಹಣವನ್ನು ಬಿಡುಗಡೆ ಮಾಡಿದ್ದೀರಿ. ಅದರೆ ಜಾಗವೇ ಲಭ್ಯವಿಲ್ಲದ ಕಡೆಯಲ್ಲಿ ಹಣವನ್ನು ಬಿಡುಗಡೆ ಮಾಡಿರುತ್ತೀರಿ.

**ಶ್ರೀ ಹೆಚ್.ಆಂಜನೇಯ:–** ಹೌದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಆಯಿತು, ಹಣವನ್ನು ಬಿಡುಗಡೆ ಮಾಡಿದ್ದೀರಾ, ನಿವೇಶನ ಲಭ್ಯವಿಲ್ಲದಿದ್ದರೂ ಖರ್ಚು ಮಾಡಿದ್ದೀರಾ?

**ಶ್ರೀ ಹೆಚ್.ಆಂಜನೇಯ:–** ಇಲ್ಲ ಸ್ವಾಮಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಅದನ್ನೇ ಕೇಳುತ್ತಿರುವುದು.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೇ, ನಿವೇಶನವೇ ಇಲ್ಲದೇ ನಾವು ಹೇಗೆ ಹಣವನ್ನು ಖರ್ಚು ಮಾಡುವುದಕ್ಕಾಗುತ್ತದೆ? ಅದನ್ನು ಅವರು ಓದಿಕೊಳ್ಳಬೇಕು, ಒಂದೊಂದು ಪ್ರಶ್ನೆಗೆ ಒಂದೊಂದು ಉತ್ತರವನ್ನು ನೋಡಿಕೊಳ್ಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಆಂಜನೇಯರವರೇ ದಯವಿಟ್ಟು, ಕುಳಿತುಕೊಳ್ಳಿ. ನಾನು ಹೇಳುವುದನ್ನು ಸಹ ಸ್ವಲ್ಪ ಕೇಳಿ. ಇಲ್ಲಿ 520 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಸುಮಾರು 331 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನೀವು ನಿವೇಶನವೇ ಇಲ್ಲದೇ ಹಣವನ್ನು ಖರ್ಚು ಮಾಡುತ್ತೀರಾ?

**ಶ್ರೀ ಹೆಚ್.ಆಂಜನೇಯ:–** ನಿವೇಶನವೇ ಲಭ್ಯವಿಲ್ಲದ ಮೇಲೆ ನಾವು ಹಣವನ್ನು ಹೇಗೆ ಖರ್ಚು ಮಾಡುವುದಕ್ಕಾಗುತ್ತದೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಲಿಲ್ಲ. ನಾನು ಏನು ಮಾಡಲಿ ಹೇಳಿ. ನೀವು ಶೇಕಡಾ 25ರಷ್ಟು ಹಣವನ್ನು ಕೂಡ ಖರ್ಚು ಮಾಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೇ, ಅವರನ್ನೆ ಕೇಳೋಣ ತಡೆಯಿರಿ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಹೆಚ್.ಆಂಜನೇಯ:–** ಆಯಿತು, ಮಾನ್ಯ ಧರ್ಮಸೇನ ಅವರೇ, ನೀವು ಹೇಳಿರಿ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ನಾನು ಕಳೆದ ನಾಲ್ಕು ವರ್ಷಗಳಿಂದ ಎಸ್‌ಸಿ/ಎಸ್‌ಟಿ (ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ) ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾವು ಇಲ್ಲಿ ಲೆಕ್ಕ ಕೇಳಿದಂತಹ ಸಂದರ್ಭದಲ್ಲಿ ಆ ವರ್ಷದಲ್ಲಿ ಎಲ್ಲಾ ಹಣ ಖರ್ಚಾಗಿದೆ. ಯಾವುದು ಕೂಡ ಬಾಕಿಯಿಲ್ಲ ಎನ್ನುವ ಮಾತನ್ನು ಅಧಿಕಾರಿಗಳು ಕೊಡುತ್ತಾರೆ. ನಾವು ಸದನದಲ್ಲಿ ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ ಈ ತರಹದ ಉತ್ತರಗಳನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಮೂರು ವರ್ಷಗಳದ್ದಲ್ಲ. ಸುಮಾರು 20 ವರ್ಷಗಳಿಂದ ಇರುವಂತಹ ಭವನಗಳು ಕೂಡ ಪೂರ್ತಿಗೊಳ್ಳಬೇಕಾಗುತ್ತದೆ. ಅದು ವಾಲ್ಮೀಕಿ ಮತ್ತು ಅಂಬೇಡ್ಕರ್ ಭವನಗಳಿರಬಹುದು ಹಾಗೂ ಯಾವುದೇ ಭವನಗಳಿರಬಹುದು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಆಗುವಂತಹ ಭವನಗಳು ಇನ್ನು ಮುಂದೆ ಕೊಡವುದಕ್ಕಿಂತ ಹಳೇ ಭವನಗಳನ್ನು ಪೂರ್ತಿಗೊಳಿಸದೇ ಹೋದರೆ, ಅದು national waste ಆಗುತ್ತದೆಂಬುದು ನನ್ನ ಅಭಿಪ್ರಾಯವಾಗಿದೆ.

**ಸಭಾಪತಿಯವರು:–** ಸಾಕು, ಮುಂದಿನ ಪ್ರಶ್ನೆಗೆ ಹೋಗೋಣ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಒಂದು ಸಣ್ಣ ಸಲಹೆ.

**ಸಭಾಪತಿಯವರು:–** ಸಾಕು, ಒಂದು ಪ್ರಶ್ನೆಗೆ ಇಪ್ಪತ್ತು ನಿಮಿಷವೆಂದರೆ ಹೇಗೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಒಂದು ಸಣ್ಣ ಸಲಹೆಯನ್ನು ಮಾತ್ರ ನೀಡಬಯಸುತ್ತಿದ್ದೇನೆ.

**ಸಭಾಪತಿಯವರು:–** ಇಲಾಖೆಯ ಬಗ್ಗೆ ಚರ್ಚೆ ಬೇಡ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ನಾನು ಇಲಾಖೆ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಮಾನ್ಯ ಸಚಿವರು ಉಪಸ್ಥಿತರಿದ್ದಾರೆ ಮತ್ತು ಮಾನ್ಯ ಕೃಷ್ಣಭೈರೇಗೌಡರು ಸಚಿವರಿಗೆ ಅದರ ಬಗ್ಗೆ ಸಹಾಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುವುದಕ್ಕೆ ಬಂದರು. ಈಗ ಮಾನ್ಯ ಧರ್ಮಸೇನರವರು ಹೇಳಬೇಕಾದರೆ ಇಪ್ಪತ್ತು ವರ್ಷಗಳಿಂದ ಇದೇ ರೀತಿಯಿದೆ ಎಂದು ಹೇಳಿದ್ದಾರೆ. ಮುಂದಿನ ತಿಂಗಳು ಬಿಟ್ಟು ಒಂದು ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೀರಿ. ಈಗ ತಮ್ಮ ಅನುಭವ ಮತ್ತು ತಾವು ಹೇಳಿರುವ ಸಂಗತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ...

**ಸಭಾಪತಿಯವರು:-** ನಾನು ಅವರಿಗೂ ಬೇಡ ಎಂದು ಹೇಳಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಏಕೆ ಹಣವನ್ನು ಬಿಡುಗಡೆ ಮಾಡುತ್ತದೆ?

ಶ್ರೀ ವಿ.ಸೋಮಣ್ಣ:- ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ನೀವು ಮಾತನಾಡುತ್ತೀರಾ, ಆಯಿತು. ಮಾನ್ಯ ಸೋಮಣ್ಣನವರು ಮಾತನಾಡಲು ಅವಕಾಶ ಕೇಳುತ್ತಿದ್ದಾರೆ. ಅವರಿಗೂ ಹತ್ತು ನಿಮಿಷ.

**(ಗೊಂದಲ)**

**ಸಭಾಪತಿಯವರು:-** ಮುಂದಿನ ಪ್ರಶ್ನೆ ನಿಮ್ಮದೇ, ಅದನ್ನು ತೆಗೆದುಕೊಳ್ಳುವುದು ಬೇಡವೇ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಈ ವಿಚಾರದಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಒಂದು ಪ್ರಶ್ನೆಗೆ ಇಪ್ಪತ್ತು-ಇಪ್ಪತ್ತೈದು ನಿಮಿಷಗಳನ್ನು ತೆಗೆದುಕೊಂಡರೆ ನಾನು ಸದನವನ್ನು ನಡೆಸುವುದು ಹೇಗೆ?

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಈಗ ನಾವು ಏನು...

**ಸಭಾಪತಿಯವರು:-** ಅವರು ಸಿಟ್ಟು ಮಾಡಿಕೊಂಡರು, ಅದಕ್ಕೆ ನಾನು allow ಮಾಡಿದೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ನಾವು ಇದರ ಬಗ್ಗೆ ಕಾಳಜಿ ಇರುವವರು, ತಾವು ಮಾತನಾಡಬೇಡಿ ಎಂದರೆ ಹೇಗೆ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿ. ನೀವು ಅದರ ಬಗ್ಗೆ ಪ್ರತ್ಯೇಕವಾಗಿ ನಮ್ಮ ಸದನದ ನಿಯಮಾವಳಿಗಳ ಪ್ರಕಾರ ಅರ್ಜಿಯನ್ನು ಕೊಡಿ. ನೀವು ನೋಟಿಸ್ ಕೊಟ್ಟರೆ ಅದರ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬಗ್ಗೆ ಯಾವ ರೀತಿ ಚರ್ಚೆಯಾಯಿತು, ಹಾಗೆಯೇ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಚರ್ಚೆ ಮಾಡೋಣ. ನೋಟಿಸ್ ಕೊಡಿ. ಆದರೆ ಪ್ರಶ್ನೋತ್ತರ ಅವಧಿಯಲ್ಲಿ ಈ ರೀತಿ ಎಲ್ಲರೂ ಎದ್ದು ನಿಂತರೆ ಹೇಗೆ? ಇದು ನನ್ನ ಕೈಯಲ್ಲಿ ಆಗುವುದಿಲ್ಲ. ಆಯಿತು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ನಿಮ್ಮದೇ ಕೇಳಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಸರ್ಕಾರ common design ಮಾಡಬೇಕು. ಅದನ್ನು ಬಿಟ್ಟು ಜಿಲ್ಲಾ ಮಟ್ಟಕ್ಕೆ ಒಂದು ರೀತಿಯಲ್ಲಿ ವಿನ್ಯಾಸ, ತಾಲ್ಲೂಕು ಮಟ್ಟದಲ್ಲಿ ಒಂದು ರೀತಿಯ ವಿನ್ಯಾಸ ಮತ್ತು ಗ್ರಾಮ ಮಟ್ಟದಲ್ಲಿ ಅಥವಾ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಒಂದು ರೀತಿಯ ವಿನ್ಯಾಸ ಮಾಡಿದರೆ ಹೇಗೆ? common design ಮಾಡಿದರೆ ಆ ಒಂದು ಕಟ್ಟಡವನ್ನು ಇನ್ನೆಷ್ಟು extend ಮಾಡುವ ಸಮಸ್ಯೆಯೇ ಬರುವುದಿಲ್ಲ.

**ಸಭಾಪತಿಯವರು:–** ನೀವು ಆ ಪ್ರಶ್ನೆಯನ್ನು ಬಿಟ್ಟುಬಿಟ್ಟಿರಾ?

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಮಾನ್ಯ ಖರ್ಗೆಯವರು ಮಿನಿ ವಿಧಾನಸೌಧಗಳನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಒಂದೇ ರೀತಿಯ ವಿನ್ಯಾಸಗಳನ್ನು ಮಾಡಿದ್ದರಿಂದ ತೊಂದರೆಯೇ ಬರಲಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸಹ ದಯವಿಟ್ಟು ಹಾಗೆಯೇ ಮಾಡಿ.

**ಸಭಾಪತಿಯವರು:–** ಶ್ರೀಮತಿ ಮೋಟಮ್ಮನವರು ತಮ್ಮ 1887 ನೇ ಪ್ರಶ್ನೆಯನ್ನು ಕೇಳಲಿಲ್ಲ. ಆ ಪ್ರಶ್ನೆಯನ್ನು jump ಮಾಡಲೇನು? ಅವರು ಆ ಪ್ರಶ್ನೆಯನ್ನು ಕೇಳುತ್ತಾರೆಂದುಕೊಂಡಿದ್ದೆ, ಆದರೆ ಅವರು ಬೇರೆ ಏನೋ ಕೇಳಿದರು.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೇ, ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಬೇಡ, ಅವರು ಬೇರೆ ಪ್ರಶ್ನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಈಗ ಸರಿಯಾದ ಪ್ರಶ್ನೆಯನ್ನು ಕೇಳುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಬೇಡ, ಅವರು ಈಗ ಪ್ರಶ್ನೆಯನ್ನು ಕೇಳುತ್ತಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ಇವರೆಲ್ಲಾ ನನಗೆ confusion ಮಾಡಿಬಿಟ್ಟರಲ್ಲ, ಅದಕ್ಕೆ ಆ ರೀತಿ ಆಯಿತು.

**ಸಭಾಪತಿಯವರು:–** ಹೌದು, ಪ್ರಶ್ನೆ ಕೇಳಿ ಎಂದು ಹೇಳಿದರೆ ನೀವು ಬೇರೆ ಏನೋ ಕೇಳಿದ್ದೀರಿ. ದಯವಿಟ್ಟು ನಿಮ್ಮ ಹೆಸರಿನಲ್ಲಿರುವ ಪ್ರಶ್ನೆ ಕೇಳಿ.

(ಮುಂದು..)

(835) 20.06.2017 / YL-AK /11.30

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1887**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಈ ರೀತಿಯಲ್ಲಿದೆ. ಏಕೆಂದರೆ, ಮಾನ್ಯ ಸಚಿವರು ಗ್ರಾಮ ವಾಸ್ತವ್ಯವನ್ನು ಮಾಡಿದ್ದಾರೆ. ನಮ್ಮ ಮೂಡಿಗೆರೆಯ ಗಿರಿಜನ ಹಾಡಿಯಲ್ಲಿ ಬಂದು ಉಳಿದಿದ್ದರು. ಈಗ ಸುಮಾರು 3 ವರ್ಷಗಳಾಗಿದೆ. ಮೂರು ವರ್ಷಗಳಾದ ನಂತರ ಮೂಡಿಗೆರೆ ತಾಲ್ಲೂಕಿಗೆ ಬಂದಾಗ ವಿಶೇಷವಾದ ಪ್ಯಾಕೇಜನ್ನು ಗಿರಿಜನ ನಿವಾಸಿಗಳಿಗೆ ಕೊಡುತ್ತೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಪ್ರಕಾರ 2014ನೇ ಸಾಲಿನಲ್ಲಿ ಮಾನ್ಯ ಸಚಿವರು ಯೋಚನೆ ಮಾಡಿದ್ದರು. ಆದರೆ, 2016ನೇ ಸಾಲಿನಲ್ಲಿ ಮಂಜೂರು ಮಾಡಿರುತ್ತಾರೆ. ಆದರೆ, ಈಗ ವಿಶೇಷ ಪ್ಯಾಕೇಜನ್ನು implement ಮಾಡುವುದರಲ್ಲಿ ಬಹಳ ಸಮಸ್ಯೆಯಾಗಿದೆ. ಏಕೆಂದರೆ, ಪ್ಯಾಕೇಜನ್ನು ಕೊಟ್ಟು ಮಾನ್ಯ ಸಚಿವರು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ಎಷ್ಟೆಷ್ಟು ಅನುದಾನವನ್ನು ಖರ್ಚು ಮಾಡಬೇಕೆಂದು guidelines ನ್ನು ಕೊಡುವುದರ ಮೂಲಕ (1) ಕಾಲೋನಿಯಿಂದ ಮುಖ್ಯರಸ್ತೆಗೆ ಸಂಪರ್ಕ ರಸ್ತೆ ನಿರ್ಮಾಣಕ್ಕೆ 25%, (2) ಕಾಲೋನಿಗಳಲ್ಲಿ ಸಿ.ಸಿ. ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ 25% (3) ಕಾಲೋನಿಗಳಲ್ಲಿ



“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕುಡಿಯುವ ನೀರು ಸರಬರಾಜು (ಕಿರು ನೀರು ಸರಬರಾಜು) ಹಾಗೂ ತೆರೆದ ಬಾವಿ ರಚನೆಗೆ 10% ಈ ರೀತಿಯಾಗಿ ಹೇಳಿದ್ದಾರೆ. ಆದರೆ, ನಮ್ಮಲ್ಲಿರುವ ಶ್ರೀಮತಿ ಲಲಿತಾ ಬಾಯಿ ಎಂಬ ಗಿರಿಜನ ಅಧಿಕಾರಿಯವರು ಕೇವಲ ರಸ್ತೆಗಳಿಗೆ ಮಾತ್ರ propose ಮಾಡಿದ್ದಾರೆ. ರೂ.10.00 ಕೋಟಿಗಳಿಗೆ ಮಾತ್ರ ಯಾರಾದರೂ ರಸ್ತೆಗಳನ್ನು propose ಮಾಡುತ್ತಾರೆಯೇ? Guidelines ಪ್ರಕಾರ ಗಿರಿಜನ ಅಭಿವೃದ್ಧಿಗಾಗಿ ಎಷ್ಟೆಷ್ಟು ಅನುದಾನವನ್ನು ನಿಗದಿಪಡಿಸಬೇಕೆಂದು ಇದೆ. ಆದರೆ, ಗಿರಿಜನ ಅಧಿಕಾರಿಯವರು ಕೇವಲ ರಸ್ತೆಗಳಿಗೆ ಮಣ್ಣು ಹ್ಹಾಕುವುದಕ್ಕೆ ಬೇಕಾದಷ್ಟು ಅನುದಾನವನ್ನು ಮಾತ್ರ ಒದಗಿಸಿದ್ದಾರೆ. ನಾನು ಕೂಡ ಇದು ಸರಿಯಾಗಿಲ್ಲವೆಂದು object ಮಾಡಿದ್ದೇನೆ. ಮಾರ್ಗಸೂಚಿಗಳನ್ವಯ ನೀವು ಮಾಡಬೇಕಾಗುತ್ತದೆ. ರಸ್ತೆ ಸಂಪರ್ಕಕ್ಕೆ ಬೇಕಾದರೆ ಹೆಚ್ಚು ಅನುದಾನವನ್ನು ಭರಿಸೋಣ. ಉಳಿದಂತಹ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಮನೆಗಳ ನಿರ್ಮಾಣ ಅಥವಾ ರಿಪೇರಿಗೆ ಹಾಗೂ ವಿದ್ಯುತ್ ದೀಪದ ಸೌಕರ್ಯವನ್ನು ಕಲ್ಪಿಸುವುದಕ್ಕಾಗಿ; ಏಕೆಂದರೆ, ಇನ್ನು ಕೆಲವರು ಕಾಡಿನಲ್ಲಿಯೇ ವಾಸ ಮಾಡುತ್ತಿದ್ದಾರೆ. ಹಾಗಾಗಿ ಈ ರೀತಿಯ ಸೌಕರ್ಯಗಳನ್ನು ಕಲ್ಪಿಸುವುದರಿಂದ ಆ ಜನರಿಗೆ ಅನುಕೂಲವಾಗುತ್ತದೆ. ಮೂಲ ಸೌಕರ್ಯಗಳನ್ನು ಕಲ್ಪಿಸದೇ, ರಸ್ತೆ ಸಂಪರ್ಕವನ್ನು ಏಕೆ ಮಾಡಿದ್ದಾರೆ? ಈ ರೀತಿ ಏಕೆ ಆಗಿದೆ ಎಂದು ನಾನು ಸ್ಪಷ್ಟೀಕರಣವನ್ನು ಕೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಯ ಮೇಲೆ ಇವರು ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ನನ್ನ ನೇರವಾದ ಪ್ರಶ್ನೆ. ಜೊತೆಗೆ ಮಾನ್ಯ ಸಚಿವರು ಈಗಿರುವಂತಹ ಪ್ಯಾಕೇಜನ್ನು implement ಮಾಡುವುದಕ್ಕೆ ಕೂಡಲೇ ಅನುಮತಿಯನ್ನು ಕೊಡಬೇಕೆಂದು ಸಹ ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಹಾಡಿ ವಾಸ್ತವ್ಯ ಮಾಡಿದಂತಹ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯೂ ಪೌಷ್ಠಿಕ ಆಹಾರದಿಂದ ವಂಚಿತವಾಗಿತ್ತು. ಸದರಿ ಜಿಲ್ಲೆಗೆ ತಕ್ಷಣವೇ ಒಂದು ಸರ್ವೇ ಮಾಡಿಸಿ, ಅಲ್ಲಿ ವಾಸ ಮಾಡತಕ್ಕಂಥ ಜನರಿಗೆ ಪೌಷ್ಠಿಕ ಆಹಾರವನ್ನು ಒದಗಿಸುವಂತೆ ಒಂದು ಆದೇಶವನ್ನು ಮಾಡಿ, ಈಗಾಗಲೇ ಅದರ ವಿತರಣೆಯನ್ನು ಸಹ ಮಾಡುತ್ತಿದ್ದೇವೆ. ಅಲ್ಲಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ರೂ. 10.00 ಕೋಟಿಗಳನ್ನು ಪ್ಯಾಕೇಜ್ ಮಾಡುತ್ತೇವೆಂದು ಹೇಳಿದ್ದೆ. ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಜನ ಪ್ರತಿನಿಧಿಗಳು ಒಟ್ಟುಗೂಡಿ ಏನು ಪ್ರಸ್ತಾವವನ್ನು ಕಳುಹಿಸಿಕೊಟ್ಟಿದ್ದಾರೆಯೋ ಅದನ್ನು ಅಂಗೀಕರಿಸಿ ಕೊಟ್ಟಿದ್ದೇನೆ. ಮಾನ್ಯ ಮೋಟಮ್ಮನವರು ಹೇಳಿದ ಪ್ರಕಾರ ಏನು ಮಾರ್ಗಸೂಚಿ ಇದೆಯೋ, ಆ ಮಾರ್ಗಸೂಚಿಯ ಪ್ರಕಾರ ಮಾಡಿ ಎಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಹಾಗಾದರೆ Tribal Officer ರವರು ಜಿಲ್ಲಾಧಿಕಾರಿಯವರಿಗೆ ಕಳುಹಿಸಿರುವ ಪ್ರಸ್ತಾವದಲ್ಲಿ ರಸ್ತೆ ಸಂಪರ್ಕಕ್ಕಾಗಿ ಏನು ರೂ. 10.00 ಕೋಟಿಯನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೀಸಲಿಟ್ಟಿದ್ದಾರೆ. ಅದನ್ನು ಮಾನ್ಯ ಸಚಿವರು ಅನುಮೋದಿಸಲಿ. ಎರಡನೆಯದಾಗಿ ಮಾನ್ಯ ಸಚಿವರು ಏನು ಮಾರ್ಗಸೂಚಿಯ ಪ್ರಕಾರ ಶೇಕಡಾವಾರನ್ನು ನಿಗದಿಗೊಳಿಸಿ ರಸ್ತೆ ಸಂಪರ್ಕವನ್ನು ಕಲ್ಪಿಸುವುದಾಗಿರಬಹುದು, ಸೀಮೆಂಟ್ ರಸ್ತೆಯನ್ನು ಮಾಡುವುದಾಗಿರಬಹುದು, ಕುಡಿಯುವ ನೀರಿನ ಸೌಕರ್ಯವಾಗಿರಬಹುದು, ವಿದ್ಯುತ್ ದೀಪದ ಸೌಕರ್ಯವಾಗಿರಬಹುದು ಇವುಗಳೆಲ್ಲವನ್ನೂ ಎರಡನೆಯ ಪ್ಯಾಕೇಜ್ ಆಗಿ ಮಾಡುತ್ತಾರೆಯೇ?

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೆ, ನಾನು ಕೊಟ್ಟಿರುವ ಪ್ಯಾಕೇಜ್‌ನಲ್ಲಿ ಒಂದು ವೇಳೆ ದೀಪದ ಸೌಕರ್ಯವಿದ್ದರೆ, ಆ ದೀಪವನ್ನು ಪರಿವರ್ತಿಸಿಕೊಳ್ಳುತ್ತಾರೆ. ಕುಡಿಯುವ ನೀರಿನ ವ್ಯವಸ್ಥೆಯಾಗಿದ್ದರೆ ಬೇರೆ ಕೆಲಸಗಳ ಕಾಮಗಾರಿಗಳಿಗೆ ಅನುದಾನವನ್ನು ಭರಿಸಿಕೊಳ್ಳುತ್ತಾರೆ. ಒಂದು ವೇಳೆ ಕುಡಿಯುವ ನೀರಿನ ಸೌಲಭ್ಯವಿಲ್ಲದಿದ್ದರೆ, ಕುಡಿಯುವ ನೀರಿನ ಸೌಕರ್ಯಕ್ಕೆ ಬಳಸಿಕೊಳ್ಳುತ್ತಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಅದು ಹೇಗೆ ಆಗುತ್ತದೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮೊನ್ನೆ ನಾನು ಚಾಮರಾಜನಗರಕ್ಕೆ ಹೋಗಿದ್ದೆ.

**ಸಭಾಪತಿಯವರು:–** ಇಲ್ಲ. ಇದು ಶೃಂಗೇರಿಗೆ ಸಂಬಂಧಿಸಿದ ಪ್ರಶ್ನೆ ಅಷ್ಟೇ. ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದ್ದನ್ನು ಬಿಟ್ಟು ಬೇರೆ ಜಿಲ್ಲೆಯ ಬಗ್ಗೆ ಮಾತನಾಡುವುದು ಬೇಡ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮೂಡಿಗೆರೆಗೆ ಸಂಬಂಧಿಸಿದಂತೆ, ...

**ಸಭಾಪತಿಯವರು:–** ಆಯಿತು, ತಾವೀಗ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಶೃಂಗೇರಿ, ಕೊಪ್ಪ ಈ ಸ್ಥಳಗಳಿಗೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಸಹೋದರಿ ಮಾನ್ಯ ಮೋಟಮ್ಮನವರು ಹೇಳಿದ ಹಾಗೆ ರೂ. 10.00 ಕೋಟಿಗಳನ್ನು ಸಂಪೂರ್ಣವಾಗಿ ಜಿಲ್ಲಾಧಿಕಾರಿಗಳು ಯಾವ್ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನ ಬೇಕೆಂದು ವಿವರವನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೀಡುತ್ತಾರೆ. ಅದಕ್ಕೆ ಮಾನ್ಯ ಸಚಿವರು ಅನುಮೋದನೆಯನ್ನು ಕೊಡುತ್ತೇನೆಂದು ಹೇಳುತ್ತಾರೆ. ಅದರ ಬದಲಾಗಿ ಮಾನ್ಯ ಸಚಿವರು ಆ ಜಿಲ್ಲೆಗಳಿಗೆ ಹೋಗಿ ಮೂಲಭೂತ ಸಮಸ್ಯೆಗಳೇನು. ವಾಸ ಮಾಡತಕ್ಕಂಥ ಬಡವರು ಯಾರಿರುತ್ತಾರೆ, ಅವರ ಮನೆ ಯಾವ ಸ್ಥಿತಿಯಲ್ಲಿದೆ. ಅವರು ವಾಸ ಮಾಡತಕ್ಕಂಥ ಪರಿಸರ ಯಾವ ರೀತಿಯಲ್ಲಿದೆ ಎಂಬುದನ್ನು ನೋಡಿ ಅವುಗಳಿಗೆಲ್ಲಾ ಆದ್ಯತೆಯನ್ನು ನೀಡಬೇಕೆಂದು ಅಧಿಕಾರಿಗಳಿಗೆ ತಿಳಿಸಿ ಬರುತ್ತಾರೆ. ಮಾನ್ಯ ಸಚಿವರು ತಿಳಿಸಿ ಬಂದ ಮೇಲೆ ಅಧಿಕಾರಿಗಳು ಯಾವ ಕಾಮಗಾರಿಯಲ್ಲಿ ತಮಗೆ ಲಾಭವಾಗುತ್ತದೆಯೋ, ಅಂತಹ ಕಾಮಗಾರಿಗಳನ್ನು ಮಾಡುತ್ತಾರೆ. ಆ ರೀತಿ ಲಾಭಗಳಿಕೆಯೇ ಒಂದು ವ್ಯವಸ್ಥೆಯಾಗಿದೆ. ಹಾಡಿಗಳಿಗೆ ಜನರನ್ನು ನೋಡುವುದಕ್ಕೆ ಹೋಗುತ್ತಾರೆ. ಯಾರದೋ ಸಹಾನುಭೂತಿಗಿಂತ ಮನಸ್ಥೈರ್ಯ ತುಂಬುವುದಕ್ಕೆ ಅವರು ಹೋಗುತ್ತಾರೆ. ಆದರೆ, ಅಧಿಕಾರಿಗಳು ಜೇಬು ತುಂಬಿಕೊಳ್ಳುವಂತಹ ಕೆಲಸವನ್ನು ತುಂಬಾ ಚೆನ್ನಾಗಿ ಮಾಡುತ್ತಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಅದು ಎಷ್ಟೇ ಕಷ್ಟವಾದರೂ ಪರವಾಗಿಲ್ಲ, ಇಲ್ಲಿಯವರೆಗೂ ಭೇಟಿ ಕೊಟ್ಟಿರುವಂತಹ ಜಾಗಗಳಿಗೆ ಮತ್ತೊಮ್ಮೆ ಭೇಟಿ ಕೊಟ್ಟು, ಅಲ್ಲಿ ಏನೇನು ಕಾರ್ಯಗಳಾಗಿದೆ ಎಂಬುದನ್ನು ನೋಡುವುದಕ್ಕಾಗಿ ಅಧಿಕಾರಿಗಳನ್ನು ಸಹ ಕರೆಸಿ, ಬೇಕಾದರೆ ಜೊತೆಗೆ ನಾವು ಸಹ ಬರುತ್ತೇವೆ. ದಯವಿಟ್ಟು ಒಂದು ಸಲ ಅಲ್ಲಿಗೆ ಹೋಗಿ ಬರಬೇಕು. ಯಾವ ರೀತಿಯ ವ್ಯವಸ್ಥೆ ಇದೆ. ಮಾನ್ಯ ಸಚಿವರಿಗೆ ಅಧಿಕಾರಿಗಳು ಯಾವ ರೀತಿಯಲ್ಲಿ ಮೋಸ ಮಾಡುತ್ತಿದ್ದಾರೆ, ಸಾಮಾನ್ಯ ಜನರಿಗೆ ಯಾವ ರೀತಿಯಲ್ಲಿ ವಂಚನೆ ಮಾಡುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ಮಾನ್ಯ ಸಚಿವರು ರಾತ್ರಿ ಹೋಗಿ ಒಂದು ದಿನ ಏನು ಕಳೆದಿರುತ್ತಾರೆಯೋ ಅದರ ಬೆಲೆ ಏನೆಂಬುದು ಅಧಿಕಾರಿಗಳಿಗೆ ಗೊತ್ತಿಲ್ಲದಿರುವ ಪರಿಸ್ಥಿತಿ ಇದೆ. ಆದ್ದರಿಂದ ಮಾನ್ಯ ಸಚಿವರು ಇದಕ್ಕೇನಾದರೂ ಒಂದು ಸ್ಪಷ್ಟ ರೂಪ ಕೊಡಬೇಕೆಂದು ಇನಂತಿಸುತ್ತೇನೆ.

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಗ್ರಾಮ ವಾಸ್ತವ್ಯವನ್ನು ಮಾಡಿದಂತಹ ಸಂದರ್ಭದಲ್ಲಿ ಅವರ ಉದ್ದೇಶಗಳು ಬಹಳ ಒಳ್ಳೆಯದಿತ್ತು. ಮಾನ್ಯ ಮೋಟಮ್ಮನವರು ಪ್ರಸ್ತಾಪ ಮಾಡಿದ ಹಾಗೆ ಬಹಳಷ್ಟು ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳಿಂದ ಪೂರ್ಣವಾಗಿ ವಂಚಿತರಾಗಿರುವವರಿದ್ದಾರೆ. ಅದಕ್ಕಾಗಿ ಮಾನ್ಯ ಸಚಿವರು ಈ ರೀತಿಯ ಕೆಲಸಗಳನ್ನೇ ಮಾಡಬೇಕೆಂದು ನಿರ್ದಿಷ್ಟವಾಗಿ ಹೇಳಿರುತ್ತಾರೆ. ಆದರೆ, ದುರಾದೃಷ್ಟವಶಾತ್ ಏನಾಗಿದೆಯೆಂದರೆ, ಕೆಲವರು ಕೇವಲ ಸಿ.ಸಿ. ರಸ್ತೆಗಳಿಗೆ, ಎಲ್ಲದರಲ್ಲಿಯೂ ಪ್ರಸ್ತಾವವನ್ನು ಕೊಟ್ಟಿರುತ್ತಾರೆ. ಪ್ರಸ್ತಾವ ಕೊಟ್ಟಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಇವತ್ತು ಕೊಟ್ಟಿರತಕ್ಕಂಥ ರೂ. 10.00 ಕೋಟಿಗಳನ್ನು ಸಿ.ಸಿ. ರಸ್ತೆಗಳಿಗೆ ಭರಿಸಲಾಗಿದೆ. ಮೊನ್ನೆ ನಾನು ಕೂಡ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆ. ಜಿಲ್ಲಾಧಿಕಾರಿಗಳು ಏನು ಪ್ರಸ್ತಾವವನ್ನು ಕೊಡುತ್ತಾರೋ ಅದರ ಮೇಲೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದರು. ಆದರೆ ಜಿಲ್ಲಾಧಿಕಾರಿಗಳಿಗೆ ಮಾನ್ಯ ಮೋಟಮ್ಮನವರು ಮತ್ತು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಕೂಡ ಪತ್ರವನ್ನು ಕೊಟ್ಟಿದ್ದೆವು. ಆದರೆ, ಜಿಲ್ಲಾಧಿಕಾರಿಗಳು ಈ ರೀತಿಯಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಗೆ ಪುನರ್ ಪರಿಶೀಲನೆಗೋಸ್ಕರ ಪತ್ರವನ್ನು ವಾಪಸ್ಸು ಹಾಕಿದ್ದರು. ಪುನರ್ ಪರಿಶೀಲನೆಗೋಸ್ಕರ ಪತ್ರವನ್ನು ಹಾಕಿದ್ದರೂ ಕೂಡ ಪುನರ್ ಪರಿಶೀಲನೆಯನ್ನು ಮಾಡಿ ಯಾವ ರೀತಿ ಉಪಯೋಗ ಮಾಡಬೇಕೆನ್ನುವ ಮಾಹಿತಿಯನ್ನು ಇಲ್ಲಿಯವರೆಗೂ ಜಿಲ್ಲಾಧಿಕಾರಿಗಳಿಗೆ ಕೊಡಲಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೆ, ಉತ್ತರವನ್ನು ಹೇಳಿ. ಕೇವಲ ರಸ್ತೆಗಳಿಗೆ ಮಾತ್ರವಲ್ಲ, ಬೇರೆ ಸೌಕರ್ಯಗಳಿಗೂ ಅನುದಾನ ಬೇಕೆಂದು ಮಾನ್ಯ ಮೋಟಮ್ಮನವರು ಹೇಳುತ್ತಿದ್ದಾರೆ.

**ಶ್ರೀ ಪ್ರಾಣೇಶ್ ಎಂ.ಕೆ.:–** ಮಾನ್ಯ ಸಭಾಪತಿಯವರೆ, ರೂ. 10.00 ಕೋಟಿಗಳಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಶೇಕಡಾ ಇಷ್ಟು ಎಂದು ನಿಗದಿ ಮಾಡಿ ಹಾಗೂ ಅಲ್ಲಿರುವಂತಹ ಮನೆಗಳ ಬಗ್ಗೆ ವಾಸ್ತವ್ಯ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ನೋಡಿದ್ದಾರೆ. ಅಲ್ಲಿರತಕ್ಕಂಥ ಜನರಿಗೆ ಮನೆಗಳ ಸೌಕರ್ಯವಿಲ್ಲ. ವಿದ್ಯುತ್ ಸೌಕರ್ಯವಿಲ್ಲ. ಇದಕ್ಕೆಲ್ಲಾ ಸಂಪೂರ್ಣವಾಗಿ ಎಷ್ಟೆಷ್ಟು ಅನುದಾನವನ್ನು ನಿಗದಿಗೊಳಿಸಬೇಕೆಂಬುದನ್ನು ಸ್ಪಷ್ಟಪಡಿಸಿ ಕಳುಹಿಸಬೇಕೆಂಬುದು ಪ್ರಮುಖವಾದ ವಿಚಾರವಾಗಿರುತ್ತದೆ.

**ಸಭಾಪತಿಯವರು:–** ಮಾನ್ಯ ಮೋಟಮ್ಮನವರೆ, ನಿಮ್ಮ ಪ್ರಶ್ನೆ ಇನ್ನು ಇದೆಯೇ? ಒಂದು ನಿಮಿಷ ಮಾನ್ಯ ರಾಮಚಂದ್ರಗೌಡರವರೆ ಮೋಟಮ್ಮನವರ ಪ್ರಶ್ನೆ ಇನ್ನು ಮುಗಿದಿಲ್ಲ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ದಯವಿಟ್ಟು ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಮಾನ್ಯ ಮೋಟಮ್ಮನವರೆ ನಿಮ್ಮ ಪ್ರಶ್ನೆಯ ಬಗ್ಗೆಯೇ ಮಾತನಾಡುತ್ತೇನೆ. 2016–17ನೇ ಸಾಲಿನಲ್ಲಿ ರೂ. 10.00 ಕೋಟಿಗಳನ್ನು ಬಿಡುಗಡೆ ಮಾಡಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಿಂದ ಖರ್ಚಾಗಿರುವುದೆಂದರೆ, ಅನುಬಂಧ–2 ರಲ್ಲಿ 2013–14, 2014–15 ಹಾಗೂ 2015–16ನೇ ಸಾಲುಗಳಲ್ಲಿ ಆಗಿರತಕ್ಕಂಥ ವಿವರವಿದೆ. ಆದರೆ, 2016–17ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಮಾಹಿತಿ ಇಲ್ಲ. ಖರ್ಚಾಗಿರತಕ್ಕಂಥ ವಿವರವೂ ಇಲ್ಲ. 2016–17ನೇ ಸಾಲಿನಲ್ಲಿ ರೂ. 10.00 ಕೋಟಿ ಹಣ ಬಿಡುಗಡೆಯಾಗಿದೆ. ಆದರೆ, ಕೊಟ್ಟಿರತಕ್ಕಂಥ ಅನುಬಂಧ–2 ರಲ್ಲಿ ಖರ್ಚಾಗಿರುವ ವಿವರವೂ ಇಲ್ಲ, ಉಳಿಕೆಯ ವಿವರವೂ ಇಲ್ಲವಾಗಿದೆ. ದಯಮಾಡಿ ಸರ್ಕಾರ ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿ. ನನಗೆ ಇದು ಯಾವ ರೀತಿ ಎಂಬುದು ಅರ್ಥವಾಗಲಿಲ್ಲ. ದಯಮಾಡಿ ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, ಏನು 2 ಪ್ಯಾಕೇಜ್ ರೀತಿಯಲ್ಲಿ ಅನುದಾನ ಬಿಡುಗಡೆಯಾಗಿದೆ, ಅದರಲ್ಲಿ ಮೊದಲನೆಯ ಪ್ಯಾಕೇಜ್‌ಗೆ ರೂ. 10.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಎರಡನೆಯ ಪ್ಯಾಕೇಜ್‌ನಲ್ಲಿ ಮಾರ್ಗಸೂಚಿಗಳನ್ನು ಸೂಚಿಸಿ, ಎಷ್ಟೆಷ್ಟು ಅನುದಾನವನ್ನು ಖರ್ಚು ಮಾಡಬೇಕೆಂದು ಕೊಟ್ಟಿದ್ದಾರೆ. ಅವುಗಳೆಲ್ಲದರ ಪ್ರಕಾರ ರೂ. 20.00 ಕೋಟಿಗಳ ಪ್ರಸ್ತಾವನೆಯನ್ನು ಮಾನ್ಯ ಸಚಿವರು ಅನುಮೋದನೆ ಮಾಡಿದರೆ, ಈ ಸಮಸ್ಯೆಯೇ ಬಗೆಹರಿಯುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೆ ನೋಡಿ, ರೂ. 20.00 ಕೋಟಿಗಳ ಅನುದಾನವನ್ನು ಭರಿಸಿದರೆ ಸಮಸ್ಯೆ ಬಗೆಹರಿಯುತ್ತದೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ನಾವು ಜನಪ್ರತಿನಿಧಿಗಳನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಕರೆದು ಯಾವ್ಯಾವ ಕಾಮಗಾರಿಗಳಿಗೆ ಅನುದಾನದ ಅವಶ್ಯಕತೆ ಇದೆಯೋ ಅದರ ಬಗ್ಗೆ ಚರ್ಚಿಸುತ್ತೇವೆ. ರಸ್ತೆ ಅವಶ್ಯಕತೆಯಿದ್ದರೆ ರಸ್ತೆಗಳ ಸಂಪರ್ಕವನ್ನು ಮಾಡಬೇಕು. ನೀರಿನ ಅವಶ್ಯಕತೆಯಿದ್ದರೆ ನೀರಿನ ಸೌಕರ್ಯವನ್ನು ಕಲ್ಪಿಸಬೇಕು. ಮನೆಗಳನ್ನಂತೂ ಎಲ್ಲರಿಗೂ ಕೊಟ್ಟಿದ್ದೇವೆ. ಯಾರು ಮನೆಗಳಿಗಾಗಿ ಅರ್ಜಿಯನ್ನು ಹಾಕುತ್ತಾರೆಯೋ, ಅಂಥವರಿಗೆ ಮನೆ ಇಲ್ಲವೆಂದು ಹೇಳದೇ ಇರುವ ರೀತಿಯಲ್ಲಿ ಆದೇಶ ಮಾಡಿದ್ದೇವೆ. ಅಷ್ಟು ಹಣವನ್ನು ನಾವು ಕೊಡುತ್ತಿದ್ದೇವೆ. ಇದರಿಂದ ಮನೆ ಕಟ್ಟಿಕೊಳ್ಳುವುದಕ್ಕೆ ಏನು ತೊಂದರೆಯಿಲ್ಲ. ನಂತರ forest area ಏನಿದೆ, ಆ ಅರಣ್ಯ ಇಲಾಖೆಯ ನಿಯಮಾವಳಿಗಳ ಆಧಾರದ ಮೇಲೆ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಬರುತ್ತದೆ. ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಲು ಕೂಡ ವಿದ್ಯುತ್ ಸಂಪರ್ಕವಿದ್ದರೆ ವಿದ್ಯುತ್ ವ್ಯವಸ್ಥೆಯನ್ನು ಕಲ್ಪಿಸಿಕೊಡಿ ಎಂದು ಹೇಳಿದ್ದೇವೆ. ಹಾಡಿಗೆ ಹೋಗಿ, ಊರಿಗೆ ಹೋಗಿ ಅವರಿಗೆ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆನ್ನುವ ದೃಷ್ಟಿಯನ್ನಿಟ್ಟುಕೊಂಡು ರೂ. 10.00 ಕೋಟಿಗಳ ಪ್ಯಾಕೇಜ್ ಮಾಡಿದ್ದೇವೆ. ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪ್ರತಿನಿಧಿಗಳನ್ನು ಕರೆಸಿ ಯೋಜನೆಯನ್ನು ಸಿದ್ಧಪಡಿಸಿಕೊಡಿ ಎಂದು ಹೇಳಿದ್ದೆವು. ಪ್ರಸ್ತಾವನೆಗಳನ್ನು ಪರಿಶೀಲಿಸಿ, ನಮ್ಮ ಮಾರ್ಗಸೂಚಿ ಪ್ರಕಾರ ಮಂಜೂರಾತಿ ಮಾಡಲಾಗುತ್ತದೆ.

**ಸಭಾಪತಿಯವರು:-** ಧನ್ಯವಾದಗಳು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1951**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಒದಗಿಸಿದ್ದಾರೆ. ಅವರು ತುಂಬಾ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಹಾಗೂ ಇಲಾಖೆಗೆ ಒಳ್ಳೆಯ ಹೆಸರು ಸಹ ಬಂದಿದೆ. ಆದರೆ, ಮಾನ್ಯ ಸಚಿವರು ನೀಡಿರತಕ್ಕಂಥ ಉತ್ತರದಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಪ್ರತಿದಿನ ಒಬ್ಬ ವಿದ್ಯಾರ್ಥಿಯ ಭೋಜನಕ್ಕೆ 46 ರೂಪಾಯಿ 66 ಪೈಸೆ ಎಂದು ನಿಗದಿಪಡಿಸಿದ್ದಾರೆ. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರತಿದಿನ ಒಬ್ಬ ವಿದ್ಯಾರ್ಥಿಯ ಭೋಜನಕ್ಕೆ 50.00 ರೂಪಾಯಿಗಳು ಎಂದು ನಿಗದಿಪಡಿಸಿದ್ದಾರೆ. ಆದರೆ, ಇಂದಿನ ಬೆಲೆ ಏರಿಕೆ ಹಾಗೂ ತುಟ್ಟಿ ಜೀವನದಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಪ್ರತಿದಿನ ಕನಿಷ್ಠ 75.00 ರೂಪಾಯಿಗಳು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಕನಿಷ್ಠ 90.00 ರೂಪಾಯಿಗಳನ್ನು ನಿಗದಿ ಮಾಡಿ, ಉತ್ತಮವಾದಂತಹ ಆಹಾರವನ್ನು ಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ಜೊತೆಗೆ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ 'feel at home' ಎನ್ನುವ ರೀತಿಯಲ್ಲಿ ಭಾವನೆ ಬರಬೇಕೆನ್ನುವುದು ನನ್ನ ಅಭಿಪ್ರಾಯ. ಎರಡನೆಯದಾಗಿ ಪ್ರತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿಗಳಿಗೆ ವಾರ್ಷಿಕ 400.00 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಆದರೆ, 400.00 ರೂಪಾಯಿಗಳು ಕಡಿಮೆ ಎಂದು ಅನ್ನಿಸುತ್ತದೆ. ಆದ್ದರಿಂದ ವಾರ್ಷಿಕ 1000.00 ರೂಪಾಯಿಗಳನ್ನು ನಿಗದಿಪಡಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

(836) 20.06.2017 11.40 ಬಿಎಸ್‌ಡಿ–ಆರ್‌ಎನ್

**ಶ್ರೀಮತಿ ವೀಣಾ ಅಚ್ಚಯ್ಯ (ಮುಂದು)**

100 ಸಂಖ್ಯಾಬಲವುಳ್ಳ ಪ್ರತಿ ವಿದ್ಯಾರ್ಥಿನಿಲಯಗಳಿಗೆ ವಾರ್ಷಿಕ ರೂ. 5 ಸಾವಿರಗಳನ್ನು ಇಟ್ಟಿದ್ದು, ಪ್ರತಿ ವಿದ್ಯಾರ್ಥಿಗೆ ಕೇವಲ ರೂ. 50 ಬರುತ್ತಿದ್ದು, ಇದನ್ನೂ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎಲ್ಲಕ್ಕಿಂತ ಮುಖ್ಯವಾಗಿ ವಿದ್ಯಾರ್ಥಿನಿಲಯಗಳಲ್ಲಿ ಶುಚಿತ್ವವನ್ನು ಕಾಪಾಡುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿದೆ. ಕೊನೆಯದಾಗಿ ಕೊಡಗು ಜಿಲ್ಲೆಯ ಆಹಾರ ಪದ್ಧತಿಯು ವಿಶೇಷ ಹಾಗೂ ವಿಭಿನ್ನವಾಗಿದೆ. ಹಾಗಾಗಿ ಕೊಡಗಿನ ಹಾಸ್ಟೆಲ್ ಮಕ್ಕಳಿಗೆ ಅಲ್ಲಿಯ ಆಹಾರವನ್ನು ಖಂಡಿತವಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಆಂಜನೇಯ:–** ಮಾನ್ಯ ಸಭಾಪತಿಯವರೇ, ನಾಲ್ಕು ವಿಭಾಗಗಳಲ್ಲಿ ಅಲ್ಲಿನ ಮಕ್ಕಳು ಏನೇನು ಬಯಸುತ್ತಾರೊ, ಅಂದರೆ ರೊಟ್ಟಿ ಬೇಕಾದರೆ ರೊಟ್ಟಿ, ಮುದ್ದೆ ಬೇಕಾದರೆ ಮುದ್ದೆ, ಬನ್ನೂರು ಕುರಿ ಅಥವಾ ನಾಟಿ

ಕೋಳಿ ಅಥವಾ ಮೀನು ಈ ರೀತಿ ಆಯಾ ಭಾಗಗಳಲ್ಲಿ ಮಕ್ಕಳು ಇಷ್ಟಪಡುವುದನ್ನು ಕೊಡುತ್ತಿದ್ದೇವೆ. ಇನ್ನು ಬೇರೆ ಯಾವುದಾದರೂ ಪ್ರಾಣಿ....

**ಶ್ರೀ ಪ್ರಮೋದ್ ಮಧ್ವರಾಜ್:–** 42 ರೂಪಾಯಿಗಳಲ್ಲಿ ಇದೆಲ್ಲವೂ ಆಗುತ್ತದೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರಾದ ಶ್ರೀ ಶಂಕರಮೂರ್ತಿಯವರಿಗೆ ಯಾವ ಮೀನು ಅಥವಾ ಯಾವ ಬನ್ನೂರು ಕುರಿ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು.

**ಶ್ರೀ ಹೆಚ್.ಆಂಜನೇಯ:–** ಅವರು ಗಾಂಧಿವಾದಿಗಳು.

**ಶ್ರೀ ಪ್ರಮೋದ್ ಮಧ್ವರಾಜ್:–** ಅವರಿಗೆ ನಾವು ಮೀನು ಕೊಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಹೇಳಲು ತಮ್ಮ ಒಪ್ಪಿಗೆಯೂ ಇರಬೇಕು. ಅವರು ಕೊಡುವ ಮೀನನ್ನು ಮಾನ್ಯ ಶಂಕರಮೂರ್ತಿಯವರು ತಿನ್ನುತ್ತಾರೆಯೇ? ಇದು ನನ್ನ ನೇರ ಪ್ರಶ್ನೆ.

**ಶ್ರೀ ರಾಮಚಂದ್ರಗೌಡ:–** ತಿನ್ನುವುದಿಲ್ಲ, ನುಂಗಿಬಿಡುತ್ತಾರೆ.

**ಶ್ರೀ ಹೆಚ್.ಆಂಜನೇಯ:–** ಆದ್ದರಿಂದ ಆಯಾ ಭಾಗದ ಮಕ್ಕಳು ಇಷ್ಟಪಡುವ ಪದ್ಧತಿಯನ್ನೇ ಅನುಸರಿಸುತ್ತಿದ್ದೇವೆ. ಮಾನ್ಯ ಸದಸ್ಯರು ದರ ಹೆಚ್ಚು ಮಾಡುವ ಬಗ್ಗೆ ಕೇಳಿದ್ದು, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

**2. ರೈತರಿಗೆ ತೊಗರಿ ಬಾಕಿ ಪಾವತಿಸುವ ಬಗ್ಗೆ**

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ರಾಜ್ಯದಲ್ಲಿ ತೊಗರಿ ಕೇಂದ್ರವನ್ನು ನಮ್ಮ ಸರ್ಕಾರವು ತೆಗೆದಿದ್ದು, ಕೊನೆ ಹಂತದಲ್ಲಿ stop ಆಗಿ ಇನ್ನೂವರೆಗೆ ರೈತರಿಗೆ ಹಣ ಬಂದಿಲ್ಲ. ದೇವದುರ್ಗ ತಾಲ್ಲೂಕಿನ TAPCMS (Taluk Agricultural Produce Co-operative Marketing Society) ನ ಒಂದರಲ್ಲಿಯೇ ರೂ.5.20 ಕೋಟಿ ಬರಬೇಕಾಗಿದೆ. ಈಗ ಮಳೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುತ್ತಿದ್ದು, ರೈತರು ಬೀಜ, ಗೊಬ್ಬರ ಖರೀದಿ ಮಾಡುವುದಕ್ಕೆ ಹಣ ಬೇಕಾಗಿರುತ್ತದೆ. ಆದ್ದರಿಂದ *NAFED* (National Agricultural Cooperative Marketing Federation of India) ರವರು ಏನು ಖರೀದಿ ಮಾಡಿದ್ದಾರೆ, ಮಾನ್ಯ ಸಚಿವರು ಸದನದಲ್ಲಿದ್ದು, ಆ *NAFED* ನಿಂದ ಖರೀದಿ ಮಾಡಿರುವ ರೂ. 5,050/– ಮತ್ತು ಪ್ರೋತ್ಸಾಹ ಧನ ರೂ. 450/–ಸೇರಿ ರೂ. 5,550/– ಗಳನ್ನು ಕೂಡಲೇ ಎರಡು ದಿನಗಳಲ್ಲಿ ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ಕೃಷಿ ಸಚಿವರಿಗೆ ಮಾಹಿತಿ ಇದ್ದರೆ ಹೇಳುತ್ತಾರೆ.

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಒಟ್ಟು ರೂ. 1,900 ಕೋಟಿ ಮೌಲ್ಯದ ತೊಗರಿ ಖರೀದಿಯಾಗಿದ್ದು, ಅದರಲ್ಲಿ ಸುಮಾರು ರೂ. 100–150 ಕೋಟಿ ಹಣ ಪಾವತಿಯಾಗುವುದು ಬಾಕಿ ಇದ್ದು, ಕಳೆದ ವಾರ ಇಲ್ಲಿ ಪ್ರಸ್ತಾಪ ಆದಮೇಲೆ ನಾನು ಕೃಷಿ ಮಾರುಕಟ್ಟೆ ಇಲಾಖೆಯವರಿಗೆ ಮಾತನಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬಾಕಿ ಇರುವುದನ್ನು ಬೇಗ ಬಿಡುಗಡೆ ಮಾಡಲು ಸೂಚನೆ ಕೊಟ್ಟಿದ್ದಾರೆ. ಅದು ಸ್ವಲ್ಪ ಬಾಕಿ ಇದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಎರಡು–ಮೂರು ದಿನಗಳಲ್ಲಿ ಬಿಡುಗಡೆ ಮಾಡಲು ಕೇಳುತ್ತಿದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು):–** ನೂರು–ನೂರೈವತ್ತು ಕೋಟಿ ರೂಪಾಯಿಗಳಷ್ಟು ಬಾಕಿ ಇದ್ದು, ಈ ಬಾಕಿಯನ್ನು ಒಂದು ವಾರ ಅಥವಾ ಹತ್ತು ದಿನಗಳಲ್ಲಿ ಚುಕ್ತಾ ಮಾಡಲು ಪ್ರಯತ್ನಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಈ ಬಗ್ಗೆ ಸೂಚನೆ ಕೊಟ್ಟಿದ್ದಾರೆ.

**ಸಭಾಪತಿಯವರು:–** ಮಳೆ ಬರುತ್ತಿದ್ದು, ಬಿತ್ತನೆ ಪ್ರಾರಂಭವಾಗುತ್ತಿದೆ ಎಂದು ಹೇಳಿದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು):–** ಒಂದು 5% ಬಾಕಿ ಇದ್ದು, ಅದನ್ನು ಕೊಡಿಸುತ್ತೇನೆ.

**ಸಭಾಪತಿಯವರು:–** ಇವತ್ತು ಪ್ರಶ್ನೋತ್ತರ ಅವಧಿ ಇಲ್ಲ, ತಡೆಹಿಡಿಯಲಾದ ಪ್ರಶ್ನೆಗಳನ್ನು ಮಾತ್ರ ಪಟ್ಟಿ ಮಾಡಲಾಗಿತ್ತು. ಹಾಗಾಗಿ ಶೂನ್ಯವೇಳೆ ಎಂದು ಇರುವುದಿಲ್ಲ. ನಾವು ಮಾಡಿಕೊಂಡಿರುವ ನಿಯಮಾವಳಿಗಳ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಕಾರ 330ಎ ಅಡಿಯಲ್ಲಿ ಕೆಲವು ಮಹತ್ವದ ಸಂಗತಿಗಳನ್ನು ಪ್ರಸ್ತಾಪ ಮಾಡಲು ಅವಕಾಶ ಇದೆ. ಕೆಲವು ಸದಸ್ಯರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವ ಬಗ್ಗೆ ಕೊಟ್ಟಿದ್ದು, ಅವರು ಪ್ರಸ್ತಾಪ ಮಾಡಬೇಕು. ಇದೊಂದು ರೀತಿ in lieu of zero hour ಎಂದು ಅರ್ಥ ಮಾಡಿಕೊಳ್ಳಬೇಕು. ಇದು ಶೂನ್ಯವೇಳೆ ಅಲ್ಲ, in lieu of zero hour. ಮೊದಲನೆಯದಾಗಿ ಶ್ರೀಮತಿ ವೀಣಾ ಅಚ್ಚಯ್ಯನವರೇ ತಮ್ಮ ಪ್ರಸ್ತಾವವನ್ನು ಓದಿ.

3. **ವಿಶೇಷ ಪ್ರಸ್ತಾವಗಳು**

**ನಿಯಮ 330 ಎ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಕೊಡಗು ಜಿಲ್ಲೆಯಲ್ಲಿ ದುಬಾರೆ ಆನೆ ಶಿಬಿರದಿಂದ ಆನೆಗಳನ್ನು ಸ್ಥಳಾಂತರಿಸುವ ಕುರಿತು**

~~~~~

**ಶ್ರೀಮತಿ ವೀಣಾ ಅಚ್ಚಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ,

“ಕೊಡಗು ಜಿಲ್ಲೆಯಲ್ಲಿ ದುಬಾರೆ ಆನೆ ಶಿಬಿರದಿಂದ ಆನೆಗಳನ್ನು ಸ್ಥಳಾಂತರಿಸಲು, ಚಿಕ್ಲಿಹೊಳೆ ಜಲಾಶಯ ಸಮೀಪ ಹೊಸದಾಗಿ ಆನೆ ಶಿಬಿರ ನಿರ್ಮಿಸುತ್ತಿದ್ದು, ಈ ಶಿಬಿರದಿಂದ ಸುತ್ತಮುತ್ತ ಇರುವ ಗ್ರಾಮಸ್ಥರು ಹಲವಾರು ತೊಂದರೆ ಅನುಭವಿಸಬೇಕಾಗುತ್ತದೆ. ಏಕೆಂದರೆ ಚಿಕ್ಲಿಹೊಳೆ ಜಲಾಶಯವು ನಿಂತ ನೀರಾಗಿರುವುದರಿಂದ ಆನೆಗಳ ನಿರ್ವಹಣೆ ಅಂದರೆ ಆನೆಗಳ ಮಲಮೂತ್ರ ಹಾಗೂ ಸ್ನಾನದಿಂದ ಅನೇಕ ಸಾಂಕ್ರಾಮಿಕ ರೋಗಗಳು ಬರುವ ಸಾಧ್ಯತೆ ಇದೆ. ಅದೇ ನೀರನ್ನು ಕೆಳಭಾಗದ ರೈತರು ಕುಡಿಯಲು ಹಾಗೂ ಮತ್ತಿತರ ಕಾರ್ಯಗಳಿಗೆ ಉಪಯೋಗಿಸುತ್ತಾರೆ. ಈಗಾಗಲೇ ಈ ವ್ಯಾಪ್ತಿಯಲ್ಲಿ ಆನೆ ಹಾವಳಿ ಅಧಿಕವಾಗಿದ್ದು, ಹಲವು ಸಾವು–ನೋವುಗಳು ಸಹ ಸಂಭವಿಸಿವೆ.

ಆದುದರಿಂದ, ದುಬಾರೆಯಿಂದ ಆನೆ ಶಿಬಿರವನ್ನು ಸ್ಥಳಾಂತರಿಸಬಾರದೆಂದು ಅಥವಾ ಸ್ಥಳಾಂತರಿಸಲೇಬೇಕು ಎನ್ನುವುದಾದರೆ ಕಾವೇರಿ ನದಿ ಪಾತ್ರದಲ್ಲಿ ಸ್ಥಳ ಗುರುತಿಸಿ ಸ್ಥಳಾಂತರಿಸಬೇಕೆಂದು ಅಥವಾ ವಿಲೇವಾರಿ ಮತ್ತಿಗೋಡು ಹಾಗೂ ದುಬಾರೆ ಸಮೀಪದ ದೊಡ್ಡರ್ವೆ, ರಾಣಿಗೇಟ್ ಸಮೀಪ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಶಿಬಿರಗಳಿಗೆ ಸ್ಥಳಾಂತರಿಸಿ ಸಾರ್ವಜನಿಕರಿಗೆ ಆಗುವ ತೊಂದರೆಯನ್ನು ನಿವಾರಿಸಬೇಕೆಂದು ಈ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಮತ್ತು ಪರಿಸರ ಸಚಿವರಿಂದ ನಂತರ ಉತ್ತರವನ್ನು ಕೊಡಿಸಲಾಗುತ್ತದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~~

**ಸಭಾಪತಿಯವರು:–** ಶ್ರೀ ಡಿ.ಎಸ್. ವೀರಯ್ಯನವರು ಗೈರು ಹಾಜರಾಗಿರುವುದರಿಂದ ಮುಂದಿನ ವಿಷಯಕ್ಕೆ ಹೋಗೋಣ.

**ಆ) ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ,
ಧಾರವಾಡ ಇಲ್ಲಿನ ದೈಹಿಕ ಮತ್ತು ಯೋಗ ಶಿಕ್ಷಕರನ್ನು
ವಜಾ ಮಾಡಿರುವ ಬಗ್ಗೆ.**

~~~~~~

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ,

"ಧಾರವಾಡದ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯು 1997ರಿಂದ ಕಾರ್ಯನಿರ್ವಹಿಸುತ್ತಿದ್ದು, 20 ವರ್ಷಗಳವರೆಗೆ ಯಾವುದೇ ದೂರುಗಳಿಗೆ ಆಸ್ಪದವಿಲ್ಲದೇ ಕಾರ್ಯನಿರ್ವಹಿಸಿದ ದೈಹಿಕ ಶಿಕ್ಷಕ ಶ್ರೀ ಪಿ.ಡಿ. ರೋಣದ ಹಾಗೂ ಯೋಗ ಶಿಕ್ಷಕ ಶ್ರೀ ಪ್ರಕಾಶ ಪವಾಡಶೆಟ್ಟರ ಇವರನ್ನು ದಿನಾಂಕ 03/05/2017ರಂದು ವಜಾ ಮಾಡಲಾಗಿದೆ.

ಈ ಕುರಿತು ದಿನಾಂಕ 18/05/2017ರಂದು ಮಾನ್ಯ ಗೃಹ ಸಚಿವರಿಗೆ ಶ್ರೀ ಬಸವರಾಜ ಹೊರಟ್ಟಿ ಅವರು ಪತ್ರ ಬರೆದಾಗ ದಿನಾಂಕ 24/05/2017ರಂದು ಸದರಿಯವರ ವಜಾ ಆದೇಶಗಳನ್ನು ರದ್ದುಪಡಿಸಲು ಸೂಚಿಸಿದ್ದು, ನಂತರ ನವಲಗುಂದ ಶಾಸಕರು ಬರೆದ ಪತ್ರಕ್ಕೆ ಗೃಹ ಸಚಿವರು ದಿನಾಂಕ 06/06/2017ರಂದು ಮತ್ತೊಮ್ಮೆ ಆದೇಶವನ್ನು ಹಿಂಪಡೆಯಲು ಆದೇಶಿಸಿದ್ದಾರೆ. ನಂತರ ಶ್ರೀ ಬಸವರಾಜ ಹೊರಟ್ಟಿ ಅವರು ಡಿ.ಜಿ.ಪಿಯವರನ್ನು ಹಾಗೂ ಹೆಚ್ಚುವರಿ ಡಿ.ಜಿ.ಪಿಯವರನ್ನು ಭೇಟಿಯಾಗಿ ಚರ್ಚಿಸಿ ಸದರಿ ಶಿಕ್ಷಕರು ತಮ್ಮ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ದಾಖಲೆ ಸಹಿತ ವಿವರಿಸಿದ್ದಾರೆ.

ಪೊಲೀಸ್ ಮಕ್ಕಳ ವಸತಿ ಶಾಲೆಯ ಆಡಳಿತವು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಆಡಳಿತ ನಿಯಂತ್ರಣದಲ್ಲಿದೆ ಎಂಬ ಒಂದೇ ಕಾರಣಕ್ಕಾಗಿ ವಜಾಗೊಳಿಸಿದ ನೌಕರರ ಹೇಳಿಕೆಗಳನ್ನು ಪಡೆಯದೇ ದಿನಾಂಕ 21/05/2017ರಂದು ಸಂದರ್ಶನ ನಡೆಸಿ, ದಿನಾಂಕ 01/06/2017ರಂದು ಕಾನೂನು ಬಾಹಿರವಾಗಿ ಕೆಲಸಕ್ಕೆ ಹಾಜರುಪಡಿಸಿಕೊಳ್ಳಲಾಗಿದೆ.

ಶಿಕ್ಷಕರಿಗೆ ಪೊಲೀಸ್ ಭಾಷೆಯನ್ನು ಬಳಸಿ ಬೂಟಿನಿಂದ ಹೊಡೆಯುತ್ತೇವೆ ಎಂಬಂತಹ ಅವಮಾನಕರವಾದ ಬೈಗುಳಗಳನ್ನು ಹಿಂದಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಬಳಸಿದ್ದಾರೆ. ಸ್ವತಃ ರಾಜ್ಯದ ಮಾನ್ಯ ಗೃಹ ಸಚಿವರು ಆದೇಶಿಸಿದ್ದರೂ ಅವರ ರಾಜೀನಾಮೆ ಅಂಗೀಕಾರವಾಗುವವರೆಗೆ ಪ್ರಕರಣವನ್ನು ಮುಂದೂಡಲು ಅಧಿಕಾರಿಗಳು ಹುನ್ನಾರ ನಡೆಸಿದ್ದಾರೆ. ನಂತರ ಶ್ರೀ ಬಸವರಾಜ ಹೊರಟ್ಟಿ ಅವರು ದಿನಾಂಕ:

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~

09/07/2017ರಂದು ಮತ್ತೆ ಗೃಹ ಸಚಿವರನ್ನು ಭೇಟಿಯಾಗಿ ಈ ಪ್ರಕರಣವು ಪ್ರಾರಂಭವಾಗಲು ಅಲ್ಲಿನ ಬೋಧಕೇತರ ಸಿಬ್ಬಂದಿ ಅಂದರೆ ನಿವೃತ್ತಿ ನಂತರವೂ ಮುಂದುವರಿಸುವ ಪ್ರಥಮ ದರ್ಜೆ ಸಹಾಯಕ ಹಾಗೂ ಬೆರಳಚ್ಚುಗಾರ್ತಿಯರ ಕುಮ್ಮಕ್ಕಿನಿಂದ ನಡೆದಿದೆ ಎಂದು ತಿಳಿದು ಬರುತ್ತಿದೆ. ಹಲವಾರು ಖರೀದಿ ಪ್ರಕರಣಗಳಲ್ಲಿ ಹೆಚ್ಚಿನ ದರ ಪಾವತಿಸಿ ಸಾಮಗ್ರಿಗಳನ್ನು ಖರೀದಿಸಿದ್ದನ್ನು ವಿರೋಧಿಸಿರುವುದೇ ಇಬ್ಬರು ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಲು ಕಾರಣವಾಗಿದೆ.

ಆದ್ದರಿಂದ 20 ವರ್ಷಗಳಿಂದ ಯಾವುದೇ ದೂರಿಗೆ ಆಸ್ಪದವಿಲ್ಲದೇ ಕಾರ್ಯನಿರ್ವಹಿಸಿರುವ ದೈಹಿಕ ಶಿಕ್ಷಕ ಹಾಗೂ ಯೋಗ ಶಿಕ್ಷಕರನ್ನು ಪುನಃ ಕೆಲಸಕ್ಕೆ ಹಾಜರುಪಡಿಸಿಕೊಂಡು ನ್ಯಾಯ ಒದಗಿಸಿಕೊಡುವುದರೊಂದಿಗೆ ಈ ಶಾಲೆಯ ಎಲ್ಲಾ ವ್ಯವಹಾರಗಳ ಬಗ್ಗೆ ತನಿಖೆ ನಡೆಸುವಂತೆ ಸರ್ಕಾರವನ್ನು ನಿಯಮ 330ಎ ರಡಿಯಲ್ಲಿ ಒತ್ತಾಯಿಸುತ್ತೇನೆ."

(ಮುಂದು)

**(837) 20-06-017 11.50 SK-RN**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಿಂದ ನಂತರ ಹೇಳಿಕೆಯನ್ನು ಕೊಡಿಸಲಾಗುತ್ತದೆ.

**ಸಭಾಪತಿಯವರು:–** ಧನ್ಯವಾದಗಳು.

ಇ) ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಕನ್ನಡಿಗರ ಮೇಲೆ ನಡೆಯುತ್ತಿರುವ ದೌರ್ಜನ್ಯ ಕುರಿತು.

~~~~~~

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆ ಅಂದರೆ ಸಿ.ಎಫ್.ಟಿ.ಆರ್.ಐ.ನಲ್ಲಿ ಪ್ರೊ. ರಾಮರಾಜಶೇಖರನ್ ಅವರು ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ನಂತರ ಕನ್ನಡಿಗರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಕನ್ನಡ ಭಾಷೆಗೆ ಅವಮಾನ ಮಾಡುವ ಕೆಲಸ ಆಗುತ್ತಿದೆ. ಕನ್ನಡಿಗರಿಗೆ ಕಿರುಕುಳ ನೀಡುತ್ತಿದ್ದು, ಕನ್ನಡಪರ ಚಟುವಟಿಕೆಯಲ್ಲಿ ಭಾಗವಹಿಸಿದರೆಂಬ ಕಾರಣಕ್ಕೆ ಮೂರು ಜನ ನೌಕರರನ್ನು ವಿನಾಕಾರಣ ಸಸ್ಪೆಂಡ್ ಮಾಡಿದ್ದಾರೆ. ಕನ್ನಡ ಭಾಷೆಯಲ್ಲಿ ಪ್ರಕಟವಾಗುತ್ತಿದ್ದ ಆಹಾರ ವಿಜ್ಞಾನ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸಿದ್ದಾರೆ. ಕನ್ನಡ ಸಹೃದಯ ಬಳಗವನ್ನು ಮುಚ್ಚಿಸಿದ್ದಾರೆ. ಮೈಸೂರು ಮಹಾರಾಜರು, ಕನ್ನಡ ನಾಡಿನಲ್ಲಿ ಆದರಲ್ಲೂ ಮೈಸೂರಿನಲ್ಲಿ ಸಿ.ಎಫ್.ಟಿ.ಆರ್.ಐ ಸ್ಥಾಪನೆ ಆಗಬೇಕೆಂಬ ಉದ್ದೇಶದಿಂದ, ತಮ್ಮ ಚೆಲುವಾಂಬಾ ಪ್ಯಾಲೇಸ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~

ಬಂಗಲೆಯನ್ನೇ ಅದಕ್ಕಾಗಿ ಬಿಟ್ಟುಕೊಟ್ಟಿದ್ದರು. ಆದರೆ ಇವತ್ತಿನ ನಿರ್ದೇಶಕರು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಸಂಸ್ಥೆಯನ್ನು ತಮಿಳುಮಯವನ್ನಾಗಿ ಮಾಡಲು ಹೊರಟಿದ್ದಾರೆ.

ಈ ಬಗ್ಗೆ ಮೈಸೂರಿನ ಹಿರಿಯ ಸಾಹಿತಿಗಳೂ, ಪ್ರಗತಿಪರ ಚಿಂತಕರೂ ಆದ ಡಾ. ಸಿ.ಪಿ. ಕೃಷ್ಣಕುಮಾರ್, ಹನೂರು ಕೃಷ್ಣಮೂರ್ತಿ, ಕೆ.ಎಸ್. ಭಗವಾನ್, ಮಹೇಶ್‌ಚಂದ್ರಗುರು, ಎಂ. ಚಂದ್ರಶೇಖರ್, ಕೆ.ಎಸ್. ಶಿವರಾಮ್‌ರವರುಗಳು, ಹಿರಿಯ ಪತ್ರಕರ್ತರಾದ ರಾಜಶೇಖರ ಕೋಟಿಯವರು, ಅನೇಕ ಕನ್ನಡಪರ ಹೋರಾಟಗಾರರ ಜೊತೆ, ಮೈಸೂರಿನ ಜನತೆಯ ಜೊತೆ ಸಿ.ಎಫ್.ಟಿ.ಆರ್.ಐ. ನಿರ್ದೇಶಕರ ಧೋರಣೆಯನ್ನು ಖಂಡಿಸಿ ಪ್ರತಿಭಟಿಸಿ ಧರಣಿ ಮಾಡಿದ್ದಾರೆ. ಆದಕಾರಣ, ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ನಮ್ಮ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ತಕ್ಷಣ ಇಲ್ಲಿಗೆ ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಬೇಕು. ಸರ್ಕಾರದ ಮಟ್ಟದಲ್ಲಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಈ ಕನ್ನಡ ವಿರೋಧಿ ನಿರ್ದೇಶಕರನ್ನು ಇಲ್ಲಿಂದ ಎತ್ತಂಗಡಿ ಮಾಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ನಮ್ಮ ಮುಖ್ಯಮಂತ್ರಿಗಳು ಕನ್ನಡದ ಅಭಿಮಾನಿಗಳು, ಕನ್ನಡಕ್ಕೆ ಅವಮಾನ ಆಗುವುದನ್ನು ಅವರು ಸಹಿಸುವುದಿಲ್ಲ. ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೊದಲನೆಯ ಅಧ್ಯಕ್ಷರು ಎಂಬುದು ನಮಗೆ ಹೆಮ್ಮೆಯ ವಿಷಯ. ಆದುದರಿಂದ ಮುಖ್ಯಮಂತ್ರಿಯವರು ನೇರವಾಗಿ ಮಧ್ಯ ಪ್ರವೇಶಿಸಿ ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಹೇಳಿಕೆಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಈ) ಕರ್ನಾಟಕ ನರ್ಸಿಂಗ್ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಕರ್ನಾಟಕ ಹೊರತುಪಡಿಸಿ ಬೇರೆ ರಾಜ್ಯಗಳಲ್ಲಿ ಮಾನ್ಯತೆ ಇಲ್ಲವೆಂಬ ಬಗ್ಗೆ.

~~~~~~

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇಂಡಿಯನ್ ನರ್ಸಿಂಗ್ ಕೌನ್ಸಿಲ್, ನವದೆಹಲಿ, ದಿನಾಂಕ 17/03/2017ರಂದು ಒಂದು ಆದೇಶವನ್ನು ಹೊರಡಿಸಿ, ಕರ್ನಾಟಕ ರಾಜ್ಯದಲ್ಲಿ ಕಲಿಯುತ್ತಿರುವ ಜನರಲ್ ನರ್ಸಿಂಗ್, ಬಿಎಸ್ಸಿ ನರ್ಸಿಂಗ್, ಎಂ.ಎಸ್ಸಿ. ನರ್ಸಿಂಗ್, ಎಂ.ಫಿಲ್. ನರ್ಸಿಂಗ್, ಪಿ.ಹೆಚ್.ಡಿ. ಇನ್ ನರ್ಸಿಂಗ್ ಕೋರ್ಸ್‌ಗಳಿಗೆ ಕರ್ನಾಟಕ ರಾಜ್ಯದ ಒಳಗಡೆಯೇ ಉದ್ಯೋಗಾವಕಾಶ ಪಡೆದುಕೊಳ್ಳಬೇಕು. ಅಲ್ಲದೆ ತಮ್ಮ ವೃತ್ತಿಯನ್ನು ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ, ಬೇರೆ ರಾಜ್ಯಗಳಲ್ಲಿ, ವಿದೇಶಗಳಲ್ಲಿ ನೊಂದಣಿ ಮಾಡಿ ಉದ್ಯೋಗ ಮಾಡುವಂತಿಲ್ಲ ಎಂದು ಆದೇಶವನ್ನು ಹೊರಡಿಸಿದೆ. ರಾಜ್ಯಾದ್ಯಂತ್ಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~

ಶಿಕ್ಷಣ ಪಡೆಯುತ್ತಿರುವ ಸಾವಿರಾರು ವಿದ್ಯಾರ್ಥಿಗಳು ಅಲ್ಲದೆ ನರ್ಸಿಂಗ್ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಮತ್ತು ಕಾರ್ಯನಿರ್ವಹಿಸುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ದಿಗ್ಭ್ರಮೆ ಉಂಟು ಮಾಡಿರುವುದಲ್ಲದೇ ಅತಂತ್ರ ಪರಿಸ್ಥಿತಿಗೆ ಸಿಲುಕಿರುತ್ತಾರೆ.

ಇಂಡಿಯನ್ ನರ್ಸಿಂಗ್ ಕೌನ್ಸಿಲ್ ತನ್ನ ವೆಬ್‌ಸೈಟಿನಿಂದ ಕರ್ನಾಟಕದ ಎಲ್ಲಾ ನರ್ಸಿಂಗ್ ಕಾಲೇಜುಗಳ ವಿವರಗಳನ್ನು ತೆಗೆದು ಹಾಕಿರುತ್ತಾರೆ. ಅಲ್ಲದೆ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಹೆಸರನ್ನು ಸಹ ತೆಗೆದು ಹಾಕಲಾಗಿದೆ. ಅಷ್ಟೇ ಅಲ್ಲದೆ ತಮಿಳುನಾಡು, ವೆಸ್ಟ್ ಬೆಂಗಾಲ್, ಕೇರಳ ಸರ್ಕಾರಗಳು ಕರ್ನಾಟಕದಲ್ಲಿ ಉತ್ತೀರ್ಣಗೊಂಡು ತರಬೇತಿಗೊಂಡ ವಿದ್ಯಾರ್ಥಿಗಳನ್ನು ಮೇಲಿನ ರಾಜ್ಯಗಳಲ್ಲಿ ನೊಂದಣಿ ಮಾಡಿ ಕೆಲಸ ಮಾಡಲು ಅವಕಾಶವಿಲ್ಲವೆಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಶೇಕಡ 80 ರಷ್ಟು ವಿದ್ಯಾರ್ಥಿಗಳು ಬ್ಯಾಂಕ್ ಸಾಲವನ್ನು ಪಡೆದು ಶಿಕ್ಷಣ ಮುಂದುವರಿಸಿದ ವಿದ್ಯಾರ್ಥಿಗಳಿಗೆ ನೀಡಲಾದ ಸಾಲ ಸವಲತ್ತನ್ನು ಹಿಂಪಡೆಯಲಾಗಿರುತ್ತದೆ. ಇದು ರಾಜ್ಯದ ಶಿಕ್ಷಣ ನೀತಿ ಮತ್ತು ಸಾವಿರಾರು ವಿದ್ಯಾರ್ಥಿಗಳು ಸಂವಿಧಾನದ ಅಡಿಯಲ್ಲಿ ಶಿಕ್ಷಣ ಪಡೆಯಲು ವಂಚಿತರಾಗಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ನರ್ಸಿಂಗ್ ಕೋರ್ಸ್‌ಗಳಿಗೆ ಶೇಕಡಾ 75 ರಷ್ಟು ವಿದ್ಯಾರ್ಥಿಗಳು ಹೊರ ರಾಜ್ಯಗಳಿಂದ ಬಂದು ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ ನಮ್ಮ ರಾಜ್ಯದಲ್ಲಿ ಕಲಿಯುತ್ತಿದ್ದು, ಇವರುಗಳು ಹೊರ ರಾಜ್ಯಕ್ಕೆ ಹೋದಾಗ ಅವರಿಗೆ recognition ಇಲ್ಲ ಮತ್ತು ಕಲಿಯುವುದಕ್ಕೆ ಅವಕಾಶ ಇಲ್ಲ ಎಂಬ ಕಾರಣಕ್ಕಾಗಿ ಅವರು ಅತಂಕಕ್ಕೆ ಒಳಗಾಗಿದ್ದಾರೆ.

ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ಆದೇಶವನ್ನು ಪುನರ್ ಪರಿಶೀಲಿಸುವಂತೆ ಮತ್ತು ಈ ನಿರ್ಧಾರವನ್ನು ತೆಗೆದುಕೊಂಡಿರುವ ಕಾರಣಗಳನ್ನು ಸ್ಪಷ್ಟೀಕರಿಸಿ ವಿದ್ಯಾರ್ಥಿ ಸಮುದಾಯಕ್ಕೆ ಉಂಟಾಗಿರುವ ಅನ್ಯಾಯವನ್ನು ಸರಿಪಡಿಸಿ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಇದರ ಜೊತೆಯಲ್ಲಿ ಇಂಡಿಯನ್ ನರ್ಸಿಂಗ್ ಕೌನ್ಸಿಲ್ ದಾಖಲೆಗಳು ಮತ್ತು ಹೊರಡಿಸಿರುವ ಎಲ್ಲಾ ಆದೇಶಗಳನ್ನು ತಮ್ಮ ಮೂಲಕ ಸಚಿವರಿಗೆ ನೀಡಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿರುವ Indian Nursing Council recognition ಬೇಡವೇ ಬೇಡ, ನಮಗೆ ಮಾತ್ರ ಸಾಕು ಎಂದು ಆದೇಶ ಹೊರಡಿಸಿದರು. ನಾವು ಹಿಂದೆ ಇಲ್ಲಿಂದ No Objection Certificate ಕೊಟ್ಟು, Indian Nursing Council recognition ನಿಂದ ಅನುಮತಿಯನ್ನು ತೆಗೆದುಕೊಳ್ಳುತ್ತಿದ್ದೇವೆ. ಈಗ ಕರ್ನಾಟಕ ಸರ್ಕಾರದಿಂದ ಆಗಿರುವಂತಹ ತೊಂದರೆ ಇದು. ನಮ್ಮ ಸರ್ಕಾರಕ್ಕೆ ತೊಂದರೆಯಾಗಿದೆ. ನಾವು Indian Nursing Council ಅನುಮತಿ ಬೇಡ ಎಂದು ಹೇಳುವ ಕಾರಣಕ್ಕಾಗಿ, ಈ ಆದೇಶವನ್ನು Indian Nursing Council ನವರು ಹೊರಡಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿರುವಂತಹ ಎಲ್ಲಾ ನರ್ಸಿಂಗ್ ಸಂಸ್ಥೆಗಳಿಗೆ Indian Nursing Council recognition ಬೇಡ ಎಂದು ಹೇಳಿರುವಂತಹ ತಪ್ಪನ್ನು ತಿದ್ದಿಕೊಂಡು, ಇಂಜಿನೀಯರಿಂಗ್ ಕಾಲೇಜುಗಳಿಗೆ AICTE (All India Council for Technical Education) ಅನುಮತಿ ಬೇಕು, ಮೆಡಿಕಲ್ ಕಾಲೇಜುಗಳಿಗೆ MCI ಅನುಮತಿ ಬೇಕು. ಈ Central Council ನ ಅವಶ್ಯಕತೆ ಇದೆ. ನಾವು No Objection Certificate ಮಾತ್ರ ಕೊಡುತ್ತಿದ್ದೆವು. ಇತ್ತೀಚೆಗೆ ಕರ್ನಾಟಕ ಸರ್ಕಾರ ನಮಗೆ INC ಅನುಮತಿ ಬೇಡ ಎಂದು ಹೇಳುವಂತಹ ಕಾನೂನನ್ನು ಹೊರಡಿಸಿರುವುದರಿಂದ ಸಂವಿಧಾನದಲ್ಲೆಲ್ಲಾ quote ಮಾಡಿದ್ದಾರೆ. ನೀವು ಇದನ್ನು ತಿದ್ದುಕೊಳ್ಳದೇ ಇದ್ದರೆ ನಮ್ಮ ರಾಜ್ಯದಲ್ಲಿ ಕಲಿತ ಮಕ್ಕಳು ಹೊರಗಡೆ ಹೋಗಿ ಕೆಲಸ ಮಾಡುವಂತಿಲ್ಲ. ತಾವು ಇದೊಂದನ್ನು ಅತ್ಯಂತ ಜರೂರಾಗಿ ತಿದ್ದಿಕೊಳ್ಳಬೇಕೆಂಬ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ, (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಇದು ಬಹಳ ಗಹನವಾದ ವಿಷಯವಾಗಿರುವುದರಿಂದ ಸರ್ಕಾರ ಇದನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳಬೇಕು, ಧನ್ಯವಾದಗಳು. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

**4. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>**

**(ಪಟ್ಟಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**5. ವರದಿಗಳನ್ನು ಒಪ್ಪಿಸುವುದು**

**ಅ) ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಅವರು 2016-17ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಸದಸ್ಯನಾದ ನಾನು ಮಾರ್ಚ್ 2016ಕ್ಕೆ ಅಂತ್ಯಗೊಂಡ CAG ವರದಿಯಲ್ಲಿನ ಅನುಪಾಲನಾ ಲೆಕ್ಕ ಪರಿಶೋಧನಾ ಖಂಡಿಕೆಗಳ ಮೇಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗಳಿಗೆ ಸಂಬಂಧಿಸಿದಂತೆ 23ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಆ) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಸದಸ್ಯನಾದ ನಾನು 14ನೇ ವಿಧಾನ ಸಭೆಯ 2016-17ನೇ ಸಾಲಿನ ಸಮಿತಿಯ 8ನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ವರದಿಗಳನ್ನು ಒಪ್ಪಿಸಲಾಯಿತು.

**ಸಭಾಪತಿಯವರು:-** ಈಗ ಬಹಳ ದಿವಸಗಳ ಹಿಂದಿನಿಂದ ಮುಂದುವರೆದುಕೊಂಡು ಬಂದಿರುವಂತಹ ಒಂದು ವಿಷಯದ ಬಗ್ಗೆ ನಾವು ಇವತ್ತು ಚರ್ಚೆ ಮುಗಿಸಿ, ಸರ್ಕಾರದಿಂದ ಉತ್ತರವನ್ನು ತೆಗೆದುಕೊಳ್ಳಬೇಕಾಗಿದೆ. ಸಮಯದ ಆಭಾವವನ್ನು ನೋಡಿಕೊಂಡು ಮಾತನಾಡುವವರು ಯಾರಾದರೂ ಇನ್ನೂ ಒಬ್ಬರೋ ಅಥವಾ ಇಬ್ಬರೋ ಮಾತ್ರ ಮಾತನಾಡಬಹುದು. ಈಗ ನಿಯಮ 68ರ ಮೇರೆಗೆ ಬರಗಾಲದಿಂದ ಉಂಟಾಗಿರುವ ಪರಿಸ್ಥಿಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

6. <u>ಶೂನ್ಯ ವೇಳೆಯಲ್ಲಿ ಪ್ರಸ್ತಾಪವಾಗಿರುವ ವಿಷಯಕ್ಕೆ ಸರ್ಕಾರದಿಂದ ಉತ್ತರಗಳನ್ನು ಕೊಡಿಸಬೇಕೆನ್ನುವ ಬಗ್ಗೆ.</u>

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ ನಾನು ಶೂನ್ಯವೇಳೆಯಲ್ಲಿ ನಾಲ್ಕು ದಿನಗಳ ಹಿಂದೆ ಪ್ರಶ್ನೆಗಳನ್ನು ಕೇಳಿದ್ದೇನೆ. ಅದಕ್ಕೆ ಉತ್ತರ ಬಂದಿಲ್ಲ. ಆ ವಿಚಾರಕ್ಕೆ ಸಂಬಂಧಿಸಿದಂತೆ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಸಹ ನಡೆಯುತ್ತಿದೆ. ಮಾನ್ಯ ಕಂದಾಯ ಸಚಿವರು ಈ ದಿನ ಸದನದಲ್ಲಿ ಇದ್ದಾರೆ. ದಯಮಾಡಿ ಅವರಿಂದ ಉತ್ತರವನ್ನು ಕೊಡಿಸಬೇಕೆಂದು ವಿನಂತಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಇದು ಶೂನ್ಯವೇಳೆಯಲ್ಲ. ನೀವು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ನಾಳೆ ಉತ್ತರ ಕೊಡಿಸುತ್ತೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು, ಮಾತನಾಡುತ್ತಾರೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ನನಗೆ ಮತ್ತು ಮಾನ್ಯ ಪ್ರಾಣೇಶ್‌ರವರಿಗೆ ಒಂದು ಅವಕಾಶ ಮಾಡಿಕೊಡಬೇಕಿತ್ತು.

**ಸಭಾಪತಿಯವರು:-** ಅದು ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಲಿಸ್ಟ್ ಆಗಿ ಬರಲಿಲ್ಲ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಾಳೆಯಾದರೂ ನಮಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇವೆ.

**ಸಭಾಪತಿಯವರು:-** ಏನು ಮಾಡೋಣ? ಸದನವನ್ನು ಒಂದು ವಾರ ಮುಂದುವರೆಸುವಂತೆ ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿ. ಆಗ ನಿಮಗೆಲ್ಲಾ ನಾನು ಅವಕಾಶ ಮಾಡಿಕೊಡುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಹೌದು, ಮೊದಲು ಕೊಟ್ಟಿರುವ ಕೆಲಸವೇ ಆಗಿಲ್ಲ.

**ಸಭಾಪತಿಯವರು:-** ಯಾರದೂ ಆಗಿಲ್ಲ. ನಾನು ಏನು ಮಾಡಲಿ? It is not in my hands.

**7. ನಿಯಮ 68ರ ಮೇರೆಗೆ**
**ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಮುಂದುವರೆದ ಚರ್ಚೆ**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೆಲ್ಲರೂ ನಿಲುವಳಿ ಸೂಚನೆ ಕೊಟ್ಟರೂ, ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ಎನ್ನುವ ನೋವಿನಲ್ಲಿದ್ದಾರೆ. ನಾನು ನಿಲುವಳಿ ಸೂಚನೆ ಕಳುಹಿಸಿ, ಈ ಬರಗಾಲ ಬಂದಿರುವಂತಹ ಸಂದರ್ಭದಲ್ಲಿ ನೀರಿಲ್ಲ, ಮೇವಿಲ್ಲ, ಸಾಲ ಮನ್ನಾ ಆಗಿಲ್ಲ ಎಂದು ನಮಗೆ ಅನಿಸುತ್ತಿದೆ. ನಿಲುವಳಿ ಸೂಚನೆ ಕಳುಹಿಸಿದ್ದೇವೆ. ಚರ್ಚೆ ಮಾಡಿದ್ದೇವೆಂಬುದು ಸಮಾಧಾನ ಬಿಟ್ಟರೆ ಸರ್ಕಾರದಿಂದ ಏನು ಪ್ರತಿಕ್ರಿಯೆ ಇಲ್ಲ, ಸಮಾಧಾನವಾದಂತಹ ಕಾರ್ಯ ಚಟುವಟಿಕೆ ಇಲ್ಲ. ಆದರೂ ಕೂಡ ನಿಲುವಳಿ ಸೂಚನೆ ಮಂಡನೆ ಮಾಡಿದ್ದೇವೆ. ಚರ್ಚೆ ಮಾಡಬೇಕು



" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎನ್ನುವಂತಹ ಸಮಾಧಾನಕ್ಕೆ ಚರ್ಚೆ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಸುಮಾರು 46 ವರ್ಷಗಳಲ್ಲಿ ಅತ್ಯಂತ ಭೀಕರ ಬರಗಾಲ ರಾಜ್ಯಕ್ಕೆ ಇದೆ.

(ಮುಂದು..)

838/20.06.2017/12.00/hv.vk

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದದ್ದು...)**

ಸನ್ಮಾನ್ಯ ಸಭಾಪತಿಯವರೇ, ದಿನಾಂಕ:04.02.2017ರ 'ಕನ್ನಡಪ್ರಭ' ದಿನಪತ್ರಿಕೆಯಲ್ಲಿ "ರಾಜ್ಯದಲ್ಲಿ ಕಳೆದ 46 ವರ್ಷಗಳಲ್ಲಿಯೇ ಕಂಡರಿಯದಂತಹ ಭೀಕರ ಬರಗಾಲ ಪರಿಸ್ಥಿತಿ ಬಂದಿದೆ. ಶೇಕಡಾ 71ರಷ್ಟು ಮಳೆ ಕೊರತೆ. ವಾಡಿಕೆಯ ಶೇಕಡಾ 28ರಷ್ಟು ಮಾತ್ರವೇ ಮಳೆಯಾಗಿದೆ. ಕೆಲವೇ ಜಿಲ್ಲೆಗಳಲ್ಲಿ ಶೇಕಡಾ 90ರಷ್ಟು ಮಳೆಯ ಕೊರತೆ ಕಂಡು ಬಂದಿದೆ" ಎನ್ನುವ ವರದಿ ಪ್ರಕಟವಾಗಿದೆ. ಡಾ||ಜಿ.ಎಸ್.ಶ್ರೀನಿವಾಸ ರೆಡ್ಡಿ, ನಿರ್ದೇಶಕರು, ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಇವರು 'ರಾಜ್ಯದಲ್ಲಿ 48 ವರ್ಷಗಳ ನಂತರ ಇಷ್ಟು ಪ್ರಮಾಣದಲ್ಲಿ ಮಳೆ ಕೊರತೆಯಾಗಿರುವುದು ಇದೇ ಮೊದಲು. 1987ರಲ್ಲಿ ಶೇಕಡಾ 82ರಷ್ಟು ಮಳೆಯ ಕೊರತೆ ಇತ್ತು. ಅದನ್ನೇ ಭೀಕರ ಬರಗಾಲವೆಂದು ಕರೆಯಲಾಗುತ್ತಿತ್ತು. ಆದರೆ, ಈ ಬಾರಿ ಶೇಕಡಾ 70ರಷ್ಟು ಮಳೆಯ ಕೊರತೆಯಾಗಿದೆ. ಕರ್ನಾಟಕದ ಒಳನಾಡಿನಲ್ಲಿಯೂ ಕೂಡ ಶೇಕಡಾ 82ರಷ್ಟು ಮಳೆಯ ಕೊರತೆ ಇದೆ. ಇಂತಹ ಪರಿಸ್ಥಿತಿ ಹಿಂದೆಂದೂ ಬಂದಿರಲಿಲ್ಲ' ಎಂದು ಹೇಳಿದ್ದಾರೆ. ಬರಗಾಲವನ್ನು ಎದುರಿಸಲು ಸರ್ಕಾರ ಎಷ್ಟರ ಮಟ್ಟಿಗೆ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು ಎನ್ನುವ ವಿಚಾರದ ಬಗ್ಗೆ ಕರ್ನಾಟಕ ರಾಜ್ಯದಲ್ಲಿರುವ ಎಲ್ಲ ಪತ್ರಿಕೆಗಳು ಬೆಳಕು ಚೆಲ್ಲಿವೆ. ಇಂತಹ ಭೀಕರ ಬರಗಾಲ ಇರುವಂತಹ ಸಂದರ್ಭದಲ್ಲಿ ಸಮರೋಪಾದಿಯಲ್ಲಿ ಕಾರ್ಯವನ್ನು ನಿರ್ವಹಿಸಬೇಕಾದರೆ, ಸಂಬಂಧಪಟ್ಟ ಅಧಿಕಾರಿಗಳು ರೈತರ ಹೊಲಗದ್ದೆಗಳಿಗೆ ಭೇಟಿ ನೀಡಿ ಎಷ್ಟು ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ, ಎಷ್ಟು ಮನೆಗಳು ಬಿದ್ದು ಹೋಗಿವೆ, ರೈತ ಬದುಕಿದ್ದಾನೆಯೇ, ಕನಿಷ್ಠ ಅವನಿಗೆ ಕುಡಿಯುವುದಕ್ಕೆ ನೀರಿದೆಯೇ, ರೈತರ ಜಾನುವಾರುಗಳಿಗೆ ಮೇವು ಇದೆಯೇ, ಬೆಳೆ ನಷ್ಟಕ್ಕೆ ಪರಿಹಾರ ನೀಡುವ ನಿಟ್ಟಿನಲ್ಲಿ ಏನು ಮಾಡಬೇಕು, ತಾತ್ಕಾಲಿಕವಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳು ಇಡೀ ರಾಜ್ಯದಲ್ಲಿರುವ ಎಲ್ಲ ಜಿಲ್ಲೆಗಳಲ್ಲಿ ಸಂಚರಿಸಬೇಕಾಗಿತ್ತು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾನು ಬಿಜಾಪುರ, ಗುಲ್ಬರ್ಗಾ, ಬಾಗಲಕೋಟೆ, ಯಾದಗಿರಿ ಮತ್ತು ಕೊಪ್ಪಳ ಹೀಗೆ ಅನೇಕ ಜಿಲ್ಲೆಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿನ ಜಿಲ್ಲಾಧಿಕಾರಿಗಳಿಗೆ, 'ಬೆಳೆ ನಷ್ಟ ಎಷ್ಟು ಪ್ರಮಾಣದಲ್ಲಿ ಆಗಿದೆ. ಎಷ್ಟು ಪ್ರಮಾಣದಲ್ಲಿ ಪರಿಹಾರವನ್ನು ನೀಡಲಾಗಿದೆ' ಎಂದು ಕೇಳಿದರೆ, 'ಇನ್ನೂ ಸರ್ವೆ ಮಾಡುತ್ತಿದ್ದೇವೆ' ಎಂದು ಉತ್ತರವನ್ನು ನೀಡುತ್ತಾರೆ. ಇವರಿಗೆ ಯಾರ ಭಯವೂ ಇಲ್ಲ. ಜಿಲ್ಲಾ ಉಸ್ತುವಾರಿ ಮಂತ್ರಿಗಳ ಪಟ್ಟಿ ಇದೆ. ಅಧಿವೇಶನ

ಮುಗಿಯುವುದನ್ನೇ ಬಹಳಷ್ಟು ಜನರು ಕಾಯುತ್ತಿದ್ದಾರೆ. ಅಧಿವೇಶನ ಮುಗಿದ ನಂತರ ಸಚಿವ ಸಂಪುಟ ವಿಸ್ತರಣೆಯಾಗುತ್ತದೆ. ಆದರೆ, ಎಷ್ಟು ಜನ ಉಸ್ತುವಾರಿ ಸಚಿವರು ಅವರವರ ಜಿಲ್ಲೆಗಳಿಗೆ ಭೇಟಿ ನೀಡಿ ರೈತರನ್ನು ಭೇಟಿ ಮಾಡಿದ್ದಾರೆ, ಎಷ್ಟು ಜನ ಶಾಸಕರ ಜೊತೆಗೆ ಚರ್ಚೆ ಮಾಡಿದ್ದಾರೆ ಎಂದು ನೋಡಿದರೆ ಶೇಕಡಾ 50ಕ್ಕಿಂತ ಹೆಚ್ಚು ಜನ ಮಂತ್ರಿಗಳು ತಮ್ಮ ಜಿಲ್ಲೆಗಳಿಗೆ ಭೇಟಿ ನೀಡಿಲ್ಲ. ಜಿಲ್ಲೆಗಳಿಗೆ ಮಂತ್ರಿಗಳೇ ಭೇಟಿ ನೀಡದಿದ್ದರೆ ಅಧಿಕಾರಿಗಳಿಗೆ ಯಾರ ಭಯವಿರುತ್ತದೆ? ಮಾನ್ಯ ಮುಖ್ಯಮಂತ್ರಿಗಳು ವಿಧಾನಸೌಧದಲ್ಲಿ ಕುಳಿತುಕೊಂಡು ಬರಗಾಲದ ಬಗ್ಗೆ ವಿಡಿಯೋ ಕಾನ್ಫರೆನ್ಸ್ ಮಾಡುತ್ತಾರೆ. ಬಿಜಾಪುರ ಜಿಲ್ಲೆಗೆ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದರು ಆದರೆ, ಕೇವಲ 5 ನಿಮಿಷಗಳಲ್ಲಿ ಅಲ್ಲಿನ ರೈತರನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭೇಟಿ ಮಾಡಿ ವಾಪಸ್ಸು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಈ ರೀತಿ ಬರಪೀಡಿತ ಜಿಲ್ಲೆಗಳಿಗೆ ಪ್ರವಾಸ ಹೋಗದಿದ್ದರೆ ಉಸ್ತುವಾರಿ ಸಚಿವರಿಗೂ ಭಯ ಇರುವುದಿಲ್ಲ. ಉಸ್ತುವಾರಿ ಸಚಿವರಿಗೆ ಭಯವಿಲ್ಲವೆಂದರೆ, ಅಧಿಕಾರಿಗಳನ್ನು ಹೇಳುವವರು ಕೇಳುವವರು ಇರುವುದಿಲ್ಲ. ಕಳೆದ 46 ವರ್ಷಗಳಲ್ಲಿ ಭೀಕರ ಬರಗಾಲದ ಪರಿಸ್ಥಿತಿ ಬಂದಿದ್ದರೂ ಸಹ ಸರ್ಕಾರಕ್ಕೆ ಯಾವುದೇ ಕಳಕಳಿ ಇಲ್ಲವೆನ್ನುವುದು ನನಗೆ ನೋವನ್ನುಂಟು ಮಾಡಿದೆ. ವಿರೋಧ ಪಕ್ಷದ ನಾಯಕನಾಗಿ ನಾನು ನನ್ನ ಕರ್ತವ್ಯವನ್ನು ಮಾಡುತ್ತಿದ್ದೇನೆ. 'ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಹುಷಾರ್!' ಎಂದು ಮಾನ್ಯ ಮುಖ್ಯಮಂತ್ರಿಗಳು ಇಂತಿಂಥ ಭಾಷೆಗಳಲ್ಲಿ ಅಧಿಕಾರಿಗಳಿಗೆ ಬೈದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅವರ ಭಾಷೆಯಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಸಭೆ ಮುಗಿಸಿಕೊಂಡು ಅಧಿಕಾರಿಗಳು ನಗುನಗುತ್ತಾ, 'ಇವತ್ತಿನ ಕಾಟ ತಪ್ಪಿತು' ಎಂದು ಹೊರಗೆ ಬಂದರು. ಹೀಗಾದರೆ ರೈತರ ರಕ್ಷಣೆ ಯಾರು ಮಾಡಬೇಕು?

ಕರ್ನಾಟಕ ರಾಜ್ಯದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಭೀಕರ ಬರಗಾಲ ಇರುವಂತಹ ಸಂದರ್ಭದಲ್ಲಿ ಬರಗಾಲದ ಪರಿಸ್ಥಿತಿಯನ್ನು ನಿರ್ವಹಣೆ ಮಾಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಗ್ರಾಮೀಣ ಪ್ರದೇಶದ ಕುಡಿಯುವ ನೀರನ್ನು ಒದಗಿಸುವ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು ನಿರ್ವಹಿಸುತ್ತಿವೆ. ಅದೇ ರೀತಿಯಲ್ಲಿ ನಗರಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸುವ ಜವಾಬ್ದಾರಿಯನ್ನು ನಗರಸಭೆ ಮತ್ತು ಪುರಸಭೆಗಳು ನಿರ್ವಹಿಸುತ್ತಿವೆ. ಇಲಾಖೆಯ ಅಂದಾಜಿನಂತೆ ಸುಮಾರು 3744ಕ್ಕೂ ಹೆಚ್ಚು ಗ್ರಾಮಗಳು ಅತೀವ ಕುಡಿಯುವ ನೀರಿನ ತೊಂದರೆಯನ್ನು ಎದುರಿಸುತ್ತಿವೆ. ಅದೇ ರೀತಿಯಲ್ಲಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿಯೂ ಸಹ ಮೊದಲನೆಯ ಬಾರಿಗೆ ಕುಡಿಯುವ ನೀರಿಗೆ ಹಾಹಾಕಾರ ಸೃಷ್ಟಿಯಾಗಿದೆ. ಆದ್ದರಿಂದ ಸರ್ಕಾರ ಪಂಚಾಯತ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಕುಡಿಯುವ ನೀರಿನ ಜವಾಬ್ದಾರಿಯನ್ನು ವಹಿಸಿ ಅಗತ್ಯ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೇನೆ. ಸರ್ಕಾರ ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚನೆ ಮಾಡಿದೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಲ್ಲಿರುವ ಚುನಾಯಿತ ಜನರು ತಮ್ಮ ತಮ್ಮ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. 'ಅಲ್ಲಿನ ಜನರು ನೀವು ಏನು ಕೊಡುವುದಕ್ಕೂ ಆಗಲಿಲ್ಲ, ಕೊನೆಯ ಪಕ್ಷ ಕುಡಿಯುವುದಕ್ಕೆ ನೀಡು ಕೊಡಿ ಎಂದು ಕೇಳಿದಾಗ ಕುಡಿಯುವುದಕ್ಕೆ ನೀರು ಕೊಡಲು ಆಗದಿದ್ದರೆ ಅವರು ಚುನಾಯಿತ ಪ್ರತಿನಿಧಿಯಾಗಿ ಏತಕ್ಕೋಸ್ಕರ ಗೆಲ್ಲಬೇಕೆಂದು ಅವರು ಪ್ರಶ್ನೆ ಮಾಡುತ್ತಿದ್ದಾರೆ.

ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಭೆಗೆ ನಾನು ಸಮಾನ್ಯವಾಗಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ನಾನು ರಾಜ್ಯದಲ್ಲಿ ಸುತ್ತಾಡಬೇಕಾಗಿದೆ. ಕಳೆದ ತಿಂಗಳು ನಾನು ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಭೆಗೆ ಹೋದಾಗ ಎಲ್ಲ ಪಕ್ಷದ ಸದಸ್ಯರು, 'ನಾವು ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಲ್ಲಿನ ಜನರಿಗೆ ಕುಡಿಯುವುದಕ್ಕೆ ನೀರು ಕೊಡಲು ಸಾಧ್ಯವಾಗದೇ ಇರುವಾಗ ನಾವು ಏತಕ್ಕೋಸ್ಕರ ಹಳ್ಳಿಗಳಿಗೆ ಹೋಗಬೇಕು?' ಎಂದು ಕೇಳಿದರು. ನಾನು ಆ ಸಭೆಯಲ್ಲಿ ಕುಳಿತಿರುವಾಗಲೇ, ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ತೆಗೆದುಕೊಂಡು ಹೋಗಿ, ಕುಡಿಯುವ ನೀರಿಗೆ ಸ್ವಲ್ಪ ಹಣ ಬಿಡುಗಡೆ ಮಾಡಿ ಎಂದು ಕೇಳಬೇಕೆಂದು ಸರ್ವಾನುಮತದ ತೀರ್ಮಾನವಾಯಿತು. ಅದರಂತೆ ನಾವುಗಳು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ಕಂದಾಯ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಸಹ ಉಪಸ್ಥಿತರಿದ್ದರು. ಆಗ 'ಮಾನ್ಯ ಮುಖ್ಯಮಂತ್ರಿಗಳು ಕುಡಿಯುವ ನೀರು ಒದಗಿಸಲು ಸಾಕಷ್ಟು ಹಣ ಲಭ್ಯವಿದೆ. ಕುಡಿಯುವ ನೀರಗೆ ಹಣದ ಕೊರತೆಯಿಲ್ಲ. ಎಷ್ಟು ಬೇಕಾದರೂ ಹಣ ಕೊಡುತ್ತೇವೆ' ಎನ್ನುವ ಮಾತನ್ನು ಹೇಳಿದರು. 'ಹಣ ಎಲ್ಲಿದೆ?' ಎಂದು ನಾನು ಕೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಂತೆ ನನಗೂ ಸಹ ಉತ್ತರವನ್ನು ಕೊಟ್ಟುಬಿಟ್ಟರು. 'ಸ್ವಾಮಿ ಕುಡಿಯುವ ನೀರಿಗಾಗಿ ನಮ್ಮ ಜಿಲ್ಲೆಗೆ ನೂರು ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಿ' ಎಂದು ಮನವಿ ಪತ್ರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನೀಡಿದಾಗ, 'ಖಂಡಿತವಾಗಿಯೂ ನಾನು ವಯವಸ್ಥೆ ಮಾಡುತ್ತೇನೆ' ಎನ್ನುವ ಮಾತುಗಳನ್ನು ಹೇಳಿದ್ದರು. ಇದಾದ 15 ನಿಮಿಷಗಳ ನಂತರ ಶಿವಮೊಗ್ಗ ನಗರಸಭೆಯ ನಗರಸಭಾ ಸದಸ್ಯರ ನಿಯೋಗ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿತ್ತು. ಈ ನಿಯೋಗದ ಜೊತೆಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಸಹ ಇದ್ದರು. 'ಶಿವಮೊಗ್ಗ ನಗರದಲ್ಲಿಯೂ ಸಹ ಕುಡಿಯುವ ನೀರಿಗೆ ಸಮಸ್ಯೆಯಿದೆ. ನಮಗೂ ಸಹ ಪರಿಹಾರವನ್ನು ನೀಡಿ' ಎನ್ನುವ ಮನವಿಯನ್ನು ಮಾಡಿಕೊಂಡರು. ಅದನ್ನು ನೋಟ್ ಮಾಡಿಕೊಂಡ ಮಾನ್ಯ ಮುಖ್ಯಮಂತ್ರಿಗಳು 'ನಾನು ಎರಡೂ ಕಡೆಯ ನೀರಿನ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆ' ಎಂದು ಹೇಳಿ 15 ದಿನಗಳಾಗಿದ್ದರೂ ಇದುವರೆಗೆ ಒಂದೇ ಒಂದು ಪೆಸೆಯನ್ನು ಬಿಡುಗಡೆ ಮಾಡಿಲ್ಲ. ರಾಜ್ಯದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಇರುವ ಸಂದರ್ಭದಲ್ಲಿ ನಾವು ಯಾರನ್ನು ಕೇಳಬೇಕು?

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಹೇಳಿಕೆಯಲ್ಲಿ 'ಕುಡಿಯುವ ನೀರಿಗೆ ಸಾಕಷ್ಟು ಪ್ರಮಾಣದಲ್ಲಿ ಹಣದ ಲಭ್ಯತೆ ಇದೆ' ಎಂದು ಹೇಳಿದ್ದರು. ಕೇವಲ ಪತ್ರಿಕಾ ಹೇಳಿಕೆಯನ್ನು ನೀಡಿದರೆ ಕುಡಿಯುವ ನೀರಿನ ದಾಹ ತೀರುತ್ತದೆಯೇ? ರೈತರ ಮತ್ತು ನಗರ ಪ್ರದೇಶದಲ್ಲಿರುವವರ ಕುಡಿಯುವ ನೀರಿನ ಸಮಸ್ಯೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಿಂದ ಪರಿಹಾರವಾಗುತ್ತದೆ ಎನ್ನುವುದಾದರೆ, ಎಲ್ಲ ಕಡೆಗಳಿಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ 'ಕುಡಿಯುವ ನೀರನ್ನು ಒದಗಿಸಲು ಸರ್ಕಾರದಲ್ಲಿ ಸಾಕಷ್ಟು ಹಣವಿದೆ' ಎಂದು ಘೋಷಣೆ ಮಾಡಿಸಿಬಿಡೋಣ. ಬರೀ ಘೋಷಣೆಗಳಿಂದ ಗ್ರಾಮಗಳಿಗೆ ಮತ್ತು ನಗರಪ್ರದೇಶಗಳಿಗೆ ಹಣ ಹೋಗುವುದಿಲ್ಲ. ಸರ್ಕಾರ ಉತ್ತರ ನೀಡುವ ಸಂದರ್ಭದಲ್ಲಿ ಯಾವ ಯಾವ ನಗರಪ್ರದೇಶಗಳಿಗೆ, ಜಿಲ್ಲೆಗಳಿಗೆ ಮತ್ತು ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎನ್ನುವ ಅಂಕಿ ಅಂಶಗಳನ್ನು ನೀಡಬೇಕಾಗುತ್ತದೆ. ಸರ್ಕಾರ ಆ ಅಂಕಿ ಅಂಶಗಳನ್ನು ನೀಡದಿದ್ದರೆ ಕೇವಲ ಚರ್ಚೆ ಮಾಡಿ ಕಂಠ ಶೋಷಣೆ ಮಾಡಿಕೊಳ್ಳುವುದಕ್ಕಾಗಿ ನಾವು ಇಲ್ಲಿಗೆ ಬರಬೇಕೇ?

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕುಡಿಯುವ ನೀರನ್ನು ಒದಗಿಸಲು ಸರ್ಕಾರದಲ್ಲಿ ಸಾಕಷ್ಟು ಹಣ ಇದೆ' ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆದರೆ, ಹಣ ಕೊಡುತ್ತಿಲ್ಲ. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ನೆನಪಾಗುತ್ತಿದೆ. ಒಂದು ಬೇಕರಿ ಹತ್ತಿರ ಒಬ್ಬ ವ್ಯಕ್ತಿ ನಿಂತುಕೊಂಡು ಅಲ್ಲಿ ಮಾಡಿರುವ ತಿಂಡಿಗಳ ವಾಸನೆಯನ್ನು ತೆಗೆದುಕೊಳ್ಳುತ್ತಿರುತ್ತಾನೆ. ಆಗ ಆ ಬೇಕರಿಯವನು 'ಎಲ್ಲ ಪದಾರ್ಥಗಳ ವಾಸನೆಯನ್ನು ತೆಗೆದುಕೊಳ್ಳುತ್ತಿರುವೆ ಕಾಸು ಕೊಡು' ಎಂದು ಕೇಳುತ್ತಾನೆ. ಆಗ ಆ ವ್ಯಕ್ತಿ ಜೇಬಿಗೆ ಕೈ ಹಾಕಿ ಝುಣಝುಣ ಸದ್ದು ಮಾಡಿ 'ದುಡ್ಡಿದೆ ಶಬ್ದ ಕೇಳಿಸಿಕೋ' ಎಂದು ಹೇಳುತ್ತಾನೆ. ಇದು ಆ ರೀತಿಯಾಗಿದೆ. ದುಡ್ಡಿದೆ, ದುಡ್ಡಿದೆ ಎಂದು ಹೇಳುತ್ತಿದ್ದಾರೆಯೇ ಹೊರತು ಎಲ್ಲಿಗೆ ದುಡ್ಡು ಕೊಡಬೇಕೋ ಅಲ್ಲಿಗೆ ಕೊಡದೇ, ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಳೆ ಬರುತ್ತಿದ್ದರು ಸಹ ಕುಡಿಯುವುದಕ್ಕೆ ನೀರಿಲ್ಲದಂತಾಗಿದೆ. ದುಡ್ಡು ಅಲ್ಲಾಡಿಸಿ, ದುಡ್ಡು ಕೊಟ್ಟಿದ್ದೇವೆಂದು ಹೇಳಿದರೆ ಕೆಲಸವಾಗುತ್ತದೆಯೇ?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರಿದಿದೆ)

(839) 20.06.17, 12.10, TCH/VK

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ದುಡ್ಡನ್ನು ಅಲ್ಲಾಡಿಸುವುದು ಅಲ್ಲ, ದುಡ್ಡನ್ನು ಕೊಟ್ಟಿದೆ. ಇಂತಹ ಕಡೆಗಳಲ್ಲಿ ನಿರ್ದಿಷ್ಟವಾಗಿ ನೇರವಾಗಿ ನೀರಿಗೆ ಸಮಸ್ಯೆ ಇದೆ, ಮೇವಿನ ಸಮಸ್ಯೆ ಇದೆ ಎಂದು ಹೇಳಿದರೆ ನಾವು ಕೇಳಬಹುದು.

**ಶ್ರೀ ರಾಮಚಂದ್ರಗೌಡ, (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬೇಕಾದಷ್ಟು ಸಮಸ್ಯೆಗಳು ಇವೆ.

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಅವರೊಬ್ಬರೇ ಅಲ್ಲಿ ಓಡಾಡಿರುವುದಲ್ಲಾ, ನಾವೆಲ್ಲರೂ ಓಡಾಡಿದ್ದೇವೆ. (ಗೊಂದಲ) ಮಾನ್ಯ ಸಚಿವರು ಹೋಗಿಯೇ ಇಲ್ಲವೆಂದು ಇವರು ಹೇಳುತ್ತಿದ್ದಾರೆ. ಸುಮ್ಮನೆ ಏತಕ್ಕೆ ಇವರು ಈ ರೀತಿಯೆಲ್ಲಾ ಮಾತನಾಡುತ್ತಾರೆ? ಅಲ್ಲಾಡಿಸುವುದು, ಅಲ್ಲಾಡಿಸುವುದು ಎಂದರೆ ಏನೇನೋ ಅಲ್ಲಾಡಿಸು...

(ಗೊಂದಲ)

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಇಲ್ಲಾ ಇಲ್ಲಾ, ಸುಮಾರು 350 ಹಳ್ಳಿಗಳಿಗೆ ಕುಡಿಯಲು ನೀರು ಇರುವುದಿಲ್ಲವೆಂದು ತಮ್ಮ ಉತ್ತರದಲ್ಲಿ ನೀವೇ ಕೊಟ್ಟಿದ್ದೀರಿ. ನಮ್ಮ ಹತ್ತಿರ ದುಡ್ಡು ಇದೆ ಎಂದು ಹೇಳುತ್ತೀರಿ. ಆದರೆ ಕುಡಿಯಲು ನೀರು ಕೊಡದಿದ್ದರೆ ಹೇಗೆ?

**ಶ್ರೀ ಸೋಮಣ್ಣ ಮ.ಬೇವಿನ ಮರದ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅನೇಕ ವಿಷಯಗಳ ಬಗ್ಗೆ ನಾವು ಸದನದಲ್ಲಿ ಪ್ರಸ್ತಾಪಿಸುವಾಗ ಇಂತಹ ವಿಷಯದಲ್ಲೇ ಸಮಸ್ಯೆ ಇದೆ ಎಂದು ನಿರ್ದಿಷ್ಟವಾಗಿ ಹೇಳಿದಂತಹವುಗಳೂ ಪರಿಹಾರವಾಗುವುದಿಲ್ಲ ಎಂದು ಹೇಳಿದರೆ, ಇನ್ನೂ ಯಾವ ರೀತಿ ಹೇಳಬೇಕು? ಈ ಅಧಿವೇಶನ ಮುಗಿಯುತ್ತಾ ಬಂದರೂ ಇನ್ನೂ ಹೇಳುತ್ತೇವೆ ಎಂದು ಹೇಳುತ್ತಿದ್ದಾರೆ.

**ಶ್ರೀ ರಮೇಶ್‌ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ರೇವಣ್ಣನವರೇ, ಏನೇನೋ, ಎಲ್ಲೆಲ್ಲೋ ಅಲ್ಲಾಡಿಸುವುದು ಎಂದು ಹೇಳಿದರೆ ಎಲ್ಲರಿಗೂ ಅರ್ಥವಾಗುತ್ತದೆ. ನೀವು ಬರೀ ಅರ್ಥಂಬರ್ಥ ಹೇಳಿದರೆ ಅರ್ಥವಾಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಬೇಕಾದಂತಹ ಕಡೆ ದುಡ್ಡನ್ನು ಅಲ್ಲಾಡಿಸಿದರೆ ಸಾಲದು, ಯಾವ ವಸ್ತು ಬೇಕು ಎನ್ನುವುದನ್ನೂ ಕೂಡ ಅಲ್ಲಿ ಕೇಳಬೇಕಾಗುತ್ತದೆ. ಆದರೆ ಸಮಸ್ಯೆಗಳನ್ನು ಕೂಡ ಹೇಳಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ರೇವಣ್ಣನವರು ಸಚಿವರಾಗುವುದಕ್ಕೆ ಕೋಟನ್ನು ಹಾಕಿಕೊಂಡು ರೆಡಿಯಾಗಿ ಬಂದಿದ್ದಾರೆ ಮತ್ತು ಉತ್ತರ ಕೊಡುವುದಕ್ಕೆ ಮಾನ್ಯ ಸಚಿವರು ಇದ್ದರೂ ಕೂಡ ಇವರಾಗಲೇ ಎದ್ದು ಅಭ್ಯಾಸ ಮಾಡಿಕೊಳ್ಳುತ್ತಿದ್ದಾರೆ. ಸಚಿವ ಸಂಪುಟ ವಿಸ್ತರಣೆ ಆಗಲಿ ಸ್ವಲ್ಪ ತಡೆಯಪ್ಪಾ, ನಾನು ಹೇಳುವುದನ್ನು ಪೂರ್ಣವಾಗಿ ಕೇಳಿಸಿಕೊಳ್ಳಿ. ನೀವು ನಿಂತುಕೊಳ್ಳಬೇಕೆಂತಲೇ ನಾನು ನಿಮಗೆ ಹೇಳುತ್ತಿರುವುದು. ಒಂದು ನಿಮಿಷ ತಾವು ಕುಳಿತುಕೊಂಡು ನಂತರ ಎದ್ದು ನಿಂತುಕೊಳ್ಳಬಹುದು. ಸಚಿವ ಸಂಪುಟ ಎನ್ನುವ ಒಂದು ವ್ಯವಸ್ಥೆ ಇದೆ. ಮಾನ್ಯ ಮುಖ್ಯಮಂತ್ರಿಗಳು ನಿಮ್ಮನ್ನು ಸಚಿವರನ್ನಾಗಿ ಮಾಡಲಿ. ಈಗಲೇ ನೀವು ಸಚಿವರಾದವರಂತೆ ಬಟ್ಟೆ ಹಾಕಿಕೊಂಡು ಬಂದರೆ ತಪ್ಪೇನು ಇಲ್ಲ. ಬಟ್ಟೆ ಹಾಕಿಕೊಂಡು ಬರುವುದಕ್ಕೆ ಅವಕಾಶವಿದೆ. ಆದರೆ ಉತ್ತರ ಕೊಡುವುದಕ್ಕೆ ಸಚಿವರು ಇದ್ದಾರೆ. ಪ್ರಶ್ನೆಯನ್ನು ನಿರ್ದಿಷ್ಟವಾಗಿ ಕೇಳಿ ಎಂದರು. ನಾನು ಇನ್ನೆಷ್ಟು ನಿರ್ದಿಷ್ಟವಾಗಿ ಪ್ರಶ್ನೆ ಕೇಳಲಿ.

**ಶ್ರೀ ಎಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರೆ, ...

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹೇಳಿ.

**ಶ್ರೀ ಎಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ತಾವು ಎಷ್ಟು ವರ್ಷದಿಂದ ನನ್ನನ್ನು ನೋಡಿದ್ದೀರಿ? ನಾನು ಬಿಳಿ ಬಟ್ಟೆಯನ್ನು ಹಾಕಿಕೊಂಡು ಬರುವುದಕ್ಕೆ ಅಥವಾ ಕಲರ್ ಡ್ರೆಸ್ ಹಾಕಿಕೊಂಡು ಬರುವುದಕ್ಕಾಗಲೀ ಅಥವಾ ಮತ್ತೊಂದನ್ನು ಹಾಕಿಕೊಂಡು ಬರುವುದಕ್ಕಾಗಲೀ; ನಾನು ಬಟ್ಟೆಯನ್ನು ಮಂತ್ರಿ ಪದವಿ ಸಿಗುತ್ತದೆಂದು ಹಾಕಿರುವುದಿಲ್ಲ. ಇವರು ವಿರೋಧ ಪಕ್ಷದ ನಾಯಕರಾದ ಮೇಲೆ ಕೋಟನ್ನು ಹಾಕುವುದಕ್ಕೆ ಪ್ರಾರಂಭ ಮಾಡಿದರು. ಆದರೆ ನಾನು ಮೊದಲಿನಿಂದಲೂ ಕೋಟನ್ನು ಹಾಕುತ್ತಿದ್ದೇನೆ, ವಿದ್ಯಾರ್ಥಿ ನಾಯಕ ಆದಾಗಿನಿಂದಲೂ ನಾನು ಡ್ರೆಸ್ ಮಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಯಾವ ಯಾವ ಊರಿನಲ್ಲಿ ನೀರು ಇಲ್ಲವೆಂದು ನಿರ್ದಿಷ್ಟವಾಗಿ ಹೇಳಿ ಎಂದು ಮಾನ್ಯ ರೇವಣ್ಣನವರು ಕೇಳಿದರು. ಅವರು ಮಂತ್ರಿಗಳಾದ ನಂತರ ಉತ್ತರ ಕೊಡಲಿ, ಇವತ್ತಿನ ದಿವಸ ಆಗುವುದಿಲ್ಲ. ಏಕೆಂದರೆ ಇದಕ್ಕೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಸ್ವತಃ ಮಾನ್ಯ ಮುಖ್ಯಮಂತ್ರಿಗಳು ಬಂದರೂ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ನಿರ್ದಿಷ್ಟವಾಗಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರನ್ನೇ ಕರೆದುಕೊಂಡು ಹೋಗಿ, ಎಲ್ಲಾ ಪಕ್ಷದ ಜಿಲ್ಲಾ ಪಂಚಾಯತ್ ಸದಸ್ಯರು ಮತ್ತು ಕಾರ್ಪೋರೇಷನ್ ಸದಸ್ಯರು ಯುನಾನಿಮಸ್ ಆಗಿ ಬಂದು, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಕುಡಿಯಲು ನೀರಿನ ಸಮಸ್ಯೆ ಇದ್ದು, ಅದರ ಪರಿಹಾರಕ್ಕಾಗಿ ಸುಮಾರು 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಕೇಳಿರುತ್ತಾರೆ. ಇದಕ್ಕಿಂತಲೂ ನಿರ್ದಿಷ್ಟವಾಗಿ ಕೇಳಬೇಕೇ?

**ಶ್ರೀ ಎಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಅವರು ಕುಡಿಯುವ ನೀರಿಗಾಗಿ ಅಷ್ಟು ಹಣವನ್ನು ಕೇಳಿದ್ದಾರೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಕುಡಿಯುವ ನೀರಿಗೆ ಅಲ್ಲದೇ ಮತ್ತೆ ಇನ್ಯಾವ ನೀರಿಗೆ ಕೇಳೋಣ? ನಾನು ಯಾವ ಭಾಷೆಯಲ್ಲಿ ಹೇಳಲಿ. ಕನ್ನಡದಲ್ಲಿ ಕುಡಿಯುವ ನೀರನ್ನು ಕೊಟ್ಟಿಲ್ಲವೆಂದು ಹೇಳಿದೆನು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ರೇವಣ್ಣರವರೇ, ತಾವು ದಯವಿಟ್ಟು ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ. ಬರಗಾಲದ ಬಗ್ಗೆ ಘಂಟಾಘೋಷವಾಗಿ ಘೋಷಣೆ ಮಾಡಿಕೊಂಡು ಹೋಗುವುದರಲ್ಲೇ ತೃಪ್ತಿ ಪಟ್ಟುಕೊಂಡರೆ ಪ್ರಯೋಜನವಿಲ್ಲ. ಕೊನೇಪಕ್ಷ ಈ ಸರ್ಕಾರಕ್ಕೆ ಇದರ ಬಗ್ಗೆ ಸ್ವಲ್ಪ seriousness ಆದರೂ ಬರಲಿ. ಇಲ್ಲವೆಂದರೆ ನಾವು ಏತಕ್ಕೆ ಚರ್ಚೆ ಮಾಡಬೇಕು? ಇದನ್ನು ನಾನು ನೊಂದು ಹೇಳುತ್ತಿದ್ದೇನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರಾಗಿದ್ದಾರೆ. ಇವರು ಹಿರಿಯರಾಗಿದ್ದು, ಅನೇಕ ವರ್ಷಗಳ ಅನುಭವವುಳ್ಳವರಾಗಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ಗೆದ್ದು ಬಂದಿದ್ದಾರೆ. ಸರ್ಕಾರ ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚನೆ ಮಾಡಿದೆ. ಅದಕ್ಕೆ ಅಧ್ಯಕ್ಷರು ಯಾರು? ಅವರಿಗೆ ಯಾವುದೇ ಕಳಕಳಿ ಇಲ್ಲವೆಂದು ನಾನು ಹೇಳಲಿಲ್ಲ. ಮಾನ್ಯ ಕಂದಾಯ ಸಚಿವರು ನಾವು ಹಕ್ಕುಪತ್ರ ಕೊಡುವುದಕ್ಕೆ ಮತ್ತು ಬೇರೆ ಬೇರೆ ವಸತಿಗಳನ್ನು ಕೊಡುವುದಕ್ಕೆ ಎಲ್ಲದಕ್ಕೂ ಕೂಡ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ಮಾಡಿಬಿಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅವರು ಸಭೆಯನ್ನೇ ಮಾಡುತ್ತಿಲ್ಲ. ಇದನ್ನು ನಾನು ಹೇಳಿದ್ದಲ್ಲ, 94ಸಿ ಮತ್ತು 94ಸಿಸಿ ಇದಷ್ಟಕ್ಕೂ ಕೂಡ ಹಿಂದೆ ಬೀಳುವುದಕ್ಕೆ ಕಾರಣವೇನೆಂದರೆ, "ಆ ಶಾಸಕರು ಸಭೆಯನ್ನು ಕರೆಯುತ್ತಿಲ್ಲ". ಶಾಸಕರು ಎನ್ನುವುದಕ್ಕಿಂತ ಎಂ.ಎಲ್.ಎ.ಗಳು ಸಭೆಯನ್ನು ಕರೆಯುತ್ತಿಲ್ಲ. ನೀವು ಗೊತ್ತಿದ್ದು ಗೊತ್ತಿದ್ದು, ಅವರ ಅಧ್ಯಕ್ಷತೆಯಲ್ಲೇ ಟಾಸ್ಕ್‌ಫೋರ್ಸ್ ಸಮಿತಿ ರಚನೆ ಮಾಡಿ, ಕುಡಿಯಲು ನೀರು ಇಲ್ಲವೆಂದರೆ, ನಾವು ಯಾರ ಹತ್ತಿರ ಹೇಳೋಣ. ಚುನಾಯಿತ ಪ್ರತಿನಿಧಿಗಳು ಸ್ಥಳೀಯ ಸಂಸ್ಥೆಯಿಂದ, ಜಿಲ್ಲಾ ಪಂಚಾಯ್ತಿಯಿಂದ, ತಾಲ್ಲೂಕು ಪಂಚಾಯ್ತಿಯಿಂದ, ಗ್ರಾಮ ಪಂಚಾಯ್ತಿಯಿಂದ ಗೆದ್ದು ಬರುತ್ತಾರೆ. ಹಾಗಿರುವಾಗ ಆ ಚುನಾಯಿತ ಪ್ರತಿನಿಧಿಗಳ ಬೇಡಿಕೆಗೆ ಬೆಲೆಯೇ ಇಲ್ಲವೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ನಿನ್ನೆ ಈ concept ಬಗ್ಗೆ ಮಾನ್ಯ ಹೈಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಬಂದಿದೆ, ಸ್ವಲ್ಪ ನೋಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಏನೆಂದು ನಾನು ನೋಡಿಲ್ಲ. ತಾವು ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ ಮನೆಗಳ allotment ಮತ್ತು ಇನ್ನಿತರೆ ವಿಚಾರಗಳಲ್ಲಿ ಅಂತಿಮವಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅನುಚ್ಛೇದ 243ರ ಕೆಳಗಡೆ ಯಾವ ಸಂಸ್ಥೆಗಳು ಇವೆಯೋ, ಅವರದೇ ಅಧಿಕಾರ ಎನ್ನುವಂಥದ್ದನ್ನು ಹೈಕೋರ್ಟ್ ಜಡ್ಜ್‌ಮೆಂಟ್‌ನ್ನು ಇತ್ತೀಚೆಗೆ ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೋಡಿ ಎಷ್ಟು ಚೆನ್ನಾಗಿದೆ, ಮಾನ್ಯ ಉಗ್ರಪ್ಪನವರು ಕಾನೂನನ್ನು ತಿಳಿದುಕೊಂಡಿದ್ದು ಸಾರ್ಥಕವಾಯಿತು. ನನಗೆ ಕಾನೂನು ಗೊತ್ತಿಲ್ಲ. Practical ಆಗಿ ಯಾರು ಎಂ.ಎಲ್.ಎ. ಇದ್ದಾರೆ, ಆ ಎಂ.ಎಲ್.ಎ. ರವರು ವಿಫಲರಾಗಿದ್ದಾರೆಂದು ನಾನು ಹೇಳುತ್ತಿದ್ದೇನೆ. ನೀವು ಕೋರ್ಟ್ ಜಡ್ಜ್‌ಮೆಂಟ್‌ನ್ನು ತುಂಬಾ ಸ್ಪಷ್ಟವಾಗಿ ಹೇಳಿದ್ದೀರಿ. ನಿಮಗೂ, ನಮಗೂ ಅಷ್ಟೇ ವ್ಯತ್ಯಾಸ. ಉದ್ದೇಶ ಒಂದೇ. ನಿಮ್ಮ ಉದ್ದೇಶ, ನನ್ನ ಉದ್ದೇಶ ಮತ್ತು ಕೋರ್ಟ್‌ನ ಉದ್ದೇಶ ಈ ಮೂರು ಉದ್ದೇಶವೇನಿದೆ ಎಂದರೆ, ಯಾರು ಸ್ಥಳೀಯ ಸಂಸ್ಥೆಗಳಿಂದ ಗೆದ್ದಿದ್ದಾರೆ ಅವರಿಗೆ ಅವಕಾಶ ಕೊಡಬೇಕು ಎನ್ನುವುದು ತಾನೆ ಮಾನ್ಯ ಉಗ್ರಪ್ಪನವರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅದು ಸಂವಿಧಾನದ ಆಶಯ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರೆ, ನಿಮ್ಮದು ಅದೇ ಉದ್ದೇಶ, ನಮ್ಮದು ಅದೇ ಉದ್ದೇಶ. ಕೋರ್ಟ್‌ನದ್ದು ಅದೇ ಉದ್ದೇಶ ಮತ್ತು ಈ ಸಂವಿಧಾನದ ಉದ್ದೇಶವೂ ಅದೇ ಆಗಿರುತ್ತದೆ. ಆದರೆ ಈ ಸರ್ಕಾರಕ್ಕೆ ಅರ್ಥವಾಗಿರುವುದಿಲ್ಲ. ಅದಕ್ಕೆ ಏನು ಮಾಡಬೇಕು? ಇಲ್ಲ, ಇಲ್ಲ, ಬೇರೆ ಯಾರಿಗೆ ಅದು ಅರ್ಥವಾಗುತ್ತದೋ ಅಥವಾ ಇಲ್ಲವೋ ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಗಳಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ಕನಿಷ್ಠ ಪಕ್ಷ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಅರ್ಥವಾಗಬೇಕಲ್ಲವೇ ಇದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಈ ಸರ್ಕಾರದವರು ಮಾನ್ಯ ಶಾಸಕರಿಗೆ ಮತ್ತು ಸದಸ್ಯರಿಗೆ ಬಹಳ ಬುದ್ಧಿವಂತಿಕೆಯಿಂದ ನೋಟೀಸ್ ಕಳುಹಿಸಿ ಅದನ್ನು ತಡೆಹಿಡಿದಿದ್ದಾರೆ. ಅದು ನಿಮಗೂ ಚೆನ್ನಾಗಿ ಗೊತ್ತಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಕಾನೂನು ಪದವೀಧರರು ಹಾಗೂ ಕಂದಾಯ ಮಂತ್ರಿಗಳಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಕಾನೂನು ಪದವೀಧರರಾಗಿರುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ ಎಲ್ಲಾ ಮಾಹಿತಿಗಳು ಇವೆ. ಅದರ ದಿಕ್ಕಿನಲ್ಲಿ ಇವತ್ತಿನ ದಿವಸ ಏನಾಗಿದೆ ಎಂದರೆ, ಸಂವಿಧಾನದ ಆಶಯಗಳನ್ನು interpret ಮಾಡುವಂತಹ ಸಂದರ್ಭದಲ್ಲಿ ಈಗ ಏನು ನ್ಯಾಯಾಲಯಗಳ ತೀರ್ಪುಗಳು ಇವೆ ಅದರ ಹಿನ್ನೆಲೆಯಲ್ಲಿ, ಸರ್ಕಾರ ಕ್ರಮ ಜರುಗಿಸುತ್ತದೆ ಎಂದು ನಾನು ಭಾವಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇವರು ಸರ್ಕಾರ ಜರುಗಿಸುತ್ತದೆ ಎಂದಷ್ಟೇ ಹೇಳಿದರೆ ಸಾಕಾಗುವುದಿಲ್ಲ, ಕ್ರಮ ಜರುಗಿಸುವಂತೆ ದಯವಿಟ್ಟು ಒತ್ತಾಯ ಮಾಡಬೇಕಾಗುತ್ತದೆ. ನಮ್ಮ ಜೊತೆ ಕೈಜೋಡಿಸಿ. ಏಕೆಂದರೆ, ಅದನ್ನು ಅವರು ಬಹಳ ಜೋರಾಗಿ ಹೇಳುವುದಕ್ಕಾಗುವುದಿಲ್ಲ. ಮೊನ್ನೆ ಇತ್ತೀಚೆಗೆ ಸಣ್ಣಪುಟ್ಟ ಸಮಸ್ಯೆಗಳಾಗಿ ನಿಮ್ಮ ಪರಿಸ್ಥಿತಿ ನಿಮಗೆ ಬಂದು ಹೋಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ತಪ್ಪಾಗಿ ತಿಳಿದುಕೊಂಡಿದ್ದಾರೆ. ಯಾವ ಸಮಸ್ಯೆಗಳು ಆಗಿಲ್ಲ. ಸ್ಪಷ್ಟವಾಗಿವೆ ಮತ್ತು ಬಹಳ ಪ್ರಭಲವಾಗಿವೆ. ಈ ರಾಜ್ಯದ ಜನತೆಗೆ ಏನನ್ನು ತಿಳಿಸಬೇಕಾಗಿತ್ತೋ, ಅದನ್ನು ತಿಳಿಸಿದ್ದೇವೆ. ಅದನ್ನು ರಾಜ್ಯದ ಜನ ತೀರ್ಮಾನ ಮಾಡುತ್ತಾರೆ. ಅದರ ಬಗ್ಗೆ ಚರ್ಚೆ ಮಾಡೋಣ ಎಂದರೆ, I am ready for everything.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇವರ ಪರಿಸ್ಥಿತಿ ಇಷ್ಟಕ್ಕೇ ಹೀಗಾದರೆ, ಇನ್ನೂ ಚರ್ಚೆ ಮಾಡುವುದಕ್ಕೆ ಹೋದರೆ ಇವರ ಕಥೆ ಏನು?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ನಮ್ಮ ಪರಿಸ್ಥಿತಿ ಸ್ಪಷ್ಟವಾಗಿದೆ; ಗೋಡೆ ಬರಹಗಳಷ್ಟೇ ಸ್ಪಷ್ಟವಾಗಿದೆ. ನೀವೇನು ಮತ್ತು ನಾವೊಬ್ಬರೇನು ಎನ್ನುವುದನ್ನು ರಾಜ್ಯದ ಜನ ಅರ್ಥ ಮಾಡಿಕೊಂಡಿದ್ದಾರೆ. ಹಾಗಾಗಿ, ಆ ವಿಚಾರವನ್ನು ಕೆದಕೋಣವೆಂದರೆ ಕೆದಕೋಣ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಉಗ್ರಪ್ಪನವರು ಮಂತ್ರಿ ಆದಮೇಲೆ ಮತ್ತೆ ಉತ್ತರ ಕೊಡಲಿ, ಮಾನ್ಯ ರೇವಣ್ಣನವರು ಮಂತ್ರಿ ಆದಮೇಲೆ ಉತ್ತರ ಕೊಡಲಿ, ಈಗ ಅವರು ಮಧ್ಯ ಪ್ರವೇಶ ಮಾಡುವುದು ಬೇಡ. ಮಾನ್ಯ ಸಭಾಪತಿಯವರೆ, ಕೋರ್ಟ್‌ನ ಆಶಯ, ಮಾನ್ಯ ಉಗ್ರಪ್ಪನವರ ಆಶಯದಂತೆ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಅವಕಾಶ ಕೊಡಬೇಕು. ಸಂವಿಧಾನದ ಆಶಯದಂತೆ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ಅವಕಾಶ ಕೊಡಬೇಕಾಗಿರುತ್ತದೆ. ಹಾಗಾದರೆ, ಸರ್ಕಾರಕ್ಕೆ ಏನಾಗಿದೆ? ಸಂವಿಧಾನವನ್ನು ಮತ್ತು ಕೋರ್ಟ್‌ನ್ನು ಮೀರಿ ಈ ಸರ್ಕಾರ ಅಧಿಕಾರದಲ್ಲಿದೆಯೇ? ಇದು ನಿಮಗೂ ಗೊತ್ತಿದೆ, ನೀವು ಹತ್ತು-ಹತ್ತು ಸಲ ಹೇಳಿದ್ದೀರಿ. ಮಂತ್ರಿಗಳು ಮತ್ತು ಶಾಸಕರು ಸಭೆಗಳನ್ನು ಕರೆಯುವುದಿಲ್ಲ. ನ್ಯಾಯಾಲಯದ ಆದೇಶಗಳಿಗಾಗಲಿ, ಸಂವಿಧಾನಕ್ಕಾಗಲಿ, ಯಾವುದಕ್ಕೂ ಬೆಲೆ ಕೊಡದಿರುವಂತಹ ಈ ಸರ್ಕಾರಕ್ಕೆ ನಾವು ಏನೆಂದು ಹೇಳಿಕೊಳ್ಳಬೇಕು?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ಮತ್ತೆ ಹೇಳುತ್ತಿದ್ದೇನೆ; ಮಾನ್ಯ ಕಾಗೋಡು ತಿಮ್ಮಪ್ಪನವರಂತೆ ಮತ್ತು ಮಾನ್ಯ ಕಾನೂನು ಸಚಿವರಂತೆ ನಾನು ಕಾನೂನು ತಜ್ಞ ಅಲ್ಲ. ಮಾನ್ಯ ಉಗ್ರಪ್ಪನವರು ಈಗ ಏನು ಉತ್ತರ ಕೊಡುತ್ತಾರೆ? ತಪ್ಪು ಮಾಡಿದ್ದೇವೆಂದು ಅವರು ಒಪ್ಪಿಕೊಳ್ಳುವುದೊಂದೇ ದಾರಿ. ಅವರು ಹತ್ತು ಬಾರಿ ಕ್ಷಮೆ ಕೇಳಿದ್ದಾರೆ, ಇನ್ನೊಂದು ಬಾರಿ ಕ್ಷಮೆ ಕೇಳಿಬಿಡಲಿ. ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿರುವ ಸಮಿತಿಗಳನ್ನು ದಯವಿಟ್ಟು ರದ್ದುಪಡಿಸಿ, ಸಂವಿಧಾನಬದ್ಧವಾಗಿ ಕೋರ್ಟ್ ಏನು ಆದೇಶ ಮಾಡಿದೆ ಅದನ್ನು ಜಾರಿಗೆ ತರಬೇಕೆಂಬುದು ನಮ್ಮ ಒತ್ತಾಯವಾಗಿದೆ. ಇಲ್ಲವೆಂದರೆ, ನಾವೇಕೆ ಇಲ್ಲಿ ಚರ್ಚೆ ಮಾಡಬೇಕು? ಮೊದಲನೆಯ ಬಾರಿ ಮಾನ್ಯ ಉಗ್ರಪ್ಪನವರು ನನಗೆ ಸಹಾಯ ಮಾಡಿದ್ದಾರೆ. ಈ ಸರ್ಕಾರ ಮಾಡಿರುವ ತಪ್ಪಿನ ಬಗ್ಗೆ ಅವರು ನೇರವಾಗಿ ಹೇಳಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದೇನೆಂದರೆ, ಕಾನೂನು ನನಗೆ ಗೊತ್ತಿಲ್ಲ. ಜನ ಎಂತಹ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ ಎನ್ನುವ ವಾಸ್ತವಾಂಶವನ್ನು ನಾನು ಚುನಾಯಿತ ಪ್ರತಿನಿಧಿಗಳ ಮಧ್ಯೆ ಇದ್ದು, ಇಡೀ ರಾಜ್ಯವನ್ನು ಸುತ್ತಿಕೊಂಡು ಬಂದು, ಆ ರೈತರ ಸಮಸ್ಯೆ ಏನಿದೆ ಎನ್ನುವುದನ್ನು ನೋಡಿ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಕಾನೂನು ಸಹ ನಮ್ಮ ಅಭಿಪ್ರಾಯಕ್ಕೆ ಬೆಂಬಲ ಕೊಡುತ್ತಿದೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಮೇಷ್ಟ್ರು ವಿದ್ಯಾರ್ಥಿಗಳಿಗೆ ಚರಿತ್ರೆ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿ ಆ ಚರಿತ್ರೆಗೆ ಉತ್ತರ ಕೊಡುವಂತೆ ಕೇಳಿದರೆ, ನಾವು ಚರಿತ್ರೆಗೆ ಉತ್ತರ ಕೊಡುವುದಿಲ್ಲ., ನಾವು ಆ ಚರಿತ್ರೆಯನ್ನು ನಿರ್ಮಾಣ ಮಾಡುತ್ತೇವೆ" ಎಂದರು. ಅದೇ ರೀತಿ ಶಾಸನವನ್ನು ಮಾಡುವ ಇವರು ಕಾನೂನು ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ ಅಷ್ಟೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರವರೆ, ಬಹಳ ಚೆನ್ನಾಗಿ ಹೇಳುತ್ತಿದ್ದೀರಿ. "Ignorance of law is not an excuse" ಎನ್ನುವ ಒಂದು ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್ ಇದೆ. ಇದು ಒಂದು ವಿಚಾರವಾದರೆ ಎರಡನೆಯದು, ಈ ಸದನಕ್ಕೆ ನಾವು ಬರಬೇಕೆಂದರೆ oath ತೆಗೆದುಕೊಳ್ಳುತ್ತೇವೆ. ನಾವು ಸಂವಿಧಾನದ ರೀತ್ಯಾ, ಸಂವಿಧಾನದ ಎಲ್ಲಾ ವಿಧಿ ವಿಧಾನಗಳನ್ನು ಎತ್ತಿಹಿಡಿಯುತ್ತೇವೆಂದು ಪ್ರಮಾಣ ವಚನ ಸ್ವೀಕರಿಸುತ್ತೇವೆ. ಮಾನ್ಯ ಈಶ್ವರಪ್ಪನವರು ಪದೇ ಪದೇ ನನಗೆ ಕಾನೂನು ಗೊತ್ತಿಲ್ಲವೆಂದು ಹೇಳಿದರೆ, ನಾವು ಏನನ್ನು ಹೇಳುವುದು?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರು ನಿಮ್ಮ ಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂದು ಕೇಳುತ್ತಿದ್ದಾರೆ. ಅವರಿಗೆ ಸಂವಿಧಾನ ಗೊತ್ತಿಲ್ಲವೇ? ಅವರು ಸಂವಿಧಾನವನ್ನು ಓದಿಕೊಂಡಿದ್ದರೆ, ಕಾನೂನನ್ನು ತಿಳಿದುಕೊಂಡಿದ್ದರೆ ಟಾಸ್ಕ್‌ಫೋರ್ಸ್ ಏತಕ್ಕೆ ಮಾಡಬೇಕಾಗಿತ್ತು?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಅವರವರ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕು. ಅದೇರೀತಿ ಮಾನ್ಯ ಸದಸ್ಯರುಗಳು ಸಹ ಅವರ ಜವಾಬ್ದಾರಿಯನ್ನು ನಿರ್ವಹಣೆ ಮಾಡಬೇಕು. ನಾವೆಲ್ಲರೂ ಸಹ ಅಂತಿಮವಾಗಿ ಸಂವಿಧಾನದ ಆಶಯಗಳೇನಿವೆ, ಅದರ ಅಡಿಯಲ್ಲಿ ನಾವು ನಮ್ಮ ನಮ್ಮ ಕರ್ತವ್ಯಗಳನ್ನು ನಿರ್ವಹಣೆ ಮಾಡಬೇಕು. ಅದೇ ಗೊತ್ತಿಲ್ಲವೆಂದರೆ ನಾನು ಏನನ್ನು ಹೇಳುವುದು?

(840) 20.6.2017 12.20 ಪಿಕೆ:ಬಿಎನ್ಎಸ್

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ನೂರು ಸಲ ಕೇಳಿದರೂ ಹೇಳುವುದೇನೆಂದರೆ; ಸಂವಿಧಾನಕ್ಕೆ ಬದ್ಧವಾಗಿ ನಾನು ತಪ್ಪು ಮಾಡಿದ್ದರೆ, ಮಾನ್ಯ ಉಗ್ರಪ್ಪನವರ ವಾದವನ್ನು ನಾನು ಒಪ್ಪುತ್ತೇನೆ. ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುತ್ತೇವೆ ಎಂದು ನಾವು ಪ್ರಮಾಣ ವಚನ ಸ್ವೀಕಾರ ಮಾಡಿರುತ್ತೇವೆ. ಆ ಆಶಯಗಳನ್ನು ಎತ್ತಿಹಿಡಿಯದೆ ದ್ರೋಹ ಮಾಡಿದರೆ ಅದು ತಪ್ಪಾಗುತ್ತದೆ. ಸಂವಿಧಾನದ ಆಶಯಕ್ಕನುಗುಣವಾಗಿ ಕೆಲಸ ಮಾಡದೆ ಯಾವರೀತಿ ಅನ್ಯಾಯ ಮಾಡಿದ್ದಾರೆ ಎಂಬುದನ್ನು ಕಾನೂನಾತ್ಮಕವಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಪ್ರಾಕ್ಟಿಕಲ್ ಆಗಿ ನಾನು ಹೇಳುತ್ತಿದ್ದೇನೆ. ನಾನು ಸಂವಿಧಾನವನ್ನು ಮುರಿದಿಲ್ಲ. ಸಂವಿಧಾನಕ್ಕೆ ನಾನು ದ್ರೋಹ ಮಾಡಿಲ್ಲ. ಈ ಸರ್ಕಾರ ಸಂವಿಧಾನಕ್ಕೆ ದ್ರೋಹ ಮಾಡಿದೆ. ಈ ಅಂಶವನ್ನು ಮಾನ್ಯ ಉಗ್ರಪ್ಪನವರೇ ಹೇಳಿದ್ದಾರೆ. ಮತ್ತೆ ಅವರು ಉತ್ತರ ಕೊಟ್ಟು ಸಿಕ್ಕಿಹಾಕಿಕೊಳ್ಳುವುದು ಬೇಡ. ಈಗಾಗಲೇ ಎರಡು ಸಲ ಸಿಕ್ಕಿಹಾಕಿಕೊಂಡಿದ್ದಾರೆ ....

**ಶ್ರೀ ವಿ.ಎಸ್.ಉಗ್ರಪ್ಪ:-** ನಾನು ಏನು ಹೇಳಿದ್ದೇನೆ ಎಂದರೆ, ...

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಏನು ಹೇಳಿದಿರೋ ಅದು ಸರಿಯಿದೆ...

**ಶ್ರೀ ವಿ.ಎಸ್.ಉಗ್ರಪ್ಪ:-** ಒಬ್ಬ ಹೆಣ್ಣು ಮಗಳು ತಿರುಪತಿ ದೇವಸ್ಥಾನಕ್ಕೆ ಹೋಗಿ 'ಗೋವಿಂದ' ಎಂದು ಹೇಳಿದರೆ, ಎಲ್ಲರೂ 'ಗೋವಿಂದ' ಎಂದು ಹೇಳಿದ ಹಾಗೆ ಆಗುತ್ತಿದೆ ...

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಉಗ್ರಪ್ಪನವರು ಹಳ್ಳಿ ಜನರಿಗೂ ಅರ್ಥ ಆಗುವ ಹಾಗೆ ಹೇಳಿದ್ದಾರೆ. ವಿದ್ಯೆ ಗೊತ್ತಿಲ್ಲದೇ ಇದ್ದವನಿಗೆ ಕಾನೂನು ಹೇಗಿದೆ ಎನ್ನುವುದನ್ನು ನೀವು ತಿಳಿಸಿದ್ದೀರಿ. ಈ ಸರ್ಕಾರ ಅವರು ಹೇಳಿದ್ದನ್ನಾದರೂ ಅರ್ಥ ಮಾಡಿಕೊಳ್ಳಲಿ. ಸಂವಿಧಾನಬದ್ಧವಾಗಿ ಸರ್ಕಾರ ನಡೆದುಕೊಳ್ಳಬೇಕು. ಕೋರ್ಟ್‌ನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದೇಶದ ಪ್ರಕಾರ ನಡೆದುಕೊಳ್ಳಬೇಕು. ಆದರೆ ಎರಡನ್ನೂ ಮೀರಿದ್ದೀರಿ. ಎಂ.ಎಲ್.ಎ. ಅಧ್ಯಕ್ಷತೆಯಲ್ಲಿ Task Force ಸಮಿತಿ ಮಾಡಿದ್ದೀರಿ, ಇದು ಸಂವಿಧಾನಕ್ಕೆ ವಿರುದ್ಧವಾದುದು. ನನಗಿಂತ ಜಾಸ್ತಿ ಇದನ್ನು ಮಾನ್ಯ ಉಗ್ರಪ್ಪನವರು ಹೇಳಿದ್ದಾರೆ. ಈಗಲಾದರೂ ಸಂವಿಧಾನಬದ್ಧವಾಗಿ ಏನು ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರೋ ಅದಕ್ಕೆ ಬೆಲೆ ಕೊಡಿ. ಈ ದಿಕ್ಕಿನಲ್ಲಿ ನೀವು ಪ್ರಯತ್ನ ಮಾಡಬೇಕು. ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ, ಪ್ರತಿ ಜಿಲ್ಲೆಗೆ ಕನಿಷ್ಠ ರೂ. 10–20 ಕೋಟಿ ಮತ್ತು ಪಟ್ಟಣ–ನಗರ ಸ್ಥಳೀಯ ಸಂಸ್ಥೆಗಳಿಗೆ ರೂ. 5–10 ಕೋಟಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇಲ್ಲವೆಂದರೆ ಇದು ಕೇವಲ ಚರ್ಚೆಯಾಗಿ ಉಳಿಯುತ್ತದೆ. ನಾವು ಬರೀ ಚರ್ಚೆಗೋಸ್ಕರ ಬಂದಿಲ್ಲ. ಚರ್ಚೆ ಆದನಂತರ ಏನಾದರೂ ಪರಿಹಾರ ಬೇಕು. ಮಾನ್ಯ ಕಂದಾಯ ಸಚಿವರು ದಯವಿಟ್ಟು ಮುಖ್ಯಮಂತ್ರಿಗಳ ಜೊತೆ ಕುಳಿತುಕೊಂಡು, ನಾನು ಕಂದಾಯ ಮಂತ್ರಿಯಾಗಿದ್ದೇನೆ, ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಹೇಳಿದ್ದನ್ನು ಗುಮಾಸ್ತನಂತೆ ಬರೆದುಕೊಂಡು ನಿಮಗೆ ಕೊಡುವುದು ನನ್ನ ಕೆಲಸವಲ್ಲ, ಅವರು ಕೊಟ್ಟಂಥ ಸಲಹೆಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ, ನೀರಿಗೆ ಹಣ ಬಿಡುಗಡೆ ಮಾಡಿ ಎಂದು ತಿಳಿಸಬೇಕು. ನೀರಿಗೆ ಹಣ ಬಿಡುಗಡೆ ಮಾಡಲಿಲ್ಲ ಎಂದರೆ ನಾನು ಕಂದಾಯ ಮಂತ್ರಿಯ ಸ್ಥಾನದಲ್ಲಿ ಒಂದು ದಿನ ಕೂಡ ಇರುವುದಿಲ್ಲ, ರಾಜೀನಾಮೆ ಕೊಡುತ್ತೇನೆ ಎಂದು ಎಚ್ಚರಿಕೆ ಕೊಡಿ. ನೀವು ರಾಜೀನಾಮೆ ಕೊಡಬೇಡಿ. ಅಪರೂಪಕ್ಕೆ ಒಬ್ಬ ಒಳ್ಳೆಯ ಮಂತ್ರಿ ಬಂದಿದ್ದೀರಿ. ಕನಿಷ್ಠ ನಮ್ಮ ಮಾತನ್ನು ಕೇಳುತ್ತೀರಿ, ಅದನ್ನು ಸರ್ಕಾರಕ್ಕೆ ತಲುಪಿಸಿ, ಅಲ್ಲಿಂದ ಹಣ ಬರುವ ನಿಟ್ಟಿನಲ್ಲಿ ಪ್ರಯತ್ನ ಮಾಡಿ. ಅಷ್ಟೂ ಆಗಲಿಲ್ಲ ಎಂದರೆ ಏನು ಮಾಡುವುದಕ್ಕಾಗುತ್ತದೆ? ನೀವು ರಾಜೀನಾಮೆ ಕೊಡುವುದು–ಬಿಡುವುದು ನಿಮಗೆಯೇ ಬಿಡುತ್ತೇನೆ.

ಮಾನ್ಯ ಸಭಾಪತಿಗಳೆ, ಒಂದು ರೂಪಾಯಿ ಕೂಡ ಬಿಡುಗಡೆ ಮಾಡಲಿಲ್ಲ ಎಂದರೆ ಹೇಗೇ? ಕಂದಾಯ ಮಂತ್ರಿಗಳು ಇಲ್ಲಿಗೆ ಬಂದು ಬರೆದುಕೊಂಡು ಕುಳಿತುಕೊಳ್ಳುವುದಕ್ಕೆ ಅವರೇನು ಗುಮಾಸ್ತರೇ? ಬರೆದುಕೊಳ್ಳುವುದಕ್ಕೆ ಬೇಕಾದಷ್ಟು ಜನ ಇದ್ದಾರೆ. ಅವರೇ ಬರೆದುಕೊಂಡು ಹೋಗಿ ಮುಖ್ಯಮಂತ್ರಿಗಳಿಗೆ ತಲುಪಿಸುತ್ತಾರೆ. ಕಂದಾಯ ಮಂತ್ರಿಗಳೇ ಇಲ್ಲಿ ಕುಳಿತುಕೊಂಡು ಏಕೆ ಬರೆದುಕೊಳ್ಳಬೇಕು? ಪ್ರತಿ ಜಿಲ್ಲೆಗೆ ಕನಿಷ್ಠ, ಜನಸಂಖ್ಯೆಗೆ ತಕ್ಕಂತೆ ರೂ.10–20 ಕೋಟಿಯನ್ನು, ಪಟ್ಟಣ–ನಗರಸಂಸ್ಥೆಗಳಿಗೆ ರೂ. 5–10 ಕೋಟಿಯಷ್ಟು ಅನುದಾನ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ಥಳೀಯ ಸಂಸ್ಥೆಗಳ ಸದಸ್ಯರು ಮತ್ತು ಚುನಾಯಿತ ಪ್ರತಿನಿಧಿಗಳು ವ್ಯಾಪ್ತಿಗೆ ಬರುವ ರೀತಿಯಲ್ಲಿ ಸಮಿತಿಗಳನ್ನು ಮಾಡಿ. ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ., ಗಳನ್ನು ಅದಕ್ಕೆ ಸೇರಿಸಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಇದರಲ್ಲಿ ಒಂದು ವಿಚಾರವನ್ನು ಸ್ಪಷ್ಟ ಮಾಡುವುದು ಒಳ್ಳೆಯದು. ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದ ಪ್ರತಿನಿಧಿಗಳು ನಮ್ಮ ಸದನದಲ್ಲಿ ಪ್ರತಿ ಜಿಲ್ಲೆಗೆ ಒಬ್ಬರಂತೆ ಇದ್ದಾರೆ. ಆ 25 ಜನ ಬಹಳಷ್ಟು ಬಾರಿ ತಮ್ಮ ಕಷ್ಟ–ದುಃಖಗಳನ್ನು ತೋಡಿಕೊಂಡಿದ್ದಾರೆ, ತಾಪತ್ರಯ–ಅಹವಾಲುಗಳನ್ನು ಹೇಳಿಕೊಂಡಿದ್ದಾರೆ. ಹಾಗಾಗಿ ಅವರ ಸೇವೆಯನ್ನು, ಅವರ ಜವಾಬ್ದಾರಿಯನ್ನು ಸರ್ಕಾರ ಬಳಸಿಕೊಳ್ಳಬೇಕೆಂದು ತಾವು ಸ್ಪಷ್ಟವಾಗಿ ಹೇಳುವುದು ಒಳ್ಳೆಯದು. ಏಕೆಂದರೆ ಇದು ಈ ಸದನದ ಸದಸ್ಯರ ಗೌರವದ ಪ್ರಶ್ನೆ ಕೂಡ ಆಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸ್ಥಳೀಯ ಸಂಸ್ಥೆಗಳಲ್ಲಿ ಗೆದ್ದಿರುವವರು ಮತ್ತು ಅದೇರೀತಿ ಶಿಕ್ಷಕರ ಕ್ಷೇತ್ರದಿಂದ, ಪದವೀಧರ ಕ್ಷೇತ್ರದಿಂದ ಗೆದ್ದು ಬಂದಿರುವವರು ಯಾವ ಯಾವ ಏರಿಯಾಗೆ ಬರುತ್ತಾರೋ ಅಂಥವರನ್ನು ಆ ಸಮಿತಿಗೆ ಸೇರಿಸಿ. ಹಾಗೆ ಮಾಡುವುದರಿಂದ ಅವರಿಗೂ ಕೂಡ ಸಂಕಷ್ಟ ಗೊತ್ತಾಗುತ್ತದೆ, ಪರಿಸ್ಥಿತಿಗಳು ಗೊತ್ತಾಗುತ್ತದೆ. ಇಲ್ಲದೇ ಹೋದರೆ, ಇದಕ್ಕೆ ಕೇವಲ ಎಂ.ಎಲ್.ಎ. ಗಳೇ ಕಾರಣ, ನೀರು ಬಂದರೂ ಎಂ.ಎಲ್.ಎ., ನೀರು ಬರದೇ ಇದ್ದರೂ ಎಂ.ಎಲ್.ಎ., ಎಂದಾಗಿಬಿಡುತ್ತದೆ. ಹೀಗಾದರೆ ನಾವು ಯಾರನ್ನು ಹೋಗಿ ಕೇಳಬೇಕು? ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಮಾನ್ಯ ಸಭಾಪತಿಗಳೆ, ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ದಾಖಲೆಗಳನ್ನು ತೋರಿಸುತ್ತಾ ಹೋಗುತ್ತಾರೆ, ಎರಡು–ಮೂರು ಪುಟಗಳ ಜಾಹೀರಾತು ಇರುತ್ತದೆ. ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ, ಕುಡಿಯಲು ಯಾರಿಗೆ ನೀರು ಕೊಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ, ಆದರೆ ಜಾಹೀರಾತಿಗೆಂದು ಪತ್ರಿಕೆಗಳವರಿಗೆ ಒಂದಷ್ಟು ದುಡ್ಡನ್ನು ಕೊಡುತ್ತಿದ್ದಾರೆ. ಅವರಾದರೂ ಬದುಕುತ್ತಿದ್ದಾರೆ. ಅದರಲ್ಲಿ ಏನು ಸಾಧನೆ ಮಾಡಿದ್ದೀರೋ, ಬಿಟ್ಟಿದ್ದೀರೋ ಅದು ಆಮೇಲೆ. ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ, ಪ್ರತಿ ಬಾರಿಯೂ ಅಷ್ಟು ಸಾವಿರ ಕೊಟ್ಟಿದ್ದೇವೆ, ಇಷ್ಟು ಸಾವಿರ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ತನಿಖೆ ಮಾಡಿಸಬೇಕು. ಎಷ್ಟು ಶುದ್ಧ ನೀರಿನ ಘಟಕಗಳು ರೆಡಿಯಾಗಿವೆ, ಅದಕ್ಕೆ ಎಷ್ಟು ವಿದ್ಯುತ್ ಸಂಪರ್ಕವನ್ನು ಕೊಟ್ಟಿದ್ದಾರೆ, ಆ ಘಟಕಗಳ ಪೈಕಿ ಎಷ್ಟರಲ್ಲಿ ಕುಡಿಯುವ ನೀರು ಸಿಗುತ್ತಿದೆ ಎಂಬ ಬಗ್ಗೆ ತನಿಖೆ ಮಾಡಿಸಿ. ಇದಕ್ಕಿಂತಲೂ ಮುಖ್ಯ ಎಂದರೆ, ಇವುಗಳಲ್ಲಿ ಎಷ್ಟು ಕೆಟ್ಟು ಹೋಗಿವೆ ಎಂಬುದರ ಬಗ್ಗೆ ತನಿಖೆ ಮಾಡಿಸಿ. ನನಗೆ ಗೊತ್ತಿರುವ ಪ್ರಕಾರ ಶೇಕಡ 50ಕ್ಕಿಂತ ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳು ಕೆಲಸ ಮಾಡುತ್ತಿಲ್ಲ. ನಾನು ಜಿಲ್ಲಾಧಿಕಾರಿಗಳ ನೇತೃತ್ವದ ಒಂದು ಸಭೆಯಲ್ಲಿ ಭಾಗವಹಿಸಿದ್ದೆ. ಅದು ಕೆ.ಡಿ.ಪಿ. ಸಭೆ. ಬಹುಶಃ ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದರು ಎಂದುಕೊಳ್ಳುತ್ತೇನೆ. ಆ ಸಭೆಯಲ್ಲಿ ಒಬ್ಬ ಇಂಜಿನಿಯರ್‌ಗೆ, ಎಷ್ಟು ಕುಡಿಯುವ ನೀರನ್ನು ಕೊಡುತ್ತಿದ್ದೀರಿ, ಎಷ್ಟು ಘಟಕಗಳು ರೆಡಿಯಾಗಿವೆ ಎಂದು ಕೇಳಿದಾಗ, ಆತ ಸುಮಾರು 50 ಎಂದು ಹೇಳಿದ. 50 ಘಟಕಗಳು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರೆಡಿಯಾಗಿರುವುದರಲ್ಲಿ ಕುಡಿಯುವುದಕ್ಕೆಂದು ಎಷ್ಟು ಘಟಕಗಳನ್ನು ಬಳಸಿಕೊಳ್ಳುತ್ತಿದ್ದೀರಿ ಎಂದು ಕೇಳಿದರೆ, ಆ ಸಂಖ್ಯೆ 25 ಕೂಡ ಇರಲಿಲ್ಲ. ಏಕೆ ಎಂದು ಕೇಳಿದರೆ, ಅದಕ್ಕೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ ಎಂದು ಹೇಳಿದರು. ಇಂಥದ್ದನ್ನು ತೆಗೆದುಕೊಂಡು ಹೋಗಿ ಬೆಂಕಿಗೆ ಹಾಕಬೇಕೇ? ರೆಡಿಯಾಗಿರುವ ಪಟ್ಟಿಯಲ್ಲಿ ಶೇಕಡ 50ಕ್ಕೂ ಹೆಚ್ಚು ಘಟಕಗಳಿಗೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಮಾನ್ಯ ಕಂದಾಯ ಸಚಿವರು ಆಗ ಗಲಾಟೆ ಮಾಡಿದರು. ಎಷ್ಟು ದಿನದಲ್ಲಿ ಈ ಕೆಲಸ ಮಾಡುತ್ತೀರಿ ಎಂದು ಕೇಳಿದಾಗ ಆ ಇಂಜಿನಿಯರ್ ಅದಕ್ಕೆ ಏನೋ ಒಂದು ಉತ್ತರ ಕೊಟ್ಟ. ಈಗ ಸಂಪರ್ಕ ಕೊಟ್ಟಿದ್ದಾರೋ ಇಲ್ಲವೋ ಅದು ಬೇರೆ ಪ್ರಶ್ನೆ. ಪರಿಸ್ಥಿತಿ ಹೀಗಿದೆ. ಜಾಹೀರಾತಿನಲ್ಲಿ ಒಂದು ಸಾವಿರ ಕುಡಿಯುವ ನೀರಿನ ಘಟಕಗಳ ಬಗ್ಗೆ ಹೇಳುತ್ತಾರೆ, ಅದರಲ್ಲಿ 500 ಘಟಕಗಳಿಗೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಸುಮಾರು 300 ಘಟಕಗಳು ಕೆಟ್ಟು ಹೋಗಿವೆ. ಹಾಗಾದರೆ ಇನ್ನೇನು ಉಳಿಯಿತು? ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸದನಕ್ಕೆ ಬಂದಾಗ ಈ ಅಂಶಗಳನ್ನು ನಾನು ಅವರ ಗಮನಕ್ಕೆ ತರುತ್ತೇನೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕುರಿತು ಗಮನಿಸಬೇಕು. ನಾನು ಕೊಪ್ಪಳ ಜಿಲ್ಲೆಗೆ ಹೋಗಿದ್ದೆ. ಇದನ್ನು ಹೇಳುವುದಕ್ಕೆ ನನಗೆ ಹೊಟ್ಟೆ ಉರಿಯುತ್ತದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಒಟ್ಟು ರೂ.89 ಕೋಟಿ ಪರಿಷ್ಕೃತ ಮೊತ್ತವಾಗಿದ್ದರೆ, ಬಿಡುಗಡೆಯಾಗಿದ್ದು ರೂ. 19 ಕೋಟಿ. ನಾನು 13.5.2017 ಅಂತ್ಯಕ್ಕೆ, ಅಂದರೆ ಸುಮಾರು ಒಂದು ತಿಂಗಳ ಹಿಂದೆ ಕೊಪ್ಪಳದ ಜಿಲ್ಲಾಧಿಕಾರಿಗಳ ಜೊತೆ ಸಭೆ ಮಾಡಿದಾಗ ಅವರು ಕೊಟ್ಟಿರುವ ಒಂದು ವರದಿ ನನ್ನ ಹತ್ತಿರ ಇದೆ. ಒಂದನೆಯದು, ಹಣ ಬಿಡುಗಡೆಯಾಗಿದೆ ಎಂದು ಹೇಳುತ್ತಾರೆ, ಆದರೆ ಆ ಹಣ ಅಲ್ಲಿಯ ತನಕ ಹೋಗುವುದಿಲ್ಲ. ಎರಡನೆಯದು, contractor ಕೆಲಸ ಮಾಡಿದ ಮೇಲೆ ಆತನಿಗೆ payment ಆಗುವುದಿಲ್ಲ. Payment ಆಗದೇ ಇದ್ದರೆ ಆತ ಮುಂದಿನ ಕೆಲಸ ಹೇಗೆ ಮಾಡುತ್ತಾನೆ? ಶಿವಮೊಗ್ಗ ಜಿಲ್ಲಾ ಪಂಚಾಯತ್‌ನಲ್ಲಿ ಸಿಕ್ಕ ವರದಿಯಲ್ಲಿ, ಕುಡಿಯುವ ನೀರಿಗೆಂದು ಕೆಲಸ ಮಾಡಿದ್ದ contractor ಗಳಿಗೆ ಕೊಡಬೇಕಾದ ರೂ.100 ಕೋಟಿಗಳ ಪೈಕಿ ರೂ. 28 ಕೋಟಿ ಕೊಡುವುದು ಬಾಕಿ ಇದೆ ಎನ್ನುವುದು ಕಂಡುಬಂತು. ನಿಮಗೆ ಈಗ ರೂ. 25 ಕೋಟಿ ಬಂದರೆ ಅದನ್ನು ಯಾರಿಗೆ ಕೊಡುತ್ತೀರಿ? ಆ contractor ನ್ನು ಬಿಟ್ಟು ಹೊಸ contractor ಗೆ ಕೊಡುತ್ತೀರಾ? ಆ ರೂ. 25 ಕೋಟಿಯನ್ನು ಹಳಬನಿಗೆ ಕೊಟ್ಟರೆ ಆತ ಬಾಕಿ ಕೊಡಬೇಕಾದ್ದರಲ್ಲಿ ಮುರಿದುಕೊಳ್ಳುತ್ತಾನೆ. ನಿಮ್ಮ ಮೇಲೆ ನಂಬಿಕೆ ಇಲ್ಲ, ಮೊದಲು ದುಡ್ಡು ಕೊಡಿ ನಂತರ ಕೆಲಸ ಮಾಡುತ್ತೇವೆ ಎಂದು ಹೇಳುವ ಸ್ಥಿತಿ ಇವತ್ತು ನಿರ್ಮಾಣವಾಗಿದೆ. ಒಂದುರೀತಿ ಹಣಕಾಸು ವಿಚಾರದಲ್ಲಿ ರಾಜ್ಯ ಸರ್ಕಾರ pauper ಆಗಿದೆ. ಇದನ್ನು ನಾನು ನೋವಿನಿಂದ ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಪ್ರಸನ್ನಕುಮಾರ್:–** ಮಾನ್ಯ ಸಭಾಪತಿಗಳೆ, ಮಾನ್ಯ ಈಶ್ವರಪ್ಪನವರು ಮಾತನಾಡುತ್ತಾ, ಈ ಸರ್ಕಾರ pauper ಆಗಿದೆ ಎಂದು ಹೇಳಿದರು. ರೂ. 28 ಕೋಟಿಯ spill over work ಬಿಟ್ಟರೆ, ಬೇರೆ ಯಾವುದೇ ಬಿಲ್ ಬಾಕಿ ಇಲ್ಲ.

**ಸಭಾಪತಿಯವರು:–** ಸರ್ಕಾರದ ಪರವಾಗಿ ಉತ್ತರ ಕೊಟ್ಟಿದ್ದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ರೇವಣ್ಣನವರಿಗೆ ಬೇರೆ ತರಹ ಹೇಳಿದರು. ಉತ್ತರ ಕೊಡಬೇಕಾದವರು ಸಚಿವರು. ತಮಗೂ ಬೇಕಾದರೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ತಪ್ಪು ಮಾಹಿತಿ ಕೊಟ್ಟಿದ್ದರೆ ಅದಕ್ಕೆ ಉತ್ತರ ಕೊಡುವ ಜವಾಬ್ದಾರಿ ಸಚಿವರದ್ದಾಗಿರುತ್ತದೆ. ಆ ಹಕ್ಕು ಬೇರೆ ಯಾವುದೇ ಸದಸ್ಯರಿಗೆ ಇರುವುದಿಲ್ಲ. ತಾವು ಏನು ಹೇಳಬಯಸುತ್ತೀರೋ ಆ ಮಾಹಿತಿಯನ್ನು ಸಚಿವರಿಗೆ ಕೊಟ್ಟು ಅವರ ಮುಖಾಂತರ ಹೇಳಿಸಿ. ತಾವೇ ಉತ್ತರ ಕೊಡುವುದು ಪದ್ಧತಿಯಲ್ಲ. ಉತ್ತರವನ್ನು ಯಾವುದೇ ಸಚಿವರು ಬೇಕಾದರೆ ಕೊಡಬಹುದು. ಆದರೆ ಸದಸ್ಯರು ಉತ್ತರ ಕೊಡುವ ಹಾಗಿಲ್ಲ. ಈಗ ದಯವಿಟ್ಟು ಕುಳಿತುಕೊಳ್ಳಿ.

(ಮುಂದು)

**(841)20-6-2017 MM-BNS 12.30**

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಕಾಗೋಡು ತಿಮ್ಮಪ್ಪರವರು ಹಿರಿಯರಿದ್ದಾರೆ. ನಾನು ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮೇಲೆ ನಾಲ್ಕು ಜಿಲ್ಲೆಗಳಿಗೆ ಹೋಗಿ ಬಂದಿದ್ದೇನೆ. ಈಗ ತಾವು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಈ ವರ್ಷ ಬಹುಗ್ರಾಮ ಕುಡಿಯುವ ನೀರಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಎಷ್ಟು ಹಣ ಬಾಕಿ ಇದೆ? ಸುಮಾರು 3,000 ಕೋಟಿ ರೂಪಾಯಿಯಷ್ಟಾದರೂ ಇದಕ್ಕೆ ಬಿಡುಗಡೆ ಮಾಡದಿದ್ದರೆ ಈ ಯೋಜನೆಯನ್ನು ನಾಮಕಾವಸ್ಥೆಗೆ ಘೋಷಣೆ ಮಾಡಿದ ಹಾಗಾಗುತ್ತದೆ. ಇದರಿಂದ ಏನೂ ಲಾಭವಾಗುವುದಿಲ್ಲ. ದಯವಿಟ್ಟು ಸುಮಾರು 3,000 ಕೋಟಿ ರೂಪಾಯಿಯಷ್ಟಾದರೂ ಹಣವನ್ನು ಬಿಡುಗಡೆ ಮಾಡಿಸುವ ಪ್ರಯತ್ನವನ್ನು ಮಾಡಿ. ನಾನು ಯಾವ ಯಾವ ಜಿಲ್ಲೆಗಳಿಗೆ ಹೋಗಿದ್ದೆ, ಏನೇನು ಪರಿಸ್ಥಿತಿ ಇದೆ ಅವುಗಳ ವಿವರಕ್ಕೆ ಹೋಗುವುದಿಲ್ಲ. ಒಂದೊಂದೇ ಜಿಲ್ಲೆಯ ಬಗ್ಗೆ ಮಾತ್ರ ಹೇಳುತ್ತಿದ್ದೇನೆ.

ಗೋಶಾಲೆಗಳ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, National Disaster Response Force/Fund (N.D.R.F.) ನ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಮೊತ್ತ ಪ್ರತಿ ಜಾನುವಾರಿಗೆ ಒಂದು ದಿವಸಕ್ಕೆ 70 ರೂಪಾಯಿಗಳು ಮತ್ತು ಕರುವಿಗೆ 30 ರೂಪಾಯಿಗಳು. ಈ ಹಣದಿಂದ ಗುಣಮಟ್ಟದ ಮೇವು,



“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕುಡಿಯುವ ನೀರು, ಔಷಧಿ, ಪೌಷ್ಟಿಕ ಆಹಾರಗಳನ್ನು ಇಂದಿನ ಮಾರುಕಟ್ಟೆ ಬೆಲೆಯಲ್ಲಿ ನೀಡಲು ಸಾಧ್ಯವಿಲ್ಲ. ಸರ್ಕಾರ ಈ ಜಾನುವಾರುಗಳ ಸಂರಕ್ಷಣೆಗೆ ತಗಲುವ ವೆಚ್ಚವನ್ನು ಲೆಕ್ಕ ಹಾಕಿ ಈ ಸಂಬಂಧ ಹೆಚ್ಚುವರಿ ಮೊತ್ತಕ್ಕೆ ಪ್ರತ್ಯೇಕ ಮಾರ್ಗಸೂಚಿಯನ್ನು ಹೊರಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಬೇಕಾದರೆ ಲೆಕ್ಕವನ್ನು ಮಾಡಿಸಿ. ಔಷಧಿ, ಅದಕ್ಕೆ ಬೇಕಾದಂತಹ ಪೌಷ್ಟಿಕ ಆಹಾರ, ಕುಡಿಯುವ ನೀರು, ಮೇವು ಎಲ್ಲಾ ಸೇರಿ ಒಂದು ಜಾನುವಾರಿಗೆ 70 ರೂಪಾಯಿ, ಒಂದು ಕರುವಿಗೆ 30 ರೂಪಾಯಿಯನ್ನು ನಿಗದಿಪಡಿಸಿದ್ದಾರೆ. ಈ ಹಣ ಯಾವುದೇ ಕಾರಣಕ್ಕೂ ಸಾಕಾಗುವುದಿಲ್ಲ ಇದನ್ನು ಜಾಸ್ತಿ ಮಾಡಬೇಕು; ಇದು ಮೊದಲನೆಯದು. ಹಣವನ್ನು ಜಾಸ್ತಿ ಮಾಡಿದರೆ ಲಾಭ ಯಾರಿಗೆ? ಆ ಹಸುವಿಗೆ ಕರುವಿಗಲ್ಲ. ಇದನ್ನು ಮಾನ್ಯ ಕಂದಾಯ ಸಚಿವರು ಗಮನಿಸಬೇಕು. ಜಾಸ್ತಿ ಮಾಡಿದರೆ ಹಸು ಕರುವಿಗೆ ಬರಲಿ ಎಂಬುದು ಇಡೀ ರಾಜ್ಯದ ಜನರ ಆಸೆಯಾಗಿದೆ. ಆದರೆ ಅದು ಅಧಿಕಾರಿಗಳಿಗೆ ಲಾಭ. ಗೋಶಾಲೆಯಲ್ಲಿ ಎಷ್ಟು ಹಸುಗಳಿವೆ ಎಂದು ಕೊಡುವ ಲೆಕ್ಕವೇ ಬೇರೆ. ಆದರೆ ಆ ಸ್ಥಳಕ್ಕೆ ಹೋಗಿ ನೋಡಿದರೆ ಅಲ್ಲಿರುವುದೇ ಬೇರೆ. ಮಾನ್ಯ ಸಚಿವರೆ, ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಯವರು ಇದ್ದಾಗ ಹೇಳಿದೆ. ನಿಜಕ್ಕೂ ಕೆಲವು ಅಧಿಕಾರಿಗಳು ಹಂಗೆ ಹಿಂಗೆ ಸಾಯುವುದಿಲ್ಲ ನಾನು ತುಂಬಾ ನೊಂದು ಹೇಳುತ್ತೇನೆ, ಅವರ ಮಕ್ಕಳಿಗೆ ಲಕ್ವ ಹೊಡೆದೇ ಸಾಯುತ್ತಾರೆ. ಗೋವಿನ ಹಣವನ್ನು ತಿನ್ನುವರಲ್ಲಾ ಅವರನ್ನು ಮನುಷ್ಯರು ಎಂದು ಕರೆಯಬೇಕೇ? ನಾನು ನೊಂದುಕೊಂಡು ಬೇಕಂತಲೇ ರೆಡಿಯಾಗಿ ಬಂದು ಹೇಳುತ್ತಿದ್ದೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಈಶ್ವರಪ್ಪರವರೆ, ಅವರ ಮಕ್ಕಳಿಗೇಕೆ ಶಾಪ ಕೊಡುತ್ತೀರಾ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಕ್ಕಳಿಗೆ ಬೇಡ ಅವರಿಗೇ ಆಗಲಿ, ಮಕ್ಕಳಿಗೆ ಎಂದು ಹೇಳಿದ ಪದವನ್ನು ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ಮಾನ್ಯ ಎಸ್.ಆರ್. ಪಾಟೀಲ್‌ರವರೆ ತಮಗೆ ಒಂದು ಪಟ್ಟಿಯನ್ನು ಕೊಡುತ್ತೇನೆ. ಜಿಲ್ಲಾಧಿಕಾರಿಯವರನ್ನು ಕರೆದುಕೊಂಡು ಬಂದು ತಮ್ಮ ಮುಂದೆ ನಿಲ್ಲಿಸುತ್ತೇನೆ. ಎಷ್ಟು ಸುಳ್ಳು ಹೇಳುತ್ತಾರೆ ಎಂದರೆ, ಮಾನ್ಯ ಮುಖ್ಯಮಂತ್ರಿಯವರು ಹೋದಾಗ 350 ಹಸುಗಳಿವೆ ಎಂದು ಹೇಳಿದರು. ಮಾರನೆಯ ದಿನ ಪತ್ರಿಕೆಯನ್ನು ಓದಿದರೆ 100 ಹಸುಗಳು ಅವತ್ತೇ ವಾಪಸ್ ಹೋಗಿವೆ. ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆ ಎಂದು ಕಟ್ಟಿ ಹಾಕುತ್ತಾರೆ. ಅಧಿಕಾರಿಗಳನ್ನು ಕೇಳಿದರೆ ಪತ್ರಿಕೆಯಲ್ಲಿ ಬಂದಿರುವುದು ಸುಳ್ಳು ಎಂದು ಹೇಳಿದರು. ಹಾಗಾದರೆ ನೋಡಿಕೊಂಡು ಬರೋಣವೆಂದು ಅವರನ್ನೂ ಗೋಶಾಲೆಗೆ ಕರೆದುಕೊಂಡು ಹೋಗಿದ್ದೆ. ಅಲ್ಲಿ ಸ್ವಲ್ಪ ಜನರಿದ್ದರು, ಅವರನ್ನು ಮಾತನಾಡಿಸಿದೆ. ಜಿಲ್ಲಾಧಿಕಾರಿಯವರು ಅಲ್ಲಿಗೆ ಮುಂಚೆಯೇ ಹೋಗಿದ್ದರು. ಅಲ್ಲಿ ಆಗಲೇ ತಯಾರಾಗಿದ್ದರು. ಇಲ್ಲಿ 350 ಹಸುಗಳು ಕಾಣಿಸುತ್ತಿಲ್ಲವಲ್ಲಾ ಎಂದು ಕೇಳಿದರೆ 250 ಹಸುಗಳು ಇರಬಹುದು ಎಂದರು. ಈ ಹಸುಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿಕೊಳ್ಳುತ್ತಿರುವ ವೈದ್ಯರು ಯಾರು ಎಂದು ಕೇಳಿದೆ. ಅವರೆಲ್ಲೋ ನಿಂತಿದ್ದರು. ನಾನು ಮತ್ತು ಜಿಲ್ಲಾಧಿಕಾರಿಯವರು ಮಾತನಾಡುತ್ತಿದ್ದುದು ಅವರಿಗೆ ಗೊತ್ತಿರಲಿಲ್ಲ. ಅವರನ್ನು ಕರೆಸಿ, ಎಷ್ಟು ಹಸುಗಳಿವೆ ಎಂದು ಕೇಳಿದ್ದಕ್ಕೆ 150 ಹಸುಗಳಿವೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಹೋದಾಗ 350 ಹಸುಗಳು, ನಾನು ಹೋದಾಗ 250 ಹಸುಗಳು ಆದರೆ ಅಲ್ಲಿರುವುದು 150 ಹಸುಗಳು. ಮಾನ್ಯ ರಾಮಚಂದ್ರಗೌಡರವರೆ, ಇದನ್ನು ಯಾವ ಭಾಷೆಯಲ್ಲಿ ಹೇಳಲಿ? ನಾನು ಹೊಟ್ಟೆ ಉರಿದುಕೊಂಡು ಹೇಳುತ್ತಿದ್ದೇನೆ. ಎಲ್ಲಾ ಅಧಿಕಾರಿಗಳೂ ಹೀಗೆ ಇದ್ದಾರೆ ಎಂದು ಹೇಳುವುದಿಲ್ಲ. ಪ್ರಾಮಾಣಿಕ ಅಧಿಕಾರಿಗಳು ಬೇಕಾದಷ್ಟು ಜನ ಇದ್ದಾರೆ. ಜಾನುವಾರುಗಳಿಗೆ ಮತ್ತು ಕರುಗಳಿಗೆ ಜಾಸ್ತಿ ಮೇವನ್ನು ಕೊಡಿ ಎಂದು ಕೇಳುತ್ತಿದ್ದೇವೆ. ಇವರು ಲೂಟಿ ಮಾಡುವುದಕ್ಕೆ ಸರ್ಕಾರ ಹಣವನ್ನು ಜಾಸ್ತಿ ಮಾಡಬೇಕೇ? ಇದಕ್ಕೆ ಏನಾದರೂ ಒಂದು ಲೆಕ್ಕ ಮಾಡಿ. ಒಬ್ಬರು ಹೀಗೆ ತಮಾಷೆ ಮಾಡುತ್ತಿದ್ದರು. "ಒಂದು ಮರದಲ್ಲಿ ಎಷ್ಟು ಹಕ್ಕಿಗಳಿವೆ ಹೇಳಪ್ಪ ಎಂದರೆ, 2000 ಹಕ್ಕಿಗಳಿವೆ, ಎಣಿಸಿ ನೋಡೋಣ ಎನ್ನುತ್ತಾರೆ. ಕಡಿಮೆ ಇದೆಯಲ್ಲಾ ಎಂದರೆ, ಹಕ್ಕಿಗಳು ಹಾರಿ ಹೋಗಿವೆ ಎನ್ನುತ್ತಾರೆ. ಹಕ್ಕಿಗಳು ಜಾಸ್ತಿ ಇವೆಯಲ್ಲಾ ಎಂದರೆ ಈಗ ಬಂದು ಸೇರಿಕೊಂಡಿವೆ" ಎನ್ನುತ್ತಾರೆ. ಮೇವಿನ ಪರಿಸ್ಥಿತಿ ಹೀಗಾಗಿದೆ. ಲೆಕ್ಕ ಇಲ್ಲ ಬುಕ್ ಇಲ್ಲ, ಅವರು ಎಷ್ಟು ಹೇಳುವರೋ ಅಷ್ಟೇ. ಅವರು ಬರೆದುಕೊಂಡಿರುವುದೇ ಲೆಕ್ಕ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, "ಹುಚ್ಚಿ ಮದುವೆಯಲ್ಲಿ ಉಂಡವನೇ ಜಾಣ" ಎಂಬ ಒಂದು ಗಾದೆ ಇದೆ. ಬರ ಬಂತು ಎಂದು ಇವರೆಲ್ಲಾ ಉಂಡರು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಷ್ಟೇ ಅಲ್ಲ ಅವರಾಸೆ ಎಂದರೆ 46 ವರ್ಷಕ್ಕೇ ಭೀಕರ ಬರಗಾಲ ಇದೆ, ಇನ್ನೂ ಜಾಸ್ತಿ ಭೀಕರವಾದ ಬರಗಾಲ ಬರಲಿ ಎಂದು ಆಸೆ ಪಡುವ ಅಧಿಕಾರಿಗಳು ಇದ್ದಾರೆ. ತಾನು ಒಂದಷ್ಟು ದುಡ್ಡು ಹೊಡೆದು ತಿನ್ನಬಹುದು ಎಂಬ ಆಸೆ ಇದೆ. ಅದರ ಬಗ್ಗೆ ಮೇಲ್ವಿಚಾರಣೆ ಇಲ್ಲವೆಂದರೆ ಏನೂ ಉಪಯೋಗವಾಗುವುದಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಗುಲ್ಬರ್ಗಾ ಜಿಲ್ಲೆಯ ಬಗ್ಗೆ ನಿಜವಾಗಲೂ ಎರಡನೇ ಬಾರಿ ಪ್ರಸ್ತಾಪ ಮಾಡುತ್ತಿದ್ದಾರೆ. ನನಗೆ ಅನಿಸುವುದೇನೆಂದರೆ, ಇಷ್ಟೆಲ್ಲಾ ಸದನದಲ್ಲಿ ಪ್ರಸ್ತಾಪವಾದ ನಂತರ ಮಾನ್ಯ ಮಂತ್ರಿಯವರು ಕನಿಷ್ಠ ಇವತ್ತಾದರೂ ಮಾಹಿತಿ ತರಿಸಿ ಅದು ಸತ್ಯವೇ ಅಸತ್ಯವೇ ಎಂಬುದನ್ನು ರಾಜ್ಯದ ಜನತೆಗೆ ಈ ಮೂಲಕ ತಿಳಿಸಬೇಕಾಗುತ್ತದೆ. ಅಸತ್ಯವಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೆ; ಮುಖ್ಯಮಂತ್ರಿಯವರು ಇದ್ದಾಗ 350 ಹಸುಗಳಿವೆ ಎಂದು ಹೇಳಿದ್ದಾರೆ. ಅದು ಬೇರೆ ಪ್ರಶ್ನೆ. ಅದು ಸತ್ಯವೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಸತ್ಯವೇ ಎಂಬ ಬಗ್ಗೆ ತನಿಖೆ ಮಾಡಲಿ. ಇವರಿಗೆ 250 ಹಸುಗಳು, ಆದರೆ ಹೆಡ್ ಕೌಂಟ್ ಮಾಡಿದಾಗ 150 ಹಸುಗಳಿದ್ದವು ಎಂದು ಈ ಸದನಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರರು ಪದೇ ಪದೇ ಹೇಳುತ್ತಿದ್ದಾರೆ. I think, it is a serious issue. ದಯಮಾಡಿ ಈಗಲಾದರೂ ಮಾನ್ಯ ಮಂತ್ರಿಯವರು 24 ಗಂಟೆಯೊಳಗೆ ಏನಾಗಿದೆ ಎಂಬ ಬಗ್ಗೆ ಮಾಹಿತಿ ರಾಜ್ಯದ ಜನತೆಗೆ ಹೋಗದಿದ್ದರೆ wrong message ಹೋಗುವಂತಹ chances ಇದೆ. ಆ message ಪಡೆದುಕೊಳ್ಳಬೇಕು ಮತ್ತು ತಪ್ಪಿತಸ್ಥರಿದ್ದರೆ ಅವರ ಮೇಲೆ ಕ್ರಮ ಜರುಗಿಸುವ ಕೆಲಸ ಮಾಡಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಉಗ್ರಪ್ಪನವರೆ, ನನಗೆ ಬಹಳ ಸಂತೋಷವಾಗಿದೆ. ಉತ್ತರ ಕೊಡಬೇಕಾದರೆ ಅದರ ಬಗ್ಗೆಯೂ ಅವರು ಹೇಳಬೇಕಾಗುತ್ತದೆ. ಇನ್ನು ಆಹಾರದ ವಿಷಯಕ್ಕೆ ಬಂದರೆ, ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿ, 'ಅನ್ನಭಾಗ್ಯ ಯೋಜನೆ'ಯನ್ನು ಜಾರಿಗೊಳಿಸುವ ಬಗ್ಗೆ ಅವರೊಬ್ಬರೇ ಸಚಿವ ಸಂಪುಟದಲ್ಲಿ ತೀರ್ಮಾನವನ್ನು ತೆಗೆದುಕೊಂಡರು. ಅದಕ್ಕಾಗಿ ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಕೇಂದ್ರ ಸರ್ಕಾರ ಒಂದು ಕೆ.ಜಿ. ಅಕ್ಕಿಗೆ ಎಷ್ಟು ಹಣವನ್ನು ಕೊಡುತ್ತದೆ, ರಾಜ್ಯ ಸರ್ಕಾರ ಕೊಡುವ ಹಣವೆಷ್ಟು ಎನ್ನುವಂತಹ ಒಂದು ಅಂಶವನ್ನು ಅವರು ಸ್ಪಷ್ಟಪಡಿಸಲಿ. ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿಯವರು 'ಅನ್ನಭಾಗ್ಯ' ಯೋಜನೆ ಬಗ್ಗೆ ಎಲ್ಲಾ ಕಡೆಯೂ ಭಾಷಣ ಮಾಡುತ್ತಾರೆ. ಎಮ್ಮೆ ಯಾರದ್ದೋ ಆದರೆ ಬಾಲ ಯಾರದ್ದೋ ಆಗಿರುತ್ತದೆ. ಹಗ್ಗ ಹಿಡಿದುಕೊಂಡು ಎಮ್ಮೆಯೇ ನನ್ನದು ಎಂದು ಹೇಳುವಂತಹ ಪರಿಸ್ಥಿತಿ ಬಂದಿದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, 30-32 ಕೆ.ಜಿ. ಅಕ್ಕಿಯನ್ನು ಒಂದು ರೂಪಾಯಿಗೆ ತಂದು ಮೂರು ಕೆ.ಜಿ. ರಾಜ್ಯ ಸರ್ಕಾರದ್ದಾಗಿದ್ದು, 'ಅನ್ನಭಾಗ್ಯ' ನಮ್ಮದು ಎಂದು ಹೇಳುತ್ತಾರಲ್ಲ! ಇದು ನ್ಯಾಯವೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಮೊದಲನೆಯ ವಿಚಾರವಾದರೆ, ಎರಡನೆಯದಾಗಿ ಪತ್ರಿಕೆಯನ್ನು ಓದಬೇಕಾದರೆ, ದಿನಾಂಕ 09/04/2017ರ 'ಕನ್ನಡ ಪ್ರಭ' ಪತ್ರಿಕೆಯಲ್ಲಿ 'ಅನ್ನಭಾಗ್ಯ ಅಕ್ಕಿಗೆ ಕನ್ನ', 'ಸರ್ಕಾರದ ಉಚಿತ ಅಕ್ಕಿ ಬೆಳಗಾವಿ ಗಡಿಯಲ್ಲಿ 10 ರೂಪಾಯಿಗೆ ಖರೀದಿ, ಪಾಲಿಷ್ ಮಾಡಿಸಿ branded ಅಕ್ಕಿ ಹೆಸರಿನಲ್ಲಿ ಮಾರುಕಟ್ಟೆಗೆ'. ಇದರ ಬಗ್ಗೆ ಇಲಾಖೆ ಏನು ಮಾಡುತ್ತಿದೆ? ಇದು ಗೊತ್ತಿಲ್ಲವೇ? ಪ್ರಾಮಾಣಿಕ ಅಧಿಕಾರಿಗಳಿದ್ದಾರೆ ಎಂದು ಹತ್ತು ಸಲ ಹೇಳುತ್ತೇನೆ. 'ಅಕ್ಕಿ ದಂಧೆಕೋರರ ದಾಳಿಗೆ ಹೋದ ಅಧಿಕಾರಿಯ ಮೇಲೆ ಲಾರಿ ಹರಿಸಲು ಯತ್ನ, ದಾವಣಗೆರೆಯ ದೊಡ್ಡಬಾತಿಯಲ್ಲಿ ಘಟನೆ ಗೋದಾಮು ಮಾಲೀಕನ ಪುತ್ರನ ಬಂಧನ'. ಬಡವರಿಗೆ ಅಕ್ಕಿ ಸಿಗಬೇಕು ಎನ್ನುವುದು ಪ್ರಾಮಾಣಿಕ ಪ್ರಯತ್ನವಾಗಿದ್ದು, ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮಾಡುತ್ತಿವೆ. ಎಷ್ಟೆಷ್ಟು ಹಣವೆಂದು ವಿವರವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದನ್ನು ತಾವು ಹೇಳುವುದಾದರೆ ಹೇಳಿ. ಒಂದು ಕೆ.ಜಿ.ಗೆ ಕೇಂದ್ರ



ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರದಿಂದ ಬರುವ ಹಣವೆಷ್ಟು ಮತ್ತು ರಾಜ್ಯ ಸರ್ಕಾರ ಭರೊಸಿವ<ತಜ ಹಣವೆಷ್ಟು ಎಂಬುದನ್ನು ಇವರು ಹೇಳುವುದಾದರೆ ಹೇಳಲಿ, ಬಿಡುವುದಾದರೆ ಬಿಡಲಿ. ಆದರೆ ಇದು ಬಡವರಿಗೆ ಸಲ್ಲಬೇಕೆಂಬ ಕಳಕಳಿ ಇದೆ.

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿರವರೆ, ಕೇಂದ್ರ ಸರ್ಕಾರದಿಂದ ಅನೇಕ ಅನುದಾನಗಳು ರಾಜ್ಯಕ್ಕೆ ಬರುತ್ತವೆ. ಒಕ್ಕೂಟ ವ್ಯವಸ್ಥೆಯಲ್ಲಿ ಬರದೇ ಇರುವುದಿಲ್ಲ. ಆದರೆ ತಮಗೆ ಗೊತ್ತಿರುವ ರೀತಿಯಲ್ಲಿ ಅನ್ನಭಾಗ್ಯ ಯೋಜನೆಯನ್ನು ಇಡೀ ಭಾರತದಲ್ಲಿ ಕರ್ನಾಟಕ ಮಾತ್ರ ಮಾಡಿದೆ. ರಾಜ್ಯವನ್ನು ಹಸಿವುಮುಕ್ತ ಮಾಡಬೇಕೆಂದು ಈ ಯೋಜನೆಯನ್ನು ಮಾಡಿದೆ. ಬೇರೆ ಬಿ.ಜೆ.ಪಿ. ಸರ್ಕಾರಗಳು ಇದನ್ನು ಮಾಡಬಹುದಾಗಿತ್ತಲ್ಲವೇ? ಅದಕ್ಕೆ ಒಂದು ಪ್ರಶಂಸೆ ನಿಮ್ಮಿಂದ ಇಲ್ಲವೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನನ್ನ ಮಗುವಿಗೆ ಇವರು ನಮ್ಮಪ್ಪ ಎಂದು ಹೇಳಬೇಕು. ಇದು ನನ್ನ ಆಸೆಯಾಗಿದೆ. ಇನ್ನು ಇದರ ವಿವರಕ್ಕೆ ನಾನು ಹೋಗುವುದಿಲ್ಲ. ಇಲ್ಲಿ ಅಕ್ಕಿ ದಂಧೆ ಕೋರರು ಲೂಟಿ ಮಾಡುತ್ತಿದ್ದಾರೆ. ಇಲ್ಲ ಎಂದು ಹೇಳಲಿ ನೋಡೋಣ? ಇದರಲ್ಲಿ ಯಾರ್‍ಯಾರು ಪಾಲುದಾರರು? ನನಗೆ ಗೊತ್ತಿಲ್ಲ. ಇದರಲ್ಲಿ ಈ ಸರ್ಕಾರದ ಮಂತ್ರಿಗಳಿದ್ದಾರೆಯೇ? ಉನ್ನತ ಮಟ್ಟದ ಅಧಿಕಾರಿಗಳಿದ್ದಾರೆಯೇ? ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಅವರಿಗೆ ಸಂಬಂಧಿಕರೇ ಎಂಬುದು ನನಗೆ ಗೊತ್ತಿಲ್ಲ. ಲೂಟಿಯಾಗುತ್ತಿರುವುದರ ಬಗ್ಗೆ ಹೇಳುವುದಾದರೆ, ಬಡವರಿಗೆ ಸೇರಬೇಕಾದ ಅಕ್ಕಿಯನ್ನು ಲೂಟಿ ಮಾಡುತ್ತಿದ್ದಾರೆ ಎಂದರೆ ಕಣ್ಣು ಮುಚ್ಚಿಕೊಂಡು ಏಕೆ ಕುಳಿತಿದ್ದೀರಿ?

(ಮುಂದು)

(842) 20–6–2017/ 12.40/ ಡಿವಿಎಸ್–ಕೆಸ್(ಎಸ್‌ಪಿ)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

ಎಲ್ಲಿ ಮರಳು ಲೂಟಿಯಾಗುತ್ತಿದೆಯೋ, ಅಲ್ಲೂ ಪ್ರಾಮಾಣಿಕ ಅಧಿಕಾರಿಗಳಿದ್ದಾರೆ. ಅವರ ಮೇಲೂ ಲಾರಿ ಹರಿಸುವ ಪ್ರಯತ್ನ ನಡೆಸಿದ್ದರು. ಮಾನ್ಯ ಉಗ್ರಪ್ಪನವರೆ, ನಾನು ಮೈಸೂರಿಗೆ ಹೋದಂತಹ ಸಂದರ್ಭದಲ್ಲಿ ಎಸ್‌ಪಿ ಮತ್ತು ಡಿಸಿ, ಕಣ್ಣೀರು ಹಾಕಿಬಿಟ್ಟರು. ಅವರು ಹೇಳಿದರು, ನಾವು ರಾತ್ರಿ ಹನ್ನೆರಡು ಗಂಟೆ, ಒಂದು ಗಂಟೆಗೆ ಹೋಗುತ್ತೇವೆ. ಹಿಂದಗಡೆ ಮೂರ್‍ನಾಲ್ಕು ಜನ ಗೂಂಡಾಗಳು, ಮುಂದೆ ಮೂರ್‍ನಾಲ್ಕು ಜನ ಗೂಂಡಾಗಳು, ನಮಗೇನು ಗ್ರಹಚಾರವೇ? ನಮಗೆ ಹೆಂಡತಿ–ಮಕ್ಕಳು ಇಲ್ಲವೆ? ನಾವು ಏಕೆ ಸರ್ ಒದ್ದಾಡಬೇಕು ಎಂದು ಅಂತಹ ಪ್ರಾಮಾಣಿಕ ಅಧಿಕಾರಿಗಳಿಗೂ ಸರ್ಕಾರ ರಕ್ಷಣೆ ಕೊಡುವುದಿಲ್ಲವೆಂದರೆ, ಇದನ್ನು ಸರ್ಕಾರ ಎಂದು ಕರೆಯಬೇಕೆ?

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉಡುಪಿಯ ಡಿಸಿ ಮತ್ತು ಎಸಿ, ಅವರಿಗೆ ಇಬ್ಬರು ಹೆಣ್ಣುಮಕ್ಕಳು. ಶಿವಮೊಗ್ಗದಲ್ಲಿ ನನ್ನದೊಂದು 'ಮಾರಿಕಾಂಬ ಮೈಕ್ರೋ ಫೈನಾನ್ಸ್' ಎನ್ನುವ ಹಣಕಾಸು ಸಂಸ್ಥೆ ಇದೆ. ಆ ಸಂಸ್ಥೆ ಮುಖಾಂತರ ಸುಮಾರು 4,000 ಹೆಣ್ಣುಮಕ್ಕಳಿಗೆ 13 ಕೋಟಿ ರೂಪಾಯಿಯಷ್ಟು ಸಾಲ ಕೊಟ್ಟಿದ್ದೇವೆ. ಸ್ವಲ್ಪ ಲಾಭ ಬಂದಾಗ ಆ ಲಾಭವನ್ನು ಅವರಿಗೆ ಕೊಡಬೇಕೆಂದು ಅಷ್ಟೂ ಹೆಣ್ಣುಮಕ್ಕಳನ್ನು 60 ಬಸ್‌ಗಳಲ್ಲಿ ನಾನು ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದೆ. ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದಂತಹ ಸಮಯದಲ್ಲಿ ಸಮುದ್ರದ ದಡದಲ್ಲಿರುವ ದೇವಸ್ಥಾನದ ಮುರುಡೇಶ್ವರ ಐ.ಬಿ.ಯಲ್ಲಿದ್ದೆ. ಅಕಸ್ಮಾತ್ ನಾನು ಅಲ್ಲಿಗೆ ಭೇಟಿ ಕೊಟ್ಟಿದ್ದೇನೆ ಎಂದು ಗೊತ್ತಾದ ತಕ್ಷಣ Assistant Commissioner ಅವರು ಸ್ಥಳಕ್ಕೆ ಬಂದರು. ನಡೆದಿರುವ ಘಟನೆ ಏನು ಎಂದು ನಾನು ಅವರನ್ನು ಕೇಳಿದೆ. ಸರ್ ನಾನು, ಡಿಸಿ ಅನೇಕ ಬಾರಿ ನಮ್ಮ ಕಚೇರಿಯಲ್ಲಿ ಚರ್ಚೆ ಮಾಡುತ್ತಿದ್ದೆವು. ನಾಳೆ ride ಗೆ ಹೋಗೋಣ ಎಂದು. Ride ಗೆ ಹೋದಾಗ ಅವತ್ತೇನು ಇರುತ್ತಿರಲಿಲ್ಲ. ಮುಂಚೆಯೇ ಅವರಿಗೆ ಸುದ್ದಿ ತಿಳಿದಿರುತ್ತದೆ. ಲೂಟಿ ಮಾಡುತ್ತಿರುವುದು ಯಾರು ಎಂಬುದು ಇಲ್ಲಿರುವ ಪ್ರಶ್ನೆ, ಮುಂಚೆಯೇ ಅವರಿಗೆ ಸುದ್ದಿ ಹೋಗುತ್ತಿದೆ, ಲೂಟಿಯಾಗುತ್ತಿದೆ, ಈ ಸರ್ಕಾರದಲ್ಲಿ ಮರಳು, ಅಕ್ಕಿ, ಎಲ್ಲಾ ಲೂಟಿಯಾಗುತ್ತಿದೆ.

**ಶ್ರೀ ರಾಮಚಂದ್ರಗೌಡ:–** ಲೂಟಿ ಎನ್ನುವುದು ಒಂದು ವಿದ್ಯೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಎಂದು ಹೇಳುತ್ತಾರೆ. ಆದರೆ ಈಗ ಕೋಟಿ ವಿದ್ಯೆಯಲ್ಲಿ ಲೂಟಿ ವಿದ್ಯೆಯೇ ಮೇಲು ಎಂದು ಹೇಳಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾವು ಯಾರು ಏನು ಕ್ರಮ ಕೈಗೊಂಡಿಲ್ಲ ಎಂದು ಮಾನ್ಯ ಈಶ್ವರಪ್ಪನವರು ಹೇಳುವುದು ಸರಿಯಲ್ಲ. ನಾನು ಈ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿಯೂ ನಾನು ಕೆಲಸ ಮಾಡಿದ್ದೇನೆ. ಆ ಸಂದರ್ಭದಲ್ಲಿ ಲೂಟಿ ನಡೆಯುತ್ತಿರುವಂತಹ ವಿಚಾರ ಬಂದಾಗ ರಾತ್ರಿ ಒಂದು ಗಂಟೆಗೆ unarmed ಆಗಿ ಯಾರ ಸಹಾಯ, ಸಹಕಾರ ಇಲ್ಲದೆ ಪೊಲೀಸ್ ವರಿಷ್ಠಾಧಿಕಾರಿಗೂ ಹೇಳದೆ ಎಲ್ಲಿ ಘಟನೆ ನಡೆಯುತ್ತಿದೆ ಎಂದು ರಾತ್ರಿ ಒಂದು ಗಂಟೆ ಹದಿನೈದು ನಿಮಿಷಕ್ಕೆ ತಲುಪಿ ಅವರ ಎಲ್ಲಾ ಸ್ಥಿತಿಗತಿಗಳೇನಿವೆ ಎನ್ನುವುದನ್ನು ಅರ್ಥ ಮಾಡಿಕೊಂಡೆ. ಅಲ್ಲಿಗೆ ಹೋದ ನಂತರ ನಾನು ಎಸ್.ಪಿ. ಅವರಿಗೆ ಹೇಳಿದೆ. ನಾನು ಇಲ್ಲಿ ಬಂದಿದ್ದೇನೆ, ನಾನು ಹೋಗುವುದು ಗೊತ್ತಾಗಿ ನಮ್ಮ ಜಿಲ್ಲಾಧಿಕಾರಿಗಳು ಕೂಡ ತತ್‌ಕ್ಷಣವೇ ನನ್ನ ಜೊತೆಗೆ ಬಂದರು. ನಾನು ನಮ್ಮ gunman ಕೂಡ ಬಿಟ್ಟು ಹೋಗಿದ್ದೆ. ನಮ್ಮ ಸರ್ಕಾರದಲ್ಲಿ ಈ ರೀತಿಯಾದಂತಹ ಮರಳು ಅಕ್ರಮವಾಗಿ ಸಾಗಾಣಿಕೆ ಆಗುವುದನ್ನು ತಡೆಗಟ್ಟಬೇಕೆನ್ನುವ ಕಳಕಳಿಯ ಚಿಂತನೆ ಇಲ್ಲದೆ ನಾವು ಅಷ್ಟು ಹೊತ್ತಿನಲ್ಲಿ ಹೋಗಿದ್ದೇವೆಯೇ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅಕಸ್ಮಾತ್ ನಾಳೆ ತಾವು ಮಂತ್ರಿಯಾದರೆ ಇನ್ನೊಂದು ಸಲ ದಯವಿಟ್ಟು ಆ ರೀತಿ ಹೋಗಬೇಡಿ. ತಾವು ಜೀವಂತವಾಗಿರಬೇಕು, ತಾವು ಈ ರಾಜ್ಯಕ್ಕೆ ಸೇವೆ ಸಲ್ಲಿಸಬೇಕೆನ್ನುವುದು ನನ್ನ ಆಸೆ. ಖಂಡಿತವಾಗಿಯೂ ನನಗೆ ನಂಬಿಕೆ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾನು ನನ್ನ ಸಿಬ್ಬಂದಿಯನ್ನು ಬಿಟ್ಟು ಹೋಗುವುದಕ್ಕೆ ಕಾರಣವೇನೆಂದರೆ, ನಾನು ಹೇಳಿದ ನಂತರ ಮತ್ತೆ ಯಾರಿಗಾದರೂ ಆ ವಿಚಾರ leak ಆಗಬಾರದು, ಅಷ್ಟಾದರೂ ಕೂಡ ನಾವು ಹೋಗುವಂತಹ ವಿಚಾರ ಅವರಿಗೆ ಗೊತ್ತಾಗಿ ವಾಹನಗಳೆಲ್ಲಾ ಒಂದೆರಡು ಕಿಲೋಮೀಟರ್ ದೂರ ಹೋಗಿ ನಿಂತಿದ್ದವು. ಆಮೇಲೆ ಎಸ್‌ಪಿ ಬಂದರು ಮತ್ತು ಇನ್ನುಳಿದ ವ್ಯವಸ್ಥೆಗಳ ಏರ್ಪಾಡೆಲ್ಲಾ ಆಯಿತು. ನಾನು ಮೊದಲೇ ಏಕೆ ಹೇಳಲಿಲ್ಲವೆಂದರೆ ಅನಿರೀಕ್ಷಿತ ಭೇಟಿ ಕೊಡಬೇಕಾದರೆ ನಾನು ಹೋಗುತ್ತೇನೆ ಎಂದು ಹೇಳಿದರೆ ಅಲ್ಲಿ ಕಳ್ಳರು, ಕಾಕರು, ದುಷ್ಟರು, ದಗಲ್‌ಬಾಜಿ ಮಾಡುವವರು ಹುಷಾರಾಗಿ ಅಲ್ಲಿಂದ ದೂರ ಹೋಗುತ್ತಾರೆ, ಇದನ್ನು ತಪ್ಪಿಸುವ ಸಲುವಾಗಿ ಆಕಸ್ಮಿಕವಾಗಿ ರಾತ್ರಿ ಹನ್ನೆರಡೂವರೆ ಗಂಟೆಗೆ ಹೋದೆ. ನನಗೆ ಪತಿಕಾ ಮಾಧ್ಯಮ ಮಿತ್ರರು ಕೇಳಿದರು. ಆಮೇಲೆ ನಾನು ಯಾರಿಗೂ ಹೇಳಲಿಲ್ಲ. ಆದರೂ ಕೂಡ ಜಿಲ್ಲಾಧಿಕಾರಿಗಳಿಗೆ ಗೊತ್ತಾಗಿ ಜಿಲ್ಲಾಧಿಕಾರಿಗಳು ನನ್ನನ್ನು accompany ಮಾಡಿದರು. ನಾನು ಹೇಳುವ ಉದ್ದೇಶವೇನೆಂದರೆ, ಅನೀರಿಕ್ಷಿತ ಭೇಟಿ ಮಾಡಬೇಕು, ವಸ್ತುಸ್ಥಿತಿ ಏನು ನಡೆಯುತ್ತಿದೆ ಎಂದು ಅರ್ಥ ಮಾಡಿಕೊಳ್ಳಬೇಕು. ಒಬ್ಬ ಜನಪ್ರತಿನಿಧಿಯಾಗಿ ನನ್ನ ಕರ್ತವ್ಯ ಎಂದು ಹೋಗಿದ್ದೆ ಅಷ್ಟೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಅದನ್ನೇ ಹೇಳುತ್ತಿರುವುದು. ಪ್ರಾಮಾಣಿಕತೆಗೆ ಬೆಲೆ ಇದೆಯೇ? ಅವರು ಮಂತ್ರಿಯಾಗಿ ಹೋದರು, ಬಹಳ ಸಂತೋಷ. ಎಷ್ಟು ಜನ ಮಂತ್ರಿಗಳು ಆ ರೀತಿ ಹೋಗಿದ್ದಾರೆ?

**ಸಭಾಪತಿಯವರು:–** ಹಾಗೆ ಹೋಗಲೂಬಾರದು. ಅಧಿಕಾರಿಗಳ ಕೈಯಿಂದಲೇ ನಡೆಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹೋಗಬೇಕು. ಎಸ್‌ಪಿ, ಉಡುಪಿ ಡಿಸಿ, ಎಸಿ ಹೋಗಿರುವುದಕೋಸ್ಕರ ಒಂದಿಷ್ಟು ಆಯಿತು. ಶಿವಮೊಗ್ಗ ಜಿಲ್ಲಾ ಪಂಚಾಯಿತಿಯಲ್ಲಿ ಚರ್ಚೆಯಾದ ನಂತರ ಡಿಸಿ, ಎಸ್‌ಪಿ ಅವರನ್ನು ಈ ಸಭೆಗೆ ಕರೆಯಿಸಿ ಎಂದು ನಿರ್ಣಯ ಆಯಿತು. ಜಿಲ್ಲಾ ಪರಿಷತ್ ಸಭೆಯಲ್ಲಿ ಡಿಸಿ, ಎಸ್‌ಪಿ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇಷ್ಟೊಂದು ಮರಳು ಲೂಟಿಯಾಗುತ್ತಿರಬೇಕಾದರೆ ಏನು ಮಾಡುತ್ತಿದ್ದಾರೆ? ಈ ಸಭೆಗೆ ಏಕೆ ಬಂದಿಲ್ಲ, ಅವರನ್ನು ಕರೆಯಿಸಿ, ಇಲ್ಲದಿದ್ದರೆ ಅವರಿಗೆ ನೋಟಿಸ್ ಕೊಡಬೇಕೆಂದು ತೀರ್ಮಾನ ಆಯಿತು. ಇದು ಎಲ್ಲಿಗೆ ಬಂದು ನಿಂತಿದೆ? ಅವರೇನೋ ಹೇಳಿದರು ನಾನು ಹೋದೆ ಎಂದು, ಇವತ್ತು ರಾಜ್ಯದಲ್ಲಿ ಪ್ರಾಮಾಣಿಕವಾಗಿ ನಿಮ್ಮಂಥವರು ಹೋಗಿರುವವರ ಪರಿಸ್ಥಿತಿ ಏನಾಗಿದೆ ಎಂದು ಎಷ್ಟು ಉದಾಹರಣೆಗಳನ್ನು ಕೊಡಬಹುದು?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಈಶ್ವರಪ್ಪನವರು ಒಳ್ಳೆಯ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರ. ಯಾರು ಮಂತ್ರಿಗಳಿರುತ್ತಾರೆ, ಯಾವ ಸರ್ಕಾರ ಇರುತ್ತದೆ ಎನ್ನುವುದು ಮುಖ್ಯವಲ್ಲ. Ultimately, ನಮ್ಮ ವ್ಯವಸ್ಥೆಯಲ್ಲಿ Legislature and Executive ಇವರುಗಳ ಕರ್ತವ್ಯಗಳು ಸ್ಪಷ್ಟವಾಗಿವೆ. ನಾನು ಅಕ್ರಮ ಗಣಿಗಾರಿಕೆಯ ವರದಿ ಕೊಡಬೇಕಾದರೆ ದಿನಾಂಕ:16-11-2008 ರಂದು ಸಂಡೂರಿನ ಒಂದು ಜಾಗದಲ್ಲಿ ರಾತ್ರಿಯೆಲ್ಲಾ ಒಬ್ಬನೇ ಹೋಗಿ ಕುಳಿತಿದ್ದೆ. AP-16, AP-17, AP-18, AP-19 registration ಲಾರಿಗಳು ಪ್ರತಿ ದಿವಸ ಒಂದೂವರೆ ಸಾವಿರದಿಂದ ಎರಡು ಸಾವಿರ ಲಾರಿಗಳು ಅವ್ಯಾಹತವಾಗಿ ಹೋಗುತ್ತಿದ್ದವು. ಇವುಗಳನ್ನು ಯಾರು ಮಾತನಾಡಿಸುವುದಕ್ಕಾಗುತ್ತಿರಲಿಲ್ಲ. ಏಕೆ ಎಂಬುದನ್ನು ಅವರ ಅವಗಾಹನೆಗೆ ಬಿಡುತ್ತೇನೆ. ಅದೇ ರೀತಿ ಶ್ರೀ ವೈ.ಎಸ್.ರಾಜಶೇಖರ ರೆಡ್ಡಿಯವರು ನಿಧನರಾದಂತಹ ದಿವಸ ನಾನು ವಿರೋಧ ಪಕ್ಷದ ನಾಯಕನಾಗಿದ್ದೆ, ಮಾನ್ಯ ಸಿದ್ದರಾಮಯ್ಯನವರು ಕೆಳಮನೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಬಳ್ಳಾರಿಯಲ್ಲಿ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ review ಗೆ ಹೋಗುತ್ತಿದ್ದೆವು. ಅವರು ನಿಧನರಾದರು ಎಂದು ಸಭೆ ನಡೆಯಲಿಲ್ಲ. ಐ.ಬಿ.ಗೆ 13 ಅಧಿಕಾರಿಗಳು ಬಂದಾಗ, ನಾನು ಅವರಿಗೆ ಹೇಳಿದೆ ಅಧಿಕಾರಿಗಳಿಗೆ ತಮ್ಮ ಜವಾಬ್ದಾರಿ ಇದೆ. ಯಾವ ಮಂತ್ರಿಯೂ ನಿರ್ದೇಶನಗಳನ್ನು ನೀಡಬಹುದೇ ಹೊರತು ultimately who has to execute? ಯಾರು ಇದನ್ನು ನಿಯಂತ್ರಿಸುವುದಕ್ಕೆ ಸಾಧ್ಯತೆ ಇದೆ ಎಂದರೆ ನೀವುಗಳು. ಇವತ್ತೇನಾದರು ಸರ್ಕಾರ ಇದೆ ಎಂದು ನೀವೇನಾದರೂ ಈ ರೀತಿ ಮಾಡಿದರೆ ಇವತಲ್ಲ, ನಾಳೆ ಅದರ ಪ್ರತಿಫಲವನ್ನು ಅನುಭವಿಸುತ್ತೀರಿ ಎಂದು ನಾನು ಅವರಿಗೆ ಹೇಳಿದೆ. ಆಗ ಸನ್ಮಾನ್ಯ ಸಿದ್ದರಾಮಯ್ಯನವರು ನನ್ನ ಜೊತೆಯಲ್ಲಿದ್ದರು. ಅದೇ ಜನ ನಂತರದ ದಿನಗಳಲ್ಲಿ ಜೈಲಿಗೆ ಹೋಗಬೇಕಾದಂತಹ ಸಂದರ್ಭಗಳಿವೆ. ನಾನು ಏನು ಹೇಳುವುದಕ್ಕೆ ಬಯಸುತ್ತೇನೆಂದರೆ, ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ ಅವರಿಗೆ ರಕ್ಷಣೆ ಕೊಡತಕ್ಕಂಥದ್ದು ಸರ್ಕಾರದ ಜವಾಬ್ದಾರಿ. ಅದರಲ್ಲಿ ಎರಡನೆ ಮಾತಿಲ್ಲ. ಆದರೆ ಜವಾಬ್ದಾರಿಯನ್ನೇ ಮಾಡಬಾರದು ಎನ್ನುವುದು ಇದೆಯಲ್ಲಾ ರಾಜಕಾರಣಿಯಾಗಲಿ, ಮಂತ್ರಿಯಾಗಲಿ, ಶಾಸಕನಾಗಲಿ, ಅಧಿಕಾರಿಯಾಗಲಿ, ಅವರ ಜವಾಬ್ದಾರಿ ಈ ರಾಜ್ಯದ ಸಂಪತ್ತನ್ನು ಉಳಿಸುವಂಥ ಈ ರಾಜ್ಯದಲ್ಲಿ ನಡೆಯುವ ಯಾವುದೇ ಕೆಟ್ಟ ಕೆಲಸಗಳಾದರೂ ಕೂಡ ನಿಯಂತ್ರಿಸುವ ಜವಾಬ್ದಾರಿಗೋಸ್ಕರವೇ ನೌಕರರು, ಅಧಿಕಾರಿಗಳು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂಥದ್ದು. ಉಡುಪಿ ಡಿಸಿ ಅವರಿಗೆ ಪತ್ರಿಕೆಯಲ್ಲಿ ಬಂದ ತಕ್ಷಣವೇ ಮಾರನೆ ದಿವಸ ನಾನು ಫೋನ್ ಮಾಡಿದೆ. ನೋಡಮ್ಮ, ನಿಮಗೆ ಯಾವುದೇ ತೊಂದರೆ ಬಂದರೂ ಕೂಡ ನಾವುಗಳೆಲ್ಲಾ ನಿಮ್ಮ ಜೊತೆಯಲ್ಲಿದ್ದೇವೆ, ಬೇಕು ಎಂದರೆ ನಿಮ್ಮ ಜೊತೆಯಲ್ಲಿ ನಾವು ಬರುತ್ತೇವೆ ಎಂದು ಆ ಹೆಣ್ಣುಮಗಳಿಗೆ ನಾನು ಫೋನ್ ಮಾಡಿ ಹೇಳಿದೆ. ಏಕೆಂದರೆ, ಈ ರಾಜ್ಯದ ಸಂಪತ್ತನ್ನು ಉಳಿಸುವುದು ಮಂತ್ರಿಮಂಡಲ ಅಥವಾ ಶಾಸಕರ ಜವಾಬ್ದಾರಿಯಾದರೆ ಇದು ಅದಕ್ಕಿಂತ ಹೆಚ್ಚಿನ ಜವಾಬ್ದಾರಿ. ನಾವು ನೀವು ಯಾರೋ ಹೋಗಿ grant ಮಾಡುವುದಕ್ಕಾಗಿಲ್ಲ ಅಥವಾ ನಾವು ನೀವು ಹೋಗಿ case ಹಾಕುವುದಕ್ಕಾಗುವುದಿಲ್ಲ ಅಥವಾ ನಾವು ನೀವು ಹೋಗಿ ಅವರನ್ನು arrest ಮಾಡುವುದಕ್ಕಾಗುವುದಿಲ್ಲ. ವ್ಯವಸ್ಥೆ ಇದೆ. ಆ ವ್ಯವಸ್ಥೆಯಲ್ಲಿ ಕೆಲಸ ಮಾಡತಕ್ಕಂಥವರು ಅವರುಗಳೇ. ಅವರಿಗೆ ನಾನು ಆತ್ಮವಿಶ್ವಾಸವನ್ನು ತುಂಬುವಂತಹ ಕೆಲಸ ಮಾಡಬೇಕೆ ಹೊರತು ಈ ರಾಜ್ಯದಲ್ಲಿ ಕೆಲಸ ಮಾಡತಕ್ಕಂಥವರಿಗೆ ಪ್ರೋತ್ಸಾಹವೇ ಇಲ್ಲವೆಂದರೆ ಇನ್ನು ಯಾರು ಸಹ ಕೆಲಸವೆ ಮಾಡದಿದ್ದರೆ ಈ ರಾಜ್ಯದ ಸಂಪತ್ತು ಏನಾಗಬಹುದು? ನಾನು ಏನು ಹೇಳುವುದಕ್ಕೆ ಬಯಸುತ್ತೇನೆಂದರೆ, ಯಾರು ಪ್ರಾಮಾಣಿಕವಾಗಿ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ ಅವರ ಜೊತೆಯಲ್ಲಿ ಈ ಸದನ ಇರುತ್ತದೆ, ಸರ್ಕಾರ ಇರುತ್ತದೆ. ಆ ದಿಕ್ಕಿನಲ್ಲಿ ನಾವು ಚಿಂತನೆ ಮಾಡಿ ಯಾರು ಲೂಟಿಕೋರರಿದ್ದಾರೆ ಅದು ಅಕ್ರಮ ಗಣಿಗಾರಿಕೆ ಇರಬಹುದು ಅಥವಾ ಯಾವೆಲ್ಲಾ minerals ಇವೆ, ಲೂಟಿ ಮಾಡತಕ್ಕಂಥವರ ಮೇಲೆ ಕ್ರಮ ಜರುಗಿಸುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರು ಸಲಹೆ ಕೊಡುವುದು ಸೂಕ್ತ ಎಂದು ನಾನು ಭಾವಿಸಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಪ್ರಾಮಾಣಿಕ ಅಧಿಕಾರಿಗಳಿಗೆ ನಾವು ಆತ್ಮಸ್ಥೈರ್ಯ ತುಂಬಬೇಕು ಎನ್ನುವಂತಹ ಒಂದು ಮಾತನ್ನು ಮಾನ್ಯ ಉಗ್ರಪ್ಪನವರು ಹೇಳಿದರು. He is right. ಉಡುಪಿ ಡಿಸಿ ಅವರಿಗೆ ನಿಮ್ಮ ಜೊತೆಯಲ್ಲಿ ನಾವಿದ್ದೇವೆ ಎಂದು ಅವರು ಆತ್ಮಸ್ಥೈರ್ಯವನ್ನು ತುಂಬಿದ್ದಾರೆ, ಬಹಳ ಸಂತೋಷ. ಬದುಕಿದ್ದರೆ ತಾನೇ? ನಾನು ಮೈಸೂರಿಗೆ ಹೋಗಿದ್ದೆ. DC, SP, Executive Engineer, Environment Engineer ಎಲ್ಲರನ್ನು ಒಟ್ಟಿಗೆ ಕೂರಿಸಿಕೊಂಡು ಸಭೆಯನ್ನು ಮಾಡಿದೆ. ಪಾಪ, ಅವರು ಪ್ರಾಮಾಣಿಕವಾಗಿ ಹೇಳಿದರು. ಮರಳು ಪರಿಸ್ಥಿತಿ ಏನು ಎಂದು ಕೇಳಿದೆ. ಇಲ್ಲಿ ಏನು ಸಮಸ್ಯೆ ಇಲ್ಲ ಎಂದು ಹೇಳಿದರು. ಹಾಗಾದರೆ ಸಭೆಯನ್ನು ನಿಲ್ಲಿಸಿ ನನ್ನ ಜೊತೆ ಬನ್ನಿ, 10 ನಿಮಿಷದಲ್ಲಿ 400 ಲೋಡ್ ಮರಳು ಕೊಡಲಿಲ್ಲವೆಂದರೆ ನಾನು ನೀವು ಹೇಳಿದ ಹಾಗೆ ಕೇಳುತ್ತೇನೆ ಎಂದು ನಾನು ಹೇಳಿದೆ.

(ಮುಂದು)

(843) 20.06.2017/ 12.50/ ಕೆಹೆಚ್/ಕೆಎಸ್(ಎಸ್‌ಪಿ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದು)**

ಮಾನ್ಯ ಸಭಾಪತಿಯವರೆ, ಅವರು ಏನು ಹೇಳಿದರು? ಅವರು ಹೇಳಿರುವ ಮಾತು ನನ್ನ ಮನಸ್ಸಿಗೆ ನೋವನ್ನುಂಟು ಮಾಡಿತು. ಅವರು ಕೇಳಿರುವುದಕ್ಕೆ ನನ್ನ ಹತ್ತಿರ ಉತ್ತರ ಇರಲಿಲ್ಲ. ಫೋಟೋಗಳನ್ನು ತೆಗೆದುಕೊಂಡು ಟೇಬಲ್ ಮೇಲೆ ಇಟ್ಟರು. ಕಾವೇರಿ ನದಿಯು ಹರಿಯುತ್ತಿದೆ. ಕಾವೇರಿ ನದಿಯ ಹತ್ತಿರ ರಸ್ತೆಗಳು ಬರುತ್ತಿದೆ. ರಸ್ತೆ ಮುಖಾಂತರ ನೇರವಾಗಿ ಲಾರಿಯನ್ನು ಕಾವೇರಿ ನದಿಗೆ ಇಳಿಸುತ್ತಾರೆ. ಜೆ.ಸಿ.ಬಿ. ಯಂತ್ರದಿಂದ ಮರಳನ್ನು ಲಾರಿಗೆ ತುಂಬಿಸುತ್ತಾರೆ. ಹಾಗೆ ಆ ಲಾರಿ ವಾಪಸ್ಸು ಹೋಗುತ್ತದೆ. ಎಸ್.ಪಿ. ಮತ್ತು ಡಿ.ಸಿ. ಇಬ್ಬರೂ ಸೇರಿ trench ಹೊಡೆಸಬೇಕೆಂದು ತೀರ್ಮಾನ ಮಾಡಿದರು. Trench ಹೊಡೆಯುವುದಕ್ಕೆ ಕೂಲಿಯವರು ಯಾರು ಬರಲಿಲ್ಲ. ಅದಕ್ಕೆ ಪೊಲೀಸ್‌ನವರನ್ನೆ ಕರೆಯಿಸಿದೆವು. ಗೂಂಡಾಗಳನ್ನು ಬಿಟ್ಟು ಧಾಳಿಯನ್ನು ಮಾಡಿಸಿ, ಫೋಟೋಗಳನ್ನು ಇಟ್ಟರು. ಒಂದಿಷ್ಟು ಫೋಟೋಗಳನ್ನು ಸಹ ಕೊಟ್ಟರು. ಟಿ.ನರಸೀಪುರ ಭಾಗಕ್ಕೆ ನಾನು ಮತ್ತು ಎಸ್.ಪಿ. ಇಬ್ಬರು ಹೋದೆವು. ಅಲ್ಲಿಯೂ ಸಹ ಗೂಂಡಾಗಳು ನಮ್ಮ ಮೇಲೆ ಧಾಳಿ ಮಾಡುವುದಕ್ಕೆ ಬಂದರು. ನಿಮಗೆ 400 ಲೋಡ್ ಮತ್ತು 1000 ಲೋಡ್‌ಗಳನ್ನು ಕೊಡುತ್ತೇವೆಂದು ಒಂದೇ ಉತ್ತರವನ್ನು ಕೊಟ್ಟೆವು. ತಮ್ಮ ಹೆಂಡತಿ-ಮಕ್ಕಳನ್ನು ಸಾಕುವವರು ಏಕೆ ಧಾಳಿ ಮಾಡಿರುವ ಫೋಟೋಗಳನ್ನು ತೋರಿಸುತ್ತಾರೆ? ಅವರು ಪ್ರಾಮಾಣಿಕವಾದ ಉತ್ತರವನ್ನು ಕೊಡಲಿಲ್ಲ. ಈ ಫೋಟೋಗಳನ್ನು ಸದನದಲ್ಲೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಲೋಕೋಪಯೋಗಿ ಸಚಿವರ ಮುಂದೆ ತೋರಿಸಿದೆ. ಮಾನ್ಯ ಸಭಾಪತಿಯವರ ಮುಖಾಂತರ ಈ ಫೋಟೋಗಳನ್ನು ಕಳುಹಿಸಿದೆ. ಇದರ ಬಗ್ಗೆ ಮಧ್ಯಾಹ್ನ ನಿಮ್ಮ ಬಿ.ಜೆ.ಪಿ.ಯ ಕಾರ್ಯಕರ್ತರನ್ನು ಮೀಟಿಂಗ್‌ಗೆ ಕರೆದುಕೊಂಡು ಹೋಗಿದ್ದಿರಿ ಈ ರೀತಿ ಇನ್ನು ಏನೇನೋ ಉತ್ತರವನ್ನು ಕೊಡುತ್ತಾರೆ. ಮಾನ್ಯ ಉಗ್ರಪ್ಪನವರೆ, ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಅಧಿಕಾರಕ್ಕೆ ಯಾರು ಶಾಶ್ವತರಲ್ಲ. ಮಾನ್ಯ ಉಗ್ರಪ್ಪನವರೆ, ಆತ್ಮಸ್ಥೈರ್ಯ ತುಂಬಬೇಕೆಂದು ಹೇಳಿದ್ದು ನಿಜ. ನಾಗಮಂಗಲ ವಿಭಾಗಕ್ಕೆ ಹೊಸದಾಗಿ ಸವಿತಾ ಎಂಬುವವರು DySP ಆಗಿ ಬಂದಿರುವ ವಿಷಯವನ್ನು ಪತ್ರಿಕೆಯಲ್ಲಿ ಓದಿದೆ. ಆ DySP ಯವರು ಅಕ್ರಮವಾಗಿ ಮರಳು ಸಾಗಣೆಯಾಗುತ್ತಿದ್ದಂತಹ ಜಾಗಕ್ಕೆ ಹೋಗಿ ಲಾರಿಯನ್ನು ಅಡ್ಡಗಟ್ಟಿದಾಗ ಲಾರಿ ಚಾಲಕ ಅವರ ಮೇಲೆಯೇ ಲಾರಿಯನ್ನು ಚಲಾಯಿಸುವುದಕ್ಕೆ ಹೊರಟಿದ್ದನ್ನು ಗಮನಿಸಿದ ಅವರು ಇನ್ನು youngster ಆಗಿದ್ದರಿಂದ ತಕ್ಷಣ ಪಕ್ಕಕ್ಕೆ ಹಾರಿ ಅಪಾಯದಿಂದ ತಪ್ಪಿಸಿಕೊಂಡರು. ವಯಸ್ಸಾದವರಾಗಿದ್ದರೆ ಅವರನ್ನು ದೇವರೇ ಕಾಪಾಡಬೇಕಾಗಿತ್ತು. ಅವರಿಗೆ ಯಾವ ರೀತಿಯ ಆತ್ಮಸ್ಥೈರ್ಯವನ್ನು ತುಂಬುವುದು? ಮಾನ್ಯ ಸದಸ್ಯರು ಆತ್ಮಸ್ಥೈರ್ಯದ ಬಗ್ಗೆ ಏಕೆ ಹೇಳಿದರು? ಮಾನ್ಯ ಉಗ್ರಪ್ಪನವರೆ, ಯಾರನ್ನು ಬಂಧಿಸುತ್ತಾರೆ? ಮರಳನ್ನು ಹಮಾಲಿ ಕೆಲಸ ಮಾಡಿ ತುಂಬುತ್ತಾರೆಯಲ್ಲವೇ, ಅವರನ್ನು ಬಂಧಿಸಿದ್ದೇವೆ. ಲಾರಿ ಡ್ರೈವರ್, ಕ್ಲೀನರ್‌ನ್ನು ಬಂಧಿಸಿದ್ದೇವೆ. ಅವರು ಪಾಪಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರದೇಶಿಗಳು, ತಿನ್ನುವುದಕ್ಕೂ ಇರುವುದಿಲ್ಲ. ಅವರು ಕೂಲಿಗೋಸ್ಕರ ಹೋಗುತ್ತಾರೆ. ಅವರನ್ನು ಬಂಧಿಸಿ ಪ್ರಯೋಜನವೇನು? ಮತ್ತೆ ಯಾರನ್ನು ಬಂಧಿಸಬೇಕೆಂದರೆ, ಯಾರು ಇದರ ಹಿಂದೆ ರಾಜಕಾರಣಿಗಳಿದ್ದಾರೆ, ದೊಡ್ಡ–ದೊಡ್ಡ ಕುಳಗಳಿವೆ ಅವರನ್ನು ಕಂಡುಹಿಡಿಯಬೇಕು. ಒಂದು ಬಲಿ ಹಾಕಿದರೆ, ತಾನಾಗಿಯೇ ಸರಿಹೋಗುತ್ತದೆ. ಮಾನ್ಯ ಸದಸ್ಯರು ಇದರ ಬಗ್ಗೆ ಸಲಹೆ ಕೊಡಬೇಕು ಎಂದು ಕೇಳಿದರು. ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ತನಿಖೆಯನ್ನು ಮಾಡಿ, ಸಿಗುತ್ತಾರೆ ಎಂದು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವಂತಹ ಅನ್ನಭಾಗ್ಯದ ಅಕ್ಕಿ ಲೂಟಿಯಾಗುತ್ತಿದೆ. ಇದರ ಬಗ್ಗೆ ಒಂದು ತನಿಖೆಯನ್ನು ಮಾಡುವ ಶಕ್ತಿ ನಿಮಗೆ ಇದೆ. "ಅಕ್ಕಿ ದಂಧೆಕೋರರು", "ಅನ್ನಭಾಗ್ಯ ಅಕ್ಕಿಗೆ ಕನ್ನ", ಎಂಬುದು ಪತ್ರಿಕೆಯಲ್ಲಿ ಬಂದಿರುವುದನ್ನು ಓದುವುದಕ್ಕೆ ನಾವು ಬಂದಿರುವುದೇ? ಪತ್ರಿಕೆಯಲ್ಲಿ ಬಂದಿರುವುದನ್ನು ತೋರಿಸುವುದಕ್ಕೋಸ್ಕರ ನಾವು ಇರುವುದೇ? ಅಕ್ಕಿ ಲೂಟಿಯಾಗುತ್ತಿರುವುದನ್ನು ತಡೆಯಬೇಕಾಗಿರುವುದು ಸರ್ಕಾರದ ಕರ್ತವ್ಯವಲ್ಲವೇ? ಪೂರ್ಣ ಸಹಕಾರವನ್ನು ಕೊಡುವುದಕ್ಕೆ ನಾವು ತಯಾರಿದ್ದೇವೆ. ಮಾನ್ಯ ಸದಸ್ಯರು ಬಳ್ಳಾರಿಗೆ ಹೋಗಿದ್ದೆ ಎಂದು ಹೇಳಿದರು, ಬಹಳ ಸಂತೋಷ. ಜೀವವನ್ನು ಒತ್ತೆಯಾಗಿಟ್ಟುಕೊಂಡು ಎಷ್ಟು ಜನ ಹೋಗುತ್ತಾರೆ. ಮನೆಯಲ್ಲಿ ಹೆಂಡತಿ–ಮಕ್ಕಳಿಗೆ ನಾನು ಪುನಃ ಮನೆಗೆ ಬರುತ್ತೇನೆಯೋ, ಇಲ್ಲವೋ ಗೊತ್ತಿಲ್ಲ ಎಂದು ಹೇಳಿ ಹೋಗಬೇಕಲ್ಲವೇ? ಮಾನ್ಯ ಎಸ್.ಆರ್.ಪಾಟೀಲ್‌ರವರು ಮತ್ತು ಮಾನ್ಯ ಉಗ್ರಪ್ಪನವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸಚಿವರು ಎಷ್ಟು ಜನ ಹೋಗಿದ್ದಾರೆ? ಗೂಟದ ಕಾರನ್ನು ಕೊಡುವುದಿಲ್ಲವೇ? ಮುಂದೆ Pilot, ಹಿಂದೆ Escort ಅನ್ನು ಕೊಡುತ್ತಾರೆ. ಇವೆಲ್ಲ ಏಕೆ ಕೊಡುತ್ತಾರೆ? ಹೆಂಡತಿ–ಮಕ್ಕಳನ್ನು ಕರೆದುಕೊಂಡು ಮಜಾ ಮಾಡುವುದಕ್ಕೆ ಕೊಡುತ್ತಾರೆಯೇ? ಸರ್ಕಾರದ ಅನ್ನವನ್ನು ತಿನ್ನುತ್ತಿದ್ದೇನೆಂದು ಸ್ವಾಭಿಮಾನ ಬೇಕಲ್ಲವೇ? ಸರ್ಕಾರದಿಂದ ಸಂಬಳವನ್ನು ಕೊಡುತ್ತಿದ್ದಾರೆ. ಎಲ್ಲಾ ಶಾಸಕರಿಗಿಂತಲೂ ಹೆಚ್ಚು ಸಂಬಳವನ್ನು ಕೊಡುತ್ತಾರೆ. ಎಲ್ಲ ರೀತಿಯ ಸೌಲಭ್ಯಗಳನ್ನು ಕೊಡುತ್ತಾರೆ, Building ಗಳನ್ನು ಕೊಡುತ್ತಾರೆ, Air Conditioned Rooms ಗಳನ್ನು ಕೊಡುತ್ತಾರೆ. ಇವೆಲ್ಲ ಏಕೆ ಕೊಡುತ್ತಾರೆ? ಪತ್ರಿಕೆಗಳನ್ನು ಓದುವುದಕ್ಕೆ ಕೊಡುತ್ತಾರೆಯೇ? ಪತ್ರಿಕೆಯವರು ಸಹ ತಮ್ಮ ಪ್ರಾಣವನ್ನು ಒತ್ತೆಯಿಟ್ಟು ಬರೆಯುತ್ತಾರೆ. ಅವರ ಜೀವಕ್ಕೆ ರಕ್ಷಣೆ ಕೊಡುವವರು ಯಾರು? ಅದಕ್ಕೆ ನಾನು ಹೇಳುತ್ತಿರುವುದು. ನನ್ನ ಗಮನಕ್ಕೆ ಬಂದ ವಿಷಯಗಳನ್ನು ನಾನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇನೆ. ಅಕ್ಕಿ ಲೂಟಿಯಾಗುತ್ತಿದೆ, ಎಷ್ಟೆಷ್ಟು ಅಕ್ಕಿ ಲೋಡ್‌ಗಳು ಹೋಗುತ್ತಿದೆ ಎಂಬುದು ಗೊತ್ತಿಲ್ಲ. ಬಡವರಿಗೆ ತಲುಪಬೇಕಾದಂತಹ ಅಕ್ಕಿ ಲೂಟಿಯಾಗುತ್ತಿದ್ದರೂ ಆ ಬಗ್ಗೆ ಕ್ರಮ ಕೈಗೊಳ್ಳುವುದಿಲ್ಲವೆಂದರೆ, ಸರ್ಕಾರದವರಿಗೆ ಯಾವ ಭಾಷೆಯಲ್ಲಿ ಹೇಳಬೇಕು. ಬಡವರು ತಿನ್ನಲು ಅನ್ನವಿಲ್ಲದೆ ಸಾಯಬೇಕೆ? ನಾನು ಈ ವಿಚಾರದಲ್ಲಿ ಬಹಳ ಕಠಿಣವಾಗಿ ಮಾತನಾಡಿರಬಹುದು, ಹಿರಿಯ ಸದಸ್ಯರಾದ ಮಾನ್ಯ ರಾಮಚಂದ್ರಗೌಡರು ಇದನ್ನು ತಪ್ಪು ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಲೂಟಿಕೋರರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆಲ್ಲಾ ಅರ್ಥವಾಗುವುದು ಯಾವಾಗ? ಕೇಂದ್ರದಿಂದ ವಿಶೇಷವಾಗಿ ಬಂದಿರುವಂತಹ ಅಕ್ಕಿ ರಾಜ್ಯದಲ್ಲಿ ಲೂಟಿಯಾಗುತ್ತಿದೆ. ಇದರ ಬಗ್ಗೆ ದಯವಿಟ್ಟು ಒಂದು ತನಿಖೆಯನ್ನು ಮಾಡಿ ಕ್ರಮ ತೆಗೆದುಕೊಳ್ಳುವುದು, ಬಿಡುವುದು ನಂತರದ ಪ್ರಶ್ನೆ. ಪ್ರಾಮಾಣಿಕ ಅಧಿಕಾರಿಗಳಿದ್ದಾರೆ, ಎಲ್ಲ ಅಧಿಕಾರಿಗಳು ಕೂಡ ಭ್ರಷ್ಟರು ಎಂದು ತಿಳಿದುಕೊಳ್ಳಬೇಡಿ. ಪ್ರಾಮಾಣಿಕ ಅಧಿಕಾರಿಗಳನ್ನು ಹುಡುಕಿ ಒಂದು ಸಮಿತಿಯನ್ನು ಮಾಡಿ. ಅನ್ನಭಾಗ್ಯದ ಅಕ್ಕಿ, ಕೇಂದ್ರ ಸರ್ಕಾರದಿಂದ ಬರುತ್ತಿರುವಂತಹ ಅಕ್ಕಿಯನ್ನು ಏನು ಲೂಟಿ ಮಾಡುತ್ತಿದ್ದಾರೆ, ಇದನ್ನು ತನಿಖೆ ಮಾಡಿ ತಪ್ಪಿತಸ್ಥರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ಸರ್ಕಾರ ತೀರ್ಮಾನ ಮಾಡಬೇಕು ಮತ್ತು ಆ ಬಗ್ಗೆ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಉದ್ಯೋಗ ಖಾತ್ರಿಯ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಗಮನಿಸಬೇಕು. ಯಾದಗಿರಿ ಜಿಲ್ಲೆಯಲ್ಲಿ ಒಂದು ಕೆರೆಯ ಹೂಳು ತೆಗೆಯುತ್ತಿದ್ದಾರೆ. ಆ ಸ್ಥಳಕ್ಕೆ ಮಾನ್ಯ ಮುಖ್ಯಮಂತ್ರಿಯವರು inspection ಗೆ ಹೋದರು. ಮಾನ್ಯ ಮುಖ್ಯಮಂತ್ರಿಯವರು inspection ಗೆ ಬರುತ್ತಾರೆಂದು ಗೊತ್ತಿತ್ತು. ಕೂಲಿಯವರು ತುಂಬಾ ಜನ ಕೆಲಸದಲ್ಲಿ ತೊಡಗಿದ್ದರು. 4 ದಿನಗಳು ಕಳೆದ ಮೇಲೆ ಕೆರೆಯ ಹೂಳು ತೆಗೆಯುವ ಕೆಲಸ ನಡೆಯುತ್ತಿದೆ ಎಂಬ ಸುದ್ದಿ ನನಗೆ ತಿಳಿಯಿತು. ಯಾವ ರೀತಿ ಕೆಲಸ ನಡೆಯುತ್ತಿದೆ ಎಂದು ತಿಳಿದುಕೊಳ್ಳಲು ತಕ್ಷಣ ಆ ಸ್ಥಳಕ್ಕೆ ಭೇಟಿ ನೀಡಬೇಕೆಂದು ನಿರ್ಧರಿಸಿದೆ. ಮಾನ್ಯ ರೇವಣ್ಣನವರೆ ಬೆಳಿಗ್ಗೆ ಸುಮಾರು 11 ಗಂಟೆಗೆ ತೀರ್ಮಾನ ಮಾಡಿ, ಮಧ್ಯಾಹ್ನ 2 ಗಂಟೆಗೆ ಆ ಸ್ಥಳಕ್ಕೆ ಹೋದೆ. ಮಾನ್ಯ ಕಾಗೋಡು ತಿಮ್ಮಪ್ಪನವರೆ ನಾನು ಹೇಳುವುದನ್ನು ಕೇಳಿದರೆ ಆಶ್ಚರ್ಯಪಡುತ್ತೀರಿ. ಸುಮಾರು 100 ರಿಂದ 150 ಜನ ಹೆಣ್ಣು ಮಕ್ಕಳು ಅವಸರದಿಂದ ಕೆಲಸವನ್ನು ಮಾಡುತ್ತಿದ್ದರು. ಆ ಹೆಣ್ಣು ಮಕ್ಕಳನ್ನು ಯಾವತ್ತಿನಿಂದ ಕೆಲಸವನ್ನು ಮಾಡುತ್ತಿದ್ದೀರೆಂದು ಕೇಳಿದೆ. 4 ದಿನಗಳ ಕೆಳಗೆ ದೊಡ್ಡ ಸಾಹೇಬರು ಬರುತ್ತಾರೆಂದು ಹೇಳಿದರು. ಆಗ ಕೆಲಸವನ್ನು ಮಾಡಿಕೊಂಡು ಹೋದೆವು. ನೆನ್ನೆ ಮತ್ತು ಮೊನ್ನೆಯ ದಿವಸ ಕೆಲಸ ಇರಲಿಲ್ಲ. ಇವತ್ತಿನ ದಿವಸ ಚಿಕ್ಕ ಸಾಹೇಬರು ಬರುತ್ತಿದ್ದಾರೆ. ನೀವು ಬರಬೇಕೆಂದು ಹೇಳಿದರು. ಅದಕ್ಕೆ ಈಗ ಬಂದಿದ್ದೇವೆಂದು ಹೇಳಿದರು. ಕೆರೆಯ ಕೆಲಸಕ್ಕೆ 4 ದಿನಗಳ ಕೆಳಗೆ ದೊಡ್ಡ ಸಾಹೇಬರು ಕೂಲಿ ಕೆಲಸಕ್ಕೆ ಕರೆದುಕೊಂಡು ಬಂದರು. ಇವತ್ತಿನ ದಿವಸ ಚಿಕ್ಕ ಸಾಹೇಬರು ಬರುತ್ತಿದ್ದಾರೆಂದು ಮುಗ್ಧ ಹೆಣ್ಣು ಮಕ್ಕಳನ್ನು ಕೂಲಿ ಕೆಲಸಕ್ಕೆ ಕರೆದುಕೊಂಡು ಬಂದಿದ್ದಾರೆ. ಆ ಹೆಣ್ಣು ಮಕ್ಕಳನ್ನು ಒಂದು ದಿನಕ್ಕೆ ಎಷ್ಟು ದುಡ್ಡು ಕೊಡುತ್ತಿದ್ದಾರೆಂದು ನಾನು ಕೇಳಿದೆ. ಮಾನ್ಯ ರಾಮಚಂದ್ರಗೌಡರೆ, ಹೊಟ್ಟೆ ಉರಿ ಎಂಬ ಅಂಶಕ್ಕೆ ಈ ವಿಷಯವನ್ನು ಹೇಳುತ್ತಿರುವುದು. ಸ್ವಾಭಾವಿಕವಾಗಿ ಆ ಹೆಣ್ಣು ಮಕ್ಕಳಿಗೆ ಒಂದು ದಿನದ ಕೂಲಿ 241 ರೂಪಾಯಿಗಳು. ಆ ಹೆಣ್ಣು ಮಕ್ಕಳಿಗೆ ಎಷ್ಟು ಕೂಲಿಯನ್ನು ಕೊಡುತ್ತಿದ್ದಾರೆಂದು ಕೇಳಿದಕ್ಕೆ, ಆ ಹೆಣ್ಣು ಮಕ್ಕಳು ನಮ್ಮ ಹತ್ತಿರ ಸಹಿಯನ್ನು ಮಾಡಿಸಿಕೊಂಡು, ದಿನಕ್ಕೆ 100 ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ ಎಂದು ಹೇಳಿದರು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ಕಾಗೋಡು ತಿಮ್ಮಪ್ಪನವರೆ, ತಾವು ಹಿರಿಯರಿದ್ದೀರಿ. ಎಲ್ಲಿ ತಿನ್ನಬೇಕು, ಯಾವುದರಲ್ಲಿ ತಿನ್ನಬೇಕು. ಇದು ಆ ಹೆಣ್ಣುಮಕ್ಕಳನ್ನು ಪಶುಗಳಿಗಿಂತಲೂ ಕೀಳಾಗಿ ನೋಡುವಂತಹ ಒಂದು ಮನಃಸ್ಥಿತಿಯಾಗಿದ್ದು, ಈ ರೀತಿಯ ಒಂದು ಪರಿಸ್ಥಿತಿ ನಡೆಯುತ್ತಿದೆ. ಉದ್ಯೋಗ ಬಯಸುವಂತಹ ಪ್ರತಿಯೊಬ್ಬರಿಗೂ ಕೂಡ ಬೇಸಿಗೆಯಲ್ಲಿ ಕನಿಷ್ಠ 100 ರಿಂದ 150 ದುಡಿಮೆಯ ದಿನ ಸಿಗಬೇಕೆಂದು ಇಂತಹ ಕಾಮಗಾರಿಗಳನ್ನು ನಡೆಸಲಾಗುತ್ತಿದೆಯಲ್ಲವೇ, ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಿ, ಆ ದಿಕ್ಕಿನಲ್ಲಿ ಏನೇನು ಪ್ರಯತ್ನಗಳನ್ನು ಮಾಡಬೇಕೆಂಬ ಬಗ್ಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಒಂದು ದಿನಕ್ಕೆ 100 ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವೇ ಇಲ್ಲ. National Rural Employment Guarantee Act (NREGA) ಅಡಿಯಲ್ಲಿ ಕೆಲಸ ಮಾಡುವಂತಹವರಿಗೆ ಹಣವು direct ಆಗಿ ಅವರ account ಗೆ transfer ಆಗುತ್ತದೆ. Real Time Gross Settlement (RTGS) ಮುಖೇನ ಕೆಲಸ ಮಾಡುವಂತಹವರ ಖಾತೆಗೆ ಹಣ ವರ್ಗಾವಣೆಯಾಗುತ್ತದೆ. ಕೆಲಸ ಮಾಡುವವರು ಹಾಜರಾತಿಯನ್ನು ಹಾಕುತ್ತಾರೆ. ಹಾಜರಾತಿಯ ಮೂಲಕ ಎನ್.ಎಂ.ಆರ್. generate ಆದ ತಕ್ಷಣ computer ನಲ್ಲಿ automatic ಆಗಿ Aadhar Card ಗೆ link ಆಗಿರುತ್ತದೆ. 241 ರೂಪಾಯಿಗಳು ಅವರವರ ಖಾತೆಗೆ ಜಮೆಯಾಗುತ್ತದೆ. ಆದ್ದರಿಂದ 100 ರೂಪಾಯಿಗಳನ್ನು ಪಾವತಿ ಮಾಡುವುದಕ್ಕೆ ಸಾಧ್ಯವಿಲ್ಲ. ಬೇರೆ ಉದ್ಯೋಗ ಯೋಜನೆಯಲ್ಲಿ ಈ ರೀತಿಯಲ್ಲಿ ಆಗುತ್ತಿರಬಹುದು. ಅದು NREGA ಆಗಿರುವುದಕ್ಕೆ ಸಾಧ್ಯವೇ ಇಲ್ಲವೆನಿಸುತ್ತದೆ. ಏಕೆಂದರೆ NREGA ಯೋಜನೆಯಲ್ಲಿ ಕೈಗೆ ಹಣವನ್ನು ಕೊಡುವುದಕ್ಕೆ ಸಾಧ್ಯವೇ ಇಲ್ಲ. ಕೆಲಸ ಮಾಡುವವರಿಗೆ RTGS ಮುಖೇನ ಅವರವರ ಖಾತೆಗೆ ಹಣ ಜಮೆಯಾಗುತ್ತದೆ. ಆದ್ದರಿಂದ ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು ಎನ್ನುವ ಕಾರಣಕ್ಕಾಗಿ ನಾನು ಈ ವಿಚಾರವನ್ನು ಸ್ಪಷ್ಟಪಡಿಸುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಗಮನಕ್ಕಾಗಿ ಇದರ ಬಗ್ಗೆ ಮತ್ತಷ್ಟು ವಿವರವಾಗಿ ಹೇಳುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, NREGA ಯೋಜನೆಯೋ ಅಥವಾ ಬೇರೆ ಯಾವ ಯೋಜನೆಯೋ ಗೊತ್ತಿಲ್ಲ. ಕೂಲಿ ಕೊಡುವುದಕ್ಕೆ ಮುಂಚೆ ಬೆಂಗಳೂರಿನಲ್ಲೆ ದೊಡ್ಡ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಬಾವುಟ ಇದೆ. ಆ ಬಾವುಟದ ಹತ್ತಿರ ರಾಯಚೂರಿನಿಂದ ಬಂದ ಕೂಲಿಗಾರರಿಗೆ 150 ರೂಪಾಯಿಗಳನ್ನು ಕೊಟ್ಟು ಕೆಲಸವನ್ನು ಮಾಡಿಸುತ್ತಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರು NREGA ಎಂದು ಹೇಳುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ರಾಮಚಂದ್ರಗೌಡರ ಮಾತನ್ನು ಒಪ್ಪುತ್ತೇವೆ. NREGA ಯೋಜನೆ ಬೆಂಗಳೂರಿಗೆ ಬರುವುದಿಲ್ಲ. ಮಾನ್ಯ ಸದಸ್ಯರು NREGA ಯೋಜನೆಯ ಬಗ್ಗೆ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರು NREGA ಎಂದು ಹೇಳಲಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ದೊಡ್ಡ ಸಾಹೇಬರು ಮತ್ತು ಚಿಕ್ಕ ಸಾಹೇಬರು ಎಂದು ಹೇಳುತ್ತಿದ್ದಾರೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, NREGA ಯೋಜನೆಯಲ್ಲಿ ಕೆಲಸಗಾರರಿಗೆ 100 ರೂಪಾಯಿಗಳನ್ನು ಕೊಡಲಾಗುತ್ತಿದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಯಾದಗಿರಿ ಜಿಲ್ಲೆಯಲ್ಲಿ NREGA ಯೋಜನೆಯ ಕೆಲಸಗಾರರಿಗೆ ದಿನಕ್ಕೆ 100 ರೂಪಾಯಿಗಳನ್ನು ಕೊಡುತ್ತಿರುವುದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಹೌದು. NREGA ಬಗ್ಗೆ ಹೇಳುತ್ತಿರುವುದು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ಯಾದಗಿರಿ ಜಿಲ್ಲೆಯಲ್ಲಿ NREGA ಯೋಜನೆ ಬರುವುದಿಲ್ಲ.

**ಸಭಾಪತಿಯರು:–** ಮಾನ್ಯ ರಾಮಚಂದ್ರಗೌಡರೆ, ಮಾನ್ಯ ರೇವಣ್ಣನವರು ಏನು ಹೇಳುತ್ತಾರೆಂದು ಕೇಳೋಣ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, NREGA ಯೋಜನೆ ಯಾದಗಿರಿ ಜಿಲ್ಲೆಯಲ್ಲಿ ಬರುವುದಿಲ್ಲ.

(ಮುಂದು)

844/20-6-2017/1-00/bkp-gr

**ಶ್ರೀ ಕೆ.ಎಸ್.ಈಶ್ವರಪ್ಪ:–** ಶ್ರೀಯುತ ರವಿಯವರು ಇಲ್ಲಿ ಪ್ರಸ್ತಾಪ ಮಾಡುತ್ತಿರುವಂತಹ ಅಂಶ ಗೋವಿನ ಮೇವಿಗೆ ಸಂಬಂಧಿಸಿದ್ದಾಗಿರಬಹುದು, ನರೇಗಾ ಯೋಜನೆ ಇರಬಹುದು ಅದರಲ್ಲಿ ನಾನು ಪ್ರಸ್ತಾಪಿಸಿರುವಂತಹ ಅಂಶಗಳಲ್ಲಿ ಯಾವುದಾರೊಂದು ವ್ಯತ್ಯಾಸವಾಗಿದ್ದರೂ ಸಹ ನಾನು ಒಂದು ನಿಮಿಷ ಕೂಡ ಈ ಸ್ಥಾನದಲ್ಲಿ ಕೂರುವುದಿಲ್ಲ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಒಂದು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ. ಏತಕ್ಕೆ ಸುಮ್ಮನೆ ಎದ್ದು ನಿಲ್ಲುತ್ತೀರಿ? ನೀವು ಕೇಳುತ್ತಿರುವ ಅಂಶದ ಬಗ್ಗೆ ನನಗೆ ಗೊತ್ತಿಲ್ಲವೇ? ಆ ಹೆಣ್ಣು ಮಕ್ಕಳನ್ನು ಕರೆದು, ದಿನಕ್ಕೆ 100 ರೂಪಾಯಿಗಳನ್ನು ಕೂಲಿ ಎಂದು ಯಾವ ರೂಪದಲ್ಲಿ ಕೊಡುತ್ತಾರೆ ಎಂದಾಗ, ಅವರು "ಸ್ವಾಮಿ, ನಮ್ಮ ಹತ್ತಿರ ಸಹಿ ತೆಗೆದುಕೊಳ್ಳುತ್ತಿದ್ದಾರೆ, ಅದರಲ್ಲೂ ಅಲ್ಲಿ ಅತಿ ಹೆಚ್ಚು ಎಂದರೆ ಹೆಬ್ಬೆಟ್ಟು ಮೂಲಕ. ಅವರು ಚೆಕ್ ಮೇಲೆ ಸಹಿ ತೆಗೆದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ.

(ಗೊಂದಲ)

**ಶ್ರೀ ಎಸ್.ರವಿ:–** ಯಾರಿಗೂ ಚೆಕ್ ಕೊಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರನ್ನು ಕುಳಿತುಕೊಳ್ಳಲಿಕ್ಕೆ ಹೇಳಿ. ಮಾನ್ಯ ಸದಸ್ಯರು ನಾನು ಹೇಳುವುದನ್ನು ಪೂರ್ಣವಾಗಿ ಕೇಳಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ರವಿಯವರೇ, ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆಂದು ಪೂರ್ಣವಾಗಿ ಕೇಳಿಸಿಕೊಳ್ಳಿ. ನಂತರ ನೀವು ನಿಮ್ಮ ಅಭಿಪ್ರಾಯವನ್ನು ಹೇಳಿ.

**ಶ್ರೀ ಹೆಚ್.ಎಂ.ರೇವಣ್ಣ:-** ವಿರೋಧ ಪಕ್ಷದ ನಾಯಕರು ಆಪಾದನೆ ಮಾಡುತ್ತಿದ್ದಾರೆ. ಆದರೆ, ಹಿರಿಯ ಸದಸ್ಯರಾದ ಮಾನ್ಯ ರಾಮಚಂದ್ರಗೌಡರವರು ಅವರಿಗೆ ಹೇಳಬೇಕು.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಪ್ಪು ಮಾಹಿತಿ ನೀಡುತ್ತಿದ್ದಾರೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ ಬಗ್ಗೆ 10 ಬಾರಿ ಬೇಕಾದರೂ ಹೇಳುತ್ತೇನೆ. ಇವತ್ತು ಒಂದು ತೀರ್ಮಾನ ಮಾಡಿಬಿಡಿ. ಈಗ ಶ್ರೀಯುತ ರೇವಣ್ಣನವರು, ಶ್ರೀಯುತ ರವಿ ರವರು ಮತ್ತು ನಾನು ಮೂವರು ಸೇರಿ ಆ ಸ್ಥಳಕ್ಕೆ ಭೇಟಿ ನೀಡೋಣ. ಆ ಕೆರೆ ಏನೂ ವಿದೇಶದಲ್ಲಿಲ್ಲ; ವಿದೇಶಕ್ಕೆ ಬೇಕಾದರೂ ಹೋಗಿ ಬರಬಹುದು. ನಾನು ಅಲ್ಲಿಗೆ ಯಾವಾಗ ಹೋಗಿದ್ದೆ ಎನ್ನುವುದರ ಬಗ್ಗೆ ನಮ್ಮ ಕಚೇರಿಯಲ್ಲಿರುವ ಟಿ.ಪಿ.ಯಲ್ಲಿ ಮಾಹಿತಿ ಸಿಗುತ್ತದೆ. ಅಲ್ಲಿಗೆ ಹೋಗಿ, ಆಗ ಅಲ್ಲಿ ಯಾರ್ಯಾರು ಕೂಲಿ ಕೆಲಸವನ್ನು ಮಾಡಿದ್ದರು ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಏನೂ ಕಷ್ಟವಾಗುವುದಿಲ್ಲ. ನಾವೇ ಮೂರು ಜನರು ನೋಡಿಕೊಂಡು ಬರೋಣ. ಬೇರೆ ಯಾರೂ ತನಿಖೆ ಮಾಡುವುದು ಬೇಡ. ಆಲ್ಲಿ ಕೂಲಿಗೆ ಬರುತ್ತಿರುವ ಹೆಣ್ಣುಮಕ್ಕಳನ್ನು ಕರೆಸೋಣ. ಎಷ್ಟು ಕೊಡುತ್ತಿದ್ದಾರೆ, ಎಲ್ಲೆಲ್ಲಿ ಸಹಿ ತೆಗೆದುಕೊಳ್ಳುತ್ತಿದ್ದಾರೆಂದು ಅವರನ್ನು ಕೇಳಿ ತಿಳಿದುಕೊಳ್ಳೋಣ. ಅವರು ನಮಗೆ 100 ರೂಪಾಯಿಗಳನ್ನು ಕೊಡುತ್ತಿಲ್ಲ, ಅದಕ್ಕೂ ಹೆಚ್ಚಿನ ಕೂಲಿಯನ್ನು ಕೊಡುತ್ತಿದ್ದಾರೆಂದು ಹೇಳಿದರೆ... ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ.

(ಗೊಂದಲ)

**ಶ್ರೀ ಹೆಚ್.ಎಂ. ರೇವಣ್ಣ:-** ನರೇಗಾದಲ್ಲಿಯೇ ಆಗಿದ್ದರೆ ನಾವು ಬರುತ್ತೇವೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸೋಮಣ್ಣ ಮ. ಬೇವಿನಮರದ:-** ಸನ್ಮಾನ್ಯ ಸಭಾಪತಿಯವರೆ, ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅಲ್ಲಿ 100 ರೂಪಾಯಿ ಕೊಡುತ್ತಿದ್ದಾರೆಯೋ ಅಥವಾ ಎಷ್ಟು ಕೊಡುತ್ತಿದ್ದಾರೆಂದು ತೀರ್ಮಾನವಾಗಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಯುತ ಕೆ.ಎಸ್.ಈಶ್ವರಪ್ಪನವರು ಆ ಒಂದು ಸ್ಥಾನದಲ್ಲಿ ಇರಬೇಕೆನ್ನುವುದು ನಮ್ಮ ಭಾವನೆಯಾಗಿದೆ. ಆದರೆ ಅವರು ಸವಾಲ್ ಬೇರೆ ಹಾಕುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ತಾವು ತಪ್ಪು ತಿಳಿದುಕೊಳ್ಳಬೇಡಿ. ಅದು ಸವಾಲ್ ಅಲ್ಲ. ನಡೆದಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ತಮ್ಮನ್ನೂ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದೆ. ಇದು ಸವಾಲ್ ಅಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇಡೀ ದೇಶವ್ಯಾಪಿ ಇರುವಂತಹ ಅತ್ಯಂತ ಜನಪರವಾಗಿರುವಂತಹ ಆ ಕಾರ್ಯಕ್ರಮವನ್ನು ನಮ್ಮ ಯುಪಿಎ ಸರ್ಕಾರ ಪ್ರಾರಂಭ ಮಾಡಿರುವುದಾಗಿದೆ. ಸುಮಾರು 41 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಇದಕ್ಕೆ ವೆಚ್ಚ ಮಾಡುತ್ತಿದೆ. ಅದಕ್ಕೆ ಒಂದು ಪ್ರತ್ಯೇಕವಾದ ಆಕ್ಟ್ ಮಾಡಿದ್ದಾರೆ. ಯಾರಾದರೂ ಅದರ ವಿರುದ್ಧವಾಗಿ ನಡೆದುಕೊಂಡರೆ ಜೈಲಿಗೆ ಹೋಗಬೇಕೆಂದು ಇದೆ. ಹೀಗಾಗಿ, ತಾವು ದಯಮಾಡಿ, ಯಾವ ಒಂದು ಹಳ್ಳಿಗೆ ಹೋಗಿದ್ದೀರಿ ಎಂಬುದನ್ನು ಇಲ್ಲಿ ಡಿಕ್ಲೇರ್ ಮಾಡಿ. ಒಂದು ಸಮಿತಿ ಮಾಡಿಕೊಂಡು ಅಲ್ಲಿಗೆ ಹೋಗೋಣ. ನಾವೆಲ್ಲರೂ ಅದಕ್ಕೆ ಸಿದ್ಧರಿದ್ದೇವೆ. ಯಾರಾದರೂ ಹಾಗೆ ಮಾಡಿದ್ದರೆ ಅವರ ಮೇಲೆ ಕಾನೂನು ರೀತಿಯಲ್ಲಿ ಯಾವ ಕ್ರಮವನ್ನು ಜರುಗಿಸಲಿಕ್ಕೆ ಸಾಧ್ಯತೆ ಇದೆ, ಆ ಕ್ರಮವನ್ನು ಜರುಗಿಸಲೇ ಬೇಕಾಗುತ್ತದೆ. ಅದನ್ನು ಯಾರೋ ಮುಲಾಜಿಗೆ ಮಾಡುವಂತಹದ್ದಲ್ಲ. ಅದು ಕಾನೂನಿನಲ್ಲಿಯೇ ಇದೆ. ಆದ್ದರಿಂದ, ಕಾನೂನಿನಲ್ಲಿ ಇರುವಂತಹದ್ದು ಸ್ಪಷ್ಟ ಇದೆ. ಯಾವ ಅಧಿಕಾರಿಯೂ ಸಹ ಇದೇ ರೀತಿ ಮಾಡಬೇಕು, ಆ ರೀತಿ ಮಾಡಲಿಲ್ಲವೆಂದರೆ, ಅದು ಅಪರಾಧವೆಂದು ಪರಿಗಣಿಸಬೇಕೆಂದು ಹೇಳಿ ಆ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಂನ ಆಕ್ಟ್‌ನಲ್ಲಿದೆ. ಆದ್ದರಿಂದ, ಅದು ಯಾವ ಸ್ಥಳವೆಂದು ದಯಮಾಡಿ ಹೇಳಿ, ನಾಳೆಯೇ ಹೋಗೋಣ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಅದರ ಬಗ್ಗೆ ಸರ್ಕಾರ ಏನು ಹೇಳುತ್ತದೆ, ನೋಡೋಣ.

**ಶ್ರೀ ಹೆಚ್.ಎಂ.ರೇವಣ್ಣ:-** ರಾಮನಗರ ಜಿಲ್ಲೆಯಲ್ಲಿ ಈ ವಿಷಯವಾಗಿ ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಜಗಳ ಮಾಡಿದ್ದೇವೆ. ಅತಿ ಹೆಚ್ಚು ಕೆಲಸ ರಾಮನಗರ ಜಿಲ್ಲೆಯಲ್ಲಿ ನಡೆದಿದೆ.

(ಗೊಂದಲ)

**ಸಭಾಪತಿಯವರು:-** ಈಗ ವಿರೋಧ ಪಕ್ಷದ ನಾಯಕರು ರಾಮನಗರ ಜಿಲ್ಲೆಯ ಬಗ್ಗೆ ಹೇಳುತ್ತಿಲ್ಲ, ಅವರು ಯಾವುದೋ ಬೇರೆಯದನ್ನು ಹೇಳುತ್ತಿದ್ದಾರೆ. ಅಲ್ಲಿ ನೋಡಿದ್ದನ್ನು ಅವರು ಹೇಳುತ್ತಿದ್ದಾರೆ. ಅದರ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಸರ್ಕಾರ ಹೇಳಬೇಕು. ಅದನ್ನು ನೀವು ಮತ್ತು ನಾನು ಹೇಳಲಿಕ್ಕೆ ಬರುವುದಿಲ್ಲ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಹೆಸರುಗಳನ್ನು ಹೇಳಿ, ಅಲ್ಲಿಗೆ ಹೋಗೋಣವೆಂದು ಹೇಳಿದ್ದಾರೆ. ಅದರ ಬಗ್ಗೆ ತೀರ್ಮಾನ ಆಗಬೇಕಾಗಿರುವುದರಿಂದ ಅದನ್ನು ಮಾಡಿ ನಂತರ ಮುಂದಕ್ಕೆ ಹೋಗೋಣ.

**ಶ್ರೀ ಎಂ.ಆರ್.ಸೀತಾರಾಂ(ಯೋಜನೆ, ಅಂಕಿ-ಅಂಶಗಳು, ಐಟಿ, ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಆಯಿತು; ಒಂದು ಸಣ್ಣ ಸಮಿತಿ ಮಾಡಿ, ಅಲ್ಲಿ ತನಿಖೆಗೆ ಕಳುಹಿಸೋಣ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ನಮ್ಮ ನಾಯಕರಾದ ಸನ್ಮಾನ್ಯ ಈಶ್ವರಪ್ಪ ಸಾಹೇಬರು ಏನು ಹೇಳಿದ್ದಾರೆಂದರೆ, ಇದೇ ಹಾವೇರಿ ಜಿಲ್ಲೆಯೊಳಗೆ ಎರಡು ಬಾರಿ ಬರಗಾಲ ಅಧ್ಯಯನಕ್ಕೆ ಉಪ ಸಮಿತಿಯ ಎಲ್ಲಾ ಸದಸ್ಯರುಗಳು ಬಂದಿದ್ದರು. ಅವರು ಬರುತ್ತಾರೆಂದು ಹೇಳಿ, ಹಿಂದಿನ ದಿವಸವೇ ಎಲ್ಲರಿಗೂ ಮಾಹಿತಿ ಹೋಗುತ್ತದೆ. ಮರುದಿವಸ ಮುಂಜಾನೆ ಅವರು ಬಂದಾಗ ಎಲ್ಲಾ ಕೆರೆ ಕಟ್ಟೆಗಳಲ್ಲಿ ಕೆಲಸಗಳು ಆಗುತ್ತವೆ. ನಾವು ಹೋಗಿದ್ದೇವೆ, ಮಂತ್ರಿಗಳು ಬಂದಿದ್ದಾರೆ, ನೋಡಿದ್ದಾರೆ...

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳುವಷ್ಟು ಪುರುಸೊತ್ತು ಸಹ ಇವರಿಗೆ ಇಲ್ಲವೇ? ಅಲ್ಲಿ ವಾಸ್ತವಾಂಶ ಏನಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಇದು ಹೌದೋ–ಅಲ್ಲವೋ ಎನ್ನುವ ಬಗ್ಗೆ ತನಿಖೆ ಮಾಡಿಸಿ, ಯಾರು ಬೇಡವೆಂದು ಹೇಳುತ್ತಾರೆ. ಅವರು ಬಂದಾಗ ಕೆಲಸ ಮಾಡುವುದು ಸತ್ಯ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು 100% ಸತ್ಯ. ಮಾನ್ಯ ಸಚಿವರು ಬಂದಂತಹ ಸಮಯದಲ್ಲಿ ಮತ್ತು ಅದರ ಮರುದಿವಸ ಹಾಗೂ ಅದರ ಮರುದಿವಸ ನಿನ್ನೆ ಏನು ಕೆಲಸ ಕಾರ್ಯಗಳನ್ನು ಅವರು ಮಾಡಿದ್ದರು, ಅದೇ ಅಕೌಂಟ್ ಅನ್ನು ಅಲ್ಲಿಯ ಒಬ್ಬ ಏಜೆಂಟ್ ಏನಿರುತ್ತಾನೆ ಆತ ಕೆಲಸ ಮಾಡುವವರ ಹೆಸರು, ಅವರ ರೇಷನ್ ಕಾರ್ಡ್, ಅವರ ಇನ್ನಿತರ ಮಾಹಿತಿಗಳಾದ ಅಕೌಂಟ್ ನಂಬರ್, ಎಟಿಎಂ ಕಾರ್ಡ್ ನಂಬರ್ ...

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೆ, ...

**ಶ್ರೀ ಸೋಮಣ್ಣ ಮ. ಬೇವಿನಮರದ:–** ಶ್ರೀಯುತ ರೇವಣ್ಣನವರೆ, ನಾನು ಹೇಳುವುದನ್ನು ಪೂರ್ಣವಾಗಿ ಕೇಳಿ. ನಾವು ಸತ್ಯ ಸಂಗತಿಯನ್ನು ಹೇಳುತ್ತಿದ್ದೇನೆ. ಬೇಕಾದರೆ ಇದರ ಬಗ್ಗೆ ತನಿಖೆ ಮಾಡಿಸಿ. ಅದನ್ನು ಬಿಟ್ಟು ಹೀಗೆ ಏತಕ್ಕೆ ಮಾತನಾಡುತ್ತೀರಿ? ಕುಳಿತುಕೊಂಡು ಸಮಾಧಾನದಿಂದ ನಾನು ಹೇಳುವುದನ್ನು ಕೇಳಿ.

(ಗೊಂದಲ)

**ಸಭಾಪತಿಯವರು:–** ಶ್ರೀಯುತ ಸೋಮಣ್ಣನವರು ಮಾತನಾಡುತ್ತಿದ್ದಾರೆ, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಸೋಮಣ್ಣನವರೆ, ತಾವು ಬೇಗ ಮುಗಿಸಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ನಮ್ಮನ್ನು ಕುಳಿತುಕೊಳ್ಳಲು ಹೇಳಲು ಸೋಮಣ್ಣನವರು ಯಾರು? ಸದನ ಸರಿಯಾಗಿ ನಡೆಯಬೇಕು.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಸೋಮಣ್ಣ ಮ. ಬೇವಿನಮರದ:-** ಸ್ವಲ್ಪ ತಡೆಯಿರಿ. ವಿಚಾರದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಹೆಚ್.ಎಂ. ರೇವಣ್ಣ:-** ನಮಗೆ ಆರ್ಡರ್ ಮಾಡಬೇಡಿ, ಧಮಕಿ ಹಾಕಬೇಡಿ.

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಶ್ರೀಯುತ ಸೋಮಣ್ಣನವರು ಮುಗಿಸಲಿ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಸನ್ಮಾನ್ಯ ಸಭಾಪತಿಯವರೆ, "ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ" ಎನ್ನುವಂತಹ ಒಂದು ಗಾದೆ ಮಾತಿದೆ.

**ಶ್ರೀ ಐವನ್ ಡಿ'ಸೋಜಾ:-** ಕಳ್ಳರು ಯಾರು ಅಂತ ನಿಮಗೆ ಗೊತ್ತೇ? ವಿಚಾರಣೆ ಮಾಡೋಣ.

(ಗೊಂದಲ)

**ಶ್ರೀ ಸೋಮಣ್ಣ ಮ. ಬೇವಿನಮರದ:-** ನಾನು ಹೇಳುವಂತಹ ವಿಷಯವನ್ನು ಕೇಳಿ. ಈ ರೀತಿ ಅಲ್ಲಿಯ ಏಜೆಂಟ್ ಎಲ್ಲಾ ಮಾಹಿತಿಯನ್ನು ಸಂಗ್ರಹ ಮಾಡಿಕೊಂಡು ಬಂದು ಬ್ಯಾಂಕ್‌ಗೆ ತಂದಿಟ್ಟುಕೊಳ್ಳುತ್ತಾನೆ. ಅಲ್ಲಿ ಚೆಕ್ ಬುಕ್‌ಗಳನ್ನು ಇಟ್ಟುಕೊಳ್ಳುತ್ತಾನೆ. ಇದೆಲ್ಲದರ ಬಗ್ಗೆ ಅವರು ಹೇಳುವುದು ಸತ್ಯ ಇದೆ. ಆರ್‌ಟಿಜಿಎಸ್ ಮಾಡುತ್ತಾರೆ, ಕೂಲಿ ಆಳನ್ನು ಹಚ್ಚುತ್ತಾರೆ. ಇದೆಲ್ಲವೂ ಸತ್ಯ. ಆದರೆ, ಮರುದಿವಸ 100 ಆಳು, 200 ಆಳು, 300 ಆಳು ಎಂದು ಏನು ಇರುತ್ತವೆ, ಇದು ಏಜೆಂಟರ್‌ಗಳೇ ಸೃಷ್ಟಿ ಮಾಡಿಕೊಳ್ಳುವಂಥದ್ದು. ಆ ಆಳುಗಳಿಗೆ 100 ರೂಪಾಯಿಗಳ ಪಗಾರ ಏತಕ್ಕೆ ಕೊಡುತ್ತಾರೆಂದರೆ, ಕೇವಲ ಸಹಿ ಮಾಡುವುದಕ್ಕೆ. ಬರಿ ಸಹಿ ಮಾಡುವುದಕ್ಕೆ 100 ರೂಪಾಯಿಗಳು. ಇದರ ಬಗ್ಗೆ ಬೇಕಾದರೆ ಒಂದು ಸಮಿತಿ ಮಾಡಲಿ. ಎಲ್ಲೆಲ್ಲಿ ನಡೆದಿದೆ ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ. ಬೇಕಾದರೆ ಹಾವೇರಿ ಜಿಲ್ಲೆಗೆ ವಿಚಾರಣೆಗೆ ಹಾಕಲಿ. ಅದಕ್ಕೆ ಸಂಬಂಧಪಟ್ಟಂತೆ ನಾನೇ ಮುಂದಾಳತ್ವ ತೆಗೆದುಕೊಂಡು ಎಲ್ಲೆಲ್ಲಿ ನಡೆದಿದೆ ಎನ್ನುವುದನ್ನು ತೋರಿಸುತ್ತೇನೆ, ಆ ಏಜೆಂಟ್ ಯಾರು ಎನ್ನುವುದನ್ನು ಹುಡುಕಿಸಿ ಪತ್ತೆ ಹಚ್ಚಲಿ, ಅಂದೇ ಅವರನ್ನು ಶಿಕ್ಷೆಗೆ ಗುರಿಪಡಿಸುತ್ತಾರೆಯೇ ಎನ್ನುವುದರ ಬಗ್ಗೆ ಸರ್ಕಾರ ಸದನಕ್ಕೆ ಉತ್ತರ ಕೊಡಬೇಕಾಗುತ್ತದೆ. ಈ ರೀತಿಯಾಗಿ ಆದಂಥದ್ದು, ಯಾವ ಜಿಲ್ಲೆಗಳಲ್ಲಿಯೂ, ಯಾವ ಕೆರೆಕಟ್ಟೆಗಳಲ್ಲಿ, ಯಾವ ರಸ್ತೆಗಳಲ್ಲಿ ಆಗಿದೆ ಎನ್ನುವುದನ್ನು ತನಿಖೆ ಮಾಡಿ ಅವರನ್ನು ಶಿಕ್ಷೆಗೆ ಗುರಿಪಡಿಸುತ್ತಾರೆಯೇ

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎನ್ನುವುದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ಅಥವಾ ಸರ್ಕಾರ ಉತ್ತರ ಕೊಡಬೇಕು. ಒಂದು ಸಮಿತಿಯನ್ನು ರಚನೆ ಮಾಡಿ, ಅದನ್ನು ವಿಚಾರಣೆಗಾಗಿ ಅಲ್ಲಿಗೆ ಕಳುಹಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ. ಈ ರೀತಿ ಕೋಟ್ಯಂತರ ರೂಪಾಯಿಗಳನ್ನು ನಡುವೆ ಏಜೆಂಟರ್ ಹೊಡೆದಿರುವುದನ್ನು ಸರ್ಕಾರ ಪತ್ತೆ ಹಚ್ಚಬೇಕು. ಇಂತಹ ಊರಿನಲ್ಲಿ ಈ ರೀತಿ ನಡೆದಿದೆ ಎಂದು ನಾವು ಮಾಹಿತಿಯನ್ನು ಕೊಡಬೇಕೆ? ಅದಕ್ಕೆ ಸರ್ಕಾರ ಇದೆ. ಸರ್ಕಾರ ಸಮಿತಿಯನ್ನು ರಚನೆ ಮಾಡಲಿ. ಪೊಲೀಸ್‌ನವರು ಸಿಐಡಿಯವರು ಇದ್ದಾರೆ, ಇದನ್ನು ತನಿಖೆ ಮಾಡಲಿ. ಯಾರು ತಪ್ಪಿತಸ್ಥರಿದ್ದಾರೆ ಅವರನ್ನು ಹಿಡಿದು ಜೈಲಿಗೆ ಹಾಕಲಿ. ಅದನ್ನು ಬಿಟ್ಟು, ನಿರ್ದಿಷ್ಟವಾಗಿ ಅಂತಹವುಗಳು ಯಾವುದಾದರೂ ಇದ್ದರೆ ನಮ್ಮ ಗಮನಕ್ಕೆ ತನ್ನಿ ಎಂದು ಇವರು ಪದೇ ಪದೇ ನಮ್ಮನ್ನೇ ಕೇಳುತ್ತಾರೆ.

ಸವಣೂರು ತಾಲ್ಲೂಕಿನಲ್ಲಿ ನಡೆದ ಕೆಡಿಪಿ ಮೀಟಿಂಗ್‌ನಲ್ಲಿ ಸನ್ಮಾನ್ಯ ಸದಸ್ಯರಾದ ಬೊಮ್ಮಾಯಿಯವರು, ನಾನು ಜೊತೆಗೆ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ ಸದಸ್ಯರುಗಳು, ಮತ್ತು ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು. ನಾನೇ ಸ್ವತಃ ಸವಣೂರು ತಾಲ್ಲೂಕಿನ ಸಾವೂರು ಎನ್ನುವ ಗ್ರಾಮಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ಅಂಗನವಾಡಿ ಮಕ್ಕಳಿಗೆ ಎಂತಹ ಆಹಾರವನ್ನು ಕೊಡುತ್ತಿದ್ದರೆಂದರೆ, ಅದನ್ನು ನೋಡುವುದಕ್ಕಾಗಲಿಲ್ಲ. ಜೊತೆಗೆ ತೂಕ ಮತ್ತು ಅಳತೆಯಲ್ಲಿಯೂ ವ್ಯತ್ಯಾಸಗಳಿದ್ದವು. 1 ಕಿಲೋ ಎಂದರೆ, ಅದರಲ್ಲಿ 800 ರಿಂದ 900 ಗ್ರಾಂ ಪದಾರ್ಥವಷ್ಟೇ ಇರುತ್ತದೆ. ಅದರ ಬಗ್ಗೆ ನಾನು ಆ ಸಂದರ್ಭದಲ್ಲಿ ಏನನ್ನೂ ಮಾತನಾಡಲಿಕ್ಕೆ ಹೋಗಲಿಲ್ಲ. ಸಹಜವಾಗಿ 'ಹೌದು, ಬಿಡಮ್ಮಾ, ನೀವು ಬಂದಿರುವುದನ್ನು ಕೊಡುತ್ತೀರಿ, ನಾನು ಏತಕ್ಕೆ ಅದರ ಬಗ್ಗೆ ಚರ್ಚೆ ಮಾಡಲಿ' ಎಂದು ಹೇಳಿ...

(ಗೊಂದಲ)

ನಾನು ಹೇಳುವುದನ್ನು ಕೇಳಿ. ಅದು ಸರಿಯೋ ತಪ್ಪೋ ಎನ್ನುವುದನ್ನು ಹೇಳಿ. ಏತಕ್ಕೆ ನೀವು ಈ ರೀತಿ ಮಾಡುತ್ತೀರಿ? ಸಮಾಧಾನದಿಂದ ಕೇಳಿ. ಕೆಡಿಪಿ ಸಭೆಯನ್ನು ಏತಕ್ಕೆ ಇಟ್ಟಿರುತ್ತೀರಿ; ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಇಟ್ಟಿರುತ್ತೀರಿ ಅಲ್ಲವೆ? ಯೋಜನೆಗಳನ್ನು ಸಮರ್ಪಕವಾಗಿ ಮುಗಿಸಬೇಕೆಂದು ಸಭೆಯನ್ನು ಕರೆದಿರುತ್ತೀರಿ. ತಪ್ಪಾಗಿದ್ದರೆ ಸರಿಪಡಿಸಿ ಎಂದು ನಾನು ಅದನ್ನೇ ಹೇಳುತ್ತಿದ್ದೇನೆ. ಇಲ್ಲವೆಂದರೆ, ಅವರು ಸರಿಯಾಗಿಯೇ ಕೆಲಸ ಮಾಡಿದ್ದಾರೆ, ನೀವು ಹೇಳುತ್ತಿರುವುದು ಸುಳ್ಳು ಎಂದು ಹೇಳಿ. ನಾನು ಅಲ್ಲಿ ಕೇಳಿದಾಗ ಏನಾಯಿತು ಎಂದರೆ, ಸಿಡಿಪಿಓ ರವರು ಇದ್ದರು. ಎಲ್ಲಾ ಇಲಾಖಾವಾರು ಚರ್ಚೆ ನಡೆದಿತ್ತು. ಸಿಡಿಪಿಓ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರವರಿಗೆ ಕೇಳಿದೆವು. ಸವಣೂರು ತಾಲ್ಲೂಕಿನಲ್ಲಿ ಸಿಡಿಪಿಓ ಆಗಿ ಒಬ್ಬ ಮಹಿಳಾ ನೌಕರರು ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಪಕ್ಷದ ಎಲ್ಲಾ ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರುಗಳು, ಜೊತೆಗೆ ನಾಮನಿರ್ದೇಶಿತ ಸದಸ್ಯರು...

**ಸಭಾಪತಿಯವರು:-** ನೀವು ವಿಷಯಕ್ಕೆ ಬನ್ನಿ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, "ಸಂಪೂರ್ಣವಾಗಿ ಎಷ್ಟು ಪರ್ಸೆಂಟ್ ಕಳಪೆ ಇರುತ್ತದೆ ಎಂದು ನಾನೇ ಅವರನ್ನು ಕೇಳಿದ್ದೇನೆ. ಬೇಕಾದರೆ, ಅಂದಿನ ಸಭೆಯ ನಡವಳಿಗಳ ದಾಖಲೆಯನ್ನು ತರಿಸಿಕೊಡುತ್ತೇನೆ. 70% ವೇಸ್ಟೇಜ್ ಬರುತ್ತದೆ ಎಂದವರು ಹೇಳಿದರು. 'ಏನಮ್ಮಾ, 70% ವೆಸ್ಟೇಜ್ ಬಂದರೆ ಅಂತಹ ಆಹಾರವನ್ನು ಮಕ್ಕಳಿಗೆ ಹೇಗೆ ಕೊಡಲಿಕ್ಕೆ ಸಾಧ್ಯ' ಎಂದು ಪ್ರಶ್ನಿಸಿದಾಗ 'ಇಲ್ಲಾ ಸರ್, ನಾವು ಅದನ್ನೇ ಅಡ್ಜೆಸ್ಟ್ ಮಾಡುತ್ತೇವೆ' ಎಂದರು. "ಏನಮ್ಮಾ, ನೀನು ಲೂಟಿಕೋರರ ಪರವಾಗಿ ಇದ್ದೀಯಾ? ನೀನು ಹೀಗೆ ಇದೆ ಎಂದು ನಮಗೆ ತಿಳಿಸಮ್ಮಾ, ನಿನ್ನ ನೌಕರಿಗೆ ತೊಂದರೆಯಾಗುವುದಿಲ್ಲ, ಅದನ್ನು ಸರಿಪಡಿಸಲಿಕ್ಕೆ ಯಾರಿಗೆ ಬೇಕೋ ಅವರಿಗೆ ಮಾತನಾಡುತ್ತೇವೆ' ಎಂದು ಅವರಿಗೆ ಹೇಳಿದೆವು. ಅದರೂ ಸಹ ಆ ತಾಯಿ ಹೆದರಿಕೊಂಡು, ಆ ಗುತ್ತಿಗೆದಾರರ ಪರವಾಗಿ ಹೇಳಿದರೆ ಹೊರತು... ಈ ವಿಷಯವನ್ನು ತಾಲ್ಲೂಕು ಅಧಿಕಾರಿಗಳ ಸಮಕ್ಷಮ, ಅಲ್ಲಿಯ ಕೆಡಿಪಿ ಅಧ್ಯಕ್ಷರ ಸಮಕ್ಷಮ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸದಸ್ಯರೆಲ್ಲರ ಸಮಕ್ಷಮ ಮಾತನಾಡಿದ್ದೇನೆ. ಅದಕ್ಕೆ ನನ್ನ ವಿನಂತಿ ಏನೆಂದರೆ, ಏಜೆಂಟ್ ಎಂದು ಏನು ಬಿಟ್ಟಿದ್ದಾರೆ, ಆ ಎಜೆಂಟ್‌ರಿಗೆ ಶಿಕ್ಷೆ ಕೊಡಿಸೋಣ. ಆದರೂ ಕೂಡ ಮಾನ್ಯ ಸದಸ್ಯರಾದ ಉಗ್ರಪ್ಪರವರು ಆಗಲೇ ಮಾತನಾಡುತ್ತಿದ್ದ ಸಂದರ್ಭದಲ್ಲಿ ನಾವು ಅವರ...

**(ಮುಂದು)**

(845) 20.06.2017 ಎಸ್‌ಪಿಆರ್/ಜಿಆರ್ 1:10

**ಸಭಾಪತಿಯವರು:-** ಅವರ ಬಗ್ಗೆ ಏಕೆ, ... ಅವರು ಸರ್ಕಾರದ ಪರವಾಗಿ ಹೇಳುತ್ತಾರೆ.

**ಶ್ರೀ ಸೋಮಣ್ಣ ಮ.ಬೇವಿನಮರದ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರು ಸರ್ಕಾರದ ಪರವಾಗಿ ಅಲ್ಲ ...

**ಸಭಾಪತಿಯವರು:-** ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೆ, ಅವರು ಸದನದ ಹಿರಿಯ ಸದಸ್ಯರಾಗಿ ಒಳ್ಳೆಯ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಾನು ಈ ಹಿಂದೆಯೂ ಮಾತನಾಡಿದ್ದೇನೆ. ಹಾವೇರಿ ಜಿಲ್ಲೆಯಲ್ಲಿ ತುಂಗಭದ್ರಾ ಮತ್ತು ವರದಾ ನದಿಗಳಿಂದ ಪ್ರತಿನಿತ್ಯ ಸುಮಾರು 300–400 ಲಾರಿಗಳು ಬೆಂಗಳೂರು ನಗರಕ್ಕೆ ಮರಳನ್ನು ಸಾಗಣೆ ಮಾಡುತ್ತಿವೆ. ಪ್ರಭಾವಿ ನಾಯಕರುಗಳಿಗೆ ಒಂದು ಲಾರಿಯಿಂದ 2000 ರಿಂದ 2500 ರೂಪಾಯಿಗಳಷ್ಟು ಹಣ ಸಂದಾಯವಾಗುತ್ತಿದೆ. ಬೇಕಾದರೆ ಇಲ್ಲಿರುವಂತಹ ಸದಸ್ಯರ ಪೈಕಿ ಯಾರಾದರೊಬ್ಬರು ಕದ್ದು–ಮುಚ್ಚಿ ಅಲ್ಲಿಗೆ ಹೋಗಿ ಮರಳನ್ನು ಸಾಗಿಸುವುದನ್ನು ವೀಡಿಯೋ ಮಾಡಿಕೊಂಡು ಬಂದು ಸದನಕ್ಕೆ ಕೊಡಲಿ. ನಾನೂ ಕೂಡ ಅವರೊಂದಿಗೆ ಅಲ್ಲಿಗೆ ಹೋಗುತ್ತೇನೆ. ಪ್ರತಿನಿತ್ಯ ಮರಳು ಸಾಗಾಣಿಕೆ ಆಗುತ್ತಿದೆಯೋ ಅಥವಾ ಇಲ್ಲವೋ ಎಂಬುದನ್ನು ಪರೀಕ್ಷಿಸಲಿ. ಪರೀಕ್ಷೆಯಾದ ನಂತರ ಅಂತಹ ಕೆಲಸವನ್ನು ಮಾಡುತ್ತಿರುವವರನ್ನು ಹಿಡಿದು ಶಿಕ್ಷಿಸಲಿ ಎನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ವಿಚಾರವಾಗಿ ಒಂದು ಸಮಿತಿಯನ್ನು ರಚಿಸಿ, ಹಾವೇರಿ ಜಿಲ್ಲೆಗೆ ಕಳುಹಿಸಿ. ಮಾನ್ಯ ಹಿರಿಯ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ ಹಾಗೂ ಅವರು ಅನುಭವಸ್ಥರಾಗಿದ್ದಾರೆ. ಒಂದು ಸಮಿತಿಯನ್ನು ರಚಿಸಿ ಅದನ್ನು ಒಮ್ಮೆ ಹಾವೇರಿ ಜಿಲ್ಲೆಗೆ ಕಳುಹಿಸಿಕೊಡಿ. ಸದರಿಯವರು ಚೆನ್ನಾಗಿ ಇಸ್ತ್ರಿ ಮಾಡಿದ ಬಟ್ಟೆಗಳನ್ನು ತೊಟ್ಟುಕೊಂಡು ಬರುವುದು ಬೇಡ. ಅವರು ಸಾಧಾರಣವಾದ ಬಟ್ಟೆಯನ್ನು ತೊಟ್ಟು ರೈತನ ಅಥವಾ ಕೂಲಿ ಕಾರ್ಮಿಕರ ರೂಪದಲ್ಲಿ ಅಲ್ಲಿಗೆ ಬರಲಿ. ನಾನೂ ಕೂಡ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ನಾನು ಅಲ್ಲಿಗೆ ಬಂದರೆ ಅಲ್ಲಿನ ಜನರು ನನ್ನನ್ನು ಗುರ್ತಿಸುತ್ತಾರೆ. ನಾನು ಎರಡು–ಮೂರು ಬಾರಿ ಅಲ್ಲಿನ ಜಿಲ್ಲಾಧ್ಯಕ್ಷನಾಗಿ ಕೆಲಸವನ್ನು ಮಾಡಿದ್ದೇನೆ. ಇದಕ್ಕಾಗಿ ನಾನು ಯಾರಾದರೊಬ್ಬರನ್ನು ಕಳುಹಿಸಿ ಕೊಡುತ್ತೇನೆ. ನಿಮ್ಮಲ್ಲಿನ ಯಾರಾದರೊಬ್ಬರು ತನಿಖೆಯನ್ನು ಮಾಡಲಿ. ಅಲ್ಲಿನ ವಾಸ್ತವಾಂಶಗಳನ್ನು ಪರಿಶೀಲಿಸಿ ಅಲ್ಲಿನ ವಿಚಾರಗಳು ಸರಿಯಿದ್ದರೆ ಹೌದು ಎಂದು ಹೇಳಿ, ಒಂದು ವೇಳೆ ತಪ್ಪಿದ್ದರೆ ಸಮಸ್ಯೆಯ ಕುರಿತಾಗಿ ಈ ಸದನಕ್ಕೆ ತಪ್ಪು ಮಾಹಿತಿಯನ್ನು ನೀಡಿದ್ದಾರೆಂದು ನನಗೆ ಶಿಕ್ಷೆಯನ್ನು ಕೊಡಿ, ಅದನ್ನು ನಾನು ಅನುಭವಿಸುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

**ಶ್ರೀ ಎ.ಮಂಜು(ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಎನ್.ಆರ್.ಇ.ಜಿ. ಬಗ್ಗೆ ಗುರುತರವಾದಂತಹ ಒಂದು ಆಪಾದನೆಯನ್ನು ಮಾಡಿದ್ದಾರೆ. ಕೇವಲ 100 ರೂಪಾಯಿಗಳನ್ನು ಕೊಟ್ಟು ಸಹಿ ಮಾಡಿಸಿಕೊಂಡು ಅವರಿಂದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ ಎಂಬುದಾಗಿ ಹೇಳಿರುತ್ತಾರೆ. ಅವರೊಬ್ಬ ಹಿರಿಯ ಸದಸ್ಯರಾಗಿದ್ದು ಮಂತ್ರಿಗಳಾಗಿ ಸಹ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಕೆಲಸಗಳನ್ನು ಮಾಡಿದ್ದಾರೆ. ಯಾವ ಕೆರೆಯ ಕಾಮಗಾರಿಯಯೀ ರೀತಿ ಆಗಿದೆ ಎನ್ನುವ ವಿಚಾರವನ್ನು ಹೇಳಿದರೆ, ...

**ಸಭಾಪತಿಯವರು:–** ಅವರು ಮಾಹಿತಿಯನ್ನು ಕೊಡುವುದಾಗಿ ಹೇಳಿದ್ದಾರೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ದಯವಿಟ್ಟು ಅವರು ಮಾಹಿತಿಯನ್ನು ಕೊಟ್ಟರೆ ಈ ಸಂಬಂಧ ಒಂದು ಸಮಿತಿಯನ್ನು ರಚನೆ ಮಾಡಿ ಕೆಲಸವನ್ನು ಮಾಡುವುದಕ್ಕೆ ಸರ್ಕಾರವು ಮುಂದಾಗುತ್ತದೆ. ದಯಮಾಡಿ ಮಾಹಿತಿಯನ್ನು ಕೊಟ್ಟರೆ ತನಿಖೆ ನಡೆಸಲಾಗುತ್ತದೆ. **(ಗೊಂದಲ)** ನಾನೂ ಒಬ್ಬ ಶಾಸಕನಾಗಿ, ಮಂತ್ರಿಯಾಗಿದ್ದೇನೆ. ಯಾವುದೇ ಕಾರಣದಿಂದ ಎನ್.ಆರ್.ಇ.ಜಿ. ಅಥವಾ ಬೇರೆ ಯಾವುದೇ ಯೋಜನೆ ಆಗಿರಲಿ, ಬೇರೆಯವರು ಹಣವನ್ನು ತೆಗೆದುಕೊಳ್ಳುವುದಕ್ಕೆ ಯಾರೂ ಬಿಡುವುದಿಲ್ಲ. ಏಕೆಂದರೆ ಈಗ ಎಲ್ಲರೂ ಬುದ್ಧಿವಂತರಾಗಿದ್ದಾರೆ. ಯಾರೋ ದಳ್ಳಾಳಿಗಳಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ದಳ್ಳಾಳಿಗಳನ್ನು ಅಥವಾ ಬೇರೆ ಇನ್ನಾರನ್ನೂ ಕೇಳುವುದಿಲ್ಲ. ಇವತ್ತಿನ ದಿವಸ ಎನ್.ಆರ್.ಇ.ಜಿ. ಅಡಿ ಕೆಲಸಗಳು ಆಗುವುದರ ಜೊತೆಗೆ ಬಡವರಿಗೆ ಕೂಲಿ ಸಿಗಬೇಕು ಎನ್ನುವ ಕಾರಣದಿಂದಲೇ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಅನ್ಯಾಯವಾಗಿದ್ದರೆ ಈ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲು ನಮ್ಮ ಸರ್ಕಾರ ತಯಾರಿದೆ. ದಯಮಾಡಿ ಅವರು ಮಾಹಿತಿಯನ್ನು ಕೊಡಲಿ.

**ಸಭಾಪತಿಯವರು:–** ಮಾಹಿತಿಯನ್ನು ಕೊಡುವುದಾಗಿ ಅವರು ಹೇಳಿದ್ದಾರೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಉಗ್ರಪ್ಪನವರು ಹೇಳಿದಂತೆ ಯು.ಪಿ.ಎ. ಸರ್ಕಾರದ ಅಧಿಕಾರಾವಧಿಯಲ್ಲಿ ಈ ಕಾರ್ಯಕ್ರಮವನ್ನು ಮಾಡಲಾಗಿದ್ದು, ನಮ್ಮ ನಿಮ್ಮೆಲ್ಲರ ಉದ್ದೇಶ ಸಹ ಬಡವರಿಗೆ ಅನ್ಯಾಯವಾಗಬಾರದು ಹಾಗೂ ಹಣ ನೇರವಾಗಿ ಅವರಿಗೇ ತಲುಪಬೇಕು ಎನ್ನುವುದಾಗಿದೆ. ಆದರೆ ನಾನು ಹೇಳಬಯಸುತ್ತಿರುವ ಅಂಶವೇನೆಂದರೆ, ನಾವು ಅಥವಾ ನೀವುಗಳು ಯಾರೂ ಆ ಕೆಲಸದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿಲ್ಲ. ಅವುಗಳನ್ನು ಅಧಿಕಾರಿಗಳು ಅಥವಾ ಬೇರೆಯವರು ನೋಡಿಕೊಳ್ಳುತ್ತಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ಸಂಬಂಧ ಕಾಯ್ದೆಗಳಿವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಕಾಯ್ದೆಗಳಿದ್ದು ಕಾಯ್ದೆಗಳ ಪ್ರಕಾರವೇ ನಡೆಯುತ್ತದೆ. ಅದು ಬೇರೆ ವಿಚಾರ. ಆದರೆ ನಾನು ಹೇಳುವುದೇನೆಂದರೆ, ಕೆಳಮಟ್ಟದಲ್ಲಿ ಕಾನೂನು ಇದ್ದರೂ ಕೂಡ ಅದನ್ನು ಅನುಷ್ಠಾನಗೊಳಿಸುವಲ್ಲಿ ಯಾರೋ ಅಧಿಕಾರಿಗಳಿರುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಅಧಿಕಾರಿಗಳೇ ಅವುಗಳನ್ನು ಅನುಷ್ಠಾನಗೊಳಿಸುವುದು. ಆಯಿತು, ಹೂಂ ಅನ್ನಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಕಾಯ್ದೆಯ ಪ್ರಕಾರವೇ ನಡೆಯುತ್ತದೆ. ನಾನೂ ಸ್ವಲ್ಪ ಓದಿದ್ದೇನೆ. ನಾನೂ ಅದನ್ನೇ ಹೇಳುತ್ತಿರುವುದು. ನಾನು ಹೇಳುವುದನ್ನು ಸ್ವಲ್ಪ ಕೇಳಿದ ನಂತರ ಅವರು ಮಾತನಾಡಬಹುದಾಗಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಶಾಸನಬದ್ಧವಾದ ಅಧಿಕಾರವನ್ನೇನು ಕೊಡಲಾಗಿದೆ, ಅವುಗಳನ್ನು ಅಲ್ಲಿ ಚಲಾಯಿಸುವ ಜವಾಬ್ದಾರಿ ಅಧಿಕಾರಿಗಳದ್ದು. ಆದರೆ ಅಧಿಕಾರಿಗಳು ಯಾವ ರೀತಿಯಲ್ಲಿಯೂ ಸಹ ಹಸ್ತಕ್ಷೇಪವನ್ನು ಮಾಡುವಂತಿಲ್ಲ. ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಶಾಸನ ಎಂದರೇನು?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡಬೇಡಿ. ನೀವು ಮಾತನಾಡುವುದನ್ನು ಮುಂದುವರೆಸಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಡುತ್ತಿಲ್ಲ. ನಾನು ಹೇಳುವ ವಿಚಾರವೇನೆಂದರೆ ಈ ವಿಷಯದಲ್ಲಿ ಅಧಿಕಾರಿಗಳ ಮಟ್ಟದಲ್ಲಿ ಯಾರೋ ದಳ್ಳಾಳಿಗಳು ಹುಟ್ಟಿಕೊಂಡು ಈ ರೀತಿಯಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ ಎಂಬ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸದಸ್ಯರಾದ ಸೋಮಣ್ಣ ಮ.ಬೇವಿನಮರದ ರವರುಗಳು ಸೆಳೆದಿದ್ದಾರೆ. ನಾನು ಹೇಳುವ ವಿಚಾರವೇನೆಂದರೆ, ಅದು ನಿಮ್ಮದೇ ಕಾರ್ಯಕ್ರಮವಾಗಿರುವುದರಿಂದ ಅದನ್ನು ಸರಿಯಾಗಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅನುಷ್ಠಾನಗೊಳಿಸಬೇಕು. ಅಲ್ಲಿನ ವಾಸ್ತವಾಂಶಗಳನ್ನು ಹೇಳಿದರೆ ತನಿಖೆ ನಡೆಸಲು ಹಾಗೂ ಪರಿಶೀಲನೆ ಮಾಡಲು ಸರ್ಕಾರವು ತಯಾರಿದೆ ಎಂಬುದಾಗಿ ಮಂತ್ರಿಗಳು ಹೇಳುತ್ತಿದ್ದಾರೆ. ಇದನ್ನು ಬೆಳೆಸುವುದರ ಬದಲು ಆ ರೀತಿಯಾದ ಲೋಪದೋಷಗಳಿವೆ ಎಂಬ ವಿಚಾರವನ್ನು ಹೇಳುವಂತಹ ಸಂದರ್ಭದಲ್ಲಿ ಅದನ್ನು ಒಪ್ಪಿಕೊಂಡು ಅವುಗಳ ಬಗ್ಗೆ ಸರ್ಕಾರ ತನಿಖೆ ಮಾಡಿಸಬೇಕಾಗುತ್ತದೆ. ಕ್ರಮ ತೆಗೆದುಕೊಳ್ಳುವುದಾಗಿ ಮಾನ್ಯ ಸಚಿವರು ಈಗಾಗಲೇ ಒಪ್ಪಿಕೊಂಡಿದ್ದಾರೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, we have accepted it.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನೀವು ಒಪ್ಪಿಕೊಂಡು ತನಿಖೆಯನ್ನು ಮಾಡಲಿಕ್ಕೆ ತಯಾರಿದ್ದೀರಿ. ತನಿಖಾ ಸಮಿತಿಯನ್ನು ರಚಿಸುವುದಕ್ಕೆ ತಯಾರಿದ್ದೇವೆ ಎಂಬುದಾಗಿ ಹೇಳಿದ್ದೀರಿ. ಈ ಸಂಬಂಧ ನಾನು ಹೇಳುವುದೇನೆಂದರೆ, ಇದನ್ನು ಬೆಳೆಸುವುದರ ಬದಲು ಅಂದರೆ ಎಲ್ಲಿಯೋ ಒಂದೆರಡು ಕಡೆಗಳಲ್ಲಿ ನಡೆದಿರುವಂತಹ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇಂತಹ ಘಟನೆಗಳು ಎಷ್ಟು ಕಡೆ ನಡೆಯುತ್ತಿರಬಹುದು, ಅವುಗಳು ನಿಜವೋ ಅಥವಾ ಸುಳ್ಳೋ, ಇದೇ ರೀತಿಯಾಗಿ ಬೇರೆ ಕಡೆಗಳಲ್ಲೂ ನಡೆಯುತ್ತಿದೆಯೇ ಎಂಬ ಅಂಶಗಳ ಬಗ್ಗೆ ನೀವು ಮೊದಲು ಪರಿಶೀಲನೆಯನ್ನು ಮಾಡಿ, ಆ ರೀತಿಯ ಘಟನೆಗಳು ನಡೆಯುತ್ತಿದ್ದಲ್ಲಿ ಅವುಗಳನ್ನು ಸರಿಪಡಿಸಬೇಕಾಗುತ್ತದೆ. ಅದನ್ನು ಬಿಟ್ಟು ದಾಖಲಾತಿ ಹಾಗೂ ಮಾಹಿತಿಗಳನ್ನು ಕೊಡಿ ಎಂದು ನಮ್ಮನ್ನು ಕೇಳುವುದರ ಬದಲು, ನಾನೂ ಸಹ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಈ ವಿಚಾರದಲ್ಲಿ ನನ್ನ ಗಮನಕ್ಕೂ ಕೆಲವು ಅಂಶಗಳು ಬಂದಿವೆ. ಯಾರೋ ಕೆಲವರು ದಳ್ಳಾಳಿಗಳು ಹುಟ್ಟಿಕೊಳ್ಳುತ್ತಾರೆ, ಅವರ ಹೆಸರುಗಳನ್ನು ಬರೆದುಕೊಳ್ಳುತ್ತಾರೆ ಹಾಗೂ ಅವರಿಗೆ ಇಂತಿಷ್ಟು ಎಂದು ಹಣವನ್ನು ನೀಡುತ್ತಾರೆ. ಇಲ್ಲವೆಂದಲ್ಲಿ ಎನ್.ಆರ್.ಇ.ಜಿ. ಹಣ ಖರ್ಚು ಆಗುವುದಿಲ್ಲ ಎನ್ನುವ ವಿಚಾರವನ್ನು ನಾನು ಸಹ ಕೇಳಿದ್ದೇನೆ. ಆದರೆ ನನ್ನ ಬಳಿ ದಾಖಲೆಗಳಿಲ್ಲ. ನಿಮ್ಮದೇ ಸರ್ಕಾರವಿದೆ ಹಾಗೂ ನಿಮ್ಮ ಬಳಿ ಎಲ್ಲಾ ರೀತಿಯ ಸವಲತ್ತುಗಳಿವೆ. ನೀವು ಕುಳಿತ ಸ್ಥಳದಿಂದಲೇ switch ನ್ನು ಒತ್ತಿದರೆ ಎಲ್ಲಾ ಮಾಹಿತಿಗಳನ್ನು ನಿಮ್ಮ ಬಳಿ ತರಿಸಿಕೊಳ್ಳಬಹುದು. ಈ ರೀತಿಯ ಘಟನೆಗಳು ಎಲ್ಲಿ ನಡೆಯುತ್ತಿವೆ ಎಂದು ಪರಿಶೀಲಿಸಿ. ಕೆಲವು ಉದಾಹರಣೆಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿದ್ದಾರೆ. ಅಲ್ಲಿ ಲೋಪದೋಷಗಳಿದ್ದರೆ ಅವುಗಳನ್ನು ಸರಿಪಡಿಸಿ. ಹತ್ತು ಕಡೆಗಳಲ್ಲಿ ಚೆನ್ನಾಗಿ ನಡೆಯುತ್ತಿರಬಹುದು ಆದರೆ ಎಲ್ಲೋ ಒಂದೆಂಡು ಕಡೆಗಳಲ್ಲಿ ಈ ರೀತಿಯಾಗಿ ನಡೆಯುತ್ತಿರಬಹುದು. ಎಲ್ಲರೂ ಕೂಡ ಸತ್ಯ ಹರಿಶ್ಚಂದ್ರನ ರೀತಿಯಲ್ಲಿ ಪರಿಪೂರ್ಣವಾಗಿ ಕೆಲಸಗಳನ್ನು ಮಾಡುತ್ತಾರೆಂದು ನಾನು ಹೇಳುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮೊನ್ನೆಯ ದಿವಸ ಮೇವಿನ ವಿಚಾರವಾಗಿ ಚರ್ಚೆ ಬಂದಿತ್ತು. ಈ ವಿಚಾರದಲ್ಲಿ ಎಲ್ಲಾ ಕೆಲಸಗಳನ್ನು ಪರಿಪೂರ್ಣವಾಗಿ ಮಾಡಿದ್ದೇವೆ ಎಂಬುದಾಗಿ ಮಾನ್ಯ ಮಂತ್ರಿಗಳು ಹಾಗೂ ಇತರರು ಹೇಳಿದರು. ಆದರೆ ದೂರದರ್ಶನದ ಸುವರ್ಣ ವಾಹಿನಿಯಲ್ಲಿ ಕಳೆದ ಮೂರು ದಿನಗಳಿಂದ ಈ ವಿಚಾರ ಪ್ರಸಾರವಾಗುತ್ತಿದ್ದು, ತುಮಕೂರು ಜಿಲ್ಲೆಯಲ್ಲಿ ಸುಮಾರು 21–22 ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿರುವುದಾಗಿ ವರದಿಯಾಗಿದೆ. ಈ ಹಣವನ್ನು ರಾಜಕಾರಣಿಗಳು ತೆಗೆದುಕೊಂಡಿದ್ದಾರೆಯೇ? ಯಾರೋ ಅಧಿಕಾರಿಗಳು ಈ ಅವ್ಯವಹಾರದಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ವಿಚಾರವಾಗಿ ತನಿಖೆಯನ್ನು ನಡೆಸಿ, ಇದರಲ್ಲಿ ಯಾರ ತಪ್ಪಿದೆ ಅವರನ್ನು ಶಿಕ್ಷೆಗೊಳಪಡಿಸಿ. ಕಾನೂನುಬದ್ಧವಾಗಿ ಯಾರಿಗೆ ಆ ಯೋಜನೆಯ ಪ್ರಯೋಜನ ಸಿಗಬೇಕೋ ಅವರಿಗೆ ಸಿಗುವ ರೀತಿಯಲ್ಲಿ ಕೆಲಸಗಳನ್ನು ಮಾಡಿ.

**ಶ್ರೀ ಎಂ.ಆರ್.ಸೀತಾರಾಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗಾಗಲೇ ಸರ್ಕಾರವು ಒಪ್ಪಿಕೊಂಡಿದೆ. ಮಾನ್ಯ ಸಭಾಪತಿಯವರು ತನಿಖೆಗೆ ಆದೇಶ ಮಾಡಲಿ. ಯಾವ ಯಾವ ಜಾಗದಲ್ಲಿ ಅವ್ಯವಹಾರಗಳಾಗಿವೆ ಅಲ್ಲೆಲ್ಲಾ ಖಂಡಿತವಾಗಿಯೂ ತನಿಖೆಯನ್ನು ಮಾಡುತ್ತೇವೆ.

**ಸಭಾಪತಿಯವರು:–** ತನಿಖೆಯನ್ನು ಮಾಡಿಸುತ್ತೇವೆಂದು ಸರ್ಕಾರ ಈಗಾಗಲೇ ಹೇಳಿದೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ತನಿಖೆಯನ್ನು ನಡೆಸಲು ಸರ್ಕಾರ ತಯಾರಿದೆ. ಆದರೆ ಯಾವ ಯಾವ ಸ್ಥಳಗಳಲ್ಲಿ ಅವ್ಯವಹಾರಗಳಾಗಿವೆ ಎನ್ನುವುದನ್ನು ಅವರು ಹೇಳಬೇಕು.

**ಸಭಾಪತಿಯವರು:–** ಈ ಸದನದಲ್ಲಿ ಹೇಳುವುದಲ್ಲ; ಆ ಬಗ್ಗೆ ಅವರು ನಿಮಗೆ ಮಾಹಿತಿಯನ್ನು ನೀಡುತ್ತಾರೆ.

**(ಗೊಂದಲ)**

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಆಪಾದನೆಯನ್ನು ಮಾಡಬಾರದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೆ, ಸರ್ಕಾರವು ಯಾರನ್ನು ಬೇಕಾದರೂ ಕಳುಹಿಸಲಿ, ಆದರೆ ಅವರು ಸುಳ್ಳನ್ನು ಏಕೆ ಹೇಳುತ್ತಾರೆ? ಇರುವ ಸತ್ಯ ಸಂಗತಿಯನ್ನು ಹೇಳುತ್ತಿದ್ದರೆ ನೀವು ಏಕೆ ಹೀಗೆ ಮಾಡುತ್ತೀರೋ ಗೊತ್ತಿಲ್ಲ

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ನಾವು ತನಿಖೆಯನ್ನು ಮಾಡುವುದಕ್ಕೆ ತಯಾರಿದ್ದೇವೆ. ಆದರೆ ಯಾವ ಊರು ಎಂಬ ಮಾಹಿತಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಬೇಕಾಗುತ್ತದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ದೂರನ್ನು ಹೇಳಿದ್ದಾರೆ, ಅದನ್ನು ನೀವು ಪರಿಶೀಲನೆ ಮಾಡಿ, ಅದು ಸಾಬೀತಾದರೆ ಈ ರೀತಿಯಾಗಿ ಬೇರೆ ಇತರೆ ಕಡೆಗಳಲ್ಲಿ ಎಲ್ಲಿ ನಡೆಯುತ್ತಿದೆ ಎಂಬುದನ್ನು ಪರಿಶೀಲನೆ ಮಾಡಿ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

**ಶ್ರೀ ಎ.ಮಂಜು:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏಕೆ ಹೇಳಬೇಕು?

***ಸಭಾಪತಿಯವರು:–*** *ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇಲ್ಲಿ ಒಂದು ನಿಮಿಷ ಕೇಳಿ. ಸರ್ಕಾರವು ತನಿಖೆಯನ್ನು ನಡೆಸಲು ತಯಾರಿದೆ. ಅದರ ವಿವರಗಳನ್ನು ಅವರು ಕೊಡಬೇಕು. ಅವರು ಮಾತನಾಡುವಾಗ ಸೂಕ್ಷ್ಮವಾಗಿ ಹೇಳಿದ್ದಾರೆ. ತಮ್ಮ ಟಿ.ಪಿ. ದಿನಾಂಕ ಹಾಗೂ ಪ್ರಯಾಣದ ವಿವರಗಳನ್ನು ಕೊಡಲು ತಯಾರಿದ್ದಾರೆ, ಅವುಗಳನ್ನು ಪಡೆಯಲು ತಿಳಿಸಿದ್ದಾರೆ. ಸರ್ಕಾರದ ಹತ್ತಿರ ವ್ಯವಸ್ಥೆಯಿದೆ. ವಿವರಗಳನ್ನು ಪಡೆದುಕೊಂಡು ತನಿಖೆಯನ್ನು ನಡೆಸಿ. ಇನ್ನೂ ಹೆಚ್ಚಿನ ಮಾಹಿತಿಯ ಅವಶ್ಯಕವಿದ್ದಲ್ಲಿ ಅದನ್ನು ತನಿಖಾ ಸಮಿತಿಯನ್ನು ರಚಿಸಿದಾಗ ಕೇಳಿ ಆದರೆ ಮಾಹಿತಿಗಳನ್ನು ಸದನದಲ್ಲಿ ಕೊಡಿ ಎಂಬುದಾಗಿ ಯಾರೂ ಕೇಳಬಾರದು.*

ಮಾನ್ಯ ವಿರೋಧ ಪಕ್ಷದ ನಾಯಕರೇ ಈಗ ಸಮಯ 1 ಗಂಟೆ 15 ನಿಮಿಷಗಳಾಗಿದ್ದು, ಸರ್ಕಾರದಿಂದ ಉತ್ತರವನ್ನೂ ಪಡೆಯಬೇಕಾಗಿದೆ. ಸರ್ಕಾರದ ಕಡೆಯಿಂದ ಮಾನ್ಯ ಸಚಿವರು ತಯಾರಾಗಿ ಕುಳಿತಿದ್ದಾರೆ. ಉತ್ತರವನ್ನು ನೀಡಲು ನಾನು ಅವರಿಗೆ ಸಮಯಾವಕಾಶವನ್ನು ನೀಡಬೇಕು. ತಾವು ಮಾತನಾಡಲು ಇನ್ನು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ ಹಾಗೂ ಎಷ್ಟು ಗಂಟೆಗೆ ಅದನ್ನು ಮುಗಿಸುತ್ತೀರಿ ಎಂಬ ವಿವರಗಳನ್ನು ಹೇಳಿದರೆ, ನಾನು ಸಮಯವನ್ನು ಸರಿಹೊಂದಿಸಲು ಅನುಕೂಲವಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಅಪರೂಪಕ್ಕೆ ಕರ್ನಾಟಕ ರಾಜ್ಯದ ಜನಕ್ಕೆ ಏನು ನಡೆಯುತ್ತಿದೆ ಎಂಬುದು ಗೊತ್ತಾಗಬೇಕು. ರಾಜಕೀಯ ಪಕ್ಷಗಳಾದ ಬಿ.ಜೆ.ಪಿ., ಕಾಂಗ್ರೆಸ್ ಅಥವಾ ಜನತಾ ದಳ ಯಾವುದು ಎಂಬ ಪ್ರಶ್ನೆ ಬೇಡ. ಆದರೆ ಚರ್ಚೆ ಚೆನ್ನಾಗಿ ನಡೆಯುತ್ತಿದೆ. ಸರ್ಕಾರವು ಕೂಡ ಎಚ್ಚರಿಕೆಯಿಂದ ಇದೆ. ಏಕೆಂದರೆ ಇವತ್ತಿನ ದಿವಸ ಈ ವಿಚಾರದಲ್ಲಿ ಇಷ್ಟೆಲ್ಲಾ ಚರ್ಚೆಗಳು ನಡೆಯುತ್ತಿರುವುದರಿಂದ ತುಂಬಾ ಸಂತೋಷವಾಗಿದೆ. ಹೀಗಾಗಿ ನಾನು ಇನ್ನು ಎರಡು–ಮೂರು ಅಂಶಗಳನ್ನು ಪ್ರಸ್ತಾಪಿಸಬಯಸುತ್ತೇನೆ. ದಯವಿಟ್ಟು ಸಮಯವನ್ನು ನಿಗದಿಪಡಿಸಬೇಡಿ. ನನಗೆ ಎಷ್ಟು ಸಮಯಾವಕಾಶ ಬೇಕೆಂಬುದು ಗೊತ್ತಿಲ್ಲ. ನೀವು ಸಮಯ ಎಂದು ಹೇಳಿದ ತಕ್ಷಣ ನನ್ನ ಗಮನವೆಲ್ಲಾ ಗಡಿಯಾರದ ಕಡೆಗೆ ಹೋಗುತ್ತದೆ. ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಸಮಯದಲ್ಲಿ ನಾನು ಮುಗಿಸುತ್ತೇನೆ.

ಈ ವಿಚಾರದಲ್ಲಿ ತನಿಖೆ ನಡೆಸಲು ಒಂದು ಸಮಿತಿಯನ್ನು ನೇಮಕ ಮಾಡಿ; ನಾನು ಯಾದಗಿರಿ ಜಿಲ್ಲೆಯ ಪ್ರದೇಶಗಳಿಗೆ ತಮ್ಮಗಳನ್ನು ಕರೆದುಕೊಂಡು ಹೋಗುತ್ತೇನೆ. ಅದೇ ರೀತಿಯಾಗಿ ಹಾವೇರಿ ಜಿಲ್ಲೆಗೆ ಸದಸ್ಯರಾದ ಮಾನ್ಯ ಸೋಮಣ್ಣ ಮ.ಬೇವಿನಮರದ ರವರು ಕರೆದುಕೊಂಡು ಹೋಗುತ್ತಾರೆ. ಚರ್ಚೆಯನ್ನು ಮಾಡಿ. ಈ ಎರಡೂ ಉದಾಹರಣೆಗಳನ್ನು ತೆಗೆದುಕೊಂಡರೆ ರಾಜ್ಯದ ಇನ್ನುಳಿದ ಜಿಲ್ಲೆಗಳ ಬಗ್ಗೆ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಕಠಿಣ ಕ್ರಮ ಕೈಗೊಳ್ಳುತ್ತಿದ್ದಾರೆ. “ಬರ ನಿರ್ವಹಣಾಧಿಕಾರಿಗಳಿಗೆ ಸಿ.ಎಂ. ಕಟ್ಟಪ್ಪಣೆ” ಎಂಬ ಶೀರ್ಷಿಕೆಯಡಿ ವರದಿಯೊಂದು ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದಕ್ಕೆ ಮುಂದುವರೆದಂತೆ, ಎರಡು ದಿನ ಕಡ್ಡಾಯವಾಗಿ ಭೇಟಿ ನೀಡಬೇಕು ಎಂಬುದಾಗಿ ಸೂಚಿಸಿದ್ದಾರೆ. ಆದರೆ ಯಾರು ಭೇಟಿ ನೀಡಬೇಕು? ಉಸ್ತುವಾರಿ ಕಾರ್ಯದರ್ಶಿಗಳು ಭೇಟಿಯನ್ನು ನೀಡಬೇಕು. ಏಕೆ ಮಂತ್ರಿಗಳಿಗೆ ಏನು ಕೆಲಸವಿದೆ? ಉಸ್ತುವಾರಿ ಕಾರ್ಯದರ್ಶಿಗಳು ಎರಡು ದಿನಗಳ ಕಾಲ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿ ಕುಳಿತುಕೊಳ್ಳಬೇಕು. ವಿಧಾನಸೌಧದಲ್ಲಿ ಉಸ್ತುವಾರಿ ಕಾರ್ಯದರ್ಶಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಗಳು ಬರಗಾಲ ಪರಿಹಾರ ಉಸ್ತುವಾರಿಯನ್ನು ಸಮರ್ಪಕವಾಗಿ ನಿಭಾಯಿಸಬೇಕು ಎಂದು ಹೇಳಿದ್ದಾರೆ. ಕಾರ್ಯಕ್ರಮಗಳ ಜಾರಿಯಲ್ಲಿ ಅನಗತ್ಯ ವಿಳಂಬವಾಗಬಾರದು; ವಿಳಂಬಕ್ಕೆ ಕುಂಟು ನೆಪಗಳನ್ನು ಹೇಳಬಾರದು. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕೆಲಸ ಮಾಡುವ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ಅನುಭವವನ್ನು ಧಾರೆಯೆರೆದು ಸರ್ಕಾರದ ಕ್ರಮಗಳ ಪ್ರಯೋಜನ ಫಲಾನುಭವಿಗಳಿಗೆ



“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಿಗುವಂತೆ ನೋಡಿಕೊಳ್ಳಬೇಕು ಎಂಬುದಾಗಿ ವರದಿಯಾಗಿದೆ. ಹೀಗೆ ಉದ್ದಕ್ಕೂ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹೇಳಿದ್ದಾರೆ. ಅವರುಗಳು ಸಭೆಯಲ್ಲಿ ಮುಖ್ಯಮಂತ್ರಿಗಳ ಸೂಚನೆಗಳನ್ನು ಕೇಳಿಸಿಕೊಂಡು ಹೊರಟು ಹೋದರು. ಆದರೆ ಆ ಸೂಚನೆಗಳೆಲ್ಲವನ್ನೂ ಅನುಷ್ಠಾನಗೊಳಿಸಲಾಗಿದೆಯೇ? ನಾವುಗಳೆಲ್ಲಾ ಸೇರಿಕೊಂಡು ಇಷ್ಟೆಲ್ಲಾ ಚರ್ಚೆಯನ್ನು ಮಾಡುತ್ತಿದ್ದೇವೆ, ಆದರೆ ಬರದ ವಿಚಾರವಾಗಿ ಯಾವ ಅಧಿಕಾರಿಗಳಿಗೆ ಗಂಭೀರತೆ ಇದೆ? ಮುಖ್ಯಮಂತ್ರಿಗಳು ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ದಿನ ಎಲ್ಲಾ ಅಧಿಕಾರಿಗಳನ್ನು ವಿಧಾನಸೌಧಕ್ಕೆ ಕರೆದು ಸಭೆ ನಡೆಸಿದ್ದನ್ನು ಬಿಟ್ಟರೆ ಬೇರೆ ಯಾವ ಪ್ರಯೋಜನವೂ ಆಗಿಲ್ಲ. ಆ ಒಂದು ದಿನದ ಸಭೆ ಸಹ ವ್ಯರ್ಥವಾಗಿದೆ.

(ಮುಂದು)

(846) 20.06.2017 MSS-MD(VK) 1.20

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

**"ಬೋಗಸೆ ನೀರಿಗೆ ಅಲೆದಾಟ"** ಇದು ಸಂಯುಕ್ತ ಕರ್ನಾಟಕದಲ್ಲಿ ಬಂದಿರುವಂತಹ ವರದಿ **"ಬದುಕು ಮನ್ನಿಸೋ ಪ್ರಭುವೇ"** ಮಂತ್ರಿಗಳು ಪತ್ರಿಕೆಗಳನ್ನು ಓದುವುದಿಲ್ಲವೇ; ಅವರ ಕ್ಷೇತ್ರಗಳಿಗೆ ಹೋಗುವುದಿಲ್ಲವೇ? ಏನು ಮಾಡಬೇಕು? ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳನ್ನು ಕುಳ್ಳಿರಿಸಿಕೊಂಡು ಇಷ್ಟು ಜೋರಾಗಿ ಎಚ್ಚರಿಕೆ ಕೊಟ್ಟಿದ್ದು ಒಂದು ಸಭೆಯಾದ ಕೂಡಲೇ ಮುಗಿದು ಹೋಯಿತು. ಅಲ್ಲಿಯ ಪರಿಸ್ಥಿತಿಯ ಬಗ್ಗೆ ಸಂಬಂಧಪಟ್ಟವರು ಗಮನಿಸಲಿಲ್ಲ ಎಂದರೆ, ಏನಾಗುತ್ತದೆ? ವಿಜಯ ವಾಣಿ ಪತ್ರಿಕೆಯಲ್ಲಿ **"ಸಿಎಂ ತವರು ಜಿಲ್ಲೆಯಲ್ಲಿಯೇ ಜನರು ಗುಳೆ, ಬರ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲ" "ಅನುಷ್ಠಾನವಾಗದ ನರೇಗಾ ಯೋಜನೆ."** ಇದೆಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿರುವಂಥದ್ದು. ಪತ್ರಿಕೆಗಳು, ಟಿ.ವಿ. ಮಾಧ್ಯಮಗಳು ಇವೆಲ್ಲವೂ ಕೂಡ ಸರ್ಕಾರಕ್ಕೆ ಜಾಗೃತಿ ಮಾಡುವುದಕ್ಕೆ ಇರುವಂತಹ ಮಾಧ್ಯಮಗಳು. ಬಿಜೆಪಿ ಮತ್ತು ಜೆಡಿ(ಎಸ್) ಸಮ್ಮಿಶ್ರ ಸರ್ಕಾರ ಇದ್ದಾಗ ತಕ್ಷಣ ನನಗೆ ನೀರಾವರಿ ಮಂತ್ರಿಗಳೆಂದು ಅನೌನ್ಸ್ ಮಾಡಿಬಿಟ್ಟರು. ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ಆಗ ನನಗೆ ಹೆಚ್ಚು ಅನುಭವ ಇರಲಿಲ್ಲ. ಕಲಬುರಗಿಗೆ ಹೋಗಿ ಆ ವಿಭಾಗದ ಪತ್ರಿಕೆಗಳನ್ನು ತೆಗೆದು ಓದಿದೆ. ಅದರಲ್ಲಿ ನೀರಾವರಿ ಮಂತ್ರಿಗಳು ಬರುತ್ತಿದ್ದಾರೆ. **ಬೆಣ್ಣೆತೋರಾ ಯೋಜನೆ ಆನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಧೂಳು ತಿನ್ನುತ್ತಿದೆ ಎಂದು ವರದಿಯಾಗಿತ್ತು.** ಸಮಿತಿಯಾಗಿದೆ, ರಿಪೋರ್ಟ್ ಆಗಿದೆ. ವರದಿ ಇದೆ, ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ಎಂದು ಪತ್ರಿಕೆಯವರು ಕೇಳಿದರು. ಆಗ ನಾನು ದೇವರಾಣೆಗೂ ನನಗೆ ಗೊತ್ತಿಲ್ಲಪ್ಪ, ತಿಳಿದುಕೊಂಡು ಹೇಳುತ್ತೇನೆಂದು ಪತ್ರಿಕೆಯವರಿಗೆ ಹೇಳಿದೆ. 'ಯಾವಾಗ' ಎಂದು ಮರು ಪ್ರಶ್ನಿಸಿದರು. ಪತ್ರಿಕೆಯವರು ಸುಮ್ಮನೆ ಇರುತ್ತಾರೆಯೇ? ಪೊಲೀಸ್ ಠಾಣೆಯಲ್ಲಿ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕೊಡಬಹುದು. ಪತ್ರಿಕೆಯವರಿಗೆ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಮತ್ತೆ ಯಾವಾಗ ಬರುತ್ತೀರಿ. ಇಲ್ಲಿಗೆ ಬಂದು ಹೋಗಿಬಿಟ್ಟರೆ ಮುಗಿಯಿತೇ ಎಂದು ಕೇಳಿದರು. ನನಗೂ ಕೂಡ ಸ್ವಾಭಿಮಾನದ ಪ್ರಶ್ನೆ ಎದುರಾಯಿತು. ಮತ್ತೆ 15 ದಿನಗಳ ನಂತರ ವಾಪಸ್ಸು ಹೋಗಿ ಏನು ಮಾಡುತ್ತೇವೆಂಬುದನ್ನು ಹೇಳಿದೆ. ನಾನು ನನ್ನ ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟೂರ್‌ಗಳನ್ನು ಬಿಟ್ಟು ಮುಖ್ಯಮಂತ್ರಿಗಳಾಗಿದ್ದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಎಲ್ಲಿದ್ದಾರೆಂದು ಹುಡುಕಿದೆ. ಅವರು ಲಿಂಗಸೂರಿನಲ್ಲಿದ್ದರು. ಅಲ್ಲಿಗೆ ಹೋಗಿ ನೋಡಿ ಈ ರೀತಿಯಾಗಿದೆ. ಭ್ರಷ್ಟಾಚಾರದ ಬಗ್ಗೆ ಪತ್ರಿಕೆಗಳವರು ಕೇಳುತ್ತಿದ್ದಾರೆ, ಏನು ಮಾಡಬೇಕೆಂದು ಕೇಳಿದೆ. ವರದಿಯ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏನು ಮಾಡಬೇಕೆಂದು ಕೇಳಿದಾಗ, ಅವರು 'ನೀವು ಏನು ಮಾಡಬೇಕೆಂದಿದ್ದೀರಿ' ಎಂದು ಕೇಳಿದರು. ಈ ವರದಿ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಹೇಳಬೇಕಾಗುತ್ತದೆ ಎಂದು ಹೇಳಿದೆ. ಆಗ ಅವರು 'ಒಂದೇ ಪದದಲ್ಲಿ ಚೆಚ್ಚಿ ಹಾಕಿ, ಬಿಡಬೇಡಿ' ಎಂದು ಹೇಳಿದರು. ಅದರಲ್ಲಿ ಯಾರ್‍ಯಾರು ಇದ್ದಾರೆ ಎಂದು ಅವರು ನೋಡಲಿಲ್ಲ, ನಾನು ಕೂಡ ನೋಡಲಿಲ್ಲ. ಆಮೇಲೆ ನೋಡಿದರೆ ನಿಮ್ಮಗಳಿಗೆ ಗೊತ್ತಿರುತ್ತದೆ. ಆನೇಕ ರಾಜಕಾರಣಿಗಳ ಸಂಬಂಧಿಕರುಗಳಿದ್ದರು. ಆಡಳಿತ ಪಕ್ಷದ ರಾಜಕಾರಣಿಗಳ ಸಂಬಂಧಿಕರುಗಳೂ ಕೂಡ ಇದ್ದರು. ಅದರೂ ಕೂಡ ಅವರು ಆ ರೀತಿ ಹೇಳಿದರು. ಮತ್ತೆ ಒಂದು ವಾರದ ನಂತರ ಅಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಭ್ರಷ್ಟಾಚಾರದಲ್ಲಿ ಯಾರ್‍ಯಾರು ಭ್ರಷ್ಟರಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ಕ್ರಮವನ್ನೂ ಕೂಡ ತೆಗೆದುಕೊಂಡೆವು. ಪತ್ರಿಕೆಗಳು ನಮ್ಮನ್ನು ಜಾಗೃತಗೊಳಿಸುವುದಕ್ಕೆ ಇರುವುದು. ಜಾಗೃತಿ ಮೂಡಿಸುವುದಕ್ಕೆ ಇರುವಂತಹ ಪತ್ರಿಕೆಗಳ ಬಗ್ಗೆ ನಾವು ಗಮನ ಕೊಡಲಿಲ್ಲ ಎಂದರೆ ಹೇಗಾಗುತ್ತದೆ? ಎಲ್ಲರೂ ಕೂಡ ಎಲ್ಲಾ ಪತ್ರಿಕೆಗಳನ್ನು ತರಿಸುತ್ತೇವೆ, ಬೆಳಿಗ್ಗೆ ಒಂದು ಗಂಟೆಯಾದರು ಪತ್ರಿಕೆಗಳನ್ನು ಓದುತ್ತೇವೆ. ಅಂದರೆ ಬರೀ ಓದುವುದಕ್ಕೆ ಮಾತ್ರವೇ ಪತ್ರಿಕೆಗಳನ್ನು ತರಿಸುವುದು. ಪತ್ರಿಕೆಯವರು ಹಗಲು-ರಾತ್ರಿ ಎನ್ನುವುದನ್ನೂ ಲೆಕ್ಕಿಸದೇ ವರದಿ ಮಾಡುತ್ತಾರೆ. 'ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿಯೇ ಜನರು ಗುಳೆ ಹೋಗುತ್ತಿದ್ದಾರೆ' ಎಂದು ವರದಿಯಾದ ಮೇಲೆ ಅಧಿಕಾರಿಗಳು ಅದರ ಬಗ್ಗೆ ಗಮನವನ್ನು ಕೊಟ್ಟಿದ್ದಾರೆಯೇ? ಅದರಲ್ಲಿಯೂ ಮುಖ್ಯಮಂತ್ರಿಗಳ ಜಿಲ್ಲೆ. ಅಧಿಕಾರಿಗಳು ಗಮನವನ್ನು ಕೊಡಲೇಬೇಕು. **"ಮೇವು ಇಲ್ಲದೇ ಹಸು ಸಾವು, ದುಡ್ಡು ಇಲ್ಲದೇ ಹೂಳಲು ಆಗುತ್ತಿಲ್ಲ"** ಎಂದು 'ಕನ್ನಡ ಪ್ರಭ' ಪತ್ರಿಕೆಯಲ್ಲಿ ವರದಿಯಾಗಿದೆ. **"ಕೊಳ್ಳೆಗಾಲದ ಕೌದಳ್ಳಿಯಲ್ಲಿ ಆರು ಗೋವುಗಳ ಮರಣ, ಕಂಗಾಲಾದ ರೈತರು. ಹಬ್ಬದ ಬಳಿಕ ಹೋರಾಟಕ್ಕೆ ಇಳಿಯಲು ತಯಾರಿ."** ರೈತರುಗಳ ಹೋರಾಟವನ್ನು ಮಾಡಬೇಕೇ? ಇದು ಏನಾಗುತ್ತಿದೆ ಎಂದರೆ, ರಾಜ್ಯದಲ್ಲಿನ ಭೀಕರವಾದಂತಹ ಸಮಸ್ಯೆಗಳ ಬಗ್ಗೆ ಸರ್ಕಾರ ಗಮನಿಸಬೇಕು. ಇವತ್ತು 'ವಿಜಯ ವಾಣಿ' ಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ದಿನಾಂಕ 20ನೇ ಜೂನ್ 2017 ಅಂದರೆ, ಇವತ್ತಿನ ದಿವಸದ ಪತ್ರಿಕೆಯಲ್ಲಿಯೇ **"ದಕ್ಷಿಣಕ್ಕೆ ಕೃಪೆ ತೋರದ ವರುಣ. 12 ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ. ಉತ್ತರ ಭಾಗದಲ್ಲಿ ವರ್ಷದ ಹರ್ಷ."** ಇಲ್ಲಿ ಮಳೆ ಇಲ್ಲ. ರಾಜ್ಯಕ್ಕೆ ಮುಂಗಾರು ಪ್ರವೇಶವಾಗಿ 15 ದಿನ ಕಳೆಯುತ್ತಾ ಬಂದರೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದೇ ಇರುವುದು ಆತಂಕಕ್ಕೆ ಕಾರಣವಾಗಿದೆ. ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಜೂನ್ ತಿಂಗಳ ಮೊದಲನೆಯ ವಾರದಿಂದ ಮುಂಗಾರು ದುರ್ಬಲವಾಗಿದೆ. ಬಹುತೇಕ ಜಿಲ್ಲೆಗಳಲ್ಲಿ ಜೂನ್ 1ನೇ ತಾರೀಖಿನಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

19ನೇ ತಾರೀಖಿನವರೆಗೆ ವಾಡಿಕೆಗಿಂತಲೂ ಕಡಿಮೆ ಮಳೆ ದಾಖಲಾಗಿದ್ದು, ಮಂಡ್ಯ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತೀವ್ರ ಮಳೆ ಕೊರತೆಯಾಗಿದೆ. ಒಟ್ಟಾರೆ 11 ಜಿಲ್ಲೆಗಳಲ್ಲಿ ವಾಡಿಕೆ ಮಳೆಯಾಗಿಲ್ಲವೆಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ KSNDMC (Karnataka State Natural Disaster Monitoring Centre) ನಿರ್ದೇಶಕರಾದ ಡಾ:ಶ್ರೀನಿವಾಸ ರೆಡ್ಡಿಯವರು ತಿಳಿಸಿದ್ದಾರೆ. ಇದನ್ನು ಸರ್ಕಾರ ಗಮನಿಸಬೇಕಲ್ಲವೆ? ಇದನ್ನು ಸರ್ಕಾರ ಗಮನಿಸಲಿಲ್ಲ ಎಂದರೆ, ಪತ್ರಿಕೆಗಳ ವರದಿಯಿಂದ ಆದಂತಹ ಲಾಭವಾದರೂ ಏನು? ಈ ಚರ್ಚೆ ಮಾಡುವುದು, ಪತ್ರಿಕೆಗಳು ಇರುವುದು ಸರ್ಕಾರ ಮಾಡುವಂತಹ ಕೆಲಸಗಳಿಗೆ ಇಂತಿಂತಹ ಕೆಲಸವನ್ನು ಮಾಡಿ ಎಂದು ಕೇಳುವುದಕ್ಕೆ ವಿನಃ ಇನ್ನೇನು ಉದ್ದೇಶ ಅಲ್ಲ. 46 ವರ್ಷಗಳಲ್ಲಿಯೇ ಇಷ್ಟೊಂದು ಭೀಕರವಾದಂತಹ ಬರಗಾಲ ಬಂದಂತಹ ಸಂದರ್ಭದಲ್ಲಿ ರೈತರು ತೊಂದರೆಯಲ್ಲಿದ್ದಾರೆ. ರೈತರ ಸಾಲ ಮನ್ನಾ ಮಾಡಿ ಎಂದು ನಾವು ಕೇಳುತ್ತೇವೆ. ಸರ್ಕಾರದವರು ಕೇಂದ್ರ ಸರ್ಕಾರ ಅರ್ಧ ಹಣವನ್ನು ಕೊಟ್ಟರೆ ನಾವು ಅರ್ಧ ಹಣವನ್ನು ಹಾಕಿ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳುತ್ತಾರೆ. ಈಗಾಗಲೇ ಮಹಾರಾಷ್ಟ್ರ ಸರ್ಕಾರ ರೈತರ ಸಾಲವಾದ 30,000 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದೆ. ಕೇಂದ್ರ ಸರ್ಕಾರವೇನೂ ಆ ರಾಜ್ಯಕ್ಕೆ ಹಣವನ್ನು ಕೊಟ್ಟಿಲ್ಲ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೆ, ಪಂಜಾಬ್ ರಾಜ್ಯ ಸರ್ಕಾರ ಕೂಡ ರೈತರ ಸಾಲವನ್ನು ಮನ್ನಾ ಮಾಡಿದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯ ಸರ್ಕಾರ ರೈತರ ಸಾಲವನ್ನು ಏನು ಮಾಡುತ್ತದೆ ಹೇಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಪಂಜಾಬ್‌ನಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವದ ರಾಜ್ಯ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿದ್ದಕ್ಕೆ ನಾನು ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತೇನೆ. ಇಲ್ಲಿ ರಾಜಕಾರಣ ಏಕೆ?

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೆ, ಬರೀ ಬಿಜೆಪಿ ಇರುವಂತಹ ರಾಜ್ಯ ಸರ್ಕಾರಗಳು ಮಾತ್ರ ರೈತರ ಸಾಲವನ್ನು ಮನ್ನಾ ಮಾಡಿಲ್ಲ. ಪಂಜಾಬ್ ರಾಜ್ಯದ ಕಾಂಗ್ರೆಸ್ ಪಕ್ಷದ ಸರ್ಕಾರ ಕೂಡ ರೈತರ ಸಾಲವನ್ನು ಮನ್ನಾ ಮಾಡಿದೆ ಎಂದು ಹೇಳಿ ಎಂದಷ್ಟೇ ಹೇಳಿದ್ದು. ಮಹಾರಾಷ್ಟ್ರ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಎಸ್.ರವಿಯವರು ಮಾತನಾಡುವಾಗ ಹೇಳಲಿ. ದಯಮಾಡಿ ಈಗ ಅವರಿಗೆ ಕುಳಿತುಕೊಳ್ಳಲು ಹೇಳಿ. ಉತ್ತರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥರ ನೇತೃತ್ವದ ಸರ್ಕಾರ 36,359 ಕೋಟಿ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡಿದ್ದಾರೆ. ಅವರು ಸಾಲವನ್ನು ಮನ್ನಾ ಮಾಡಿದ್ದಾರೆಯೋ ಇಲ್ಲವೋ ಎನ್ನುವುದನ್ನು ಮಾನ್ಯ ಎಸ್.ರವಿಯವರು ಮಾತನಾಡುವಾಗ ಹೇಳಲಿ. ಪಂಜಾಬ್ ರಾಜ್ಯ ಸರ್ಕಾರ 10,000 ರೈತರ ಸಾಲವನ್ನು ಮನ್ನಾ ಮಾಡಿದೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದರಲ್ಲಿ ದಯವಿಟ್ಟು ಯಾವುದೇ ಪಕ್ಷ ಎಂದು ತೆಗೆದುಕೊಂಡು ಬರಬೇಡಿ; ರಾಜಕೀಯ ಮಾಡಬೇಡಿ. ನಮ್ಮ ಹತ್ತಿರ ಇಷ್ಟು ಹಣ ಇದೆ, ಕೇಂದ್ರ ಸರ್ಕಾರ ಇಷ್ಟು ಹಣವನ್ನು ಕೊಡಲಿ ಎಂದು ಹೇಳಲಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಪಂಜಾಬ್‌ನಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿದ್ದಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆಯಿತು. ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನೀವು ಅದೇರೀತಿ ಉತ್ತರ ಪ್ರದೇಶ ಸರ್ಕಾರ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಪಶ್ಚಿಮ ಬಂಗಾಳ ಸರ್ಕಾರಗಳು ಕೂಡ ರೈತರ ಸಾಲವನ್ನು ಮನ್ನಾ ಮಾಡಿದ್ದಕ್ಕೆ ಕಾಂಗ್ರೆಸ್ ಪಕ್ಷದವರು ಅಭಿನಂದನೆಯನ್ನು ಸಲ್ಲಿಸಬೇಕಲ್ಲವೇ? ಪಂಜಾಬ್ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿದ್ದರ ಬಗ್ಗೆ ಅವರು ಹೇಳುವುದಕ್ಕೆ ಮುಂಚೆಯೇ ನಾನು ಅಭಿನಂದನೆಗಳನ್ನು ಹೇಳಿದ್ದೇನೆ. ಅಲ್ಲಿಯ ರೈತರ ಸಾಲ ಮನ್ನಾ ಮಾಡಿದ್ದರ ಅಂಕಿ-ಅಂಶಗಳನ್ನು ತಂದಿಟ್ಟುಕೊಂಡಿದ್ದೇನೆ. ಒಂದು ವೇಳೆ ನಾನು ಬರೀ ಉತ್ತರ ಪ್ರದೇಶ ರಾಜ್ಯ ಸರ್ಕಾರ ಮತ್ತು ಮಹಾರಾಷ್ಟ್ರ ರಾಜ್ಯ ಸರ್ಕಾರ ಮಾತ್ರ ರೈತರ ಸಾಲವನ್ನು ಮನ್ನಾ ಮಾಡಿದೆ ಎಂದು ಹೇಳಿದ್ದರೆ ನಾನು ಸ್ವಲ್ಪ ಹಲ್ಕಾ ರಾಜಕಾರಣವನ್ನು ಮಾಡುತ್ತೇನೆ ಎನ್ನುವಂತಾಗುತ್ತದೆ. ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ, ಪಂಜಾಬ್ ರಾಜ್ಯ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುವಾಗ ಕೇಂದ್ರ ಸರ್ಕಾರಕ್ಕೆ ಸಾಲ ಮನ್ನಾ ಮಾಡುವುದಕ್ಕೆ ಹಣ ಕೊಡಿ ಎಂದು ಕೇಳಿಲ್ಲ. ಇಲ್ಲಿ ನಮ್ಮ ರಾಜ್ಯ ಸರ್ಕಾರ ನಮ್ಮ ಹತ್ತಿರ ಹಣ ಇಲ್ಲ, ಪಾಪರ್ ಆಗಿದ್ದೇವೆ. ರೈತರ ಸಾಲ ಮನ್ನಾ ಮಾಡುವುದಿಲ್ಲ ಎಂದು ಹೇಳಿದರೆ ಅದು ಒಂದು ರೀತಿಯಾಗುತ್ತದೆ. ಕೇಂದ್ರ ಸರ್ಕಾರ ಅರ್ಧ ಹಣವನ್ನು ಕೊಟ್ಟರೆ ನಾವು ಇನ್ನುಳಿದ ಅರ್ಧ ಹಣವನ್ನು ಹಾಕಿ ರೈತರ ಸಾಲ ಮನ್ನಾ ಮಾಡುತ್ತೇವೆ ಎನ್ನುವುದು ಮೊಂಡು ವಾದ, ಇದು ಒಳ್ಳೆಯದಲ್ಲ. **"ಒಣಗಿದ ಅಡಿಕೆ ತೋಟ, ಬಸವಳಿದ ರೈತ"** ಇದು ಪ್ರಜಾವಾಣಿಯಲ್ಲಿ ಪ್ರಕಟವಾಗಿರುವ ವರದಿ. **"ಜಾನುವಾರುಗಳಿಗೆ ಅಡಿಕೆ ಹಾಳೆಯ ಮೇವು"** ಇದು ಕೂಡ ಪತ್ರಿಕೆಯಲ್ಲಿ ಪ್ರಕಟವಾಗಿರುವಂತಹ ವರದಿಯಾಗಿದ್ದು,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಕಂದಾಯ ಸಚಿವರು ಇದನ್ನು ಈಗಾಗಲೇ ಸದನದ ಗಮನಕ್ಕೆ ತಂದಿರುತ್ತಾರೆ. **"ಗೋಶಾಲೆಯನ್ನು ತೆರೆದಿಲ್ಲ, ಗೋಳಾಟ ನಿಂತಿಲ್ಲ. ಹೈನುಗಾರಿಕೆಗೆ ದೊಡ್ಡ ಹೊಡೆತ, ಹನಿ ನೀರಿಗೂ ಹಾಹಾಕಾರ"** ಈ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡದೆ ಬೇರೆ ವಿಧಿಯೇ ಇಲ್ಲ. ಪಂಜಾಬ್ ರಾಜ್ಯ ಸರ್ಕಾರ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಉತ್ತರ ಪ್ರದೇಶ ರಾಜ್ಯ ಸರ್ಕಾರ, ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುತ್ತದೆ. ಇನ್ನುಳಿದ ಬೇರೆ ಬೇರೆ ರಾಜ್ಯ ಸರ್ಕಾರಗಳು ಏಕೆ ರೈತರ ಸಾಲವನ್ನು ಮನ್ನಾ ಮಾಡಿಲ್ಲ ಎನ್ನುವುದು ಗೊತ್ತಿಲ್ಲ. ಕಳೆದ 46 ವರ್ಷಗಳಲ್ಲಿ ಕಂಡರಿಯದೇ ಇರುವಂತಹ ಇಂತಹ ಭೀಕರ ಬರಗಾಲದಲ್ಲಿ ನಾವು ರೈತರ ಸಾಲ ಮನ್ನಾ ಮಾಡುವುದಕ್ಕೆ ಕೇಂದ್ರ ಸರ್ಕಾರದ ಕಡೆಗೆ ಬೆರಳು ತೋರಿಸುತ್ತಾ ಹೋದರೆ, ರಾಜ್ಯದ ರೈತರು ನಿಮ್ಮ ಸರ್ಕಾರವನ್ನು ಕ್ಷಮಿಸುವುದಿಲ್ಲ. ಸುಮಾರು 8-9 ತಿಂಗಳಿನಲ್ಲಿ ನಾವು ನೀವು ಚುನಾವಣೆಗೆ ಹೋಗುತ್ತೇವೆ. ಆ ಸಮಯದಲ್ಲಿಯಾದರೂ ರೈತರ ಸಾಲವನ್ನು ಮನ್ನಾ ಮಾಡಿದರೆ ಈಗಲೇ ನಿಮ್ಮ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಚುನಾವಣೆಗೆ ಹೋಗುತ್ತಿದ್ದೇವೆ ಎನ್ನುವುದನ್ನು ನೆನಪಿಟ್ಟುಕೊಂಡು ಈಗಲೇ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಿಬಿಟ್ಟರೆ, ಕಷ್ಟದಲ್ಲಿ ನನ್ನ ಜೀವನಕ್ಕೆ ಸರ್ಕಾರದವರು ಆಧಾರವಾಗಿ ಬಂದರು ಎಂದು ರೈತರು ಸಂತೋಷ ಪಡುತ್ತಾರೆ.

(ಮುಂದು)

(847) 20.06.2017 01.30 SV-MD(VK)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ಸರ್ಕಾರ ಈಗ ರೈತರ ಸಾಲ ಮನ್ನಾ ಮಾಡಿದರೂ ಕೂಡ ಮುಂದೆ ಅದನ್ನು ತೀರಿಸುವುದು ನಾವು ಬಂದ ಮೇಲೆಯೇ; ಇನ್ನು ನಾಲ್ಕೈದು ತಿಂಗಳು ಬಿಟ್ಟು ಸಾಲ ಮನ್ನಾ ಮಾಡಿದರೂ ಅದನ್ನು ತೀರಿಸುವುದು ನಾವು ಬಂದ ಮೇಲೆಯೇ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್‌ನವರಾಗಲಿ ಅಥವಾ ಬಿ.ಜೆ.ಪಿ.ಯವರಾಗಲಿ, ದಳವಿಲ್ಲದೆ ಯಾರ ದಾಳವೂ ಉರುಳುವುದಿಲ್ಲ. ಇದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಇಲ್ಲಿ ಎಲ್ಲರ ದಾಳವೂ ಉರುಳುವುದು ದಳ ಇದ್ದರೆ ಮಾತ್ರ.

**ಶ್ರೀ ಎಂ.ಆರ್.ಸೀತಾರಾಂ (ಯೋಜನೆ ಮತ್ತು ಸಾಂಖ್ಯಿಕ ಸಚಿವರು):-** ಮಾನ್ಯ ಸಭಾಪತಿಯವರೆ, ಜನರು ಆದೇಶ ಕೊಟ್ಟ ಮೇಲೆ ಈ ಬಗ್ಗೆ ಮಾತನಾಡುವುದು ಉಚಿತ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಆಗಲಿ ಮಾನ್ಯ ಸಭಾಪತಿಯವರೆ, ಜನರು ಆದೇಶ ಕೊಟ್ಟ ನಂತರವೇ ನಾನು ಮಾತನಾಡುತ್ತೇನೆ. ಈಗ ಸರ್ಕಾರ ಸಾಲ ಮನ್ನಾ ಮಾಡಲಿ. ಏಕೆಂದರೆ ಸರ್ಕಾರದ ಹತ್ತಿರ ದುಡ್ಡು ಇದೆ ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ಸರ್ಕಾರ ಮೊದಲು ಸಾಲ ಮನ್ನಾ ಮಾಡಬೇಕಾಗಿದೆ. ನಾವು ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿ ಈ ರೀತಿ ಕಂಡೀಷನ್ ಹಾಕಿಕೊಂಡು ಹೋಗುವುದು ಯಾವ ನ್ಯಾಯ? ಅವರು ನಮ್ಮ ರಾಜ್ಯದ ರೈತರು. ಸರ್ಕಾರದ ಕೈಲಿ ಎಷ್ಟು ಆಗುತ್ತದೆಯೋ ಅಷ್ಟು ಮಾಡಲಿ. ಪಂಜಾಬ್‌ನ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಕಂಡೀಷನ್ ಹಾಕಿದ್ದಾರೆಯೇ? ಭೀಕರ ಬರಗಾಲಗಳು ಬಂದಾಗ ಕೇಂದ್ರ ಸರ್ಕಾರದಿಂದ ನೆರವು ಬರಬೇಕಾದುದು ಸ್ವಾಭಾವಿಕ. ಇದರಲ್ಲಿ ಏನೂ ಅನುಮಾನವಿಲ್ಲ. 2009 ರಿಂದ 2016-17ರವರೆವಿಗೂ ಕೇಂದ್ರ ಸರ್ಕಾರಗಳು ಅದು ಯು.ಪಿ.ಎ. ಸರ್ಕಾರವಾಗಲೀ ಅಥವಾ ಬಿ.ಜೆ.ಪಿ. ಸರ್ಕಾರವಾಗಲೀ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ನೆರವಿನ ಪ್ರಮಾಣ ಈ ಕೆಳಕಂಡಂತಿದೆ:

| ವರ್ಷ | ರಾಜ್ಯದಿಂದ ಕೇಂದ್ರಕ್ಕೆ ಕೇಳಿದ್ದ ಮೊತ್ತ (ಕೋಟಿ ರೂ.ಗಳಲ್ಲಿ) | ಕೇಂದ್ರದಿಂದ ರಾಜ್ಯಕ್ಕೆ ಬಂದ ಮೊತ್ತ (ಕೋಟಿ ರೂ.ಗಳಲ್ಲಿ) |
|---|---|---|
| 2010-11 | 2,605 | 70 |
| 2011-12 | 3,609 | 282 |
| 2012-13 | 11,489 | 397 |
| 2013-14 | 1,014 | 169 |
| 2014-15 | 779 | 139 |
| 2015-16 | 4,702 | 1,685 |

ನಾನು ಆ ಪಕ್ಷ ಈ ಪಕ್ಷ ಎಂದು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಮೊದಲನೆಯ ಬಾರಿಗೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನಾವು ಕೇಳಿದ್ದ ರೂ. 4702 ಕೋಟಿಗೆ ಕೇಂದ್ರದಿಂದ ಬಂದಿರುವುದು ರೂ. 1685 ಕೋಟಿ. ಮೊನ್ನೆ ಮಾನ್ಯ ಕಾಗೋಡು ತಿಮ್ಮಪ್ಪನವರು ಉತ್ತರವನ್ನು ಕೊಟ್ಟರು. ಕೇಂದ್ರ ಸರ್ಕಾರ ರೂ. 1685 ಕೋಟಿಯನ್ನು ನಮ್ಮ ರಾಜ್ಯಕ್ಕೆ ಕೊಡುವುದಾಗಿ ಡಿಸೆಂಬರ್‌ನಲ್ಲಿ ಘೋಷಿಸಿತ್ತು. ಈಗ ನಾವು ಜೂನ್ ತಿಂಗಳಿನಲ್ಲಿದ್ದೇವೆ. ಇದೇ ಮಾರ್ಚ್ 31 ರಂದು ಹಣ ಬಿಡುಗಡೆಯಾಗಿದ್ದು, ಇನ್ನೂ ರೂ. 155 ಕೋಟಿಗಳನ್ನು ರೈತರಿಗೆ ಕೊಟ್ಟಿಲ್ಲವೆಂದು ಮಾನ್ಯ ಕಂದಾಯ ಸಚಿವರೇ ಹೇಳಿದ್ದಾರೆ. ಸರ್ಕಾರದ ತಪ್ಪು ಎಂದು ಹೇಳುವುದಿಲ್ಲ; ಅವರು ಅದರ ಮೇಲೆಯೇ ಕೆಲಸ ಮಾಡಲಿ ಎಂದಲ್ಲ, ಅಧಿಕಾರಿಗಳೇನು ಮಾಡುತ್ತಾರೆ? ವಿವಿಧ ಜಿಲ್ಲೆಗಳಿಗೆ ನಾನು ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಅಲ್ಲಿನ ಜಿಲ್ಲಾಧಿಕಾರಿಗಳು ಇಷ್ಟು ಸಂಖ್ಯೆಯ ರೈತರು, ಇಷ್ಟು ಮೊತ್ತ ಬಿಡುಗಡೆಯಾಗಿರುವುದಿಲ್ಲ ಇತ್ಯಾದಿ ವರದಿಗಳನ್ನು ಕೊಟ್ಟರು. ಏಕೆಂದು ಕೇಳಿದಾಗ ಅವರು ಕೊಡುವಂತಹ ಕಾರಣಗಳು ನಗೆಯನ್ನು ತರಿಸುತ್ತದೆ. ರೈತನ ಆಧಾರ್ ಕಾರ್ಡ್‌ಗೂ ಬ್ಯಾಂಕ್ ಖಾತೆಗೂ ಹೊಂದಾಣಿಕೆಯಾಗುತ್ತಿಲ್ಲ ಎಂದು ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗಾದರೆ ಅಧಿಕಾರಿಗಳ ಕೆಲಸವೇನು? ಆಧಾರ್ ಕಾರ್ಡ್‌ಗೂ, ಬ್ಯಾಂಕ್ ಖಾತೆಗೂ ಹೊಂದಾಣಿಕೆ ಆಗಿಲ್ಲ ಎಂದರೆ, ಕಂದಾಯ ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ? ಮಂತ್ರಿಗಳು ಇಲ್ಲಿ ತಲೆ ತಗ್ಗಿಸಬೇಕೆ; ಕ್ಷಮೆ ಕೇಳಬೇಕೆ? ಅದಕ್ಕಾಗಿಯೇ ನಾನು ಈ ಸರ್ಕಾರಕ್ಕೆ ಯಾರ ಭಯವೂ ಇಲ್ಲವೆಂದು ಹೇಳಿದ್ದು. ಘೋಷಣೆ ಮಾಡಿದ ತಕ್ಷಣ ರೈತರ ಪಟ್ಟಿಯನ್ನು ತೆಗೆದು ಯಾರ ಹತ್ತಿರ ಆಧಾರ್ ಕಾರ್ಡ್ ಇಲ್ಲ, ಬ್ಯಾಂಕ್ ಖಾತೆಯನ್ನು ಪರಿಶೀಲಿಸಿ ಏನು ತೊಂದರೆಯೆಂದು ನೋಡಲಿ. ಇಂತಹ ಸಂದರ್ಭದಲ್ಲಿಯಾದರೂ ಸರ್ಕಾರ ಒಬ್ಬ ಜಿಲ್ಲಾಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಿ. ಅದು ಬಿಟ್ಟು ಮಂತ್ರಿಗಳು ಇಲ್ಲಿಗೆ ಬಂದು ಇನ್ನೊಂದು ತಿಂಗಳಲ್ಲಿ ಮಾಡುತ್ತೇವೆ ಎಂದು ಹೇಳುತ್ತಾರೆ. ನಾವು ಇವರನ್ನು ತಪ್ಪಿತಸ್ಥರನ್ನಾಗಿ ಮಾಡುವುದಕ್ಕೆ ಹೊರಟಿಲ್ಲ. ಇವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂಬುದು ನಮ್ಮ ಉದ್ದೇಶ. ಈ ರೀತಿ ಆಗಲಿಲ್ಲವೆಂದರೆ, ಯಾವ ಅಧಿಕಾರಿಗೂ ಸಹ ಯಾವ ರೀತಿಯ ಭಯವೂ ಇಲ್ಲ. ಅಕ್ಕಿ, ಮರಳು, ಜಲ್ಲಿ, ಮೇವು ಎಲ್ಲವನ್ನೂ ಲೂಟಿ ಹೊಡೆಯುತ್ತಾರೆ. ಅವರು ಮಾಡಬೇಕಾದ ಕೆಲಸವನ್ನೇನೂ ಮಾಡುವುದಿಲ್ಲ. ಜಿಲ್ಲಾ ಪರಿಷತ್ ಸಭೆಗಳಲ್ಲಿ ಅಥವಾ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿದಾಗ ಯೋಜನೆಯ plan and estimate ಸಿದ್ಧ ಪಡಿಸಲು ನಮ್ಮ ಬಳಿ ಇಂಜಿನಿಯರ್‌ಗಳಿಲ್ಲ ಎಂದು ಹೇಳುತ್ತಾರೆ. ಅದರ ಹೆಚ್ಚಿನ ವಿವರಕ್ಕೆ ನಾನು ಹೋಗುವುದಿಲ್ಲ. ಆದರೆ ಇಂದು ಆಡಳಿತ ನಡೆಸುತ್ತಿರುವವರು ಅಧಿಕಾರಿಗಳ ಕೈಯಲ್ಲಿ ಪತ್ರಿಕೆಗಳನ್ನು ಓದಿಸಬೇಕು. ಸಭೆ ನಡೆಸುವಂತಹ ಸಂದರ್ಭದಲ್ಲಿ ಎಲ್ಲಾ ಪತ್ರಿಕೆಗಳನ್ನೂ ಅವರ ಮುಂದಿಟ್ಟು ಓದಲು ಹೇಳಬೇಕು. ಇಂತಹ ಕಡೆಗಳಲ್ಲಿ ನೀರಿಲ್ಲ, ಮೇವಿಲ್ಲ, ಉದ್ಯೋಗ ಖಾತ್ರಿಗೆ ಬಿಡುಗಡೆಯಾಗಿದ್ದ ಹಣ ಲೂಟಿಯಾಗಿದೆ – ಈ ರೀತಿ ಓದಿದಾಗ ನಿಮಗೇನು ಅನ್ನಿಸುವುದಿಲ್ಲವೆ ಎಂದು ಅವರನ್ನು ಕೇಳಬೇಕು. ಅಕ್ಕಿ ಲೂಟಿಯಾಗುತ್ತಿರುವ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ ಎಂದು ಅವರ ಮುಂದೆಯೇ ಓದಿದಾಗ ಅವರಿಗೆ ಜ್ಞಾನೋದಯವಾಗಬಹುದು. ಅಧಿಕಾರಿಗಳಿಗೆ ಜ್ಞಾನೋದಯವಾಗಬೇಕಾದರೆ ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರೂ ಆ ಜಿಲ್ಲೆಗಳಲ್ಲಿ ಸಭೆಯನ್ನು ನಡೆಸಬೇಕು. ಎಲ್.ಕೆ.ಜಿ. ಅಥವಾ ಒಂದನೇ ತರಗತಿಯ ಮಕ್ಕಳಿಗಾದರೆ ಅವರ ಅಪ್ಪ-ಅಮ್ಮ ಕೂರಿಸಿಕೊಂಡು ಪಾಠ ಹೇಳಿಕೊಡುತ್ತಾರೆ. ಕೊಟ್ಟಿರುವ ಹೋಮ್‌ವರ್ಕ್ ನ್ನು ಈ ರೀತಿ ಮಾಡು ಎಂದ ತಕ್ಷಣ ಆ ಮಗು ಅರ್ಥ ಮಾಡಿಕೊಂಡು ಬರೆಯುತ್ತದೆ. ಆದರೆ ಐ.ಎ.ಎಸ್. ಅಧಿಕಾರಿಗಳಿಗೆ ಏನು ಹೇಳುವುದು? ಮಂತ್ರಿಗಳ ಮಾತನ್ನು ಅವರೆಲ್ಲಿ ಕೇಳುತ್ತಿದ್ದಾರೆ? ಅಧಿಕಾರಿಗಳು ಸಚಿವರ ಮಾತನ್ನು ಕೇಳಬೇಕೆಂದರೆ ಸ್ಥಳ ಪರಿಶೀಲನೆ ಮಾಡಬೇಕು.

ಮಾನ್ಯ ಸಭಾಪತಿಯವರೆ, ರಾಯಚೂರು ಜಿಲ್ಲೆಯ ಒಬ್ಬ ರೈತನ ಜಮೀನಿಗೆ ಹೋಗಿದ್ದೆನು. ಅಲ್ಲಿ ವಯಸ್ಸಾಗಿರುವ ಒಬ್ಬ ರೈತ ಮಹಿಳೆ ಒಂದು ಹಸು ಹಿಡಿದುಕೊಂಡು ಹೋಗುತ್ತಿದ್ದಳು. 'ಏನಮ್ಮಾ, ಇದು' ಎಂದು ಕೇಳಿದಾಗ ಆಕೆ 'ಇದನ್ನು ಯಾರೂ ಕೊಳ್ಳುತ್ತಿಲ್ಲ, ಕಸಾಯಿಖಾನೆಗೆ ಕೊಡುವುದಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆ'

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದಳು. ಅವಳು ತೊಗರಿ ಬೆಳೆದಿದ್ದಳು. ಈ ಬೆಳೆಗೆ ವಿಮೆ ಪಡೆದುಕೊಂಡಿಲ್ಲವೆ ಎಂದು ಕೇಳಿದಾಗ, ಆಕೆ ಬ್ಯಾಂಕ್‌ನಿಂದ ಉಳ್ಳಾಗಡ್ಡಿಗೆ ಹೆಚ್ಚು ಸಾಲ ಸಿಗುತ್ತದೆಂದು ಹೇಳಿ ಉಳ್ಳಾಗಡ್ಡಿಗೆಂದು ಬ್ಯಾಂಕ್ ಸಾಲವನ್ನು ಪಡೆದುಕೊಂಡಿದ್ದಳು. ಸಾಲ ತೆಗೆದುಕೊಂಡದ್ದು ಉಳ್ಳಾಗಡ್ಡಿಗೆ; ನಷ್ಟ ಆಗಿದ್ದು ತೊಗರಿಗೆ. ಅಲ್ಲಿದ್ದ ನಿಂಬೆಗಿಡದ ಬಗ್ಗೆ ಆಕೆಯನ್ನು ಕೇಳಿದೆ. ಏಕೆಂದರೆ ನನಗೂ ಅದರ ಬಗ್ಗೆ ಅನುಭವ ಇಲ್ಲ. ಎಷ್ಟು ನಿಂಬೆ ಗಿಡ ಎಷ್ಟು ವರ್ಷಕ್ಕೆ ಫಲ ಕೊಡಲಾರಂಭಿಸುತ್ತದೆ ಎಂದು ಕೇಳಿದೆ. 20 ವರ್ಷ ಎಂದು ಹೇಳಿದರು. ನನಗೆ ಗೊತ್ತಿಲ್ಲ, ಅವರು ಹೇಳಿದ್ದನ್ನು ನಿಮಗೆ ಹೇಳುತ್ತಿದ್ದೇನೆ. ಇದನ್ನು ಗಿಡಗಳನ್ನು ನೆಟ್ಟು ಈಗಾಗಲೇ 10 ವರ್ಷಗಳಾದವು ಎಂದು ಹೇಳಿದರು. ನೀರಿಲ್ಲದೆ ಆ ಗಿಡದಲ್ಲಿನ ಕಾಯಿಗಳೆಲ್ಲಾ ಸಂಪೂರ್ಣ ಒಣಗಿ ಹೋಗಿದ್ದವು. ಒಣಗಿಹೋಗಿರುವಂತಹ ನಿಂಬೆಕಾಯಿಗಳನ್ನು ಹಿಚುಕಲಿಕ್ಕೂ ಸಾಧ್ಯವಿಲ್ಲ. ಇರಲಿ ಬಿಡಿ, ಈ ವರ್ಷ ಮಳೆ ಬಂದರೆ ನೋಡೋಣ ಎಂದು ಹೇಳಿದೆ. ಅದಕ್ಕೆ ಆಕೆ ಇದನ್ನು ಕಿತ್ತು ಬಿಸಾಕಬೇಕು. ಹೊಸ ಗಿಡವನ್ನೇ ನೆಡಬೇಕು. ಅದು ಫಲ ಕೊಡಬೇಕಾದರೆ ಇನ್ನೆಷ್ಟು ವರ್ಷವೋ ಗೊತ್ತಿಲ್ಲ. ಅಲ್ಲಿಯ ತನಕ ನಾನು ಏನನ್ನು ತಿನ್ನಲಿ ಎಂದು ಹೇಳಿದಳು.

ಉಡುಪಿ ಜಿಲ್ಲೆಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿದ್ದಂತಹ 20-25 ಎಕರೆ ತೆಂಗಿನ ತೋಟವನ್ನು, ಅದನ್ನು ತೆಂಗಿನ ತೋಟ ಎಂದು ಹೇಳಲಿಕ್ಕೆ ಬರುವುದಿಲ್ಲ. ಏಕೆಂದರೆ 25 ಎಕರೆ ಪ್ರದೇಶ ಕೂಡ ಗೂಟ ನೆಟ್ಟ ಹಾಗಿತ್ತು. ಒಂದು ಗಿಡದಲ್ಲಿಯೂ ಗರಿಗಳಿರಲಿಲ್ಲ. ತಿಂಡಿಗೆ ಕರೆದುಕೊಂಡು ಹೋದಾಗ ಆ ತೋಟದವರ ಮನೆಯಲ್ಲಿ ಲೋಕಾಭಿರಾಮವಾಗಿ ಮಾತನಾಡುತ್ತಾ, ಇದನ್ನು ಮತ್ತೆ ಬೆಳೆಸುವುದಕ್ಕೆ ಇನ್ನೆಷ್ಟು ವರ್ಷ ಬೇಕು ಎಂದರೆ, ಅವರು 'ನಮ್ಮ ಮಕ್ಕಳಿಗೆ ಈ ಶಾಪ ಬರಬಾರದು; ಈ ಕಷ್ಟ ಅವರಿಗೆ ಬರಬಾರದು. ನಾವು ಯಾವ ಕಾರಣಕ್ಕೂ ಈ ತೆಂಗು, ಅಡಕೆ ಗಿಡಗಳನ್ನು ಹಾಕುವುದಿಲ್ಲ. ಇದನ್ನು ಸೈಟ್ ಮಾಡಿ ಮಾರಿಬಿಡುತ್ತೇವೆ' ಎಂಬ ಮಾತನ್ನು ಹೇಳಿದರು. ತೆಂಗು, ಅಡಕೆ, ನಿಂಬೆ ಈ ತೋಟಗಳೆಲ್ಲವೂ ನಾಶವಾಗಿವೆ. ಆದ್ದರಿಂದ ಇದರಲ್ಲಿ ದಯವಿಟ್ಟು ರಾಜಕಾರಣ ಮಾಡುವುದು ಬೇಡ. ಸರ್ಕಾರದ ಹತ್ತಿರ ಎಷ್ಟಿದೆಯೋ ನನಗೆ ಗೊತ್ತಿಲ್ಲ. ಆರ್ಥಿಕ ಪರಿಸ್ಥಿತಿ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಎಷ್ಟೋ ಸಾಲ ಮಾಡಿದ್ದಾರೆ, ನಾನೀಗ ಆ ಸಾಲದ ವಿವರಕ್ಕೆ ಹೋಗುವುದಿಲ್ಲ. ಇನ್ನಷ್ಟು ಸಾಲ ಮಾಡಲಿ; ರೈತ ಬದುಕಲಿ. ಸರ್ಕಾರ ಇರುವುದಾದರೂ ಏಕೆ? ಈ ಸಾಲವನ್ನು ಮನ್ನಾ ಮಾಡಿದರೆ ರಾಜ್ಯದ ಜನ ಸರ್ಕಾರವನ್ನು ಕ್ಷಮಿಸುತ್ತಾರೆ. ಸರ್ಕಾರ ಇಂದೇ ಉತ್ತರ ಕೊಡಲಿದೆ ಎಂದು ಮಾನ್ಯ ಸಭಾಪತಿಯವರು ಹೇಳಿದರು. ಸಂತೋಷ, ಸರ್ಕಾರದ ಉತ್ತರದಲ್ಲಿ ಸಾಲ ಮನ್ನಾ ಮಾಡಿರುವ ಬಗ್ಗೆ ಉಲ್ಲೇಖವಿದ್ದರೆ ಸರಿ. ಸರ್ಕಾರ ಸಾಲ ಮನ್ನಾ ಮಾಡಲಿಲ್ಲ ಎಂದರೆ, ಜುಲೈ 8, 9 ಮತ್ತು 10ರಂದು ನಮ್ಮ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ನಾವು ಧರಣಿ ಕೂರುತ್ತೇವೆ, 10ನೇ ತಾರೀಖಿನಂದು ಲಕ್ಷಾಂತರ ಕಾರ್ಯಕರ್ತರೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆಯನ್ನು ಹಾಕುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಆ ಮಾತನ್ನು ಕೇಂದ್ರ ಸರ್ಕಾರಕ್ಕೂ ಹೇಳಲಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾವು ಬಿ.ಜೆ.ಪಿ.ಯ ಕಾರ್ಯಕ್ರಮ ಮಾಡುತ್ತಿಲ್ಲ. ಕರ್ನಾಟಕ ರಾಜ್ಯದ ರೈತರು ಸಾವು ಬದುಕಿನ ನಡುವೆ ಹೋರಾಡುತ್ತಿರುವ ಸಂದರ್ಭದಲ್ಲಿ ಒಂದು ರಾಜಕೀಯ ಪಕ್ಷವಾಗಿ, ವಿರೋಧ ಪಕ್ಷವಾಗಿ ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ.

(848)/20-6-2017/1-40/RC-AK

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**
ಮಲಗಿರುವ ಈ ಸರ್ಕಾರವನ್ನು ಎಬ್ಬಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ನಾನು ಅದಕ್ಕೋಸ್ಕರ ನಿಮ್ಮ ಬಳಿ ಎಷ್ಟು ಹಣವಿದೆ ಎಂದು ಗೊತ್ತಿಲ್ಲವೆಂದು ಹೇಳಿದೆ. ಸಾಲ ಮಾಡುವುದಕ್ಕೆ ಅವಕಾಶವಿದ್ದರೆ ಸಾಲ ಮಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರು ಬಹಳ ಒಳ್ಳೆಯ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಹಾಗಾಗಿ ನನಗೆ ಕೆಲವು ಸಂಶಯಗಳು ಬರುತ್ತಿವೆ. ಅವುಗಳ ಮೇಲೆ ಅವರು ಬೆಳಕು ಚೆಲ್ಲಿದರೆ ಬಹಳ ಒಳ್ಳೆಯದು. ಏಕೆಂದರೆ 2009ರ ಡಿಸೆಂಬರ್ 31ನೇ ತಾರೀಖಿನಂದು ಇದೇ ಸದನದಲ್ಲಿ ತಾವು ಆಡಳಿತ ಪಕ್ಷದಲ್ಲಿ ಕುಳಿತುಕೊಂಡಿದ್ದಿರಿ, ಈಗ ತಾವು ಕುಳಿತಿರುವಂತಹ ಜಾಗದಲ್ಲಿ ನಾನು ಕುಳಿತುಕೊಂಡಿದ್ದೆ, ಯಾರು ಈಗ ಧರಣಿ ಕುಳಿತುಕೊಳ್ಳುವುದಕ್ಕೆ ಹೊರಟಿದ್ದಾರೆ ಅವರು ಬಹಳ ಪುಂಖಾನುಪುಂಖವಾಗಿ ಭಾಷಣ ಮಾಡಿ, 'ನಾನು ಇಲ್ಲಿ ರೈತರ ಸಾಲ ಮನ್ನಾ ಮಾಡುವುದಕ್ಕೆ ನೋಟ್ ಪ್ರಿಂಟ್ ಮಾಡುವುದಿಲ್ಲ, ಕೇಂದ್ರ ಸರ್ಕಾರ ಸಹಾಯ ನೀಡಲಿ' ಎಂದು ಇದೇ ಸದನದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ದಿನಾಂಕವನ್ನು ಸಹ ಸ್ಪಷ್ಟವಾಗಿ ಹೇಳಿದ್ದೇನೆ. ಅವರು ಆ ದಿವಸ ಆ ಮಾತನ್ನು ಹೇಳದೆ ಇದ್ದಿದ್ದರೆ ಬಹುಶಃ ಬೇರೆ ರೀತಿ ಆಗುತ್ತಿತ್ತು. ಕೇಂದ್ರದ ಅರ್ಥ ಸಚಿವರು 'ನಾವು ಸಾಲ ಮನ್ನಾ ಮಾಡುವುದೇ ಇಲ್ಲ' ಎಂದು ಹೇಳುತ್ತಾರೆ, ರಿಸರ್ವ್ ಬ್ಯಾಂಕ್‌ನ ಗೌರ್ನರ್‌ರವರು ಸಹ ಅದೇರೀತಿ ಹೇಳುತ್ತಾರೆ. ಇದು ಒಳ್ಳೆಯ ಪದ್ಧತಿ ಅಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಇದು ರಾಜ್ಯ ಸರ್ಕಾರಗಳ ಜವಾಬ್ದಾರಿ ಎಂದು ಹೇಳುತ್ತಾರೆ. Ultimately, federal system ನಲ್ಲಿ collective ಆಗಿ ಈ ದೇಶದ ಬೆನ್ನೆಲುಬಾಗಿರುವಂಥವರ ಸಹಾಯಕ್ಕೆ N.D.R.F. (National Disaster Response Fund) ಇರಬಹುದು, S.D.R.F. (State Disaster Response

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Fund) ಇರಬಹುದು ರೂಲ್ಸ್ ಪ್ರಕಾರ ಆ ಫಂಡ್ಸ್ ಬರುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ದಯಮಾಡಿ ಈಗ ಸಾಲ ಮನ್ನಾ ಮಾಡುವುದು ರಾಜ್ಯ ಸರ್ಕಾರದ ಆರ್ಥಿಕ ಹಿನ್ನೆಲೆಯಲ್ಲಿ ಏನು ಮಾಡುತ್ತಾರೋ ಮಾಡಲಿ. ಆದರೆ ನಾನು ನಿಮ್ಮನ್ನು ಕೇಳಬಯಸುವುದೇನೆಂದರೆ, ದಯಮಾಡಿ ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಜನತೆಗೆ ಉತ್ತರ ಕೊಡಬೇಕು, ತಾವು ಸಹ ಉತ್ತರ ಕೊಡಬೇಕು. ನೋಟ್ ಪ್ರಿಂಟ್ ಮಾಡುವುದಕ್ಕೆ ಕೇಂದ್ರ ಸರ್ಕಾರ ನನಗೆ ಕೊಟ್ಟಿಲ್ಲ, ಕೇಂದ್ರದವರು ಕೊಡಬೇಕೆಂದು ಹೇಳಿದಿರಲ್ಲ, ಆವತ್ತಿನ stand ಅವತ್ತೇ ಹೇಳಿದ್ದಾರೆ. ‘ಹೌದು ರೀ, ನಾನು ವಿರೋಧ ಪಕ್ಷದಲ್ಲಿದ್ದಾಗ ಇದೇ ರೀತಿಯಲ್ಲಿಯೇ ಮಾತನಾಡುವುದು’ ಎಂದು ಇದೇ ಪದವನ್ನು ಬಳಸಿದ್ದಾರೆ.

ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಮಾನ್ಯ ಯಡಿಯೂರಪ್ಪನವರನ್ನು ಕೇಳಬಯಸುವುದೇನೆಂದರೆ, ದಯಮಾಡಿ ಧರಣಿ ಕುಳಿತುಕೊಳ್ಳಲಿ ಆದರೆ ಅವರು ಆ ದಿವಸ ಹೇಳಿದಿರಲ್ಲ, ನೋಟ್ ಪ್ರಿಂಟ್ ಮಾಡುವುದಕ್ಕೆ ಕೇಂದ್ರ ಸರ್ಕಾರ ನನಗೆ ಕೊಟ್ಟಿಲ್ಲವೆಂದು, ಆದರೆ ಇವತ್ತು ಪ್ರಿಂಟ್ ಮಾಡುವುದಕ್ಕೆ ಕೇಂದ್ರ ಸರ್ಕಾರ ಇವರಿಗೆ ಕೊಟ್ಟಿದೆಯೇ? ಅಥವಾ ಎಲ್ಲಿಂದ ಹಣ ಬಂದಿದೆ? ಕೇಂದ್ರ ಸರ್ಕಾರದವರು ಡಾ॥ಮನಮೋಹನ್ ಸಿಂಗ್ ಅವರು ಅಧಿಕಾರದಲ್ಲಿದ್ದಾಗ ಸುಮಾರು 73 ಸಾವಿರ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದರಲ್ಲ.... ಮೊನ್ನೆ ದಿವಸ ಮಾನ್ಯ ಯಡಿಯೂರಪ್ಪನವರು ಗುಲ್ಬರ್ಗಾದಲ್ಲಿ ನಡೆದಂತಹ ಪ್ರೆಸ್ ಕಾನ್ಫರೆನ್ಸ್‌ನಲ್ಲಿ ಒಂದು ಮಾತನ್ನು ಹೇಳಿದ್ದಾರೆ.

**ಸಭಾಪತಿಯವರು:–** ಈ ಸದನದ ಸದಸ್ಯರಲ್ಲದೆ ಇರುವಂಥವರ ಬಗ್ಗೆ ಚರ್ಚೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಉಗ್ರಪ್ಪನವರೆ, ನಿಮ್ಮ ಪರಿಸ್ಥಿತಿ ನನಗೆ ಅರ್ಥವಾಗುತ್ತದೆ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಈಶ್ವರಪ್ಪನವರೆ, ನನ್ನ ಪರಿಸ್ಥಿತಿ ಬಹಳ ಚೆನ್ನಾಗಿದೆ. ರಾಯಣ್ಣ ಬ್ರಿಗೇಡ್‌ನಲ್ಲಿ ನಿಮ್ಮ ಪರಿಸ್ಥಿತಿ ಏನಾಗಿದೆ ಎಂದು ರಾಜ್ಯದ ಜನತೆಗೆ ಗೊತ್ತಿದೆ. ಹಾಗಾಗಿ ನಿಮ್ಮ ಪರಿಸ್ಥಿತಿ ಹೇಗಿದೆ ಎಂದು ನಮಗೆ ಚೆನ್ನಾಗಿ ಗೊತ್ತಿದೆ. Don’t worry.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ರಾಜಕಾರಣಿಗಳ ಪರಿಸ್ಥಿತಿ ಉತ್ತಮವಾಗಿದೆ. ಅದೇ ರೀತಿ ಉಗ್ರಪ್ಪನವರಿಗೆ ಇದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Sri V.S. UGRAPPA:** You owe a duty to give an explanation to the people of this State. ತಾವು ಆ ದಿವಸ ಆ ರೀತಿ ಏಕೆ ಹೇಳಿಕೆಯನ್ನು ಮಾಡಿದಿರಿ, ಇವತ್ತು ಏಕೆ ಬದಲಾವಣೆ ಮಾಡುತ್ತಿದ್ದೀರಿ? ತಾವು ಸಹ ಆ ಸರ್ಕಾರದ ಪ್ರತಿನಿಧಿ ಆಗಿದ್ದಿರಿ ಎಂಬುದನ್ನು ಮರೆಯಬಾರದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈಗಲೂ ಸಹ ಹೇಳುತ್ತೇನೆ, ಆಗ ಏಕೆ? ಮಾನ್ಯ ಉಗ್ರಪ್ಪನವರು ಹೇಳುತ್ತಿರುವುದು ಸತ್ಯ. ಸಾಲ ಮನ್ನಾ ಮಾಡುವ ಬಗ್ಗೆ ರಿಸರ್ವ್ ಬ್ಯಾಂಕಿನವರು ಇವತ್ತು ಹೇಳುತ್ತಿಲ್ಲ, ಆವತ್ತಿನಿಂದಲೂ ಸಹ ಹೇಳುತ್ತಾ ಬಂದಿದ್ದಾರೆ. ಅವರೇನು ಹೊಸದಾಗಿ ಪ್ರಾರಂಭ ಮಾಡಿಲ್ಲ. ಅವರು ಸಾಲ ಮನ್ನಾ ಮಾಡುತ್ತೇವೆಂದು ಯಾವಾಗಲಾದರು ಒಪ್ಪಿಕೊಂಡಿದ್ದಾರೆಯೆ? ಸಾಲ ಮನ್ನಾ ಮಾಡಿ ನಾವು ತಯಾರಿದ್ದೇವೆಂದು ಒಪ್ಪಿಕೊಂಡಿದ್ದಾರೆಯೇ? ಅವರು ಒಪ್ಪಿಕೊಂಡಿಲ್ಲ. ಮಾನ್ಯ ಅರ್ಥ ಸಚಿವರು ಹೇಳುತ್ತಿರುವುದು ಹೌದು, ಮಾನ್ಯ ಪ್ರಧಾನ ಮಂತ್ರಿಗಳು ಸಹ ಹೇಳುತ್ತಿರುವುದು ಹೌದು. ವಿರೋಧ ಪಕ್ಷದಲ್ಲಿದ್ದಂತಹ ಸಂದರ್ಭದಲ್ಲಿ ನೀವು ಕೇಳಿದ್ದು ಹೌದು. ನಾವು ಆ ಸಂದರ್ಭದಲ್ಲಿ ಪ್ರಿಂಟ್ ಮಾಡುತ್ತಿದ್ದೇವೆಯೇ ಎಂದು ಹೇಳಿದ್ದು ಹೌದು. ಆದರೆ ಇವತ್ತು ವಿರೋಧ ಪಕ್ಷದಲ್ಲಿರುವಂತಹ ಸಂದರ್ಭದಲ್ಲಿ ನಾವು ಕೇಳುತ್ತಿರುವುದು ಹೌದು. ಸಧ್ಯಕ್ಕೆ ನೀವು ಇಲ್ಲವೆಂದು ಹೇಳುತ್ತಿರುವುದು ಹೌದು. ಇಲ್ಲಿ ಪ್ರಶ್ನೆ ಏನು ಬಂತು? ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಬರೆದಿಟ್ಟುಕೊಳ್ಳಿ ಈ ಸಭೆಯಲ್ಲಿ ಬಹಳ ಸಂತೋಷದಿಂದ ಹೇಳುತ್ತೇನೆ, 25 ಸಾವಿರ ರೂಪಾಯಿಗಳವರೆಗೂ ಸಾಲ ಮನ್ನಾ ಮಾಡಿದರು. ಮಾನ್ಯ ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 25 ಸಾವಿರ ರೂಪಾಯಿಗಳವರೆಗೂ ಸಾಲ ಮನ್ನಾ ಮಾಡಿದರು. ನೀವು ಹೇಳಿ ಹೇಳಿ ಎಂದು ಹೇಳಿದ್ದಕ್ಕೆ ನಾನು ಹೇಳುತ್ತಿರುವುದು. ಏಕೆ ವಿರೋಧ ಪಕ್ಷಕ್ಕೆ ಉತ್ತರ ಕೊಡಲಿಲ್ಲ?

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:-** ನಿಮ್ಮ double standard...

(ಗೊಂದಲ)

**ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಹೇಳಲಿ ಬಿಡಿ.

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿ ಈ ರಾಜ್ಯದ ಜನತೆ ಆಡಳಿತ ಪಕ್ಷಕ್ಕೆ ಒಂದು ಕೆಲಸ ಕೊಟ್ಟಿದ್ದಾರೆ, ಅದೇ ರೀತಿ ವಿರೋಧ ಪಕ್ಷಕ್ಕೂ ಒಂದು ಕೆಲಸವನ್ನು ಕೊಟ್ಟಿದ್ದಾರೆ. ಈ ಎರಡು ಕೆಲಸವನ್ನು ಈ ಎರಡು ಪಾತ್ರವನ್ನು ನಿರ್ವಹಿಸಬೇಕು. ಈ ಸದನದಲ್ಲಿ ಬಹಳ ಜನ ಹಿರಿಯ ಸದಸ್ಯರಿದ್ದಾರೆ. ನಾನೇನು ಉಪದೇಶ ಮಾಡುತ್ತಿಲ್ಲ. ಆದರೆ ಬಹಳಷ್ಟು ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಳಿತುಕೊಂಡಿದ್ದಾಗ ನೀವು ಇದನ್ನು ಹೇಳಿದ್ದೀರಿ ಎಂದು ಹೇಳಿದರೆ, ಇಲ್ಲಿ ಕುಳಿತುಕೊಂಡಾಗ ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ. Opposition has a say, Government has a way. ಸರ್ಕಾರ ನಡೆಸುವುದಕ್ಕೆ ಬಂದರೆ ಯಾವ ರೀತಿ ನಡೆಸಬೇಕೋ ಆ ರೀತಿ ನಡೆಸಬೇಕು. ಹಾಗಾದರೆ ಪ್ರಜಾಪ್ರಭುತ್ವದಲ್ಲಿ ನಾವು ಏನು ಹೇಳುವುದೇ ಬೇಡವೆ? ನೀವು ಆ ಸಮಯದಲ್ಲಿ ಈ ರೀತಿ ಹೇಳಿದ್ದಿರಿ, ಈಗ ಈ ರೀತಿ ಹೇಳುತ್ತಿದ್ದೀರಿ ಎಂದು ಹೇಳಿದರೆ ಹೇಗೆ? ಮೊನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಬಂದಾಗಲೂ ಸಹ ಮಾನ್ಯ ಶರವಣ ಅವರನ್ನು ಉದ್ದೇಶಿಸಿ, ನೀವು ಆಗ ಪಕ್ಷದಲ್ಲಿ ಇರಲಿಲ್ಲ ಈ ರೀತಿ ಎಲ್ಲಾ ಹೇಳಿದರು. ನಾನು ಕೇಳುತ್ತೇನೆ, ಹಳೆಯ ವಿಷಯವನ್ನು ನೆನಪು ಮಾಡಿಕೊಳ್ಳುವುದಕ್ಕೆ ಏನು ಆಭ್ಯಂತರವಿಲ್ಲ. ಆದರೆ ಈಗ ಕರ್ನಾಟಕದ ರಾಜ್ಯದ ಜನತೆ ನಮಗೊಂದು ಕೆಲಸ ಕೊಟ್ಟಾಗ ಆ ಕೆಲಸವನ್ನು ನಾವು ಇಲ್ಲಿ ನಿಭಾಯಿಸುವುದು ತಪ್ಪೇ? ನೀವು ಆಗ ಈ ರೀತಿ ಹೇಳಿದ್ದಿರಿ ಎಂದು ನೆನಪು ಮಾಡಿದರೆ ಈಗ ಹೇಳುವುದು ಸರಿಯೆ, ತಪ್ಪೇ ಎಂದು ಚರ್ಚೆ ಆಗಬೇಕೆ ಅಥವಾ ಆಗ ಹೇಳಿದ್ದು ಸರಿಯೆ ತಪ್ಪೇ ಎಂದು ಚರ್ಚೆ ಆಗಬೇಕೆ?

(ಗೊಂದಲ)

**ಶ್ರೀ ಬಾನುಪ್ರಕಾಶ್:-** ಸಾಧನೆಗಳನ್ನು ತೂಗಿ ನೋಡಬೇಕು...

(ಗೊಂದಲ)

**ಶ್ರೀ ಟಿ.ಎ.ಶರವಣ:-** ಅವರು ಮಾಡದೆ ಇರುವುದಕ್ಕೆ ವಿರೋಧ ಪಕ್ಷದ ಕಡೆ ಬಂದಿರುವುದು, ಈಗ ನೀವು ಜವಾಬ್ದಾರಿ ತೆಗೆದುಕೊಂಡು ಮಾಡಿ. ಅದಕ್ಕೆ ತಾನೆ ನಿಮಗೆ ಜನ ತೀರ್ಮಾನ ಕೊಟ್ಟಿದ್ದಾರೆ.

**ಶ್ರೀ ಭಾನುಪ್ರಕಾಶ್:-** ಪ್ರಜಾಪ್ರಭುತ್ವದ ಸೌಂದರ್ಯ ಇರುವುದೇ ಇಲ್ಲಿ. ಯಾರಿಗೆ ಯಾವ ಜವಾಬ್ದಾರಿಯನ್ನು ಕೊಟ್ಟಿರುತ್ತಾರೋ ಅದನ್ನು ನಿಭಾಯಿಸಬೇಕು. ನಾವು ಇಲ್ಲಿ ಕುಳಿತಿರುವಂತಹ ಸಂದರ್ಭದಲ್ಲಿ ಮಾನ್ಯ ಈಶ್ವರಪ್ಪನವರು ಏನೋ ಹೇಳಿದರು. Technically ಎಲ್ಲವನ್ನೂ ತೆಗೆದುಕೊಂಡು ಬ್ಯಾಂಕ್ ಅಕೌಂಟ್‌ಗಳಲ್ಲಿ NREG ಖಾತೆ ಇದೆ ಎಂದು ವಿಶ್ವಾಸಕ್ಕೆ ತೆಗೆದುಕೊಂಡು ಆ ವಿಷಯ ಸದನದಲ್ಲಿ ಪ್ರಸ್ತಾಪವಾದಾಗ ಸದನ ಸಮಿತಿ ರಚನೆ ಮಾಡಿ ಎಂದು ಹೇಳುತ್ತೀರಲ್ಲ, ಬೇರೆ ಬೇರೆ ಭ್ರಷ್ಟಾಚಾರಗಳನ್ನೆಲ್ಲಾ ಆರೋಪ ಮಾಡಿದ್ದೇವಲ್ಲ ಯಾವುದಕ್ಕೆ ನೀವು ಸಮಿತಿ ರಚನೆ ಮಾಡಿದ್ದೀರಿ? ಯಾವ ಆರೋಪವನ್ನು ಕಂಡು ಹಿಡಿದಿದ್ದೀರಿ?

ಮಾನ್ಯ ಸಭಾಪತಿಯವರೆ, ನಾನು ಕೇಳುವುದೇನೆಂದರೆ, ಈ ಸದನದಲ್ಲಿ ಎಲ್ಲಾ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ಈಗ ರಾಜ್ಯದ ಜನತೆ ಕೊಟ್ಟಂತಹ ಆದೇಶದ ಪಾತ್ರವನ್ನು ನಾವು ಮಾಡಬೇಕೆ ಅಥವಾ ನೀವು ಹೇಳಿದಂತಹ ಪಾತ್ರ ಮಾಡಬೇಕೆ? ಇದನ್ನು ಹೇಳಬೇಕಲ್ಲವೆ? ಪ್ರತಿ ಸಂದರ್ಭದಲ್ಲಿಯೂ ಇದೇ ವಿಷಯ ಚರ್ಚೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆದರೆ ಮೂಲ ವಿಷಯದ ಮಹತ್ವ ಹೊರಟು ಹೋಗುತ್ತದೆ. ಇಂತಹ ಒಳ್ಳೆಯ ವಿಷಯವನ್ನು ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ನಾನು ಹೇಳುವುದೇನೆಂದರೆ, ನೀವು ಮಾಡುತ್ತೀರೋ, ಬಿಡುತ್ತೀರೋ ಅದು ನಿಮಗೆ ಬಿಟ್ಟಿದ್ದು. ಆದರೆ ಆಗ್ರಹ ಮಾಡುವಂತಹ ಹಕ್ಕಂತೂ ನಮಗಿದೆ. ನೀವು ಮಾಡದೆ ಇದ್ದರೆ ಕರ್ನಾಟಕದ ರಾಜ್ಯದ ಜನತೆ ಗುರುತಿಸುತ್ತಾರೆ. ನಾವು ಮಾಡಿದಂತಹ ಕೆಲಸವನ್ನು ಗುರುತಿಸುತ್ತಾರೆ, ನೀವು ಮಾಡಿದಂತಹ ಕೆಲಸವನ್ನು ಸಹ ಗುರುತಿಸುತ್ತಾರೆ. ಅನಂತರ ಅವರು ಯಾರನ್ನು ಅಧಿಕಾರದಲ್ಲಿ ಕೂರಿಸಬೇಕೋ ಅವರನ್ನು ಕೂರಿಸುತ್ತಾರೆ. ಅದು ಬಿಟ್ಟು ನಿಮ್ಮ ದಯೆಯಿಂದ ನಾವಾಗಲಿ ಅಥವಾ ನಮ್ಮ ದಯೆಯಿಂದ ನೀವಾಗಲಿ ಇಲ್ಲಿ ನಿಂತು ಮಾತನಾಡುತ್ತಿಲ್ಲ. ಆದರೆ ನಾವು ಪ್ರಾಮಾಣಿಕವಾಗಿ ಯಾವುದಾದರು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ we are the watchdogs in the democracy. ನಾವು ಬೊಗಳುವುದನ್ನು ನೀವು ಆ ಕಡೆ ಕುಳಿತುಕೊಂಡಾಗ ಕೇಳಿಸಿಕೊಳ್ಳಲೇ ಬೇಕು. ನೀವು ವಾಪಸು ಈ ಕಡೆ ಬಂದಾಗ ನೀವು ಬೊಗಳುವುದನ್ನು ನಾವು ಕೇಳಲೇ ಬೇಕು. ಇದನ್ನು ಪ್ರಜಾಪ್ರಭುತ್ವ ಎಂದು ಹೇಳಬೇಕೆ ಹೊರತು ಇಂಚಿಂಚಿಗೆ, ಶಬ್ದ ಶಬ್ದಕ್ಕೂ ಹಿಡಿದು ಜಗ್ಗಿ ಮೂಲವಾದಂತಹ ಉದ್ದೇಶವನ್ನೇ ಹಾಳು ಮಾಡಿದರೆ ಹೇಗಾಗುತ್ತದೆ? ಆದುದರಿಂದ ನಾನು ಹೇಳುವುದೇನೆಂದರೆ, Opposition has a say. ನಮಗೆ ಒಂದು ಅವಕಾಶವಿದೆ. Government has a way. ದಯವಿಟ್ಟು act ಮಾಡಿ.

**ಸಭಾಪತಿಯವರು:–** ಮಾನ್ಯ ಈಶ್ವರಪ್ಪನವರೆ, ಬೇಗ ಮುಗಿಸಿಬಿಡಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅವರ ಜವಾಬ್ದಾರಿಯನ್ನು ಅವರು ನಿರ್ವಹಣೆ ಮಾಡಬೇಕು, ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಣೆ ಮಾಡಬೇಕು. ಆದರೆ double standards ಅನ್ನು ತೆಗೆದುಕೊಂಡು ಹೋಗಬಾರದು. ಸಂದರ್ಭಕ್ಕೆ ಅನುಸಾರವಾಗಿ ಮಾತನಾಡಿದರೆ ಈ ರಾಜ್ಯದ ಜನತೆಯಾಗಲಿ, ಈ ದೇಶದ ಜನತೆಯಾಗಲಿ ಮೆಚ್ಚುವುದಿಲ್ಲ. ಇದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. Ideology ವಿಚಾರವಾಗಿ ಮಾತನಾಡುವಂತಹ, ರೈತರ ಪರವಾಗಿ ಮಾತನಾಡುವಂತಹ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿದ್ದಾಗ ಒಂದು stand ಆಡಳಿತ ಪಕ್ಷದಲ್ಲಿದ್ದಾಗ ಒಂದು stand ತೆಗೆದುಕೊಳ್ಳುವುದು ಸರಿಯಲ್ಲ. ಇದನ್ನು ಮೊದಲು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರು ಏನೋ ಹೇಳಬೇಕೆಂದು ಬಯಸಿದ್ದಾರೆ. Yield ಆಗಿದ್ದಾರೆ ಆದುದರಿಂದ ಮಾನ್ಯ ಪುಟ್ಟಣ್ಣನವರು ಮಾತನಾಡಿ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಒಂದು ವಿಷಯವೇನೆಂದರೆ, ಆಡಳಿತ ಪಕ್ಷದಲ್ಲಿರುವವರು ಚೆನ್ನಾಗಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಅದೇ ರೀತಿ ವಿರೋಧ ಪಕ್ಷದಲ್ಲಿದ್ದವರೂ ಸಹ ಆಡಳಿತ ಪಕ್ಷದಲ್ಲಿದ್ದಾಗ ಅದೇ ರೀತಿಯಾಗಿಯೇ ಸಮರ್ಥನೆ ಮಾಡಿಕೊಳ್ಳುತ್ತಿದ್ದರು. ಅದಕ್ಕೆ ಅವರು ಈ ಕಡೆ ಬಂದಿದ್ದಾರೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಸರ್ಕಾರ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟಿದೆ. ಇಲ್ಲವೆಂದು ಹೇಳುತ್ತಿಲ್ಲ. ಆದರೆ ಕೆಲವು ಕಾರ್ಯಕ್ರಮಗಳಲ್ಲಿ implementation problem ಇದೆ. ಇನ್ನು ಕೆಲವು ಕಾರ್ಯಕ್ರಮಗಳು implement ಆಗಿವೆ. ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದಲ್ಲಿ ಒಂದಷ್ಟು ಬಡವರಿಗೆ, ಹಿಂದುಳಿದ ವರ್ಗಗಳಿಗೆ, SC/ST ಜನಾಂಗದವರಿಗೆ ಅನುಕೂಲ ಮಾಡುತ್ತಿದ್ದಾರೆ. ಆದರೆ ಆ ಯೋಜನೆಯ ಪ್ರಯೋಜನ ಕೆಲವರಿಗೆ ತಲುಪಿದೆ, ಕೆಲವರಿಗೆ ತಲುಪಿಲ್ಲ. ಕೆಲವು ಕಾರ್ಯಕ್ರಮಗಳಲ್ಲಿರುವಂತಹ ನ್ಯೂನತೆಗಳನ್ನು ಸರಿಪಡಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದೆಲ್ಲವೂ ಸಹ ಯಾವ ರೀತಿ ಆಗುತ್ತಿದೆ ಎಂದರೆ "ಅಡಕೆಗೆ ಹೋದ ಮಾನ ಆನೆ ಕೊಟ್ಟರು ಬರುವುದಿಲ್ಲ" ಎನ್ನುವಂತಾಗಿದೆ.

(849) 20.06.2017 KG.AK 1.50

ಶ್ರೀ ಪುಟ್ಟಣ್ಣ(ಮುಂದುವರೆದುದು)

ದಿವಂಗತ ಶ್ರೀ ಡಿ.ಕೆ.ರವಿಯವರ ಪ್ರಕರಣ ಆಯಿತು. ಅವರು ಸತ್ತು ಹೋದ ತಕ್ಷಣವೇ ಸರ್ಕಾರ ಅದರ ತನಿಖೆಯನ್ನು ಸಿ.ಬಿ.ಐ.ಗೆ ಕೊಟ್ಟಿದ್ದರೆ, ಅಂದು ಯಾರು ಸರ್ಕಾರವನ್ನು ಪ್ರಶ್ನೆ ಮಾಡುತ್ತಿರಲಿಲ್ಲ. ಇಡೀ ನಮ್ಮ ರಾಜ್ಯದ ಜನ ಸರ್ಕಾರವನ್ನು ಬೈಯುವತನಕ ಸರ್ಕಾರ ಅದನ್ನು ಸಿ.ಬಿ.ಐ. ಗೆ ವಹಿಸಿ ಕೊಡಲಿಲ್ಲ. ನಂತರ ಸರ್ಕಾರ ಅದನ್ನು ಸಿ.ಬಿ.ಐ. ತನಿಖೆಗೆ ಕೊಟ್ಟರು. ಅವತ್ತೇ ಅದನ್ನು ಸಿ.ಬಿ.ಐ. ಗೆ ವಹಿಸಿಬಿಟ್ಟಿದ್ದರೆ, ಸರ್ಕಾರವನ್ನು ಯಾರು ಪ್ರಶ್ನೆ ಮಾಡುತ್ತಿರಲಿಲ್ಲ. ಅದು ಅಲ್ಲಿಗೆ ಮುಗಿದು ಹೋಗುತ್ತಿತ್ತು. ಅದು ಅಷ್ಟೊಂದು ಸುದ್ದಿ ಆಗುತ್ತಿರಲಿಲ್ಲ. ಇದೇ ಫಲಿತಾಂಶ ಅವತ್ತೇ ಬರುತ್ತಿತ್ತು. ಇದಾದ ಮೇಲೆ ದಿವಂಗತ ಶ್ರೀ ಗಣಪತಿಯವರ ಪ್ರಕರಣ ಬಂತು. ಶ್ರೀ ಗಣಪತಿಯವರ ಕೇಸ್‌ನಲ್ಲಿ ಮಾನ್ಯ ಸಚಿವರಾದ ಶ್ರೀ ಕೆ.ಜೆ.ಜಾರ್ಜ್‌ರವರ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ಸರ್ಕಾರ ಒಂದು ತಿಂಗಳೊ ಅಥವಾ ಎರಡು ತಿಂಗಳೂ ಬಿಟ್ಟುಕೊಂಡು ಅವರ ರಾಜೀನಾಮೆಯನ್ನು ತೆಗೆದುಕೊಂಡಿದೆ. ಶ್ರೀ ಗಣಪತಿಯವರ ಪ್ರಕರಣ ವಿಚಾರಣೆಯಿಂದ clean chit ಆಯಿತು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಿಂದ ಸರ್ಕಾರಕ್ಕೆ ಏನು ತೊಂದರೆಯಾಗುತ್ತಿರಲಿಲ್ಲ. ಈಗಲೂ ಸಹ ರೈತರು ಸಾಲ ಮನ್ನಾ ಮಾಡಿ ಎಂದು ಕೇಳುತ್ತಿದ್ದಾರೆ. ಬರಿ ವಿರೋಧ ಪಕ್ಷದವರು ಮಾತ್ರ ರೈತರ ಸಾಲ ಮನ್ನಾ ಮಾಡಿ ಎಂದು ಕೇಳುತ್ತಿಲ್ಲ. ಇವತ್ತಿನ ದಿವಸ ಬಡ ರೈತರ ಸಾಲ ಮನ್ನಾ ಮಾಡಿ ಎಂದು ಕೇಳುತ್ತಿದ್ದಾರೆ. ಈಗ ಈ ಸರ್ಕಾರ, ಕೇಂದ್ರ ಸರ್ಕಾರ ಮನ್ನಾ ಮಾಡಲಿ ಎಂದು ಹೇಳುತ್ತಿದೆ. ಈಗ ವಿರೋಧಪಕ್ಷದವರು ಒಂದು ಲಕ್ಷ ಜನ ರೈತರನ್ನು ಕರೆದುಕೊಂಡು ಬಂದು ವಿಧಾನಸೌಧದ ಮುಂದೆ ಕುಳ್ಳಿರಿಸಿ ಧರಣಿ ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ. ರೈತರು ಗಲಾಟೆ ಮಾಡುತ್ತಿದ್ದಾರೆ. ನಮ್ಮ ಜನತಾ ದಳ ಪಕ್ಷದ ರಾಜ್ಯ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರು ಸಹ ರೈತರ ಸಾಲ ಮನ್ನಾ ಮಾಡಿ ಎಂದು ಸರ್ಕಾರಕ್ಕೆ ಹೇಳುತ್ತಿದ್ದಾರೆ. ಆದರೆ, ಸರ್ಕಾರ ಇಲ್ಲವೆಂದು ಹೇಳುತ್ತಿದೆ. ಈ ಸರ್ಕಾರದ ಉದ್ದೇಶ ಎಲ್ಲಿ dilute ಆಗುತ್ತದೆಂದರೆ, ಚುನಾವಣೆ ಹತ್ತಿರ ಬರಲಿ ರೈತರ ಸಾಲ ಮನ್ನಾ ಮಾಡೋಣ ಎಂದು ಸರ್ಕಾರ ಕಾಯುತ್ತಿದೆ. ಈ ಸರ್ಕಾರ ಚುನಾವಣೆಯ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಮಾಡಿದರೆ, ಆ ಕ್ರೆಡಿಟ್ ಈ ಸರ್ಕಾರಕ್ಕೆ ಸಿಗುವುದಿಲ್ಲ. ಏಕೆಂದರೆ, ವಿರೋಧಪಕ್ಷದವರು ಮತ್ತು ರೈತರು ಗಲಾಟೆ ಮಾಡಿದ ಮೇಲೆ ಸರ್ಕಾರ ಸಾಲ ಮನ್ನಾ ಮಾಡಿದರೆ ಆ ಕ್ರೆಡಿಟ್ ಈ ಸರ್ಕಾರಕ್ಕೆ ಬರುವುದಿಲ್ಲ. ಈ ಸರ್ಕಾರಕ್ಕೆ ಆ ಕ್ರೆಡಿಟ್ ಬರಬೇಕೆಂದರೆ, ಇವರೆಲ್ಲರೂ ಗಲಾಟೆ ಮಾಡುವುದಕ್ಕಿಂತ ಮುಂಚೆಯೇ ಅಥವಾ ಇವರೆಲ್ಲರೂ ಚಳುವಳಿ ಮಾಡುವುದಕ್ಕಿಂತ ಮುಂಚೆಯೇ ಸಾಲ ಮನ್ನಾ ಮಾಡಿದರೆ, ಆ ಕ್ರೆಡಿಟ್ ಈ ಸರ್ಕಾರಕ್ಕೆ ಬರುತ್ತದೆ. ಎಲ್ಲರೂ ಚಳುವಳಿ ಮಾಡಿದ ಮೇಲೆ ಸರ್ಕಾರ ಸಾಲ ಮನ್ನಾ ಮಾಡಿದರೆ dilute ಆಗುತ್ತದೆ. ಆ ಕ್ರೆಡಿಟ್ ವಿರೋಧ ಪಕ್ಷಕ್ಕೆ ಬರುತ್ತದೆ. ದಯಮಾಡಿ ಇದನ್ನು ಅರ್ಥ ಮಾಡಿಕೊಂಡು ಸರ್ಕಾರಕ್ಕೆ ಅಥವಾ ಮಂತ್ರಿಗಳಿಗೆ ಶಿಫಾರಸ್ಸು ಮಾಡುತ್ತೀರಾ? ಎಲ್ಲರೂ ಸಹ, stalwarts ಅಂದುಕೊಂಡಿರುವವರು ಎಲ್ಲರೂ ಸಹ ಇದನ್ನೇ ಹೇಳಬೇಕು. ನಾಳೆ ಮಾಡುವಂತಹದ್ದನ್ನು ಇವತ್ತೇ ಮಾಡಿ ಎಂದು ಹೇಳಬೇಕು. ಆಗ ಮಾತ್ರ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇಲ್ಲವೆಂದರೆ, ಅವತ್ತಿನ ದಿವಸ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಈ ರೀತಿ ಹೇಳಿದರು ಎಂದು ಹೇಳುತ್ತಾರೆ. ಅವತ್ತಿನ ದಿವಸ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಆ ರೀತಿ ಹೇಳಿದ್ದಕ್ಕೆ ಅವರು ಈ ಕಡೆ ಬಂದು ಕುಳಿತಿರುವುದು. ಈ ಸರ್ಕಾರ ಸಹ ಅದೇ ರೀತಿ ಹೇಳಿದರೆ, ಅವರು ಸಹ ಈ ಕಡೆ ಬಂದು ಕುಳಿತುಕೊಳ್ಳುತ್ತಾರೆ. ಅದಕ್ಕೆ ಸರ್ಕಾರಕ್ಕೆ ಆಸೆ ಇದೆಯಾ? ಅವರು ಸರಿಯಾಗಿ ಮಾಡಲಿಲ್ಲವೆಂದು ನಿಮ್ಮನ್ನು ಈ ಕಡೆ ಕುಳ್ಳಿರಿಸಿದ್ದು. ಈಗ ಇವರು ಸರಿಯಾಗಿ ಮಾಡಬೇಕಲ್ಲವೆ, ಮಾಡಲಿಲ್ಲವೆಂದರೆ ನಿಮ್ಮದು ಸಹ ಅಷ್ಟೇ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಇಷ್ಟು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಅತಿ ಹೆಚ್ಚು ಪ್ರಕರಣಗಳನ್ನು ಸಿ.ಬಿ.ಐ. ತನಿಖೆಗೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿರುತ್ತದೆ. 2006 ರಲ್ಲಿ ಮಾಜಿ ಮುಖ್ಯ ಮಂತ್ರಿಗಳಾದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ರೂ.150 ಕೋಟಿಗಳ scam ಬಂದಾಗ ಅದನ್ನು ಸಿ.ಬಿ.ಐ. ತನಿಖೆಗೆ ವಹಿಸುತ್ತಲೇ ಇಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೆ ಸಾಕು ಬಿಡಿ. ಈಗ ಆ ಚರ್ಚೆ ಬೇಡ.

(ಗೊಂದಲ)

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಇಲ್ಲವೆಂದು ಹೇಳಿಲ್ಲ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆ ಆಯಿತು ಬಿಡಿ. ದಯವಿಟ್ಟು ಕುಳಿತುಕೊಳ್ಳಿ. ಈಗ ಆ ಚರ್ಚೆ ಬೇಡ.

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷ ಅಧಿಕಾರಕ್ಕೆ ಬರುವ ಮುಂಚೆಯೇ ಸಾಲ ಮನ್ನಾ ಮಾಡುತ್ತೇವೆಂದು ಹೇಳುತ್ತಿದ್ದೇವೆ. ನಾವು ಅಧಿಕಾರಕ್ಕೆ ಬಂದ 24 ಗಂಟೆಯೊಳಗೆ ರೈತರ ಸಾಲ ಮನ್ನಾ ಮಾಡುತ್ತೇವೆ. ಈ ಸರ್ಕಾರದವರು ಏಕೆ ಸುಮ್ಮನೆ ನಮ್ಮನ್ನು ಇದರಲ್ಲಿ ಎಳೆಯುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೆ ಆಯಿತು ಬಿಡಿ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಈಶ್ವರಪ್ಪನವರೆ ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಬೇಗ ಮಾತನಾಡಿ ಮುಗಿಸಿಬಿಡುತ್ತೇನೆ. ಸರ್ಕಾರ ಇದಕ್ಕೆ ಮಧ್ಯಾಹ್ನದ ನಂತರ ಉತ್ತರ ಕೊಡಲಿ. ಮಾನ್ಯ ಉಗ್ರಪ್ಪನವರೆ, ಇಲ್ಲಿ ಆ ಕಡೆ ಒಂದು ಮಾತು; ಈ ಕಡೆ ಒಂದು ಮಾತು ಇದಲ್ಲ. ಅವರು ಹತ್ತು ಬಾರಿ ನನ್ನ ಹತ್ತಿರ printing machine ಇದೆಯಾ ಎಂದು ಕೇಳಿರಬಹುದು. ಅದು ನನಗೆ ಗೊತ್ತಿಲ್ಲ. ಆಯಿತು ಕೇಳಿದ್ದಾರೆ. ಅವರು ಹೇಳಿದ ಮೇಲೆ ನಾನು ಅದನ್ನು ಒಪ್ಪುತ್ತೇನೆ, ಅದನ್ನು ನಂಬುತ್ತೇನೆ. ಮತ್ತೆ ಯಾವ ಭಾಷೆಯಲ್ಲಿ ಇದನ್ನು ಹೇಳಲಿ. ಇದನ್ನು ಬಿಟ್ಟು ಬೇರೆ ಏನನ್ನು ಹೇಳಲಿ. ಮಾನ್ಯ ಸದಸ್ಯರಾದ ಬೋಸ್‌ರಾಜುರವರೆ ಸಾಕೆ, ನನ್ನ ಭಾಷೆ ಕೆಲವರಿಗೆ ಅರ್ಥವಾಗುವುದಿಲ್ಲ. ಇನ್ನೂ ಕೆಲವರಿಗೆ ಅರ್ಥವಾಗುತ್ತದೆ, ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿರುವುದು, ಪ್ರಾರಂಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಆ ಮಾತು ಹೇಳಿರಬಹುದು. ಸ್ವಲ್ಪ ದಿವಸಗಳ ನಂತರ ಅವರು 25 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿದರು. ಆ ಕಡೆ ಒಂದು ರೀತಿ, ಈ ಕಡೆ ಒಂದು ರೀತಿ ಮಾತನಾಡುವುದಲ್ಲ. ಎರಡನೆಯದು, ಮಾನ್ಯ ಜಗದೀಶ ಶೆಟ್ಟರ್‌ರವರು ಮುಖ್ಯ ಮಂತ್ರಿಗಳಾದಂತಹ ಸಂದರ್ಭದಲ್ಲಿ ಸಾಲ ಮನ್ನಾ ಮಾಡಬೇಕೆಂದು ಸದನ ನಡೆಯುತ್ತಿದ್ದ ವೇಳೆಯಲ್ಲಿ ವಿರೋಧಪಕ್ಷದವರು ದೊಡ್ಡ ಗಲಾಟೆ ಮಾಡಿದರು. ಅದು ವಿರೋಧ ಪಕ್ಷದವರ ಕರ್ತವ್ಯ. ನಾವು ಇವತ್ತು ಗಲಾಟೆ ಮಾಡುತ್ತಿರ್ದ್ದೇವೆ, ಅವರು ಅವತ್ತು ಗಲಾಟೆ ಮಾಡಿದ್ದಾರೆ. ಅದು ತಪ್ಪಲ್ಲ. ನಾನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಜಗದೀಶ ಶೆಟ್ಟರ್‌ರವರನ್ನು ನೆನಪು ಮಾಡಿಕೊಳ್ಳುತ್ತೇನೆ. ಮಾನ್ಯ ಜಗದೀಶ ಶೆಟ್ಟರ್‌ರವರು ಸಭಾಧ್ಯಕ್ಷರನ್ನು ಅರ್ಧಗಂಟೆ ಕಾಲ House adjourn ಮಾಡಬೇಕೆಂದು ಮನವಿ ಮಾಡಿಕೊಂಡರು. ಸಭಾಧ್ಯಕ್ಷರು ಅರ್ಧಗಂಟೆ ಕಾಲ House adjourn ಮಾಡಿದರು. House ನಲ್ಲಿ ಇದ್ದಂತಹ ಎಲ್ಲಾ ಪ್ರಮುಖ ಸಚಿವರನ್ನು ಕರೆದು spot ನಲ್ಲಿ ತೀರ್ಮಾನ ಮಾಡಿ, ನಂತರ House ಗೆ ಬಂದು ಅದನ್ನು ಘೋಷಣೆ ಮಾಡಿದರು. 25 ಸಾವಿರ ರೂಪಾಯಿ ಸಾಲ ಮನ್ನಾ ಮಾಡಿದರು. ಆ ಕಡೆ ಒಂದು, ಈ ಕಡೆ ಒಂದು ಅಲ್ಲ. ಮಾನ್ಯ ಸಚಿವರಾದ ಎಂ.ಆರ್.ಸೀತಾರಾಮ್‌ರವರೆ ಕೇಳಿ. ನೀವು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

**ಶ್ರೀ ಎಂ.ಆರ್.ಸೀತಾರಾಮ್ (ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಒಳ್ಳೆಯ ವಿಷಯವನ್ನು ಹೇಳಿದರು. ಅದನ್ನು ಮೆಚ್ಚಿ ಮೇಜು ತಟ್ಟಿದರೆ ಅದರಲ್ಲೇನು ತಪ್ಪಿದೆ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ :-** ಮಾನ್ಯ ಸಭಾಪತಿಯವರೇ, ಅವರು ತಟ್ಟಲಿ, ತಟ್ಟಿಕೊಳ್ಳಲಿ ಬಿಡಿ.

(ಗೊಂದಲ)

**ಶ್ರೀ ಸೋಮಣ್ಣ ಮ.ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನೊಂದು ಮನವಿ. ಇಡೀ ರಾಜ್ಯದ ರೈತರ ಕೂಲಿ ಕಾರ್ಮಿಕರ ಪರವಾಗಿ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಸರ್ಕಾರ ಸಾಲ ಮನ್ನಾ ಮಾಡುತ್ತೇವೆಂದು ಇವತ್ತೇ ಆದೇಶ ಮಾಡಿದರೆ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಿಗೆ ನಮ್ಮ ಪಕ್ಷದ ಪರವಾಗಿ ದೊಡ್ಡ ಹಾರ, ಶಾಲು, ಹಣ್ಣಿನ ಬುಟ್ಟಿಯನ್ನು ತಂದು ಸನ್ಮಾನ ಮಾಡುತ್ತೇವೆ. ನಾವು ಒಳ್ಳೆಯದನ್ನು ಸ್ವಾಗತ ಮಾಡತ್ತೇವೆ.

(ಗೊಂದಲ)

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಶ್ರೀ ಸೋಮಣ್ಣ ಮ.ಬೇವಿನಮರದ:-** ಸ್ವಲ್ಪ ತಡಿಯಿರಿ ಸಾರ್. ಮಾನ್ಯ ಸಭಾಪತಿಯವರೇ, ನಾವು ಒಳ್ಳೆಯದನ್ನು ಸ್ವಾಗತ ಮಾಡುತ್ತೇವೆ. ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ನಾವು ಇರಬಹುದು ಅಥವಾ ಜನತಾ ದಳ ಪಕ್ಷದವರು ಇರಬಹುದು. ನಾವು ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂಥದ್ದಿದ್ದರೆ, ಅದನ್ನು ಸದನಕ್ಕೆ ಸವಿಸ್ತಾರವಾಗಿ ತಿಳಿಸುತ್ತಿದ್ದೇವೆ. ಸರ್ಕಾರ ಅದನ್ನು ಪದೇ ಪದೇ ಪ್ರತಿಪಾದನೆ ಮಾಡುತ್ತಿದೆ. ಸರ್ಕಾರ ಸುಮ್ಮನೆ ರೈತರಿಗೆ ಹೇಳುತ್ತಿದೆ. ಆದರೆ, ಆಡಳಿತ ಪಕ್ಷದ ಕಡೆ ಹಿಂದೆ ಕುಳಿತಿರುವವರಲ್ಲಿ ಕೆಲವರಲ್ಲಿ ಇದೆ. ಅವರು ಆಗಲೇ ನಮ್ಮ ನಾಯಕರಾದ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ಹೇಳುವಾಗ ಮತ್ತು ತದನಂತರ ಸ್ವಲ್ಪ ತಡವಾಗಿ ಮಾನ್ಯ ಜಗದೀಶ ಶೆಟ್ಟರ್‌ರವರ ಹೆಸರನ್ನು ತೆಗೆಯುವ ಪೂರ್ವದಲ್ಲಿ ಮಾನ್ಯ ಜಗದೀಶ ಶೆಟ್ಟರವರದ್ದೂ ಹೇಳಿ, ಹೇಳಿ ಎಂದು ಹೇಳಿದರು. ಅಂದರೆ, ನಾವು ಸಾಲ ಮನ್ನಾ ಮಾಡಿದ್ದೇವೆಂದು ಅವರ ಮನಸ್ಸಿನಲ್ಲಿಯೂ ಸಹ ಇದೆ. ಎಲ್ಲೋ ಒಂದು ಕಡೆ ಅವರು ಇವತ್ತು ಅದನ್ನು ಸುಳ್ಳು ಹೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ :-** ಮಾನ್ಯ ಸಭಾಪತಿಯವರೇ, ಸಚಿವರಾದ ಮಾನ್ಯ ಎಂ.ಆರ್.ಸೀತಾರಾಮ್‌ರವರ ಬಗ್ಗೆ ನಮಗೆ ಬಹಳ ಗೌರವ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಮಾನ್ಯ ಕಂದಾಯ ಮಂತ್ರಿಗಳು ಇದ್ದಾರೆ. ಆಡಳಿತ ಪಕ್ಷಕ್ಕೆ ಚುರುಕು ಮುಟ್ಟಿಸುವಂತಹ ಕರ್ತವ್ಯ ವಿರೋಧ ಪಕ್ಷದ್ದು. ಅವರು ವಿರೋಧ ಪಕ್ಷದಲ್ಲಿ ಇದ್ದಂತಹ ಸಂದರ್ಭದಲ್ಲಿ ಅದನ್ನು ಮಾಡಿದ್ದಾರೆ. ಅವರು ಚುರುಕು ಮುಟ್ಟಿಸಿದಾಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರು 25 ಸಾವಿರ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಿದರು. ಅವರು ಏನು ಹೇಳಿದರು ಎಂಬುದಲ್ಲ. ಆದರೆ, ಅವರು ಸಾಲ ಮನ್ನಾ ಮಾಡಿದರು.

(ಗೊಂದಲ)

**ಶ್ರೀ ಎ.ಮಂಜು (ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಜಗದೀಶ್ ಶೆಟ್ಟರ್‌ರವರು ಮಾಡಿದರು ಸಾಲ ಮನ್ನಾ ಮಾಡಿದರು ಎಂದು ಮಾನ್ಯ ಈಶ್ವರಪ್ಪನವರು ಹೇಳಬೇಕಾಗುತ್ತದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮಂಜುರವರೆ, ನೀವು ಅದೇ ರೀತಿ ಆಗುತ್ತೀರಾ? ನಾವು ಅಧಿಕಾರದಲ್ಲಿದ್ದಾಗ, ಎರಡು ಬಾರಿ ಸಾಲ ಮನ್ನಾ ಆಗಿತ್ತು. ಮಾನ್ಯ ಸಚಿವರಾದ ಎ.ಮಂಜು ಅವರಿಗೆ ಅದು ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಹೇಗೆ ಮಾನ್ಯ ಸಚಿವರಾದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎ.ಮಂಜುರವರನ್ನು ಮಂತ್ರಿ ಮಾಡಿಬಿಟ್ಟರೋ, ಅದು ನನಗೆ ಗೊತ್ತಿಲ್ಲ. ಆಯಿತು ಬಿಡಿ. ಸಚಿವರಾದ ಎ.ಮಂಜುರವರ ಭಾಷಣವನ್ನು ಮಾನ್ಯ ಸದಸ್ಯರಾದ ವಿ.ಎಸ್.ಉಗ್ರಪ್ಪನವರಿಗೆ ಹೇಳಿಕೊಡಲಿ, ಅದನ್ನು ಮಾನ್ಯ ವಿ.ಎಸ್.ಉಗ್ರಪ್ಪನವರು ಮಾತನಾಡುತ್ತಾರೆ. ಬಿ.ಜೆ.ಪಿ. ಆ ಕಡೆ ಒಂದು, ಈ ಕಡೆ ಒಂದು ಅಲ್ಲ. ಪಂಜಾಬ್ ರಾಜ್ಯದ ಮುಖ್ಯಮಂತ್ರಿಯವರಿಗೆ ಬುದ್ಧಿ ಇಲ್ಲವೆ, ಅವರು ರೈತರ ಸಾಲ ಮನ್ನಾ ಮಾಡುವಂತೆ ಕೇಂದ್ರಕ್ಕೆ ಏಕೆ ಹೇಳಲಿಲ್ಲ? ನಾನು ಪಂಜಾಬ್ ಕಾಂಗ್ರೆಸ್‌ನ ಮುಖ್ಯಮಂತ್ರಿಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದೆ. ನಾನು ರೈತರ ಪರವಾಗಿ ಇಲ್ಲಿ ಕೇಳುತ್ತಿರುವುದು ಏನೆಂದರೆ, ನಮ್ಮ ರಾಜ್ಯದ ಮುಖ್ಯ ಮಂತ್ರಿಯವರು ಮೊದಲನೆ Cabinet meeting ನಲ್ಲಿ ಆ ದಲಿತರಿಗೆ, ಹಿಂದುಳಿದವರಿಗೆ ಬಾಕಿ ಇದ್ದ ಸಾಲವನ್ನು ಮನ್ನಾ ಮಾಡಿದರು. ನಾನು ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಯಾರು ಸಾಲ ಮನ್ನಾ ಮಾಡಿ ಎಂದು ಕೇಳಲಿಲ್ಲ. ಆಶ್ರಯ ಮನೆಗಳ ಸಾಲ ಮನ್ನಾ ಮಾಡಿದರು. ಗ್ರಾಮ ಪಂಚಾಯಿತಿಗಳ ವಿದ್ಯುಚ್ಛಕ್ತಿ ಬಿಲ್ಲನ್ನು ಮನ್ನಾ ಮಾಡಿದರು. ನಾನು ಅವರಿಗೆ ಕಳಕಳಿ ಇಲ್ಲವೆಂದು ಹೇಳಿಲ್ಲ. ಸರ್ಕಾರಕ್ಕೆ ಹಣ ಇಲ್ಲವೆಂದು ಭಯ. ಅವರಿಗೆಲ್ಲ ಮನ್ನಾ ಮಾಡಿಬಿಟ್ಟರು. ಏಕೆಂದರೆ, ಕಳಕಳಿ ಇತ್ತು, ಸರ್ಕಾರಕ್ಕೆ ಈಗಲೂ ರೈತರ ಬಗ್ಗೆ ಕಳಕಳಿ ಇದೆ. ನಾನು ಇಲ್ಲವೆಂದು ಹೇಳಿಲ್ಲ. ಪಾಪರ್ ಆಗಿರುವವರು ಹಣ ಇಲ್ಲವೆಂದು ಜೇಬು ಹುಡುಕುತ್ತಾರೆ. ಅದಕ್ಕೆ ನಾನು ಮನವಿ ಮಾಡುತ್ತೇನೆ. ನಾನು ಹಣಕಾಸಿನ expert ಅಲ್ಲ. ಸರ್ಕಾರಕ್ಕೆ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಇದ್ದರೆ, ಏಕೆಂದರೆ ಪಾಪರ್ ಆಗಿಬಿಟ್ಟ ಮೇಲೆ ಇನ್ನೇನು ಮಾಡಬೇಕು? ಬ್ಯಾಂಕಿಗೆ ಹೋಗಬೇಕು. ಇಲ್ಲವೆಂದರೆ, ಇನ್ನೊಂದು ಕಡೆ ಸಾಲ ತರಬೇಕು. ಸುಮ್ಮನೆ ಭಿಂಡವಾದ ಬೇಡ. ಕೇಂದ್ರ ಸರ್ಕಾರ, ಕೇಂದ್ರ ಸರ್ಕಾರ ಎಂದು ಹೇಳುವ ಬದಲು ಸರ್ಕಾರಕ್ಕೆ ಸಾಲ ತರುವುದಕ್ಕೆ ಶಕ್ತಿ ಇದ್ದರೆ, ದಯವಿಟ್ಟು ರೈತರ ಸಾಲ ಮನ್ನಾ ಮಾಡಿ. ನಾನು ಹೇಳುವುದು ಏನೆಂದರೆ, ಮಾನ್ಯ ಸಚಿವರಾದ ಕಾಗೋಡು ತಿಮ್ಮಪ್ಪನವರು ಎಲ್ಲಾ ಜಿಲ್ಲೆಗಳಿಗೆ ಹೋದಂತಹ ಸಂದರ್ಭದಲ್ಲಿ ನೀರಿನ ಬಗ್ಗೆ, ಮೇವಿನ ಬಗ್ಗೆ ಕೇಳುತ್ತಾರೆ ಎನ್ನುವಂತಹ ಸಂದರ್ಭದಲ್ಲಿ ರೈತರು ಒಂದು ರೀತಿ ಇವತ್ತಿನ ದಿವಸ ನಿರ್ಗತಿಕರಾಗಿಬಿಟ್ಟಿದ್ದಾರೆ. ಅವರಿಗೆ ಆಸರೆಯಾಗುವಂತಹ ಕರ್ತವ್ಯ ಸರ್ಕಾರದ್ದು. ಅದಕ್ಕೋಸ್ಕರ ಒಂದು ಕಡೆ ರೈತರ ಸಾಲ ಮನ್ನಾ ಮಾಡಿ ಎಂದು ವಿನಂತಿಸುತ್ತಿದ್ದೇವೆ. ಜೊತೆಗೆ ಸಾಲ ಮನ್ನಾ ಮಾಡಲಿಲ್ಲವೆಂದರೆ, ಇಡೀ ರಾಜ್ಯದ ಜನ ತಿರುಗಿ ಬಿಳುತ್ತಾರೆ ಎನ್ನುವಂತಹ ಎಚ್ಚರಿಕೆಯನ್ನು ಸಹ ಕೊಡುತ್ತೇನೆ. ವಿರೋಧ ಪಕ್ಷವು ಬಹಳ ಸ್ಪಷ್ಟವಾಗಿ ಹೇಳುತ್ತದೆ. ಸರ್ಕಾರ ಸಾಲ ಮನ್ನಾ ಮಾಡುವವರೆಗೂ ಹೋರಾಟ ಮಾಡುತ್ತೇವೆ. ಈ ದಿಕ್ಕಿನಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಸರ್ಕಾರ ಸಾಲ ಮನ್ನಾ ಮಾಡುವುದಿಲ್ಲವೆಂದು ಹೇಳುವುದಕ್ಕೆ ಹೋಗಬಾರದು. ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದಾಗ ಎರಡು ಬಾರಿ ಸಾಲ ಮನ್ನಾ ಮಾಡಿದ್ದೇವೆ. ನೀರು ಪೂರೈಕೆಗೆ ಸಂಬಂಧಿಸಿದಂತೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಎಂಬುದನ್ನು ದಯವಿಟ್ಟು ಗಮನಿಸಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(850) 02:00 20-06-2017 CS:RN

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು)**

ವಿಧಾನಸಭಾ ಸದಸ್ಯರ ಸಮಿತಿಗಳನ್ನು ಮಾಡಿ. ಸ್ಥಳೀಯ ಸಂಸ್ಥೆಗಳ ಮತ್ತು ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಸಮಿತಿಗಳನ್ನು ರಚನೆ ಮಾಡಿ. ಕೂಲಿಯ ವಿಚಾರದಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ, ಇದಕ್ಕೊಂದು ಸಮಿತಿಯನ್ನು ಮಾಡಿ. ಆ ಸಮಿತಿಗೆ ಅವಶ್ಯ ದಾಖಲೆಗಳನ್ನು ಕೊಟ್ಟು ನಾವು ಕೂಡ ನಿಮ್ಮ ಜೊತೆಯಲ್ಲಿ ಬರುವುದಕ್ಕೆ ತಯಾರಿದ್ದೇವೆ.

ಕೊನೆಯದಾಗಿ ಅಕ್ಕಿ ಲೂಟಿಕೋರರ ಬಗ್ಗೆ ಹೇಳುವುದಾದರೆ ಇದರಲ್ಲಿ ದೊಡ್ಡ ದೊಡ್ಡ ರಾಜಕಾರಣಿಗಳಿದ್ದಾರೆ. ಇದನ್ನು ನಿಯಂತ್ರಿಸಲು ಒಂದು ಸಮಿತಿಯನ್ನು ರಚನೆ ಮಾಡಿ ಇದಕ್ಕೆ ಪ್ರಾಮಾಣಿಕ ಅಧಿಕಾರಿಗಳನ್ನು ನೇಮಿಸಿ. ಏಕೆಂದರೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ಪ್ರಮಾಣದಲ್ಲಿ ಹಣ ಅನ್ನಭಾಗ್ಯಕ್ಕಾಗಿ ರಾಜ್ಯ ಸರ್ಕಾರಕ್ಕೆ ಬರುತ್ತಿದೆ. ಇದು ಸರಿಯಾದ ದಿಕ್ಕಿನಲ್ಲಿ ವಿನಿಯೋಗ ಆಗಬೇಕು ಮತ್ತು ಭ್ರಷ್ಟರಿಗೆ ಬಿಗಿ ಮಾಡಬೇಕು. ವಿಧಾನಸೌಧದಲ್ಲಿ ಕುಳಿತು ಜಿಲ್ಲಾಧಿಕಾರಿಗಳೊಂದಿಗೆ video conference ಮಾಡಲಿಕ್ಕೆ ಹೋಗಬೇಡಿ. ಸ್ವತಃ ಮಂತ್ರಿಗಳು ಉಸ್ತುವಾರಿ ಸಚಿವರುಗಳು ಜಿಲ್ಲಾ ಪ್ರವಾಸಗಳನ್ನು ಮಾಡಿ ಅಲ್ಲಿನ ಎಂಎಲ್ಎ, ಎಂಎಲ್‌ಸಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರುಗಳ ಜೊತೆಯಲ್ಲಿ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ. ಒಟ್ಟಿನಲ್ಲಿ 46 ವರ್ಷಗಳಿಂದ ಕಂಡರಿಯದಂತಹ ಭೀಕರ ಬರಗಾಲ ಈಗ ಬಂದಿರುವ ಹಿನ್ನೆಲೆಯಲ್ಲಿ ಒಂದು ರೀತಿಯಲ್ಲಿ ರಾಜ್ಯದ ಜನರಿಗೆ ನಿಮ್ಮ ಜೊತೆಗೆ ನಾವಿದ್ದೇವೆ ಎನ್ನುವಂತಹ ಆತ್ಮಸ್ಥೈರ್ಯವನ್ನು ಒಂದು ಕಡೆ, ಮತ್ತೊಂದು ಕಡೆ ಹಣಕಾಸಿನ ಧೈರ್ಯ ತುಂಬುವ ನಿಟ್ಟಿನಲ್ಲಿ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡಲೇಬೇಕು. ಸಾಲ ಮನ್ನಾ ಮಾಡದಿದ್ದರೆ ಅದಕ್ಕೆ ಸರಿಯಾದ ಪ್ರತಿಫಲವನ್ನು ಈ ಕಾಂಗ್ರೆಸ್ ಸರ್ಕಾರ ಅನುಭವಿಸುತ್ತದೆ ಎನ್ನುವ ಎಚ್ಚರಿಕೆಯ ಜೊತೆಗೆ ನಮ್ಮ ಭಾರತೀಯ ಜನತಾ ಪಕ್ಷ ಸರ್ಕಾರದ ವಿರುದ್ಧ ದೊಡ್ಡ ಹೋರಾಟವನ್ನು, ಆಂದೋಳನವನ್ನು ಇಡೀ ರಾಜ್ಯದಲ್ಲಿ ಮಾಡುತ್ತದೆ ಎನ್ನುವ ಎಚ್ಚರಿಕೆಯನ್ನು ಸಹ ಕೊಟ್ಟು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

## 8. ಪ್ರಕಟಣೆ

**ಸಭಾಪತಿಯವರು:– ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:**

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ:20.06.2017 ರಂದು "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕ, 2017 ನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿಸುತ್ತಾರೆ.

**9. ಹಣಕಾಸು ವಿಧೇಯಕಗಳನ್ನು ಹೊರತುಪಡಿಸಿ ಇನ್ನುಳಿದ ವಿಧೇಯಕಗಳನ್ನು 2–3 ದಿವಸ ಮುಂಚಿತವಾಗಿ ಮಾನ್ಯ ಸದಸ್ಯರಿಗೆ ಸರ್ಕ್ಯುಲೇಟ್ ಮಾಡಬೇಕೆನ್ನುವ ಬಗ್ಗೆ.**

~~~~~~~

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ತಮ್ಮ ಅಧ್ಯಕ್ಷತೆಯ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಫೈನಾನ್ಸ್ ಬಿಲ್ ಒಂದನ್ನು ಬಿಟ್ಟು ಬೇರೆ ಯಾವುದೇ ವಿಧೇಯಕವನ್ನು ಚರ್ಚೆ ಇಲ್ಲದೇ ಪಾಸ್ ಮಾಡಬಾರದೆಂದು ನಿರ್ಧರಿಸಲಾಗಿತ್ತು. ಖಾಸಗಿ ವೈದ್ಯರ ವಿಧೇಯಕ ಮತ್ತು ಶಿಕ್ಷಣದ ವಿಧೇಯಕ ಸದನದಲ್ಲಿ ಬರುತ್ತದೆ ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬರುತ್ತಿದೆ. ತಮ್ಮ ಅಧ್ಯಕ್ಷತೆಯ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಗೂ ಸಹ ಒಂದು ಬೆಲೆ ಇರಬೇಕು. ಖಾಸಗಿ ವೈದ್ಯರ ವಿಧೇಯಕ ಅಥವಾ ಶಿಕ್ಷಣದ ವಿಧೇಯಕಗಳಿಂದ ಬಹಳ ಅನ್ಯಾಯ ಆಗಿದೆ ಎಂದು ರಾಜ್ಯದಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ನಮಗೆ 2–3 ದಿವಸಗಳಿಗೆ ಮುಂಚಿತವಾಗಿ ಬಿಲ್ ಕಾಪಿ ನೀಡಬೇಕು, ಬಿಲ್ ಕೊಡದೇ ಇದ್ದಲ್ಲಿ ನಾವು ಯಾವುದೇ ರೀತಿಯಲ್ಲಿಯೂ ಬಿಲ್ ಪಾಸ್ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ. ಇದನ್ನು ತಾವು ಸರ್ಕಾರಕ್ಕೆ ದಯಮಾಡಿ ತಿಳಿಸಿ. ಯಾವ ಕಾರಣಕ್ಕೂ ಆ ಬಿಲ್ ಇಲ್ಲಿಗೆ ಬರಬಾರದು. ಏಕೆಂದರೆ ನಾಳೆ ಒಂದೇ ದಿವಸ ಅಧಿವೇಶನ ಇರುವುದು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಶ್ವರಪ್ಪನವರ ಮಾತಿಗೆ ನನ್ನ ಸಹಮತವಿದೆ. 2–3 ದಿವಸಗಳ ಮುಂಚೆ ನಮಗೆ ಬಿಲ್ ಕಾಪಿಯನ್ನು ನೀಡಬೇಕು ಮತ್ತು ಬಿಲ್ ಬಗ್ಗೆ ಸದನದಲ್ಲಿ ಚರ್ಚೆ ಆಗಬೇಕು. ಇವೆರಡೂ ಸಹ controvervtial Bill ಆಗಿರುವುದರಿಂದ ದಯಮಾಡಿ ಈ ಬಿಲ್‌ಗಳನ್ನು ತಾವು ಯಾವುದೇ ಕಾರಣಕ್ಕೂ ಇಲ್ಲಿ ಪ್ಲೇಸ್ ಮಾಡಿ ಪಾಸ್ ಮಾಡುವ ತರಹ ಮಾಡಬೇಡಿ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳಲ್ಲಿಯೂ ಸಹ ಎಲ್ಲರೂ ಚರ್ಚೆ ಮಾಡಿಯೇ ಬಿಲ್ ಪಾಸ್ ಆಗಬೇಕೆನ್ನುವ ಭಾವನೆ ಹೊಂದಿದ್ದಾರೆ. ಇದು ಸರ್ವಸಮ್ಮತವಾಗಿ ಚರ್ಚೆ ಆಗಿ ಪಾಸ್ ಆಗಬೇಕು. ಚರ್ಚೆಗೆ ಅವಕಾಶ ಇಲ್ಲದಿದ್ದರೆ ದಯಮಾಡಿ ತಾವು ಈ ಎರಡು ಬಿಲ್‌ಗಳನ್ನು ತರುವುದಕ್ಕೆ ಅವಕಾಶ ನೀಡಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~~

**ಸಭಾಪತಿಯವರು:-** ಯಾವುದೇ ಬಿಲ್ ಆದರೂ ಸಹ 2 ದಿವಸಗಳಿಗೆ ಮುಂಚಿತವಾಗಿ ನಮ್ಮ ಸದಸ್ಯರಿಗೆ circulate ಮಾಡಬೇಕು ಎಂದು ಈಗಾಗಲೇ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆ ಬಿಲ್ ಬಂದಾಗ ಏನು ಮಾಡಬೇಕೆಂದು ನೋಡೋಣ. ಈಗ ನನಗೆ ವಿಧಾನ ಸಭಾಧ್ಯಕ್ಷರಿಂದ ಏನು ಮಾಹಿತಿ ಬಂದಿದೆ ಅದನ್ನು ಈ ಸದನದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಿದ್ದೇನೆ. ಈಗ ಸದನವನ್ನು ಭೋಜನಕ್ಕಾಗಿ 3 ಗಂಟೆ 30 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

(851)(852)(853) 20.06.2017 03.40 LL-VK

**(ಭೋಜನ ವಿರಾಮಕ್ಕಾಗಿ 2 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 48 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಉಪ ಸಭಾಪತಿಯವರು:-** ಈಗ ಬರ ಪರಿಸ್ಥಿತಿಯ ಬಗ್ಗೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ.

**10. ನಿಯಮ 68ರ ಮೇರೆಗೆ**

**ರಾಜ್ಯದಲ್ಲಿ ಸತತ ಬರಗಾಲದಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಬರ ಪರಿಸ್ಥಿತಿಯ ಬಗ್ಗೆ ಈ ಸದನದಲ್ಲಿ ವ್ಯಾಪಕವಾದಂತಹ ಚರ್ಚೆಯಾಗಿದೆ. ಅನೇಕ ಜನ ಸನ್ಮಾನ್ಯ ಸದಸ್ಯರು ಚರ್ಚೆಯಲ್ಲಿ ಪಾಲ್ಗೊಳ್ಳುವ ಸಂದರ್ಭದಲ್ಲಿ ವಸ್ತುಸ್ಥಿತಿಯನ್ನು ಗಮನಕ್ಕೆ ತರುವುದರ ಜೊತೆಗೆ ಕೆಲವು ಉಪಯುಕ್ತವಾದಂತಹ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಅವುಗಳನ್ನು ಗಂಭೀರವಾಗಿ ಪರಿಗಣಿಸಬೇಕಾದಂತಹ ಅಗತ್ಯವಿದೆ ಎನ್ನುವಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೊನೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣದಲ್ಲಿ ಒಗಟುಗಳನ್ನು ಹೇಳಿ ಸರ್ಕಾರಕ್ಕೆ ಚಾಟಿಯನ್ನು ನೀಡಿದ್ದಾರೆ. ಅವರ ಎಚ್ಚರಿಕೆಯನ್ನು ಕೂಡ ನಾವು ಗಂಭೀರವಾಗಿ ಗಮನಿಸುತ್ತೇವೆ. ಈ ಮೊದಲು ನಾನು ಸರ್ಕಾರದ ಪರವಾಗಿ ಬರ ಸ್ಥಿತಿಯ ಬಗ್ಗೆ ಹೇಗೆ ಸರ್ಕಾರ ನಿರ್ವಹಿಸಿದೆ ಎನ್ನುವಂತಹದ್ದನ್ನು ವಿವರಿಸಿ ಹೇಳಿಕೆಯ ಮುಖಾಂತರ ತಿಳಿಸುತ್ತೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ.)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(854) 21-06-2017 (04-10)BSD-BNS

**ಶ್ರೀ ಕಾಗೋಡು ತಿಮ್ಮಪ್ಪ(ಮುಂದುವರೆದುದು)**

ಮಾನ್ಯ ಸಭಾಪತಿಯವರೇ, ಬರ ಪರಿಸ್ಥಿತಿ ಬಗ್ಗೆ ನಾನು ಕೂಡ ಪ್ರತಿ ಜಿಲ್ಲೆಗೆ ಎರಡೆರಡು ಬಾರಿ ಭೇಟಿ ನೀಡಿ, ವಸ್ತುಸ್ಥಿತಿಯನ್ನು ತಿಳಿದುಕೊಂಡು ನಾವು ಕೈಗೊಂಡಿರುವ ಕಾರ್ಯಕ್ರಮಗಳು ಎಷ್ಟು ಪರಿಣಾಮಕಾರಿಯಾಗಿ ಕಾರ್ಯಗತವಾಗಿವೆ ಎಂಬುದನ್ನು ತಿಳಿದುಕೊಂಡು ಬಂದಿದ್ದೇವೆ. ಜನರಿಗೆ ಕುಡಿಯುವುದಕ್ಕೆ ನೀರು, ಜಾನುವಾರುಗಳಿಗೆ ಮೇವು, ಜನರಿಗೆ ಉದ್ಯೋಗ ಕೊಡುವ ವಿಚಾರದಲ್ಲಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿ ಅಗತ್ಯವಾದ ಹಣವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡಿದ್ದೇನೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಮುಂಗಾರು ನಷ್ಟಕ್ಕೆ ಕೇಂದ್ರ ಸರ್ಕಾರದಿಂದ ಹಣ ಬಂದಿದ್ದು, ವಿಶೇಷವಾಗಿ ಕೇಂದ್ರದ ಕೃಷಿ ಸಚಿವರು ಮತ್ತು ಹಣಕಾಸಿನ ಸಚಿವರು ವಿಶೇಷ ಆಸಕ್ತಿ ತೋರಿಸಿ ಸ್ವಲ್ಪ ತಡವಾದರೂ ಹಣ ಬಿಡುಗಡೆ ಮಾಡಿದ್ದಾರೆ. ಅವರಿಗೆ ಈ ಸದನದ ಮೂಲಕ ಕೃತಜ್ಞತೆ ಸಲ್ಲಿಸುತ್ತೇನೆ. ಹಿಂಗಾರಿನ ವಿಚಾರದಲ್ಲಿ ಹಣ ಬಿಡುಗಡೆಯಾಗಬೇಕಾಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಒಂದು ಸಭೆಯನ್ನು ಕರೆಯಬೇಕಾಗಿದ್ದು, ಸದ್ಯದಲ್ಲಿಯೇ ನಾನು ದೆಹಲಿಗೆ ತೆರಳಿ ಮಾನ್ಯ ಕೃಷಿ ಸಚಿವರು ಹಾಗೂ ಸಮಿತಿಯ ಅಧ್ಯಕ್ಷರಾಗಿರುವ ಗೃಹ ಸಚಿವರನ್ನು ಕಂಡು ಮನವಿ ಮಾಡಬೇಕಾಗಿದೆ. ಹಣ ಬಿಡುಗಡೆಯಾಗುವ ವಿಶ್ವಾಸವೂ ನನಗಿದೆ. ಒಟ್ಟಾರೆ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿದ್ದೇವೆ ಎಂಬ ಮಾತನ್ನು ನಾನು ಆತ್ಮವಿಶ್ವಾಸದಿಂದ ಸದನದಲ್ಲಿ ಹೇಳುತ್ತೇನೆ. ಅನೇಕ ಮಾನ್ಯ ಸದಸ್ಯರು ಬರಪರಿಸ್ಥಿತಿಯ ಚರ್ಚೆಯಲ್ಲಿ ಭಾಗವಹಿಸಿ ಅನೇಕ ಸಲಹೆಗಳನ್ನು ಕೊಟ್ಟಿರುವುದಲ್ಲದೇ, ಮುಂದೆ ಇಂತಹ ಪರಿಸ್ಥಿತಿ ಆಗಬಾರದು ಎಂಬುದಕ್ಕೆ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳುವ ಬಗ್ಗೆ ಸಹ ಸಲಹೆಗಳನ್ನು ನೀಡಿರುವುದರಿಂದ ಅವರೆಲ್ಲರಿಗೂ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕಾರಣವೆಂದರೆ ಬದಲಾದ ಪರಿಸ್ಥಿತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮುಂದಿನ ಭವಿಷ್ಯದ ದೃಷ್ಟಿಯಿಂದ ಹೇಗೆ ಬದಲಾಯಿಸಿಕೊಳ್ಳಬೇಕು ಎಂಬ ಬಗ್ಗೆ ಅವರುಗಳೆಲ್ಲರೂ ನೀಡಿದಂತಹ ಬೆಳಕು ಸರ್ಕಾರಕ್ಕೆ ಸಹಕಾರಿಯಾಗಿದೆ. ಅದನ್ನು ನಾವು ಗಂಭೀರವಾಗಿ ಗಮನಿಸಿ ಸಾಧ್ಯವಿರುವಲ್ಲಿ ಅನುಕರಣೆ ಮಾಡಲು ಪ್ರಯತ್ನ ಮಾಡುತ್ತೇವೆ. ಈ ಮಧ್ಯದಲ್ಲಿ ಕೆಲವರು ಒಂದೆರಡು ವಿಷಯಗಳನ್ನು ತಿಳಿಸಿದ್ದು, ಮಾನ್ಯ ವಿರೋಧ ಪಕ್ಷದ ನಾಯಕರು ಯಾದಗಿರಿಗೆ ಭೇಟಿ ನೀಡಿದಾಗ ಕಂಡು ಬಂದ ಲೋಪಗಳು ಹಾಗು ಮಾನ್ಯ ಸೋಮಣ್ಣನವರು ಸವಣೂರಿನಲ್ಲಿ ಕಂಡು ಬಂದ ಲೋಪಗಳ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸಿ ಪರಿಶೀಲನೆ ಮಾಡುವುದಲ್ಲದೇ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ನರೇಗಾ ಯೋಜನೆ ಬಗ್ಗೆ ನನಗೆ ಬಹಳ ವಿಶ್ವಾಸವಿದ್ದು, ಇದರಿಂದ ದುಡಿಯುವ ಹಕ್ಕನ್ನು ಜನರಿಗೆ ಕೊಟ್ಟಿದೆ. ಇದು 100 ದಿವಸ ಕೊಟ್ಟ ಹಕ್ಕಾಗಿದ್ದು, ಇದನ್ನು ಬಳಸಿಕೊಳ್ಳುವ ವಿಚಾರದಲ್ಲಿ ಜನರಲ್ಲಿ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಬೇಕಾದ ಅಗತ್ಯ ತೀರಾ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನಿವಾರ್ಯವಾಗಿದೆ. ಏಕೆಂದರೆ ಅನೇಕ ಜನರಿಗೆ ಇದೊಂದು ಹಕ್ಕು ಎನ್ನುವುದೇ ಗೊತ್ತಿಲ್ಲ! ಆ ಹಕ್ಕನ್ನು ಬಳಸಿಕೊಳ್ಳಬೇಕು. ಅಲ್ಲದೆ ದಿನಕ್ಕೆ ಸುಮಾರು 200 ರೂಪಾಯಿಗಳನ್ನು ಕೊಡುತ್ತಿರುವುದರಿಂದ ಇತ್ತೀಚಿನ ದಿನಗಳಲ್ಲಿ ಹೆಚ್ಚು ಜನರು ಕೆಲಸಕ್ಕೆ ಬರುತ್ತಿದ್ದು, ನಾನೇ ಎಲ್ಲಾ ಕಡೆ ಹೋಗಿ ನೋಡಿದ್ದೇನೆ. ಕಾನೂನು ಪ್ರಕಾರ ವಾರಕ್ಕೆ ಒಂದು ಬಾರಿ ಸಂಬಳ ಕೊಡಬೇಕೆಂದು ಇದ್ದು, ವಸ್ತುಸ್ಥಿತಿಯಲ್ಲಿ ಆ ರೀತಿ ಆಗುತ್ತಿರಲಿಲ್ಲ. ಹಾಗಾಗಿ ಅವರಿಗೆ ಒಂದು ರೀತಿ ನಿರಾಸೆಯಾಗಿತ್ತು. ಇತ್ತೀಚಿನ ದಿನಗಳಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಸುಮಾರು ಹತ್ತು–ಹನ್ನೆರಡು ದಿನಗಳಲ್ಲಿ ಸಂಬಳ ಕೊಡುವ ಪದ್ಧತಿಯನ್ನು ಜಾರಿಗೆ ತಂದುದರಿಂದ ಹೆಚ್ಚು ಜನ ಕೆಲಸಕ್ಕೆ ಬರುತ್ತಿದ್ದು, ಇನ್ನೂ ಹೆಚ್ಚು ಜನ ಕೆಲಸ ಬರುವ ನಿರೀಕ್ಷೆ ಇದೆ. ಅದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕು. ಸಂಪತ್ತನ್ನು ವೃದ್ಧಿ ಮಾಡುವುದೇ ಶ್ರಮ. ಈ ಶ್ರಮಕ್ಕೆ ಅವರಿಗೆ ಹಕ್ಕು ಬಂದಿದ್ದು, ಈ ಶ್ರಮವನ್ನು ಬಳಸಿಕೊಂಡರೆ ಅವರು ಸ್ವಂತ ಕೆಲಸವನ್ನು ಮಾಡಬಹುದು. ಗೇಣಿರಹಿತ, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರಾಗಿದ್ದ ಸಂದರ್ಭದಲ್ಲಿ ಅವರು ಸ್ವಂತ ಕೆಲಸವನ್ನು ಮಾಡಿಕೊಳ್ಳಬಹುದು.

(ಮುಂದು)

**(855) 20-06-2017 SK-KS (AK) 4.20**

**ಶ್ರೀ ಕಾಗೋಡು ತಿಮ್ಮಪ್ಪ(ಮುಂದು)**

ಇದರಲ್ಲಿ ವಿಶೇಷ ಏನು ಎಂದು ಹೇಳಿದರೆ ಸಣ್ಣವರು, ದೊಡ್ಡವರು, ಅವರು ಮತ್ತು ಇವರು ಎಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇದರಲ್ಲಿ ಯಾರ ಬೇಕಾದರೂ ಕೆಲಸಕ್ಕೆ ಹೋಗುವುದಕ್ಕೆ ಅವಕಾಶವಿದೆ. ಈ ವಿಸ್ತಾರವಾದಂತಹ ಕಾರ್ಯಕ್ರಮದಲ್ಲಿ ನಾವು ಹೆಚ್ಚಾಗಿ ಬಳಸಿಕೊಳ್ಳುವಂತಹ ಜಾಗ್ರತೆಯನ್ನು ಜನರಿಗೆ ಮೂಡಿಸಬೇಕಾದಂತಹ ಅಗತ್ಯವಿದೆ. ವಾಸ್ತವಿಕವಾಗಿ, ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಎಷ್ಟು job card ಇದ್ದವೋ ಅಷ್ಟನ್ನು ಬಳಸಿಕೊಂಡರೆ, ನಮಗೆ ಹೆಚ್ಚು ಕಡಿಮೆ 15 ರಿಂದ 20 ಸಾವಿರ ಕೋಟಿ ರೂಪಾಯಿಗಳು ಬರಬೇಕು. ಆದರೆ ನಮಗೆ ಇನ್ನೂ 3 1/2 ಸಾವಿರ ಕೋಟಿ ರೂಪಾಯಿಗಳಾಗಿಲ್ಲ. ಈ ಕಾರಣದಿಂದ ಬಳಸಿಕೊಳ್ಳುವುದರಲ್ಲಿ ನಾವು ಸೋತಿದ್ದೇವೆ ಎಂಬ ಭಾವನೆ ನನಗೆ ಸಂಪೂರ್ಣವಾಗಿದೆ. ಆದ್ದರಿಂದ, ಚುನಾಯಿತ ಪ್ರತಿನಿಧಿಗಳು, ಶಾಸಕರಾದಂತಹವರು ಜನರಲ್ಲಿ ಜಾಗೃತಿಯನ್ನು ಮೂಡಿಸಿದರೆ ಈ ಒಂದು ಯೋಜನೆಯಲ್ಲಿ ಅವರ ಹಕ್ಕನ್ನು ಅವರಿಗೆ ಕೊಟ್ಟಂತೆ ಆಗುತ್ತದೆ. ಇಲ್ಲಿ ಒಂದು ದುರಂತ ಏನಾಗಿದೆ ಎಂದರೆ ಸ್ವಲ್ಪ ಜನರು ನಮ್ಮ ಸಮಾಜದಲ್ಲಿ ದುಡಿಯುವುದಿಲ್ಲ. ಜನರಿಂದ ಅವರಿಗೆ ಕೆಲಸವಾಗಬೇಕಾಗಿರುತ್ತದೆ. ಅವರಿಗೆ ಏನಾಗಿಬಿಟ್ಟಿದೆ ಎಂದರೆ, ಅವರವರು ಕೆಲಸಕ್ಕೆ ಹೋಗುವುದರಿಂದ ತಮ್ಮ ಕೆಲಸ ಎಲ್ಲಿ ನಿಂತು ಹೋಗಿ ಬಿಡುತ್ತದೆಂಬ ಕಾರಣಕ್ಕಾಗಿ, ಅವರು ಅದನ್ನು ಪ್ರೋತ್ಸಾಹ ಮಾಡುವ ಬದಲಾಗಿ ಒಂದು ರೀತಿಯ ತಾತ್ಸಾರ ಅಥವಾ ಒಂದು ರೀತಿಯ ಹಿನ್ನಡೆಯಾಗುವುದಕ್ಕೆ ಏನು ಬೇಕೋ ಅದು ಆಗುತ್ತದೆ. ಆ ರೀತಿ ಆಗಕೂಡದು. ಏಕೆಂದರೆ, ಮನುಷ್ಯ ತನ್ನ ಶ್ರಮವನ್ನು ಬಳಸಿಕೊಂಡರೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಪತ್ತನ್ನು ಸೃಷ್ಟಿ ಮಾಡುವುದಕ್ಕೆ ಸಾಧ್ಯ. ಇಡಿ ಜಗತ್ತಿನಲ್ಲಿ ಇದು ಮೊದಲನೇ ಬಾರಿ ‘ದುಡಿಯುವ ಹಕ್ಕ’ನ್ನು ಕೊಟ್ಟಂತಹ ಕಾರ್ಯಕ್ರಮ. ಇದರ ಸದ್ಬಳಕೆ ಆಗಬೇಕು. ಆದ್ದರಿಂದ ನಮ್ಮ ರಾಜ್ಯದಲ್ಲಿ ಗುಳೆ ಹೋಗುವಂತಹ ಒಂದು ವ್ಯವಸ್ಥೆಯಿತ್ತು. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ನಂತರ ನಾವು ತುಂಬಾ ಯಶಸ್ವಿಯಾಗಿ ಮಾಡಿದ್ದರಿಂದ ಈ ಗುಳೆ ಹೋಗುವಂತಹದು ಇವತ್ತು ಕಡಿಮೆಯಾಗಿದೆ. ಕೆಲವರು ಗುಳೆ ಹೋಗುವವರಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ನಮ್ಮ ಸೊರಬ ತಾಲ್ಲೂಕಿನ ಭಾಗದಲ್ಲಿ ವರ್ಷ ವರ್ಷ ಕಾಫಿ ತೋಟಕ್ಕೆ ಹೋಗುತ್ತಾರೆ. ಮೊದಲಿನಿಂದ ಆ ಪದ್ಧತಿ ಮುಂದುವರೆಸಿಕೊಂಡು ಬಂದಿದ್ದಾರೆ. ಯಾರೋ ಕೆಲವರು ಹೋಗುತ್ತಾರೆ. ಕೆಲವರು ಕಾಫಿ ಬೆಳೆಗಾರರ ಸಂಪರ್ಕ ಇಟ್ಟುಕೊಂಡಿರುವರು ಹೋಗುತ್ತಾರೆ ವಿನಃ ಬೇರೆ ಎಲ್ಲಿಗೂ ಹೋಗುವುದಿಲ್ಲ. ಈ ವರ್ಷ ಬರಗಾಲ ಇರುವಂತಹ ಪರಿಸ್ಥಿತಿಯಲ್ಲಿ ನಮಗೆ ಏನು ಆತಂಕೆಯಿತ್ತು ಎಂದರೆ, ಜನರು ಹೆಚ್ಚು ಗುಳೆ ಹೋಗುವ ಸನ್ನಿವೇಶ ಉಂಟಾಗಬಹುದು. ನಾವು ಉದ್ಯೋಗ ಖಾತ್ರಿಯನ್ನು ಸಮರ್ಪಕವಾಗಿ ಈ ಬಾರಿ ಬಳಸಿಕೊಂಡಿದ್ದರಿಂದ ಗುಳೆ ಹೋಗುವಂತಹದು ನಿಂತಿದೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ತಂದಿರುವ ‘ಅನ್ನಭಾಗ್ಯ ಮತ್ತು ಕ್ಷೀರಭಾಗ್ಯ’ ಕಾರ್ಯಕ್ರಮಗಳು ಇದಕ್ಕೆ ಒಂದು added advantage ಗುಳೆ ಹೋಗುವಂಥದ್ದು ನಿಲ್ಲುವುದಕ್ಕೆ ಇವತ್ತು ಸಾಧ್ಯವಾಗಿದೆ. ಕರ್ನಾಟಕ ರಾಜ್ಯದಲ್ಲಿ ಇದೊಂದು ಉತ್ತಮವಾದ ಬೆಳವಣಿಗೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂತಹ ವಸ್ತುಸ್ಥಿತಿಯನ್ನು ನಾವು ಇವತ್ತು ಕಾಣುತ್ತಿದ್ದೇವೆ. ಇವತ್ತು ನಮ್ಮ, ಅನೇಕ ಸ್ನೇಹಿತರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಹೇಳಿದರು. ಅನ್ನಭಾಗ್ಯದ ಅಕ್ಕಿ ಮಾರಾಟ ಆಗುವಂಥ ಆಪಾದನೆಯನ್ನು ಸಹ ಮಾಡಿದ್ದಾರೆ. ಅದೇ ರೀತಿ ಮರಳಿನ ಬಗ್ಗೆ ಈ ಸನ್ನಿವೇಶದಲ್ಲಿ ಅವರು ಸಾಂದರ್ಭಿಕವಾಗಿ ಪ್ರಸ್ತಾಪವನ್ನು ಮಾಡಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಆದರೆ ಇದನ್ನು ನಿಲ್ಲಿಸಬೇಕಾಗುತ್ತದೆ. ಅದರಲ್ಲಿ ಏನು ಭಿನ್ನಾಭಿಪ್ರಾಯವಿಲ್ಲ. ಅವರು ಹೇಳಿದಂತಹ ಸಲಹೆಗಳು ಸರ್ಕಾರಕ್ಕೆ ಒಂದು ರೀತಿಯ ಮಾರ್ಗದರ್ಶನವಾಗಿದೆ. ಅದನ್ನು ನಾವು ಗಂಭೀರವಾಗಿ ಪರಿಗಣಿಸಿ ಎಲ್ಲೆಲ್ಲಿ ನ್ಯೂನತೆಯನ್ನು ಅವರು ಗುರುತಿಸಿ ಹೇಳಿದ್ದಾರೆ ಅದನ್ನು ನಾವು ಗಂಭೀರವಾಗಿ ಪರಿಶೀಲಿಸಿ, ಮುಂದೆ ಇದು ಆಗದೇ ಇರುವ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ನಾನು ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಕೃಷಿ ಸಚಿವರು ಇಲ್ಲಿದ್ದಾರೆ. ಅವರು ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾರೆ. ಒಟ್ಟಾರೆ ಈ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ಇಲ್ಲಿಯವರೆಗೆ ನಾವು ಎದುರಿಸಿದ್ದೇವೆ. ಜನರಿಗೆ ಸಮಾಧಾನ ತಂದಿದೆ ಎಂಬ ವಿಶ್ವಾಸ ಮತ್ತು ನಂಬಿಕೆ ನಮಗೆ ಇದೆ. ಆದ್ದರಿಂದ, ಇಷ್ಟು ಮಾತುಗಳಿಂದ ಈ ಒಂದು ಬರ ಪರಿಸ್ಥಿತಿಗೆ ಏನು ಚರ್ಚೆ ನಡೆಯಿತೋ, ಆ ಚರ್ಚೆಗೆ ಉತ್ತರವನ್ನು ನೀಡಿದ್ದೇನೆ. ಮಾನ್ಯ ಸದಸ್ಯರುಗಳಿಗೆ ಮನವರಿಕೆಯಾಗಿದೆ ಎಂಬ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ತಮಗೆ ವಿಶ್ವಾಸವಿದೆ.

**ಶ್ರೀ ಐವನ್ ಡಿ'ಸೋಜಾ:–** ತೀವ್ರವಾದಂಥ ವಿಶ್ವಾಸ.

**ಶ್ರೀ ಕಾಗೋಡು ತಿಮ್ಮಪ್ಪ:–** ತೀವ್ರವಾದಂಥ ವಿಶ್ವಾಸ. ಇದು ಸ್ವಾಭಾವಿಕ ಅಲ್ಲವೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರಿಗೆ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಉಪ ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು, ಮಾನ್ಯ ಕೃಷಿ ಸಚಿವರು

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಸಾಕಷ್ಟು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ರೈತರ ಆದಾಯಕ್ಕೆ ನಷ್ಟವಾಗಿದೆ ಎನ್ನುವ ವಿಚಾರದ ಬಗ್ಗೆ ಸ್ವಲ್ಪ ಪೂರಕವಾಗಿ ಕೆಲವು ಮಾಹಿತಿಗಳನ್ನು ಸದನದೊಳಗೆ ಹಂಚಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಎರಡು ವರ್ಷ ಬರಗಾಲ ಪರಿಸ್ಥಿತಿ ನಿರ್ಮಾಣವಾಗಿರುವುದು ನಿಜ. ರೈತರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಆದಾಯ ನಷ್ಟವಾಗಿದೆ. ಬೆಳೆ ಕೈಕೊಟ್ಟಿದ್ದರಿಂದ ಅವರ ಆದಾಯಕ್ಕೆ ಬಹಳ ಕುತ್ತು ಬಂದಿದೆ. ಅವರಿಗೆ ಬರುವ ಆದಾಯ ಬಂದಿದ್ದರೆ, ಅವರ ಜೀವನ ನಡೆಯುತ್ತಿತ್ತು. ಇವತ್ತು ಸರ್ಕಾರದ ಹಂತದಲ್ಲಿ ಅದನ್ನು ಎಷ್ಟರಮಟ್ಟಿಗೆ ಸರಿದೂಗಿಸುವುದಕ್ಕೆ ಸಾಧ್ಯ? ಆ ಪ್ರಯತ್ನವನ್ನು ಸರ್ಕಾರ ಖಂಡಿತವಾಗಿ ಮಾಡುತ್ತಿದೆ. ನೀವು ಹಿಂದಿನ ವರ್ಷಗಳನ್ನು ಹೋಲಿಕೆ ಮಾಡಿದರೆ, ಕಳೆದ ಎರಡು ವರ್ಷಗಳಲ್ಲಿ ನಾವು ಈ ಬೆಳೆಗೆ ಏನು ಪರಿಹಾರವನ್ನು ಕೊಡುತ್ತೇವೆ, ಅದನ್ನು 'Input Subsidy' ಎಂದು ಕರೆಯುತ್ತೇವೆ. ಈ National Disaster Response Fund (NDRF) and State Disaster Response Fund (SDRF) ನಿಧಿಯಲ್ಲಿ ಕೊಡುವಂತಹ ಪರಿಹಾರಕ್ಕೆ input subsidy ಎಂದು ಆಡಳಿತ ಭಾಷೆಯಲ್ಲಿ ಕರೆದರೆ ಆಡು ಭಾಷೆಯಲ್ಲಿ 'ಬೆಳೆ ಪರಿಹಾರ' ಎಂದು ಹೇಳುತ್ತೇವೆ. ವಾಸ್ತವಿಕವಾಗಿ, ಅದು ಬೆಳೆ ಪರಿಹಾರವಲ್ಲ. ಅದು input subsidy. ಇರಲಿ, ಅದು ಹಾಗೂ ಅದರ ಜೊತೆಗೆ ವಿಮೆ ಮುಖಾಂತರ ಹೆಚ್ಚಿನ ಪರಿಹಾರವನ್ನು ಕೊಡುವಂತಹ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿದೆ. ನೀವು ಹೇಳಬಹುದು ಎಲ್ಲರೂ ಹೀಗೆಯೇ ಹೇಳುತ್ತಾರೆ. ನೀವು ಇದನ್ನು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ. ಸುಮ್ಮನೆ ಹೇಳಿಕೆಗಳನ್ನು ಕೊಡುವುದು ನಿಮಗೆ ವಾಡಿಕೆಯಾಗಿಬಿಟ್ಟಿದೆ ಎಂದು ತಾವು ಹೇಳಬಹುದು. ಅದಕ್ಕೆ ಪೂರಕವಾಗಿ ಹೇಳುವುದಾದರೆ ಕಳೆದ ಎರಡು ವರ್ಷಗಳಲ್ಲಿ ನಾವು ಎಷ್ಟು ಕೊಟ್ಟಿದ್ದೇವೆ ಹಾಗೂ ಹಿಂದಿನ ವರ್ಷಗಳನ್ನು ಹೋಲಿಕೆ ಮಾಡಿ ಹೇಳುವುದಾದರೆ, 2012ರಲ್ಲಿ ನಮ್ಮ ರಾಜ್ಯದಲ್ಲಿ ಬಹಳ ಭೀಕರವಾದಂತಹ ಬರಗಾಲವಿತ್ತು. ಇದು ತಮಗೆ ಎಷ್ಟು ಜನರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಜ್ಞಾಪಕವಿದೆಯೋ ನನಗೆ ಗೊತ್ತಿಲ್ಲ. ಚುನಾವಣಾ ಪೂರ್ವ ವರ್ಷದಲ್ಲಿ 2012-13ರಲ್ಲಿ ಬಹಳ ತೀವ್ರವಾದಂತಹ ಬರಗಾಲವಿತ್ತು. ಆ ವರ್ಷ 157 ತಾಲ್ಲೂಕುಗಳು ಬರ ಎಂದು ಘೋಷಣೆಯಾಗಿತ್ತು. ನಾವು ಆ ವರ್ಷ ಮುಂಗಾರು ಬೆಳೆ ಪರಿಹಾರ 379 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಿಂಗಾರಿಗೆ ಯಾಕೋ ಏನೋ ಗೊತ್ತಿಲ್ಲ. ಬೆಳೆ ಪರಿಹಾರಕ್ಕೆ ಸಂಬಂಧಪಟ್ಟ ಹಾಗೆ ಆ ವರ್ಷ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿಲ್ಲ. ನಮ್ಮ ಮನವಿ ಎಂದರೆ, drought memorandum' ಎಂದು ಏನು ಹೇಳುತ್ತೇವೆ, ಆ ವರ್ಷ ಹಿಂಗಾರಿಗೆ memorandum ಕೊಟ್ಟಿಲ್ಲ. ಮುಂಗಾರಿಗೆ ಮಾತ್ರ memorandum ಕೊಟ್ಟಿದ್ದಾರೆ. ಮುಂಗಾರಿಗೆ ಸಂಬಂಧಪಟ್ಟಂತೆ 379 ಕೋಟಿ ರೂಪಾಯಿಗಳು ಬಂದಿತ್ತು. 157 ತಾಲ್ಲೂಕು ಬರ ಘೋಷಣೆಯಾಗಿತ್ತು. ರಾಜ್ಯ ವ್ಯಾಪ್ತಿಯಲ್ಲಿ ಬರ ಬಂದಂತಹ ಸಂದರ್ಭ. ಅದರ ಜೊತೆಗೆ ವಿಮೆ ಮುಖಾಂತರ ಆ ವರ್ಷ ಮುಂಗಾರಿಗೆ 222 ಕೋಟಿ ರೂಪಾಯಿಗಳು ಬಂದಿತ್ತು. ಆ ನಂತರ ಹಿಂಗಾರಿನಲ್ಲಿ 30 ಕೋಟಿ ರೂಪಾಯಿಗಳ ವಿಮೆ ಬಂದಿತ್ತು. ಒಟ್ಟು ಆ ವರ್ಷ ಎಲ್ಲಾ ಮೂಲಗಳಿಂದ ಸರ್ಕಾರ ಕೊಟ್ಟಂತಹ ಪರಿಹಾರ ಮತ್ತು ವಿಮೆ ಮುಖಾಂತರ ಎಲ್ಲವನ್ನೂ ಸೇರಿಸಿದರೆ ರೈತರಿಗೆ 2012-13ರಲ್ಲಿ 649 ಕೋಟಿ ರೂಪಾಯಿಗಳಷ್ಟು ಪರಿಹಾರ ಸಿಕ್ಕಿರುತ್ತದೆ. 2012 ರಲ್ಲಿ ಮುಂಗಾರು ಮತ್ತು ಹಿಂಗಾರು ಇವೆರಡನ್ನು ಸೇರಿಸಿದರೆ ಒಟ್ಟು 649 ಕೋಟಿ ರೂಪಾಯಿಗಳ ಪರಿಹಾರ ರೈತರಿಗೆ ಸಿಕ್ಕಿದೆ. ಈಗ ಎರಡು ವರ್ಷಗಳಿಂದ ಬರಗಾಲದಲ್ಲಿದ್ದೇವೆ. 2015 ರಲ್ಲಿ 137 ತಾಲ್ಲೂಕುಗಳು ಮತ್ತು ಇನ್ನೂ ಒಂದೆರಡು ತಾಲ್ಲೂಕುಗಳನ್ನು ಸೇರಿಸಿದರೆ ಒಟ್ಟು 139 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿತ್ತು. 2015 ರಲ್ಲಿ ಮುಂಗಾರಿಗೆ ಸಂಬಂಧಪಟ್ಟಂತೆ ನಾವು ಸರ್ಕಾರದಿಂದ ಕೊಟ್ಟಂತಹ ಪರಿಹಾರ ಧನ 1852 ಕೋಟಿ ರೂಪಾಯಿಗಳು ಮತ್ತು ಮುಂಗಾರಿಗೆ ಎಲ್ಲಾ ರಾಜ್ಯಗಳು ಆ ವರ್ಷ ಕೊಟ್ಟಿದ್ದವು. ತಮಗೆ ಜ್ಞಾಪಕವಿರಬಹುದು, ಆ ವರ್ಷ ಇಡೀ ದೇಶದಲ್ಲಿ ಬರಗಾಲ ಪರಿಸ್ಥಿತಿ ಇತ್ತು. ಹಿಂಗಾರಿನಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟಿದ್ದು, ಕರ್ನಾಟಕ ರಾಜ್ಯ ಮಾತ್ರ. ಇನ್ನು ಬೇರೆ ರಾಜ್ಯದವರು ಯಾರು ಸಹ ಮನವಿಯನ್ನು ಕೊಡುವುದಕ್ಕೆ ಹೋಗಲಿಲ್ಲ. ಆದರೂ ನಮ್ಮ ಜಾಗರೂಕತೆಯಿಂದ ತಪ್ಪದೇ ಎಚ್ಚರಿಕೆಯಿಂದ ಹಿಂಗಾರಿಗೆ ಮನವಿ ಕೊಟ್ಟು, ನಾವು ಹಿಂಗಾರಿನಲ್ಲಿ 607 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಮುಂಗಾರಿನಲ್ಲಿ 1852 ಕೋಟಿ ರೂಪಾಯಿಗಳು, ಹಿಂಗಾರಿನಲ್ಲಿ 607 ಕೋಟಿ ರೂಪಾಯಿಗಳು ಮತ್ತು ವಿಮೆ ಮುಖಾಂತರ ಮುಂಗಾರಿಗೆ 693 ಕೋಟಿ ರೂಪಾಯಿಗಳು ಮತ್ತು ಹಿಂಗಾರಿಗೆ 179 ಕೋಟಿ ರೂಪಾಯಿಗಳು. ಒಟ್ಟು ಸೇರಿಸಿದರೆ 3331 ಕೋಟಿ ರೂಪಾಯಿಗಳ ಪರಿಹಾರವನ್ನು ಆ ವರ್ಷ ರೈತರಿಗೆ ಕೊಟ್ಟಿದ್ದೇವೆ. ತಮಗೆ ಗೊತ್ತಿದೆ ಆ ವರ್ಷ ನಾವು Real Time Gross Settlement (RTGS) ಮುಖಾಂತರ ಇಷ್ಟು ಹಣ ರೈತರ account ಗೆ ಹೋಗುವಂತೆ ಮಾಡಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

856/20.06.2017/4.30/hv.ks(ak)

**ಶ್ರೀ ಕೃಷ್ಣ ಭೈರೇಗೌಡ(ಮುಂದುವರೆದದ್ದು)**

ಸನ್ಮಾನ್ಯ ಸಭಾಪತಿಯವರೇ, ವಿಮೆ ಮುಖಾಂತರ ಮುಂಗಾರಿನಲ್ಲಿ 693 ಕೋಟಿ ರೂಪಾಯಿಗಳು, ಹಿಂಗಾರಿನಲ್ಲಿ 179 ಕೋಟಿ ರೂಪಾಯಿಗಳು, ಒಟ್ಟಾರೆಯಾಗಿ 3331 ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ರೈತರಿಗೆ ಆ ವರ್ಷದಲ್ಲಿ ಪರಿಹಾರದ ರೂಪದಲ್ಲಿ ನೀಡಲಾಗಿದೆ. ಆ ವರ್ಷ ನಾವು ಆರ್.ಟಿ.ಜಿ.ಎಸ್. ಮೂಲಕ ರೈತರ ಖಾತೆಗೆ ಹಣ ಹೋಗುವಂತೆ ಮಾಡಿದ್ದೆವು. ಅದರಲ್ಲಿ ಕೆಲವು ನ್ಯೂನತೆಗಳಿವೆ, ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ನೂರಕ್ಕೆ ತೊಂಭತ್ತರಷ್ಟು ಭಾಗ ಸರಿ ಇರಬಹುದು, ಉಳಿದಂತೆ ಶೇಕಡಾ 10ರಷ್ಟು ಭಾಗ ನ್ಯೂನತೆಗಳು ಇರಬಹುದು. ಸರ್ವೆ ಮಾಡುವ ಹಂತದಲ್ಲಿ ನಿಜವಾಗಿಯೂ ಅರ್ಹರಾಗಿರುವವರು ಬಿಟ್ಟು ಹೋಗಿರುವ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದರು, ಅದನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಆದರೂ ಸಹ ಕೆಲವು ಅರ್ಹ ರೈತರಿಗೆ ಪರಿಹಾರಧನ ಸಿಕ್ಕಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ, 2015-16ನೇ ಸಾಲಿನಲ್ಲಿ ಹಿಂಗಾರು ಮತ್ತು ಮುಂಗಾರಿನಲ್ಲಿ 3331 ಕೋಟಿ ರೂಪಾಯಿಗಳನ್ನು ಪರಿಹಾರದ ರೂಪದಲ್ಲಿ ಕೊಟ್ಟಿದ್ದೇವೆ. 2012-13ನೇ ಸಾಲಿಗೆ ಹೋಲಿಕೆ ಮಾಡಿದರೆ 649 ಕೋಟಿ ಪರಿಹಾರಧನವನ್ನು ನೀಡಲಾಗಿದೆ. ಸುಮಾರು ಐದೂವರೆ ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಪರಿಹಾರವನ್ನು 2015-16ನೇ ಸಾಲಿನಲ್ಲಿ ನೀಡಲಾಗಿದೆ. 2016-17ನೇ ಸಾಲಿನ ಬಗ್ಗೆ ಹೇಳಬೇಕಾದರೆ, ಸುಮಾರು 1685 ಕೋಟಿ ರೂಪಾಯಿಗಳನ್ನು ಮುಂಗಾರಿನ ಬೆಳೆ ಹಾನಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಪರಿಹಾರವನ್ನು ನೀಡಲಾಗಿದೆ. ಈ ಮೊತ್ತದಲ್ಲಿ ಮೂರು ಜಿಲ್ಲೆಗಳಲ್ಲಿ ಆಗಿದ್ದ ಅತೀವೃಷ್ಠಿಗೆ ನೀಡಿದಂತಹ ಪರಿಹಾರವೂ ಸೇರಿಕೊಂಡಿದೆ. ಹಿಂಗಾರಿಗೆ ಸಂಬಂಧಪಟ್ಟಂತೆ ನೀಡಿರುವ ಪರಿಹಾರದ ಬಗ್ಗೆ ಹೇಳಬೇಕಾದರೆ, ಈಗಾಗಲೇ ಮಾನ್ಯ ಕಂದಾಯ ಸಚಿವರು ಹೇಳಿದಂತೆ ರಾಜ್ಯ ಸರ್ಕಾರ 3310 ಕೋಟಿ ರೂಪಾಯಿಗಳನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಫೆಬ್ರವರಿ ಒಂದನೇ ತಾರೀಖಿನಂದು ಮನವಿಯನ್ನು ಕೊಟ್ಟಿದ್ದೇವೆ. ಕೇಂದ್ರದ ತಜ್ಞರ ತಂಡ ಬಂದು ವೀಕ್ಷಣೆ ಮಾಡಿಕೊಂಡು ಹೋಗಿದೆ. ಅಧಿಕಾರಿಗಳ ಹಂತದ ಪರಿಶೀಲನೆ ಎಲ್ಲವೂ ಮುಗಿದು ಕೇಂದ್ರ ಸರ್ಕಾರದ ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದಕ್ಕಾಗಿ ಕಾಯುತ್ತಿದ್ದೇವೆ. ಹಿಂದಿನ ವರ್ಷಗಳ ವಾಡಿಕೆಯನ್ನು ನೋಡಿದರೆ ಸುಮಾರು 800 ರಿಂದ 1000 ಕೋಟಿ ರೂಪಾಯಿಗಳಾದರೂ ಕೇಂದ್ರ ಸರ್ಕಾರದಿಂದ ಬರಬಹುದು ಎನ್ನುವ ನಿರೀಕ್ಷೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇದು ಎರಡೂ ಸೇರಿದರೆ ಸುಮಾರು 2600 ಕೋಟಿ ರೂಪಾಯಿಗಳಷ್ಟು ಆಗುತ್ತದೆ. ವಿಮೆ ಮುಖಾಂತರ ಮುಂಗಾರಿಗೆ ಸಂಬಂಧಪಟ್ಟಂತೆ 1146 ಕೋಟಿ ರೂಪಾಯಿಗಳಷ್ಟು ಇತ್ಯರ್ಥವಾಗಿದೆ. ಅದರಲ್ಲಿ 100 ಕೋಟಿ ರೂಪಾಯಿಗಳನ್ನು ಕೊಡುವುದರ ಬಗ್ಗೆ ನಮಗೂ ಹಾಗೂ ಕಂಪನಿಯವರ ನಡುವೆ ಭಿನ್ನಾಭಿಪ್ರಾಯವಿದೆ. arbitration ಮೂಲಕ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ನನ್ನ ಲೆಕ್ಕಾಚಾರದ ಪ್ರಕಾರ 1146 ಕೋಟಿ ರೂಪಾಯಿಗಳು ವಿಮೆಯಿಂದ ರೈತರಿಗೆ ದೊರೆಯಬೇಕಾಗಿದೆ ಎನ್ನುವುದನ್ನು ನಾವು ಇತ್ಯರ್ಥಪಡಿಸಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶದಲ್ಲಿಯೇ ಅತೀ ಹೆಚ್ಚು ಸಂಖ್ಯೆಯಲ್ಲಿ ವಿಮೆ ನೋಂದಾಣಿ ಮಾಡಿರುವುದರಲ್ಲಿ ನಮ್ಮ ರಾಜ್ಯ ಎರಡನೆಯ ಸ್ಥಾನದಲ್ಲಿದೆ. ಈಗ ಹಿಂಗಾರಿನಲ್ಲಿ ಸಹ 1000 ಕೋಟಿ ರೂಪಾಯಿಗಳಷ್ಟು ವಿಮೆ ಪರಿಹಾರ ದೊರೆಯಬಹುದು ಎಂದು ನಾವು ಅಂದಾಜು ಮಾಡಿದ್ದೇವೆ. ಇದು ನಿಖರವಾಗಿರುವ ಮಾಹಿತಿ ಅಲ್ಲ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ವಿಮೆಯಿಂದ ಬರುವಂತಹ ಪರಿಹಾರ ಇವೆಲ್ಲವನ್ನೂ ಸೇರಿಸಿದರೆ ಸುಮಾರು 4750 ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ರೈತರಿಗೆ ಕೊಟ್ಟಂತಾಗುತ್ತದೆ. ಇದು ರೈತರ ನಷ್ಟಕ್ಕೆ ಸರಿತೂಗಿಸುವಂತಹ ಮೊತ್ತವಲ್ಲ. ಆದರೂ ಸಹ ಜವಾಬ್ದಾರಿಯುತ ಸರ್ಕಾರವೊಂದು ಎಚ್ಚೆತ್ತು ಕೆಲಸ ಮಾಡಿದರೆ ಯಾವ ರೀತಿಯಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು ಎನ್ನುವುದಕ್ಕೆ ನಾನು ಈ ಉದಾಹರಣೆಯನ್ನು ಹೇಳುತ್ತಿದ್ದೇನೆ. 2012–13ನೇ ಸಾಲಿನಲ್ಲಿ ಇದೇ ರೀತಿಯ ಬರಗಾಲ ಬಂದಂತಹ ಸಂದರ್ಭದಲ್ಲಿ ರೈತರಿಗೆ ಒಟ್ಟು 649 ಕೋಟಿ ರೂಪಾಯಿಗಳಷ್ಟು ಪರಿಹಾರ ದೊರೆತಿದ್ದರೆ, ಈ ವರ್ಷ 4750 ಕೋಟಿ ರೂಪಾಯಿಗಳಷ್ಟು ಪರಿಹಾರ ರೈತರಿಗೆ ಸಿಗಬಹುದು ಎನ್ನುವ ಅಂದಾಜನ್ನು ನಾವು ಮಾಡಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಹಿಂಗಾರಿಗೆ ಸಂಬಂಧಪಟ್ಟಂತೆ ನೀಡಬೇಕಾಗಿರುವ ಪರಿಹಾರದ ಮೊತ್ತದ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮನವಿಯನ್ನು ಸಲ್ಲಿಸಿದಾಗ, ಕೇಂದ್ರ ಸರ್ಕಾರದಿಂದ ಬಂದಂತಹ ಮೊತ್ತದ ಬಗ್ಗೆ ಮಾನ್ಯ ಸಚಿವರು ಉಲ್ಲೇಖ ಮಾಡುತ್ತಿದ್ದಾರೆ. ಮುಂಗಾರಿಗೆ ಸಂಬಂಧಪಟ್ಟಂತೆ 2015–16ನೇ ಸಾಲಿನಲ್ಲಿ 1852 ಕೋಟಿ ರೂಪಾಯಿಗಳನ್ನು ಮತ್ತು 2016–17ನೇ ಸಾಲಿನಲ್ಲಿ 1685 ಕೋಟಿ ರೂಪಾಯಿಗಳನ್ನು ನೀಡಲಾಗಿದೆ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಬೇಡಿಕೆಯ ಪ್ರಮಾಣವೆಷ್ಟು ಮತ್ತು ಕೇಂದ್ರ ಸರ್ಕಾರದಿಂದ ಬಂದಂತಹ ಹಣವೆಷ್ಟು; ಹಿಂದಿನ ವರ್ಷಗಳಲ್ಲಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಎಷ್ಟು ಪರಿಹಾರದ ಮೊತ್ತದ ಬೇಡಿಕೆಯನ್ನು ಸಲ್ಲಿಸುತ್ತಿತ್ತು ಮತ್ತು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರುತ್ತಿತ್ತು ಹಾಗೂ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹಣ ಬಂದಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ನೀಡಿದರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಕೃಷ್ಣ ಭೈರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಈ ವರ್ಷದಲ್ಲಿ ಮುಂಗಾರಿಗೆ ಸಂಬಂಧಪಟ್ಟಂತೆ 4702 ಕೋಟಿ ರೂಪಾಯಿಗಳಿಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ. ಅದರಲ್ಲಿ ಅವರು ರಾಜ್ಯ ಸರ್ಕಾರಕ್ಕೆ 1685 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಿಂಗಾರಿಗೆ 3310 ಕೋಟಿ ರೂಪಾಯಿಗಳಿಗೆ ಬೇಡಿಕೆಯನ್ನು ಕೊಟ್ಟಿದ್ದೇವೆ. ಅದು ಇನ್ನೂ ಇತ್ಯರ್ಥವಾಗಿಲ್ಲ. ಅಂತಿಮ ಹಂತದಲ್ಲಿದೆ, ಸ್ವಲ್ಪ ವಿಳಂಬವಾಗಿದೆ. ನಾವು ಒಂದು ತಿಂಗಳಿನಿಂದ ಕೇಂದ್ರದ ಗೃಹ ಸಚಿವರ ಸಂದರ್ಶನಕ್ಕಾಗಿ ಮನವಿಯನ್ನು ಕೊಟ್ಟು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಯತ್ನಿಸುತ್ತಿದ್ದೇವೆ. ಮುಂದೆಯೂ ಈ ಅಧಿವೇಶನ ಮುಗಿದ ನಂತರ ನಾನು ಮತ್ತು ಮಾನ್ಯ ಕಂದಾಯ ಸಚಿವರು ನಮ್ಮ ಪ್ರಯತ್ನವನ್ನು ಮುಂದುವರೆಸುತ್ತೇವೆ. ನಾನು ಹಣಕಾಸು ಸಚಿವರಲ್ಲಿ ಮನವಿ ಮಾಡಿದ್ದೇವೆ. ಗೃಹ ಸಚಿವರಿಗೂ ಮನವಿ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆ. 2015-16ನೇ ಸಾಲಿನಲ್ಲಿ ನಾವು 3830 ಕೋಟಿ ರೂಪಾಯಿಗಳಿಗೆ ಮನವಿಯನ್ನು ಕೊಟ್ಟಿದ್ದೆವು, ಅದರಲ್ಲಿ ಸುಮಾರು 1685 ಕೋಟಿ ರೂಪಾಯಿಗಳು ಬಂದಿವೆ. ಹಿಂದಿನ ವರ್ಷಗಳಲ್ಲಿ ಕೇಂದ್ರ ಸರ್ಕಾರಕ್ಕೆ ಎಷ್ಟು ಪರಿಹಾರಕ್ಕಾಗಿ ಬೇಡಿಕೆಯನ್ನು ಸಲ್ಲಿಸಿದ್ದೆವು ಎನ್ನುವುದರ ಬಗ್ಗೆ ತಕ್ಷಣಕ್ಕೆ ನನ್ನ ಹತ್ತಿರ ಮಾಹಿತಿ ಲಭ್ಯವಿಲ್ಲ. ಆದರೆ, ಎಷ್ಟು ಹಣ ಬಂದಿದೆ ಎನ್ನುವುದರ ಮಾಹಿತಿ ಇದೆ. 2011-12ರಲ್ಲಿ 232 ಕೋಟಿ ರೂಪಾಯಿಗಳು ಮತ್ತು 2012-13ನೇ ಸಾಲಿನಲ್ಲಿ 327 ಕೋಟಿ ರೂಪಾಯಿಗಳು ಬಂದಿದೆ. ಹಿಂದೆ ನಾನು ಗಮನಿಸಿರುವಂತೆ ಇಷ್ಟೊಂದು ವ್ಯವಸ್ಥಿತವಾಗಿ ಮನವಿ ಸಲ್ಲಿಸುತ್ತಿರಲಿಲ್ಲ. 2012-13ನೇ ಸಾಲಿನಲ್ಲಿ ಸಲ್ಲಿಸಿರುವ ಮನವಿಯನ್ನು ನಾನು ಒಂದು ವರ್ಷಗಳ ಹಿಂದೆ ಅಧ್ಯಯನ ಮಾಡಿದ್ದೆ. ಎನ್.ಡಿ.ಆರ್.ಎಫ್.ನ ನಿಯಮಾವಳಿಗಳ ಪ್ರಕಾರ ನಾವು ಮನವಿಯನ್ನು ನೀಡಿದರೆ, ಅವರು ಪರಿಶೀಲನೆ ಮಾಡಿ, ಮುಂದಿನ ಪ್ರಕ್ರಿಯೆಗಳನ್ನು ಮುಂದುವರೆಸುತ್ತಾರೆ. 2012-13ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟಾರೆ 40 ಸಾವಿರ ಕೋಟಿ ರೂಪಾಯಿಗಳಷ್ಟು ನಷ್ಟವುಂಟಾಗಿದೆ ಎಂದು ಕೊಟ್ಟಿದ್ದಾರೆ ಅಷ್ಟೆ. ಆದರೆ, ಎನ್.ಡಿ.ಆರ್.ಎಫ್.ನಲ್ಲಿ ಪ್ರತಿಯೊಂದಕ್ಕೂ ಫಾರಂ 1,2,3,4 ಎಂದು ಇದೆ. ಆ ಫಾರಂಗೆ ಸಂಬಂಧಪಟ್ಟ ಹೆಚ್ಚುವರಿ ದಾಖಲೆಗಳನ್ನು ಲಗತ್ತಿಸಿ ಕೊಡಬೇಕಾಗುತ್ತದೆ. ಅವರ ನಮೂನೆಯಲ್ಲಿಯೇ ಕೊಟ್ಟರೆ ಅವರು ಸರಿಯಾಗಿ ವಿಲೇ ಮಾಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, 2009-10ನೇ ಸಾಲಿನಲ್ಲಿ 317 ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾವು ಕೇಂದ್ರ ಸರ್ಕಾರದ ಮುಂದಿಟ್ಟಿದ್ದೆವು. ಆಗ ಕೇವಲ 53 ಕೋಟಿ ರೂಪಾಯಿಗಳನ್ನು ಮಾತ್ರ ನೀಡಲಾಗಿತ್ತು. 2011-12ರಲ್ಲಿ 2605 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಲ್ಲಿಸಲಾಗಿತ್ತು, ಆಗ ಕೇವಲ 70 ಕೋಟಿ ರೂಪಾಯಿಗಳನ್ನು ಮಾತ್ರ ನೀಡಲಾಗಿತ್ತು. 2011-12ನೇ ಸಾಲಿನಲ್ಲಿ 3609 ಕೋಟಿ ರೂಪಾಯಿಗಳನ್ನು ಕೇಳಿದ್ದೆವು, ಆಗ ಕೇವಲ 280 ಕೋಟಿ ರೂಪಾಯಿಗಳನ್ನು ಮಾತ್ರ ನೀಡಲಾಗಿತ್ತು. 2012-13ನೇ ಸಾಲಿನಲ್ಲಿ 11,489 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಲ್ಲಿಸಲಾಗಿತ್ತು, ಆಗ ಕೇವಲ 397 ಕೋಟಿ ರೂಪಾಯಿಗಳನ್ನು ಮಾತ್ರ ನೀಡಲಾಗಿತ್ತು. 2013-14ನೇ ಸಾಲಿನಲ್ಲಿ 1014 ಕೋಟಿ ರೂಪಾಯಿಗಳನ್ನು ಕೇಳಿದ್ದೆವು, 169 ಕೋಟಿ ರೂಪಾಯಿಗಳನ್ನು ಮಾತ್ರ ನೀಡಲಾಗಿತ್ತು. 2014-15ನೇ ಸಾಲಿನಲ್ಲಿ 779 ಕೋಟಿ ರೂಪಾಯಿಗಳ ಬೇಡಿಕೆಯನ್ನು ಇಟ್ಟಿದ್ದರೆ 139 ಕೋಟಿ ರೂಪಾಯಿಗಳನ್ನು ಮಾತ್ರ ನೀಡಲಾಗಿದೆ. ಮಾನ್ಯ ಸಚಿವರು ಹೇಳಿದಂತೆ 2015-16ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಬರುವಂತಹ ಪರಿಹಾರವೇ ಬಹಳ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಮುಖವಾಗಿದೆ. 4702 ಕೋಟಿ ರೂಪಾಯಿಗಳನ್ನು ಹಿಂಗಾರು ಮತ್ತು ಮುಂಗಾರು ಪರಿಹಾರಕ್ಕಾಗಿ ಕೇಳಲಾಗಿದೆ. ಅದರಲ್ಲಿ 1650 ಕೋಟಿ ಬಂದಿದೆ.

**ಶ್ರೀ ಕೃಷ್ಣ ಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, 2012–13ನೇ ಸಾಲಿನಲ್ಲಿ ಬಂದಿರುವಂತಹ ಪರಿಹಾರದ ಮೊತ್ತವನ್ನು ನಾನು ಉಲ್ಲೇಖ ಮಾಡಿದ್ದೇನೆ. 11 ಸಾವಿರ ಕೋಟಿ ರೂಪಾಯಿಗಳೆಂದು ನಷ್ಟವನ್ನು ಅಂದಾಜು ಮಾಡಲಾಗಿದೆ. ಈಗ ನಮ್ಮ ಅಂದಾಜು ನಷ್ಟದ ಮೊತ್ತ 17 ರಿಂದ 20 ಸಾವಿರ ಕೋಟಿ ರೂಪಾಯಿಗಳಾಗುತ್ತಿವೆ. ಇದನ್ನೇ ನಿವೇದನ ಪತ್ರವನ್ನಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಎನ್.ಡಿ.ಆರ್.ಎಫ್. ನಿಯಮಾವಳಿಗಳ ಪ್ರಕಾರ ನಾವು ಮನವಿಯನ್ನು ಸಲ್ಲಿಸಬೇಕಾಗುತ್ತದೆ. ಆದರೆ, 2012–13ನೇ ಸಾಲಿನಲ್ಲಿ ಒಟ್ಟಾರೆ ಇಷ್ಟು ನಷ್ಟವಾಗಿದೆ ಎಂದು ಒಂದು ನಿವೇದನಾ ಪತ್ರವನ್ನು ಮಾತ್ರ ಕಳುಹಿಸಿಕೊಟ್ಟಿದ್ದರು.

(857) 20.06.17, 4.40, TCH/GR(AK)

**ಶ್ರೀ ಕೃಷ್ಣಭೈರೇಗೌಡ(ಕೃಷಿ ಸಚಿವರು) (ಮುಂದು)**

ಮಾನ್ಯ ಸಭಾಪತಿಯವರೆ, ಇನ್ನೊಂದೆರಡು ಬದಲಾವಣೆಯಾಗಿದೆ. ಅದು ಏನಾಯಿತು ಎಂದರೆ, 2013–14ರಲ್ಲಿ N.D.R.F. (National Disaster Response Fund) ನ ದರಗಳನ್ನು ಬದಲಾವಣೆ ಮಾಡಿದರು. ಅದಕ್ಕೆ ಮೊದಲು ಏನಿತ್ತು ಎಂದರೆ, ಒಂದು ಹೆಕ್ಟೇರ್‌ಗೆ 3000/– ರೂಪಾಯಿಗಳು ಅಷ್ಟೆ ಪರಿಹಾರವಿತ್ತು. ಆಗ 2013–14ರಲ್ಲಿ ಅದನ್ನು ಪರಿಷ್ಕರಣೆ ಮಾಡಿ, 3000/– ರೂಪಾಯಿ ಇದ್ದುದನ್ನು, 4500/– ರೂಪಾಯಿಗಳು ಎಂದು ಮಾಡಿದರು. ಆಮೇಲೆ ಏನಾಯಿತು ಎಂದರೆ, ಮತ್ತೆ 2015ರಲ್ಲಿ ಕೇಂದ್ರದಲ್ಲಿ, ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅವರು ಮತ್ತೊಂದು ಬಾರಿ ಪರಿಷ್ಕರಣೆ ಮಾಡಿದರು. 4500/– ರೂಪಾಯಿಯಿಂದ 6500/– ರೂಪಾಯಿ ಆಯಿತು. ಆ ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ, 3000/– ರೂಪಾಯಿ ಇದ್ದದ್ದು, ಇವತ್ತಿನ ದಿವಸ ಅದು 6500/– ರೂಪಾಯಿ ಆಗಿದೆ. 2013–14ರಲ್ಲಿ ಒಂದು ಬಾರಿ ಪರಿಷ್ಕರಣೆ ಆಯಿತು. 2015ರಲ್ಲಿ ಮತ್ತೆ ಎರಡನೆಯ ಬಾರಿಗೆ ಪರಿಷ್ಕರಣೆ ಆಗಿದ್ದರಿಂದ, ನಮ್ಮ ಅರ್ಹತೆ/eligibility ಕೂಡ ಅದಕ್ಕೆ proportionate ಆಗಿ ಈಗ ಅದು ಜಾಸ್ತಿ ಆಗಿದೆ. ಈ ಕಾರಣಗಳಿಂದ ಈ ವರ್ಷ ಸುಮಾರು 4750/– ಕೋಟಿ ರೂಪಾಯಿಗಳಷ್ಟು ಸಿಗಬಹುದೆಂದು ನಾವು ಅಂದಾಜು ಹಾಕಿದ್ದೇವೆ. ಇನ್ನೊಂದು, ರೈತರಿಗೆ ಆದಾಯ ಮತ್ತು ನಷ್ಟವೆಂದು ಹೇಳಿದರೆ, ಅವರು ಬೆಳೆದ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗುವುದಿಲ್ಲ ಎನ್ನುವಂಥ ವಿಚಾರಗಳು ಸಹ ಇರುವುದರಿಂದ ಅಲ್ಲಿ ಅವರಿಗೆ ಆದಾಯ ನಷ್ಟ ಆಗತಕ್ಕಂಥ ಸಾಧ್ಯತೆಗಳಿವೆ. ನಮ್ಮ ಸರ್ಕಾರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನೂ ಸಹ ಗಂಭೀರವಾಗಿ ಪರಿಗಣಿಸಿ ಮಾಡುತ್ತಿದೆ, ಅದು ತಮಗೆಲ್ಲಾ ಗೊತ್ತಿದೆ. ಉದಾಹರಣೆಗೆ ಹೇಳುವುದಾದರೆ, ನಾವು ಈ ವರ್ಷ ತೊಗರಿಯನ್ನು ದಾಖಲೆ ಪ್ರಮಾಣದಲ್ಲಿ ಖರೀದಿ ಮಾಡಿದ್ದೇವೆ. ನಾನು ಅದನ್ನು ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಇತ್ತೀಚೆಗೆ ಅದನ್ನು ಸದನದಲ್ಲಿ ಹಂಚಿಕೊಂಡಿರುವುದರಿಂದ, ನಾವು ಹಿಂದೆ ಅತ್ಯಧಿಕವಾಗಿ ಸುಮಾರು ಎರಡೂವರೆ ಲಕ್ಷ ಕ್ವಿಂಟಾಲ್ ತೊಗರಿಯನ್ನು ಖರೀದಿ ಮಾಡಿದ್ದೆವು. ಈ ವರ್ಷ ಸುಮಾರು 34 ಲಕ್ಷ ಕ್ವಿಂಟಾಲ್ ತೊಗರಿ ಖರೀದಿ ಮಾಡಿದ್ದೇವೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಈಗ ಇಲ್ಲಿ ಇಲ್ಲ. ಅವರು "ರೈತರಿಗೆ ಕೊಡಬೇಕಾದ ಹಣ ಬಾಕಿ ಇದೆ" ಎಂದು ಬೆಳಿಗ್ಗೆ ಕೇಳಿದ್ದರು. ಈಗಾಗಲೇ ನಾವು ಖರೀದಿ ಮಾಡಿದ ಒಟ್ಟು ಪ್ರಮಾಣದಲ್ಲಿ, ಸುಮಾರು 1720 ಕೋಟಿ ರೂಪಾಯಿಗಳಷ್ಟು ಹಣ ಪಾವತಿಯಾಗಿದೆ. ಸುಮಾರು 170 ಕೋಟಿ ರೂಪಾಯಿಗಳು ರೈತರಿಗೆ ಕೊಡಲು ಬಾಕಿ ಇರುತ್ತದೆ. ಈ 170 ಕೋಟಿ ರೂಪಾಯಿಗಳಲ್ಲಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡರದ್ದೂ ಬಾಕಿ ಇರುತ್ತದೆ. ನಾವು ಕೇಂದ್ರ ಸರ್ಕಾರದ ಜೊತೆ ಮಾತನಾಡಿದ್ದೇವೆ. ಅವರು ಈ ವಾರದಲ್ಲಿ ಸುಮಾರು 80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ರಾಜ್ಯ ಸರ್ಕಾರದ್ದು ಸುಮಾರು 13.92 ಕೋಟಿ ರೂಪಾಯಿಗಳು ಬಾಕಿ ಇದೆ. ಅದನ್ನು ನಾವು 10 ದಿನದ ಒಳಗೆ ಪಾವತಿ ಮಾಡುವಂತಹ ಕೆಲಸವನ್ನು ಸಹ ಮಾಡುತ್ತೇವೆ. ಸುಮಾರು 1900 ಕೋಟಿ ರೂಪಾಯಿಗಳ ಬಗ್ಗೆ ತಾವು ಹೇಳಿದ ಮೇಲೆ, ನಾವು ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಸುಮಾರು 1722 ಕೋಟಿ ರೂಪಾಯಿಗಳು ಈಗ ರೈತರಿಗೆ ಪಾವತಿಯಾಗಿದೆ. ಸುಮಾರು 170 ಕೋಟಿ ರೂಪಾಯಿಗಳು ರೈತರಿಗೆ ಕೊಡಲು ಬಾಕಿ ಇದೆ. ಬೆಳಿಗ್ಗೆ ಹೇಳಿದ ಹಾಗೆ, ಅದರಲ್ಲಿ ಕೇಂದ್ರ ಸರ್ಕಾರದ ಪಾಲು ಸುಮಾರು 156 ಕೋಟಿ ರೂಪಾಯಿಗಳು ಬಾಕಿ ಇರುತ್ತದೆ. ಅವರು ಈ ವಾರದಲ್ಲಿ ಸುಮಾರು 80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನೊಂದು ವಾರ ಅಥವಾ ಹತ್ತು ದಿನದಲ್ಲಿ ಎರಡನೇ ಕಂತಿನ ಹಣವನ್ನು ಅವರು ಬಿಡುಗಡೆ ಮಾಡುತ್ತಾರೆ. ನಮ್ಮ ರಾಜ್ಯ ಸರ್ಕಾರದ ಪಾಲಾದ 13.92 ಕೋಟಿ ರೂಪಾಯಿಗಳನ್ನು ಇನ್ನೊಂದು ವಾರದಲ್ಲಿ ಬಿಡುಗಡೆ ಮಾಡುವಂತಹ ಪ್ರಕ್ರಿಯೆಯನ್ನು ನಾವು ಸಹ ಮಾಡುತ್ತೇವೆ. ಸುಮಾರು 15-20 ದಿನಗಳೊಳಗೆ ಇರುವಂತಹ ಎಲ್ಲಾ ಬಾಕಿ ಹಣವನ್ನು ಸಹ ಬಿಡುಗಡೆ ಮಾಡುತ್ತೇವೆ. ಈಗಾಗಲೇ ಸುಮಾರು 1722 ಕೋಟಿ ರೂಪಾಯಿ ಪಾವತಿಯಾಗಿದೆ. ಸುಮಾರು 170 ಕೋಟಿ ರೂಪಾಯಿಗಳು ಅಷ್ಟೇ ಬಾಕಿ ಇದ್ದು, ಅದನ್ನು ಸಹ ಪಾವತಿ ಮಾಡುತ್ತೇವೆ. ಆದರೆ ಇದು ಈ ಹಿಂದಿನ ಸಾಲಿಗೆ ಹೋಲಿಕೆ ಮಾಡಿದರೆ, ಹಿಂದೆ ಅತ್ಯಧಿಕ ಪ್ರೊಕ್ಯೂರ್‌ಮೆಂಟ್ ಆಗಿದ್ದದ್ದು ತೊಗರಿ, ಸುಮಾರು ಎರಡೂವರೆ ಲಕ್ಷ ಕ್ವಿಂಟಾಲ್ ತೊಗರಿ ಪ್ರೊಕ್ಯೂರ್‌ಮೆಂಟ್ ಆಗಿತ್ತು. ಆದರೆ, ಈ ವರ್ಷ ಸುಮಾರು 34 ಲಕ್ಷ ಕ್ವಿಂಟಾಲ್ ಪ್ರೊಕ್ಯೂರ್‌ಮೆಂಟ್ ಮಾಡಿದ್ದೇವೆ. ಈ ವರ್ಷ ಪ್ರೊಕ್ಯೂರ್‌ಮೆಂಟ್ ಮೌಲ್ಯ ಸುಮಾರು 1982 ಕೋಟಿ ರೂಪಾಯಿಗಳು. ಒಟ್ಟು ಪ್ರೊಕ್ಯೂರ್‌ಮೆಂಟ್‌ನಲ್ಲಿ ತೊಗರಿಗೆ ನಾನು ಹೇಳಿದ್ದೇನೆ. ನಾನು ಅದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪುನರುಚ್ಚಾರ ಮಾಡುತ್ತಿರುವುದಕ್ಕೆ ದಯವಿಟ್ಟು ಕ್ಷಮಿಸಿ. ನಮ್ಮ ರಾಜ್ಯದ ಪಕ್ಕದಲ್ಲಿ ಮಹಾರಾಷ್ಟ್ರ, ತೆಲಂಗಾಣ, ಆಂದ್ರ ಪ್ರದೇಶ ರಾಜ್ಯಗಳಿವೆ, ಅವರೂ ಸಹ ತೊಗರಿಯನ್ನು ಖರೀದಿ ಮಾಡಿದ್ದಾರೆ. ಅವರ್ಯಾರು ಪ್ರೋತ್ಸಾಹಧನವನ್ನು ಕೊಟ್ಟಿಲ್ಲ. ಅವರೆಲ್ಲ ಕನಿಷ್ಟ ಬೆಂಬಲ ಬೆಲೆಗೆ ಅಷ್ಟಕ್ಕೆ ಖರೀದಿ ಮಾಡಿದ್ದಾರೆ. ನಾವು ಇದರಿಂದ ರೈತರಿಗೆ ಅನುಕೂಲ ಸಾಲುವುದಿಲ್ಲವೆಂದು, ಆ ಕನಿಷ್ಠ ಬೆಂಬಲ ಬೆಲೆಯ ಮೇಲೆ ಅವರದ್ದು, ಕನಿಷ್ಟ ಬೆಂಬಲ ಬೆಲೆ ಸುಮಾರು 5050/- ರೂಪಾಯಿ ಇದೆ. ಅದರ ಮೇಲೆ 450/- ರೂಪಾಯಿ ಪ್ರೋತ್ಸಾಹ ಧನವನ್ನು ರಾಜ್ಯದಿಂದ ಕೊಟ್ಟು, 5500/- ರೂಪಾಯಿಗೆ ನಾವು ಖರೀದಿ ಮಾಡಿದ್ದೇವೆ. ದೇಶದಲ್ಲಿ ಬೇರೆ ಯಾವ ರಾಜ್ಯದಲ್ಲೂ ಮಾಡಿಲ್ಲ, ಇದನ್ನು ನಾವು ಮಾತ್ರ ಮಾಡಿದ್ದೇವೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೊನ್ನೆ ಮತ್ತೆ ಖರೀದಿ ಮಾಡುವುದಕ್ಕೆ ಗುಲ್ಬರ್ಗಾ ಜಿಲ್ಲೆಗೆ ಇವರು ಆದೇಶವನ್ನು ಕೊಟ್ಟಿದ್ದಾರೆ. ಈಗ ನೀವು ಗುಲ್ಬರ್ಗಾ ಜಿಲ್ಲೆಗೆ ಖರೀದಿ ಮಾಡುವುದಕ್ಕೆ ಪುನಃ ಆದೇಶ ಕೊಟ್ಟ ಮೇಲೆ, ಬೇರೆ ಜಿಲ್ಲೆಯವರು ಸಹ ನಮಗೆ ಬಹಳ ಕಿರಿಕಿರಿ ಮಾಡುತ್ತಿದ್ದಾರೆ. ಆ ಗುಲ್ಬರ್ಗಾ ಜಿಲ್ಲೆಗೆ ಮಾತ್ರ ಕೊಟ್ಟಿದ್ದೀರಿ, ನಮಗೆ ಮಾತ್ರ ಕೊಡುತ್ತಿಲ್ಲ. ನೀವು ನಮ್ಮ ಜಿಲ್ಲೆಗಳಲ್ಲೂ ಸಹ ಪ್ರಾರಂಭ ಮಾಡಿರಿ ಏಕೆಂದರೆ, ಈ ಸಲ ಸಾಕಷ್ಟು ಪ್ರಮಾಣದಲ್ಲಿ ತೊಗರಿ ಬೆಳೆಯನ್ನು ನಾವು ಕಂಡಿದ್ದೇವೆ. ಈಗ ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಖರೀದಿ ಪ್ರಾರಂಭ ಮಾಡಲು ಆದೇಶ ಕೊಟ್ಟಿದ್ದೀರಿ. ಆದರೆ, ರಾಯಚೂರು ಜಿಲ್ಲೆಯಲ್ಲಿ ಆದೇಶ ಕೊಟ್ಟಿರುವುದಿಲ್ಲ. ಅಲ್ಲಿನವರು ಏನನ್ನು ಕೇಳುತ್ತಿದ್ದಾರೆಂದರೆ, ಗುಲ್ಬರ್ಗಾದಲ್ಲಿ ತೊಗರಿ ಖರೀದಿ ಮಾಡುವುದು ಪ್ರಾರಂಭವಾಗಿದೆ. ಆದರೆ, ರಾಯಚೂರಿನಲ್ಲಿ ಪ್ರಾರಂಭವಾಗಿಲ್ಲವೆಂದು ಕೇಳುತ್ತಿದ್ದಾರೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೆ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರೆ, ಇದು ಏತಕ್ಕೆ ಆಗಿದೆ ಎನ್ನುವುದನ್ನು ನಾವು ಹೇಳಿದ್ದೇವೆ. ಅಧಿಕೃತವಾಗಿ ಹೇಳಬೇಕೆಂದರೆ, ಯಾರು ನೊಂದಾವಣಿಯಾಗಿದ್ದರು, ಹಣ ಕೊಡುವುದು ಎಲ್ಲಿ ಬಾಕಿ ಇತ್ತು ಅದರ ಪ್ರಕಾರ, ಅವರು ಅಲ್ಲಿಗೆ ಅನುಮತಿಯನ್ನು ಕೊಟ್ಟಿದ್ದಾರೆ. ಅದು ಇರಲಿ, ಈಗ ಬರದ ಬಗ್ಗೆ ಚರ್ಚೆ ಆಗುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೆ, ಈಗ ಬರಗಾಲಕ್ಕೆ ಸೀಮಿತವಾದಂತೆ ತಮ್ಮ ಉತ್ತರವನ್ನು conclude ಮಾಡಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ, ಈ ಹಿಂದೆ ಅತ್ಯಧಿಕ ಪ್ರೊಕ್ಯೂರ್‌ಮೆಂಟ್ ಸುಮಾರು ಎರಡೂವರೆ ಲಕ್ಷ ರೂಪಾಯಿಗಳು. ಅದಕ್ಕೆ 15 ಟೈಮ್ಸ್‌ನಷ್ಟು ಹೆಚ್ಚಳವನ್ನು ಈ ವರ್ಷ ಮಾಡಿದ್ದೇವೆ.

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಆದಾಯ, ನಷ್ಟ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಅಷ್ಟೇ ಅಲ್ಲದೇ ಇನ್ನು ಎರಡು ನಿಮಿಷದಲ್ಲಿ ನಾನು ಮಾತನಾಡಿ ಮುಗಿಸುತ್ತೇನೆ ಸರ್.

**ಶ್ರೀ ಕೆ.ಎಸ್.ಈಶ್ವರಪ್ಪ:-** ಬರಗಾಲದ ಬಗ್ಗೆ ತೆಗೆದುಕೊಳ್ಳಿ ಎಂದರೆ, ಕೃಷಿ ಬಗ್ಗೆ ತೆಗೆದುಕೊಂಡರೆ...

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ. ಎಲ್ಲಾ ಆದಾಯ, ನಷ್ಟ. ಮುಖ್ಯವಾಗಿ... ಸರಿಯಾಗಿದೆ ತಾವು ಹೇಳುವುದು.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇದು ಏನಾಗುತ್ತಿದೆ ಎಂದರೆ, 'buy one take one' ಆಗುತ್ತಿದೆ. ನಾವು ಬರಗಾಲದ ಬಗ್ಗೆ ಚಿಂತೆ ಮಾಡುತ್ತಿದ್ದರೆ, ನೀವು 'buy one take one' ಮಾಡುತ್ತಿದ್ದೀರಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ, ಬಿಡಿ. ಅದಕ್ಕೆ ನಾನು ಉತ್ತರವನ್ನು ಕೊಡಲು ಹೋಗಲಿಲ್ಲ. ಈಗ ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ರೈತರಿಗೆ ಆದಾಯದ ನಷ್ಟ ಬರದಿಂದ ಆಗಿರುವುದು ಅದನ್ನು ಸರಿದೂಗಿಸಲು ಸರ್ಕಾರ ಏನನ್ನು ಮಾಡುತ್ತಿದೆ. ಆ ಒಂದು ಆಯಾಮದಲ್ಲಿ ಇದನ್ನೆಲ್ಲಾ ಹೇಳುತ್ತಿರುವುದು ಮಾನ್ಯ ವಿರೋಧ ಪಕ್ಷದ ನಾಯಕರು. ಮಾನ್ಯ ಸಭಾಪತಿಯವರೆ, ಆದಷ್ಟು ಬೇಗನೆ ಮಾತನಾಡಿ ಮುಗಿಸುತ್ತೇನೆ. ಇದು ಅಲ್ಲದೇ ತಮಗೂ ಗೊತ್ತಿದೆ. ಇವತ್ತಿನ ದಿವಸ ರಾಜ್ಯದಲ್ಲಿ ಬಡ್ಡಿ ರಹಿತ ಸಾಲವನ್ನು ಸಹ ನಾವು ಕೊಡುತ್ತಿದ್ದೇವೆ. ಬಡ್ಡಿ ರಹಿತ ಸಾಲ ರೈತರಿಗೆ ಸಿಕ್ಕಿರುವುದು ತಮಗೆ ಗೊತ್ತಿದೆ. ನಿಜವಾಗಿ ಅದು ಬಡ್ಡಿ ರಹಿತ ಸಾಲವಲ್ಲ. ರೈತರ ಪರವಾಗಿ ನಾವು ಬಡ್ಡಿಯನ್ನು ಕಟ್ಟುತ್ತಿದ್ದೇವೆ. ಹೆಚ್ಚು ಕಡಿಮೆ 900 ರಿಂದ 1000 ಕೋಟಿ ರೂಪಾಯಿಗಳವರೆಗೆ ಸರ್ಕಾರ ಬಡ್ಡಿಯನ್ನು ಭರಿಸುತ್ತಿದೆ. ಅಷ್ಟೇ ಅಲ್ಲದೇ, ರೈತರಿಗೆ ಇನ್ನೊಂದು ಮೂಲದಿಂದ ಆದಾಯ ಬರಲಿ ಎಂದು, ಹಾಲಿನ ಮೇಲೆ ಈಗ ಒಂದು ಲೀಟರ್‌ಗೆ 5/- ರೂಪಾಯಿಗಳ ಸಹಾಯಧನ ಕೊಡುತ್ತಿದ್ದೇವೆ. ಈ ವರ್ಷ ಅದೊಂದರಲ್ಲೇ ರೈತರ ಖಾತೆಗೆ ನೇರವಾಗಿ ಸುಮಾರು 1300 ಕೋಟಿ ರೂಪಾಯಿಗಳು ಹೋಗುತ್ತದೆಂದು ನಾವು ಅಂದಾಜು ಮಾಡಿದ್ದೇವೆ. ಅದೂ ಅಲ್ಲದೇ ತಮಗೂ ಗೊತ್ತಿದೆ, ಇವತ್ತಿನ ದಿವಸ ಪಕ್ಕದ ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಎಲ್ಲಿಯೂ ರೈತರಿಗೆ ಉಚಿತವಾಗಿ ವಿದ್ಯುತ್ ಅನ್ನು ಅವರ್‍ಯಾರು ಕೊಡುತ್ತಿಲ್ಲ. ತಾವು ಸಹ ಆ ಖಾತೆಯನ್ನು ನಿಭಾಯಿಸಿದ್ದೀರಿ ಮತ್ತು ಎಲ್ಲವನ್ನೂ ನೋಡಿದ್ದೀರಿ. ಅಲ್ಲಿನ ರೈತರು ವಿದ್ಯುತ್ ಬಿಲ್ಲನ್ನು ಸಹ ಕಟ್ಟಬೇಕಾಗುತ್ತದೆ. ಆದರೆ, ನಮ್ಮ ರಾಜ್ಯದಲ್ಲಿ ರೈತರಿಗೆ ಉಚಿತವಾಗಿ ವಿದ್ಯುತ್‌ನ್ನು ಕೊಡುವುದಕ್ಕೆ ಸರ್ಕಾರ ಕೊಡುತ್ತಿರುವ ಮೊತ್ತ ಸುಮಾರು 8000 ದಿಂದ 9000 ಕೋಟಿ ರೂಪಾಯಿಗಳು ಇದೆ. ಇವೆಲ್ಲವೂ ಸಹ ಪರೋಕ್ಷವಾಗಿ ರೈತರ ನೆರವಿಗಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅವರ ಆದಾಯ ಮತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸ್ಥಿತಿಗತಿಯನ್ನು ಕಾಪಾಡುವುದಕ್ಕೋಸ್ಕರ ಸರ್ಕಾರ ಇಷ್ಟೆಲ್ಲಾ ಹಣವನ್ನು ಖರ್ಚು ಮಾಡುತ್ತಿದೆ. ಇಷ್ಟೆಲ್ಲವನ್ನೂ ಮಾಡುವುದಲ್ಲದೇ, ನೀರಾವರಿಗೂ ಸಹ ನಾವು ಸುಮಾರು 16000-18000 ಕೋಟಿ ರೂಪಾಯಿಗಳು ಖರ್ಚು ಮಾಡುತ್ತಿದ್ದೇವೆ. ನಮ್ಮ ಸರ್ಕಾರ, ಕೃಷಿ ಇಲಾಖೆಗೂ ಸಹ ಹಿಂದಿನ ಸರ್ಕಾರಗಳಿಗಿಂತ ಹೆಚ್ಚಿನ ಅನುದಾನವನ್ನು ಕೊಟ್ಟಿದೆ. ಇವೆಲ್ಲವನ್ನೂ ಸಹ ರೈತರ ಕಲ್ಯಾಣಕ್ಕಾಗಿ, ಬರದ ಪರಿಸ್ಥಿತಿಯಲ್ಲಿ ಅವರ ನೆರವಿಗೆ ಬರುವುದಕ್ಕೆ ಏನೆಲ್ಲಾ ಮಾಡಬೇಕು ಮತ್ತು ರೈತರ ಆದಾಯವನ್ನು ಸಂರಕ್ಷಣೆ ಮಾಡುವುದಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಕೊನೆಯ ಅಂಶ ತಮಗೆ ಗೊತ್ತಿರಬಹುದು, ಇದಕ್ಕೆ ನೇರವಾಗಿ ಸಂಬಂಧ ಇಲ್ಲದೇ ಇದ್ದರೂ ಸಹ, ಸಮಯ ಇರುವುದರಿಂದ ನಾನು ತಮ್ಮ ಜೊತೆಗೆ ಇದನ್ನು ಹಂಚಿಕೊಳ್ಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ನಾವು ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತೆಗೆದುಕೊಂಡು ಬಂದು, ಒಂದು Online Trading Platform ಅನ್ನು ಅಂದರೆ Unified Market Platform (U.M.P.) ಎಂದು online trading ಗೆ ಪರಿಚಯಿಸಿದ್ದೇವೆ. ಈಗ 162 ಮಾರುಕಟ್ಟೆಗಳಲ್ಲಿ ಸುಮಾರು 157 ಮಾರುಕಟ್ಟೆಗಳಲ್ಲಿ online system ನಲ್ಲಿ trade ಆಗುತ್ತಿವೆ. ಇದು ಬಹಳ ಒಳ್ಳೆಯದು ಎಂದು ಇದನ್ನು ಕೇಂದ್ರ ಸರ್ಕಾರ ಗುರುತಿಸಿ, ನಾವು ಕರ್ನಾಟಕದಲ್ಲಿ ಮಾಡಿದ ಪ್ರಯೋಗವನ್ನು ಇವತ್ತಿನ ದಿವಸ, ರಾಷ್ಟ ಮಟ್ಟದಲ್ಲಿ ಅವರು ಅನುಷ್ಠಾನ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಇವತ್ತಿನ ದಿವಸ, ಕರ್ನಾಟಕ ಮಾಡಿದ ಒಂದನ್ನು it's becoming a role model for the rest of the country. ನೀತಿ ಆಯೋಗದವರು ಸಹ ಇದರ ಬಗ್ಗೆ ಒಂದು ಅಧ್ಯಯನ ಮಾಡಿದ್ದಾರೆ, ಒಂದು ವಾರದ ಹಿಂದೆ ಪತ್ರಿಕೆಗಳಲ್ಲಿ ಬಂದಿತ್ತು. ನೀತಿ ಆಯೋಗದ ಅಧ್ಯಯನದ ಪ್ರಕಾರ ಈ online market reforms ಅನ್ನು ನಾವೇನು ಮಾಡಿದ್ದೇವೆ, ಇದರಿಂದ ಕರ್ನಾಟಕದಲ್ಲಿ ಯಾವ ರೈತರು ಇದರ ಉಪಯೋಗ ಪಡೆದುಕೊಳ್ಳುತ್ತಿದ್ದಾರೆ ಅವರಿಗೆ ಸಿಗತಕ್ಕಂಥ ಆದಾಯ ದರ ಶೇ.38ರಷ್ಟು ಏರಿಕೆ ಆಗಿದೆಯೆಂದು ನೀತಿ ಆಯೋಗದವರು ಒಂದು ಅಧ್ಯಯನವನ್ನು ಮಾಡಿದ್ದಾರೆ. 'So those who are using online platform, their incomes have increased by 38%' ಎನ್ನತಕ್ಕಂಥದ್ದು. ಈ ಮೂಲದಿಂದಲೂ ಸಹ ರೈತರ ಆದಾಯವನ್ನು, ಅವರಿಗೆ ಆಗಿರತಕ್ಕಂಥ ನಷ್ಟವನ್ನು ಅನೇಕ ಮಾರ್ಗಗಳಿಂದ ಭರಿಸತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಇನ್ನು ಮಾನ್ಯ ಕಂದಾಯ ಸಚಿವರು ಹೇಳಿದಂತೆ, ಇದರಲ್ಲಿ ಈ ಬಾರಿ ರೈತರಿಗೆ ಇವೆಲ್ಲವೂ ನೇರವಾಗಿ ಅವರ ಖಾತೆಗೆ ಹಣ ಜಮಾ ಆಗುತ್ತಿದೆ. ಈ ಹಿಂದೆ ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳ ಹತ್ತಿರ ಹೋಗಿ, ಚೆಕ್ ಬರೆಸಿಕೊಂಡು, ಅವರ ಕೈ ಬೆಚ್ಚಗೆ ಮಾಡುವುದು ಇದೆಲ್ಲವೂ ಇತ್ತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿನ ದಿವಸ ಅದನ್ನೆಲ್ಲವನ್ನು ತೆಗೆದು ಹಾಕಿ, Aadhaar Enabled Payment ಮಾಡಿ, ನೇರವಾಗಿ ಅವರ ಖಾತೆಗೆ ಹಣ ಹೋಗುವಂತೆ ನಾವು ಮಾಡುತ್ತಿದ್ದೇವೆ.

(858) 20.6.2017 4.50 ಪಿಕೆ:ಜಿಆರ್(ಎಕೆ)

ಶ್ರೀ ಕೃಷ್ಣಭೈರೇಗೌಡ(ಮುಂದುವರೆದಿದೆ)

ಇಂತಹ ಸಾಕಷ್ಟು ಸುಧಾರಣೆಗಳನ್ನು ಮಾಡಿದ್ದೇವೆ. ಆದರೆ ಇನ್ನೂ ನ್ಯೂನತೆಗಳಿವೆ, ಇಲ್ಲ ಎಂದು ಹೇಳುತ್ತಿಲ್ಲ. ನಿಮ್ಮೆಲ್ಲರ ಸಲಹೆಗಳನ್ನು ತೆಗೆದುಕೊಂಡು ಅವುಗಳೆಲ್ಲವನ್ನೂ ಸಹ ಸರಿಪಡಿಸುವ ಪ್ರಯತ್ನ ಸರ್ಕಾರ ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೆ, ಬರಗಾಲಕ್ಕೆ ಸಂಬಂಧಪಟ್ಟಂತೆ ನಾವು ಯಾವ ಯಾವ ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದೆವೋ ಆ ಪೈಕಿ ಒಂದಕ್ಕೂ ಸ್ಪಷ್ಟ ಉತ್ತರ ಸಿಗಲಿಲ್ಲ. ಹಿಂದೆ ಏನು ಪ್ಲೇಟ್ ರೆಕಾರ್ಡ್ ಬರುತ್ತಿತ್ತೋ ಹಾಗೆ ಮತ್ತೆ ಮತ್ತೆ ಹೇಳಿದ್ದನ್ನೇ ಕೇಳಿದ ಹಾಗಾಯಿತು. ಬರ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಏನೇನು ಪ್ರಯತ್ನಗಳನ್ನು ಮಾಡುತ್ತಿದೆ, ನೀರಿಗೆ ಎಷ್ಟು ಕೊಟ್ಟರು, ಮೇವಿಗೆ ಎಷ್ಟು ಕೊಟ್ಟರು ಎಂಬುದನ್ನು ಹೇಳಿದರು. ಆದರೆ ಅದು ಎಷ್ಟರಮಟ್ಟಿಗೆ ತಲುಪುತ್ತಿದೆ ಎನ್ನುವುದರ ಬಗ್ಗೆ ಕ್ಲಿಯರ್ ಆಗಿ ಹೇಳಿಲ್ಲ. ಟಾಸ್ಕ್‌ಫೋರ್ಸ್ ಕಮಿಟಿಯನ್ನು ಕಿತ್ತು ಬಿಸಾಕಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗೆದ್ದಂಥವರನ್ನು ಸೇರಿಸಿ ಕಮಿಟಿ ಮಾಡಿ, ಆ ಸಮಿತಿ ಮುಖಾಂತರ ಇದನ್ನು ನಿರ್ವಹಣೆ ಮಾಡಿದ್ದರೆ ನಿಜಕ್ಕೂ ಈ ಕುರಿತು ಇಷ್ಟೊಂದು ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಈ ಕುರಿತು ಸಚಿವರು ಉತ್ತರ ಕೊಡಲಿಲ್ಲ. ಮಾನ್ಯ ಉಗ್ರಪ್ಪನವರು ಮಾತನಾಡುತ್ತಾ, ಕೋರ್ಟ್ ಈ ರೀತಿ ಹೇಳಿದೆ, ಸಂವಿಧಾನ ಹೀಗೆ ಹೇಳುತ್ತದೆ, ಎಂಎಲ್‌ಎ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ಮಾಡಿರುವುದು ತಪ್ಪು ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿದ್ದರೂ ಇದರ ಬಗ್ಗೆ ನೀವು ಯಾವುದೇ ರೀತಿಯ ಉತ್ತರ ಕೊಡಲಿಲ್ಲ. ಎಲ್ಲಾ ತಾಲ್ಲೂಕುಗಳಲ್ಲೂ ಚುನಾಯಿತ ಪ್ರತಿನಿಧಿಗಳು, ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು ಇವರೆಲ್ಲ ಕುಳಿತು ಚರ್ಚೆ ಮಾಡಿ, ಬರುವ ದುಡ್ಡಿನಲ್ಲಿ, ಕುಡಿಯುವ ನೀರಿಗೋ ಇನ್ನೊಂದಕ್ಕೂ ಬಳಸಿ ಮ್ಯಾನೇಜ್ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಸರ್ಕಾರ ಒಂದು ಉತ್ತರ ಕೊಟ್ಟು ಅಷ್ಟಕ್ಕೆ ತೃಪ್ತಿಪಟ್ಟುಕೊಳ್ಳಬಾರದು. ಟಾಸ್ಕ್‌ಫೋರ್ಸ್ ಕಮಿಟಿಗಳಿಗೆ ಏನು ಎಂ.ಎಲ್.ಎ.ಗಳನ್ನು ಅಧ್ಯಕ್ಷರು ಎಂದು ಮಾಡಿದ್ದೀರೋ ಅದು ಸರಿಯಿಲ್ಲ, ಅಧ್ಯಕ್ಷ ಸ್ಥಾನದಿಂದ ಅವರನ್ನು ತೆಗೆಯಿರಿ. ಆದರೆ ಆ ಸಮಿತಿಗೆ ಅವರನ್ನೂ ಒಬ್ಬ ಸದಸ್ಯರನ್ನಾಗಿ ಮಾಡಿ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಅವರ ಅಧ್ಯಕ್ಷತೆಯಲ್ಲೇ ಸಮಿತಿ ಮಾಡಿರುವುದರಿಂದ ಯಾವುದೇ ಕೆಲಸಗಳು ಆಗುತ್ತಿಲ್ಲ. ಯಾರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೂಪರ್‌ವೈಸ್ ಮಾಡುತ್ತಾರೆ? ಕೋರ್ಟ್ ಏನು ಹೇಳಿದೆ, ಸಂವಿಧಾನ ಏನು ಹೇಳುತ್ತದೆಯೋ ಆ ಪ್ರಕಾರ ಮಾಡುವ ನಿಟ್ಟಿನಲ್ಲಿ ತಕ್ಷಣ ಗಮನಹರಿಸಬೇಕು. ಈ ಕುರಿತು ಈಗಲೇ ಉತ್ತರ ಕೊಡುತ್ತೀರೋ ಅಥವಾ ಯಾವಾಗ ಉತ್ತರಿಸುತ್ತೀರೋ ಅದು ನಿಮಗೆ ಬಿಟ್ಟಿದ್ದು. ಗ್ರಾಮೀಣಾಭಿವೃದ್ಧಿ ಸಚಿವರು ಶುದ್ಧ ಕುಡಿಯುವ ನೀರಿನ ಘಟಕದ ಬಗ್ಗೆ ಸಾಕಷ್ಟು ತಲೆ ಕೆಡಿಸಿಕೊಂಡಿದ್ದಾರೆ ಎಂದು ನಾನು ಬೆಳಿಗ್ಗೆ ಮಾತನಾಡುತ್ತಾ ಹೇಳಿದೆ. ಶಿವಮೊಗ್ಗ ತಾಲ್ಲೂಕು ಪಂಚಾಯಿತಿ ಮೀಟಿಂಗ್‌ನಲ್ಲಿ ಭಾಗವಹಿಸಿದ್ದಾಗ ಆಕಸ್ಮಾತ್ ಮಾನ್ಯ ಕಾಗೋಡು ತಿಮ್ಮಪ್ಪನವರು ಬಂದರು. ಅಲ್ಲಿನ ಇಂಜಿನಿಯರ್‌ರವರು, ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳ ಕೆಲಸ ಮುಗಿದಿದೆ ಎಂದು ಹೇಳಿದರು. ಆಗ ನಮ್ಮ ಮಾನ್ಯ ಭಾನುಪ್ರಕಾಶ್‌ರವರು, ವಿದ್ಯುತ್ ಸಂಪರ್ಕವನ್ನು ಕೊಟ್ಟಿದ್ದೀರಾ ಎಂದು ಕೇಳಿದಾಗ ಅವರು, 'ಇನ್ನೂ ಇಲ್ಲ' ಎಂದು ಹೇಳಿದರು. ನೀರು ಬಂದರೆ ಆಗ ಮಾತ್ರ ಕೆಲಸ ಪೂರ್ಣವಾಗಿದೆ ಎಂದು ಭಾವಿಸಬಹುದು. ನೀರೇ ಬರದೆ ಪೂರ್ಣ ಕೆಲಸ ಮುಗಿದಿದೆ ಎಂದು ಹೇಗೆ ಹೇಳುವುದಕ್ಕೆ ಆಗುತ್ತದೆ? ಶುದ್ಧ ಕುಡಿಯುವ ನೀರಿನ ಎಷ್ಟೋ ಘಟಕಗಳು ಈಗಾಗಲೇ ಕೆಟ್ಟು ಹೋಗಿವೆ. ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ, ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯತ್ ಸದಸ್ಯರು ಇದ್ದರೆ ತಮ್ಮ ಕ್ಷೇತ್ರಗಳಲ್ಲಿ ಎಷ್ಟು ಘಟಕಗಳು ಕೆಟ್ಟು ಹೋಗಿವೆ, ಅದರ ಪರಿಸ್ಥಿತಿ ಹೇಗಿದೆ ಎಂಬುದರ ಬಗ್ಗೆ ಹೇಳುತ್ತಾರೆ. ಆದರೆ ಈಗ ಯಾರು ಹೇಳುತ್ತಾರೆ? ರಾಜ್ಯದಲ್ಲಿ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕಗಳಾಗಿವೆ, ಆ ಪೈಕಿ ಎಷ್ಟು ಘಟಕಗಳಿಗೆ ವಿದ್ಯುದೀಕರಣ ಆಗಿಲ್ಲ, ಎಷ್ಟು ಕೆಟ್ಟು ಹೋಗಿವೆ, ಇದನ್ನು ಯಾವಾಗ ದುರಸ್ತಿ ಮಾಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು ಬರಗಾಲದ ಸಂದರ್ಭ.

ಅನ್ನಭಾಗ್ಯಕ್ಕೆಂದು ಕೇಂದ್ರ ಸರ್ಕಾರ ಕೆ.ಜಿ.ಗೆ 32 ರೂಪಾಯಿಗಳನ್ನು ಕೊಟ್ಟು, ರಾಜ್ಯ ಸರ್ಕಾರ 3 ರೂಪಾಯಿಗಳನ್ನು ಮಾತ್ರ ಸೇರಿಸಿ ಕೊಡುತ್ತಿದ್ದು, ಇದನ್ನು ನೀವೇ ರಾಜ್ಯ ಸರ್ಕಾರದಿಂದ ಕೊಡುತ್ತಿರುವ ಹಾಗೆ ಹೇಳಿದ್ದೀರಿ. ಆಯಿತು, ಈ ಭಾಗ್ಯವನ್ನು ನೀವೇ ಕಲ್ಪಿಸಿಕೊಟ್ಟಿದ್ದೀರಿ ಎಂದಿಟ್ಟುಕೊಳ್ಳಿ. ಆದರೆ, ಅಕ್ಕಿ ಕಳ್ಳಸಾಗಾಣಿಕೆ ಆಗುತ್ತಿರುವ ವಿಚಾರ ಪತ್ರಿಕೆಗಳಲ್ಲಿ ಬಂದಾಗ, ಇಂತಹ ಲಾರಿಯನ್ನು ಸೀಜ್ ಮಾಡಿದ್ದೇವೆ, ಇಂಥವರನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳುತ್ತೀರಿ. ನೀವು ಹಮಾಲಿಯನ್ನು, ಡ್ರೈವರನ್ನು ಮತ್ತು ಕಂಡೆಕ್ಟರನ್ನು ಅರೆಸ್ಟ್ ಮಾಡುತ್ತೀರಿ. ಆ ಅಕ್ಕಿ ಎಲ್ಲಿಂದ ಬಂತು, ಅದಕ್ಕೆ ವಾರಸುದಾರರು ಯಾರು, ಈ ಲೂಟಿಗೆ ಕಾರಣ ಯಾರು, ಇದರ ಹಿಂದೆ ಯಾರ‍್ಯಾರು ಇದ್ದಾರೆ ಎಂಬ ಬಗ್ಗೆ ತಿಳಿದುಕೊಳ್ಳಲು ಒಂದು ಸಮಿತಿಯನ್ನು ಮಾಡಿ. ಎರಡೂ ಸದನದ ಸದಸ್ಯರುಗಳನ್ನು ಸೇರಿಸಿ ಸದನಸಮಿತಿಯನ್ನು ಮಾಡಿ. ಆಗ ನೋಡಿ ಹೇಗೆ ಕಳ್ಳರು ಹೊರಗೆ ಬರುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಆದರೆ ನಿಮಗೆ ಇಂಥದ್ದರಲ್ಲಿ ಆಸಕ್ತಿಯೇ ಇಲ್ಲ. ಕಳ್ಳರು ಇದೇ ತರಹ ಕಳ್ಳತನ ಮಾಡಿಕೊಂಡೇ ಇರಲಿ ಎಂದು ಸರ್ಕಾರಕ್ಕೆ ಆಸೆ ಇದೆಯೇನೋ ನನಗೆ ಗೊತ್ತಿಲ್ಲ. ಮರಳು ಇರಬಹುದು, ಅಕ್ಕಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು... ಪ್ರಾಮಾಣಿಕ ಅಧಿಕಾರಿಗಳ ಕೈಗೆ ಇದನ್ನು ನಿಭಾಯಿಸುವ ಜವಾಬ್ದಾರಿ ಕೊಡುತ್ತಿಲ್ಲ, ಆ ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಕೂಡ ಇಲ್ಲ. ಹಾಗಾಗಿ ಇದರ ಬಗ್ಗೆ ಒಂದು ಸದನ ಸಮಿತಿ ಮಾಡುವುದಕ್ಕೆ ಸಾಧ್ಯವೇ? ಸದನ ಸಮಿತಿ ಮಾಡಬೇಕೆಂದು ನಾನು ಇಲ್ಲಿ ಒತ್ತಾಯ ಮಾಡುತ್ತೇನೆ. ನಾನು, ಗೋವಿನ ಮೇವು ಲೂಟಿ ಆಗುತ್ತಿದೆ, ಉದ್ಯೋಗ ಖಾತ್ರಿಯಲ್ಲಿ ಅನ್ಯಾಯವಾಗುತ್ತಿದೆ ಎಂಬ ಮಾತನ್ನು ಹೇಳಿದೆ. ಇದರ ಬಗ್ಗೆ ಪರಿಶೀಲನೆ ಮಾಡಲು ಯಾರೋ ಒಬ್ಬ ಅಧಿಕಾರಿಯನ್ನು ಕಳುಹಿಸಿದರೆ ಉಪಯೋಗವಾಗುತ್ತದೆ ಎಂದು ನನಗನಿಸುವುದಿಲ್ಲ. ಅವರು ಅದಕ್ಕೆ ತಕ್ಕಂತೆ ಉತ್ತರ ಕೊಡುತ್ತಾರೆ. ನಮಗೆ ಉತ್ತರ ಬೇಡ. ಆಗುತ್ತಿರುವ ಭ್ರಷ್ಟಾಚಾರ ನಿಲ್ಲಬೇಕು. ಮೇವಿನಲ್ಲಿ ದುಡ್ಡು ಹೊಡೆಯುತ್ತಾರೆ ಎಂದು ನಾನು ಕಣ್ಣಿನಿಂದ ಕಂಡಿದ್ದನ್ನು ನಿಮ್ಮ ಮುಂದೆ ಹೇಳಿದೆ. ಯಾರೋ ಒಬ್ಬ ಅಧಿಕಾರಿ ಹೋಗಿ ನೋಡಿಕೊಂಡು ಬಂದರೆ ಆತ ಏನು ವರದಿ ಕೊಡುತ್ತಾನೆ? ಸದನ ಸಮಿತಿ ಮಾಡಿದರೆ, ಅದರ ವ್ಯಾಪ್ತಿಗೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ, ಮೇವಿನ ಹಗರಣದ ಬಗ್ಗೆ, ಅಕ್ಕಿ ಕಳ್ಳಸಾಗಾಣಿಕೆ ಆಗುತ್ತಿರುವ ಬಗ್ಗೆ ತನಿಖೆ ಮಾಡಬಹುದು. ಬರಪೀಡಿತ ವಿಚಾರ ಚರ್ಚೆ ಆಗುತ್ತಿರುವ ಸಂದರ್ಭದಲ್ಲಿ, ಸಾಮಾನ್ಯ ಜನರಿಗೆ ತಲುಪಬೇಕಾದ ಅನ್ನಭಾಗ್ಯದ ಅಕ್ಕಿ, ಜಾನುವಾರಿಗೆ ತಲುಪಬೇಕಾದ ಮೇವು, ಉದ್ಯೋಗ ಖಾತ್ರಿ ಯೋಜನೆಯಲ್ಲಾಗುತ್ತಿರುವ ಅವ್ಯವಸ್ಥೆಗಳನ್ನು ಒಂದು ಹಂತಕ್ಕೆ ತರಲು ಏಕೆ ಸದನ ಸಮಿತಿಯನ್ನು ಮಾಡಬಾರದು? ನೀವು ಸ್ವಾಭಾವಿಕವಾಗಿ ಒಂದು ಉತ್ತರ ಕೊಡುತ್ತೀರಿ, ನಾವು ಅದನ್ನು ಕೇಳಿಕೊಂಡು ಹೋಗುತ್ತೇವೆ. ಇಷ್ಟೇ ಆಗಿಬಿಟ್ಟಿದೆ. ಯಾವ ಯಾವ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದೆ. ನಾನು ಒಂದು ಉದಾಹರಣೆ ಕೊಟ್ಟೆ. ಶಿವಮೊಗ್ಗ ಜಿಲ್ಲಾ ಪರಿಷತ್ತು ಮತ್ತು ಶಿವಮೊಗ್ಗ ಕಾರ್ಪೋರೇಷನ್ ವತಿಯಿಂದ ನಿಮ್ಮ ನೇತೃತ್ವದಲ್ಲೇ ಸಿಎಂ ಅವರಿಗೆ ಒಂದು ಮೆಮೊರೆಂಡಮ್ ಕೊಟ್ಟೆವು. ಆದರೆ ಎಷ್ಟು ಹಣ ಬಿಡುಗಡೆಯಾಯಿತು? ಇತ್ತೀಚೆಗೆ ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಹಣ ಬಿಡುಗಡೆ ಆಗಿದೆ? ಯಾವುದೇ ಹಣ ಬಿಡುಗಡೆ ಆಗಲಿಲ್ಲ. ಶಿವಮೊಗ್ಗ ಜಿಲ್ಲಾ ಪರಿಷತ್ತು ಮತ್ತು ಶಿವಮೊಗ್ಗ ಕಾರ್ಪೋರೇಷನ್‌ಗೆ ಒಂದು ರೂಪಾಯಿ ಕೂಡ ಬಂದಿಲ್ಲ...

**ಶ್ರೀ ರಮೇಶ್‌ಬಾಬು:–** ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಮುಖವಾದ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಬರಗಾಲದ ಬಗ್ಗೆ ತೀವ್ರ ಚರ್ಚೆ ಆಗುತ್ತಿದೆ, ನಾವು ಬರಗಾಲದ ಬಗ್ಗೆ ಪ್ರಶ್ನೆ ಕೇಳುತ್ತೇವೆ, ಅದಕ್ಕೆ ಸರ್ಕಾರದಿಂದ ಸಮಂಜಸವಾದ ಉತ್ತರ ಸಿಗುತ್ತಿಲ್ಲ ಎಂಬ ಮಾತನ್ನು ಹೇಳಿದರು. ಇದರ ಜೊತೆ, ದಾಸ್ತಾನಿನ ಬಗ್ಗೆಯೂ ಮಾತನಾಡಿದರು. ಈ ಹಿನ್ನೆಲೆಯಲ್ಲಿ ವಿಶೇಷವಾದ ಪ್ರಕರಣವನ್ನು ಸದನದ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. 1976ರಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಸದನದ ಸದಸ್ಯರಾಗಿ ಬರಗಾಲಕ್ಕೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ. ಮಾನ್ಯ ಭೈರೇಗೌಡರು ಈ ಸದನದ ಸದಸ್ಯರಾಗಿ ಅವರೂ ಸಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನಾಡಿದ್ದರು. ಸನ್ಮಾನ್ಯ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದು, ಭೀಕರ ಬರಗಾಲದ ಬಗ್ಗೆ ಆವತ್ತಿನ ಪರಿಸ್ಥಿತಿಯಲ್ಲಿ ಸರ್ಕಾರದ ಕಣ್ಣು ತೆರೆಸುವಂತಹ ಕೆಲಸ ಮಾಡಿದ್ದಾರೆ. ಆವತ್ತು ಸರ್ಕಾರದಿಂದ ಏನು ಉತ್ತರ ಸಿಕ್ಕಿತೋ ಇವತ್ತೂ ಕೂಡ ಅದೇ ಉತ್ತರ ಬರುತ್ತಿದೆ. ತಮ್ಮ ಮಾಹಿತಿಗೋಸ್ಕರ ನಾನು ಹೇಳಲೇಬೇಕಾಗುತ್ತದೆ.

1976ರಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಸದನದ ಸದಸ್ಯರಾಗಿದ್ದಾಗ ಮಾನ್ಯ ಹುಚ್ಚಮಾಸ್ತಿಗೌಡರು ಕಂದಾಯ ಸಚಿವರಾಗಿದ್ದರು. ಅವರು ತಮ್ಮ ಪ್ರಶ್ನೆಗೆ ಮತ್ತು ಮಾನ್ಯ ಭೈರೇಗೌಡರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆ ಸಂದರ್ಭದಲ್ಲಿ ಸನ್ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದರು. ಶ್ರೀಮತಿ ನಾಗರತ್ನಮ್ಮ ಅವರು ಕೆಳಮನೆಯಲ್ಲಿ ಸಭಾಧ್ಯಕ್ಷರಾಗಿದ್ದರು. ನಾನು ಕೆಲವು ಅಂಶಗಳನ್ನು ಓದುತ್ತೇನೆ. "18ನೇ ನವೆಂಬರ್ 1976ರಂದು ಸದನದಲ್ಲಿ ಈ ರೀತಿ ನಾತನಾಡಿದ್ದಾರೆ.

"ಶ್ರೀ ಹೆಚ್.ಡಿ.ದೇವೇಗೌಡ, ಹೊಳೆನರಸೀಪುರ:- ಮಾನ್ಯ ಸಭಾಧ್ಯಕ್ಷಣಿಯವರೆ, ನಾನು ಮತ್ತು ನನ್ನ ಇಬ್ಬರು ಮಿತ್ರರಾದ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಭೈರೇಗೌಡರು ಸೇರಿ ನಿಯಮ 312ನೇ ನಿಯಮದ ಪ್ರಕಾರ ರಾಜ್ಯ ಸರ್ಕಾರದವರು, ನಮ್ಮ ರಾಜ್ಯದಲ್ಲಿರುವ ಭತ್ತದ ದಾಸ್ತಾನು ಏನಿದೆಯೋ ಅದನ್ನು ಈಗ ಮಾರಾಟ ಮಾಡುವುದಕ್ಕೆ ಕೊಟೇಷನ್ ಕರೆದಿದ್ದಾರೆ ಮತ್ತು ಅದನ್ನು ಸ್ವೀಕರಿಸುವ ಹಂತದಲ್ಲಿದ್ದಾರೆ. ಇದು ತಿಳಿದ ಮೇಲೆ ಈ ಕುರಿತು ಬಹಳ ಜರೂರಾದ ಪ್ರಶ್ನೆ ಪ್ರಸ್ತಾಪ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದ್ದೆವು. ತಾವು ಅದಕ್ಕೆ ಮನ್ನಣೆ ಕೊಟ್ಟು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ನೀಡಿರುವುದಕ್ಕಾಗಿ ಪ್ರಥಮವಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ".

ಮುಂದುವರೆದು, "ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸಲ ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಬಂದೊದಗಿರುವ ಸನ್ನಿವೇಶದಲ್ಲಿ ನಮ್ಮಲ್ಲಿರುವ ಭತ್ತದ ದಾಸ್ತಾನು ಎಷ್ಟಿದೆಯೋ ಅದು ಇವತ್ತಿನ ನಮ್ಮ ರಾಜ್ಯದ ಅವಶ್ಯಕತೆಯನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ಆದರೆ ಸರ್ಕಾರದವರು, ನಮ್ಮಲ್ಲಿರುವ ದಾಸ್ತಾನು ಅಧಿಕವಾಗಿದೆ, ಈ ಸಲ ಹೆಚ್ಚಿನ ರೀತಿಯಲ್ಲಿ ಶೇಖರಣೆ ಮಾಡಿದ್ದೇವೆ ಎಂದು ಕೊಟೇಷನ್ ಕರೆದು ಬಹಿರಂಗವಾಗಿ ಮಾರಾಟ ಮಾಡುತ್ತೇವೆ ಎಂದು ಹೇಳಿದೆ. ನಾನು ಇದನ್ನು ಪತ್ರಿಕೆಗಳಲ್ಲಿ ನೋಡಿದ್ದೇನೆ. ತಾವು ಈ ಕೊಟೇಷನ್‌ಗಳನ್ನು ಸ್ವೀಕಾರ ಮಾಡುವ ಕೊನೆಯ ಹಂತದಲ್ಲಿದ್ದೇವೆ ಎಂದು ಹೇಳಿದ್ದೀರಿ".

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಂದುವರೆದು, "ಈ ರೀತಿ ಎರಡೂವರೆ ಲಕ್ಷ ಟನ್ ಬರುತ್ತದೆ ಎಂದು ಗುರಿಯನ್ನು ನಿಗದಿ ಮಾಡಿಕೊಂಡಿದ್ದೀರಿ".

ಮಾನ್ಯ ಸಭಾಪತಿಗಳೆ, ಇದಕ್ಕೆ ರಿಲವೆಂಟ್ ಆಗಿರುವುದನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಓದುತ್ತೇನೆ.

"ಬರೀ ಭಾಷಣ ಮಾಡುವುದರಿಂದ ಬಡತನ ನಿವಾರಣೆ ಆಗುವುದಿಲ್ಲ, ಅದಕ್ಕೋಸ್ಕರವಾಗಿ ನಾನು ಹೇಳುವುದೇನೆಂದರೆ, ಮಾನ್ಯ ಕಂದಾಯ ಸಚಿವರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು, ಒಂದು ಕೋಟಿ ಜನ ಈ ರಾಜ್ಯದಲ್ಲಿ ಭೀಕರ ಬರಗಾಲಕ್ಕೆ ತುತ್ತಾಗಿದ್ದಾರೆ" ಎಂದು ಹೇಳಿದರು. ಅಂದರೆ 5 ಜನರಿಗೆ ಒಂದು ಕುಟುಂಬ ಎಂದು ಇಟ್ಟುಕೊಂಡರೆ ಸುಮಾರು 20 ಲಕ್ಷ ಕುಟುಂಬ ಎಂದು ಹೇಳಿದ ಹಾಗಾಯಿತು. 20 ಲಕ್ಷ ಕುಟುಂಬದ ಜನರು ಈ ಭೀಕರ ಬರಗಾಲಕ್ಕೆ ತುತ್ತಾಗಿದ್ದಾರೆ." ಮುಂದುವರೆದು, "ಇದರಲ್ಲಿ ನಮ್ಮ ರಾಜ್ಯ ಸರ್ಕಾರದ ತತ್ವದ ಪ್ರಕಾರ, ಹರಿಜನ–ಗಿರಿಜನ, ನಿಮ್ನ ವರ್ಗದವರು, ಹಿಂದುಳಿದವರು, ಸಣ್ಣ ಹಿಡುವಳಿದಾರರು ಎಂದು ಏನು ಕರೆದಿದ್ದಾರೆ ಅದನ್ನು ಮ್ಯಾಪ್ ಮಾಡಿ ನಮಗೆ ಒದಗಿಸಿಕೊಟ್ಟಿದ್ದಾರೆ. ಅದರ ಮಾಹಿತಿಯನ್ನು ತೆಗೆದುಕೊಂಡು ನಾನು ಕೇಳುತ್ತಿದ್ದೇನೆ. 3 ಲಕ್ಷ ಕ್ವಿಂಟಾಲ್ ಅಕ್ಕಿ ದಾಸ್ತಾನು ಸರ್ಕಾರದ ಹತ್ತಿರ ಇದೆ ಎಂದಮೇಲೆ ಒಂದೊಂದು ಕುಟುಂಬಕ್ಕೆ ಒಂದು ಕ್ವಿಂಟಾಲ್ ಅಕ್ಕಿ ಕೊಟ್ಟರೆ ಜನರಿಗೆ ಎಷ್ಟೋ ಉಪಕಾರ ಮಾಡಿದಂತಾಗುತ್ತದೆ. ರೂ. 20 ಲಕ್ಷಗಳನ್ನು ಈ ಕುಟುಂಬಗಳಿಗೆ ಕೊಟ್ಟರೆ ಅವರು ಒಂದು ತಿಂಗಳ ಗಂಜಿಯನ್ನು ಕುಡಿಯುತ್ತಾರೆ. ಅನೇಕರು ಮನೆಯಿಂದ ಮನೆಗೆ ಸುತ್ತುತ್ತಿದ್ದಾರೆ. ಅಂತಹ ಜಬ್ಬೊಬ್ಬರಿಗೆ ಒಂದು ಕ್ವಿಂಟಾಲ್ ಅಕ್ಕಿಯನ್ನು ಕೊಡಿ.

(ಮುಂದು)

**(859)20-6-2017 MM-MD 5.00**

**ಶ್ರೀ ರಮೇಶ್ ಬಾಬು(ಮುಂದು)**

ಈ ಜವಾಬ್ದಾರಿಯನ್ನು ನಾನು ಬೇಕಾದರೆ ವಹಿಸಿಕೊಳ್ಳುತ್ತೇನೆ. ಅವರಿಗೆ ನೀವು ಪುಕ್ಕಟೆಯಾಗಿ ಕೊಡಬೇಡಿ. ಒಂದು ವರ್ಷದಲ್ಲಿ ಅಥವಾ ಎರಡು ವರ್ಷದಲ್ಲಿ ಅವರಿಂದ ಹಣವನ್ನು ತೆಗೆದುಕೊಳ್ಳಿ. ಏಕೆಂದರೆ, ಬಡವರಿಗೆ ಒಂದೇ ಬಾರಿ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ." ಈ ರೀತಿ ಮಾತನಾಡಿ ಮುಂದೆ ಹೀಗೆ ಹೇಳುತ್ತಾರೆ: "ಇದ್ದರ ಬಗ್ಗೆ ಮಾನ್ಯ ತಿಮ್ಮಪ್ಪನವರು ವ್ಯಾಖ್ಯಾನ ಮಾಡುತ್ತಾರೆ. ಆದ್ದರಿಂದ ಈ ನನ್ನ ಒಂದು ಸಲಹೆಯನ್ನು ಸ್ವೀಕಾರ ಮಾಡಬೇಕೆಂದು ತಿಳಿಸಬಯಸುತ್ತೇನೆ". ಅಂದರೆ, ಆ ದಿನ ಸದನದಲ್ಲಿ ಏನು ಚರ್ಚೆಯಾಗಿತ್ತೋ ಇವತ್ತು ಕೂಡ ಅದು ಮುಂದುವರಿದ ಭಾಗವಾಗಿದೆ. ಅದೇ ಕುಡಿಯುವ ನೀರಿನ ಸಮಸ್ಯೆ, ಇದೇ ದಾಸ್ತಾನಿನ ಸಮಸ್ಯೆ ಮತ್ತು ಸರ್ಕಾರದಿಂದ ಅದೇ ಉತ್ತರ. ಮಾನ್ಯ ತಿಮ್ಮಪ್ಪರವರು ಮಾತನಾಡಿದ್ದನ್ನು ಹೇಳುತ್ತೇನೆ. ತಿಮ್ಮಪ್ಪರವರು ಮಾತನಾಡಿದ್ದಕ್ಕೆ ಸನ್ಮಾನ್ಯ ಹುಚ್ಚಮಾಸ್ತಿಗೌಡರು ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಮಾನ್ಯ ರಮೇಶ್‌ಬಾಬುರವರೆ, ಬರಗಾಲವೆಂದರೆ, ಅದೇ ಜನರ ಸಮಸ್ಯೆ, ಅದೇ ನೀರಿನ ಸಮಸ್ಯೆಯಾಗಿದೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪರವರು ಮತ್ತು ಇನ್ನೂ ಅನೇಕ ಮಾನ್ಯ ಸದಸ್ಯರು ಆಗಾಗ್ಗೆ ಅಭಾವ ಉಂಟಾಗತಕ್ಕ ಪ್ರದೇಶಗಳಲ್ಲಿ ಶಾಶ್ವತ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಗೊಳ್ಳುವುದು ಅವಶ್ಯವೆಂದು ಹೇಳಿದರು. ಇದು ತಮ್ಮ ಪ್ರಶ್ನೆಗೆ ಮಾನ್ಯ ಹುಚ್ಚಮಾಸ್ತಿಗೌಡರು ಕೊಟ್ಟಿರುವ ಉತ್ತರವಾಗಿದೆ. ಅದು ಸರ್ಕಾರದ ದೃಷ್ಟಿಯಲ್ಲಿರಬೇಕಾದ ಸಲಹೆಯಾಗಿದೆ. ಇದಕ್ಕೆ ಅವರು ಉದಾಹರಣೆ ಕೊಡುತ್ತಾ ಉತ್ತರ ಪಿನಾಕಿನಿಯಲ್ಲಿ ಮೇಲ್ಭಾಗದಲ್ಲಿ ನೀರಿಲ್ಲದಿದ್ದರೂ ಕೂಡ ಆಳದಲ್ಲಿ ನೀರು ಇರುತ್ತದೆ ಎಂದು ತಾವು ಹೇಳಿರುವುದನ್ನು ಮಾನ್ಯ ಹುಚ್ಚಮಾಸ್ತಿಗೌಡರವರು ಹೇಳಿದ್ದಾರೆ. ಆದಕಾರಣ ಅದರ ಅಕ್ಕಪಕ್ಕದಲ್ಲಿ ಬಾವಿಗಳನ್ನು ತೆಗೆಸಿ ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿದೆಯೇ ನೋಡಿ ಎಂದು ಹೇಳಿದರು. ನೀರನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಬಗ್ಗೆಯೂ ಸಹ ತಾವು ಮಾತನಾಡಿದ್ದಿರಿ. ಇಲ್ಲಿ ಮಾನ್ಯ ಈಶ್ವರಪ್ಪರವರ ಪ್ರಶ್ನೆಗೆ ಹೇಳುವುದೇನೆಂದರೆ, ಸರ್ಕಾರದಿಂದ ಅದೇ ಉತ್ತರವನ್ನು ಕೊಡುವುದು ಬೇಡ. ಏನಾದರೂ implement ಆಗಬೇಕು. ಮಾನ್ಯ ಹೆಚ್.ಡಿ.ದೇವೇಗೌಡರು ವಿರೋಧಪಕ್ಷದ ನಾಯಕರಾಗಿ, ತಾವು ಈ ಸದನದ ಸದಸ್ಯರಾಗಿ, ಶ್ರೀ ಸಿ.ಭೈರೇಗೌಡರು ಈ ಸದನದ ಸದಸ್ಯರಾಗಿ ಮಾತನಾಡಿದಂತಹ ಸಮಸ್ಯೆಗಳು ಇವತ್ತಿಗೂ ಹಾಗೇ ಉಳಿದುಕೊಂಡಿದೆ ಎಂದರೆ, ಅವತ್ತಿನ ದಿವಸ ಕೂಡ ಭೀಕರ ಬರಗಾಲವಿದೆ ಎಂದು ಚರ್ಚೆಯಾಗಿತ್ತು; ಇವತ್ತಿನ ದಿವಸ ಕೂಡ ಭೀಕರ ಬರಗಾಲವಿದೆಯೆಂದು ಚರ್ಚೆಯಾಗುತ್ತಿದೆ. ದಯಮಾಡಿ ಅದಕ್ಕೆ ಪರಿಹಾರ ಕೊಡುವ ನಿಟ್ಟಿನಲ್ಲಿ ಮಾನ್ಯ ಈಶ್ವರಪ್ಪ ಅವರಿಗೆ ಪೂರಕವಾಗಿ ಸಲಹೆಯನ್ನು ಕೊಡುತ್ತಿದ್ದೇನೆ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಕೆಲವು ವಿಷಯಗಳನ್ನು ನಮ್ಮ ಇಲಾಖೆಗೆ ಸಂಬಂಧಿಸಿರುವುದನ್ನು ಬರಗಾಲದ ಚರ್ಚೆಯ ಸಂದರ್ಭದಲ್ಲಿ ಎತ್ತಿದ್ದಾರೆ. ಅದರ ಜೊತೆಗೆ NREGS (National Rural Employment Guarantee Scheme) ಬಗ್ಗೆ ಕೆಲವು ಮಾಹಿತಿಗಳನ್ನು ನೀಡಿದ್ದಾರೆ ಹಾಗೂ ಆಪಾದನೆಯನ್ನು ಮಾಡಿದ್ದಾರೆ. ಆ ಹಿನ್ನೆಲೆಯೊಳಗೆ ನನ್ನ ಕೆಲವು ಸ್ಪಂದನೆಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. NREG ಯೋಜನೆ ಬಗ್ಗೆ ಮಾನ್ಯ ಈಶ್ವರಪ್ಪರವರು ಯಾದಗಿರಿ ಜಿಲ್ಲೆಯಲ್ಲಿ ಅವ್ಯವಹಾರವಾಗಿದೆ ಎಂದು ಹೇಳಿದ್ದಾರೆ. ಹಾಗೂ ಅದನ್ನು ಸಹಿ ಮಾಡಿಸಿಕೊಂಡು 100 ರೂಪಾಯಿಗಳ ಕೂಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ. ನಾನು ಈ ಸದನದ ಗಮನಕ್ಕೆ ತರುವುದೇನೆಂದರೆ, ಕಳೆದ ಎರಡು-ಮೂರು ವರ್ಷಗಳಲ್ಲಿ NREG ಕಾರ್ಯಶೈಲಿಯೊಳಗೆ ಸಂಪೂರ್ಣವಾಗಿ ಬದಲಾವಣೆಯಾಗಿದೆ. ಈಗ ಯಾರೂ ಯಾರಿಗೂ ರೊಕ್ಕ ತೆಗೆದುಕೋ, ಚೆಕ್ ತೆಗೆದುಕೋ ಅಥವಾ demand draft ತೆಗೆದುಕೋ ಎನ್ನುವ ಪ್ರಶ್ನೆಯೇ ಇಲ್ಲ. ಎಲ್ಲವೂ ಸಹಿತ *National eFMS* (*National Electronic Fund Management System)* ಆಗಿದೆ. ನಂತರ ಕೆಲಸ ಆಗಿದೆಯೋ ಅಥವಾ ಬಿಟ್ಟಿದೆಯೋ ಎಂದು bogus work, ಅಥವಾ ಕೆಲಸವಾಗದೇ ಅಲ್ಲಿ ಹಣವನ್ನು ಖರ್ಚು ಮಾಡಿದ್ದರೆ ಅದೆಲ್ಲಾ ಭಾರೀ ಪ್ರಮಾಣದಲ್ಲಿ ಹತೋಟಿಗೆ ಬಂದಿದೆ. ಕಾರಣವೇನೆಂದರೆ, Geotag ಅನ್ನು ಈಗಾಗಲೇ ಅಳವಡಿಸಿದ್ದೇವೆ. Geotag ಇರುವ ಕಾರಣದಿಂದ ಅದು photograph ಸಹಿತ ಲಭ್ಯವಾಗುವುದರಿಂದ ಅದು ಬಹಳಷ್ಟು ಪ್ರಮಾಣದಲ್ಲಿ ಕಡಿಮೆಯಾಗಿದೆ. ನಾವು Aadhar Card link ಅನ್ನು ಕಂಪ್ಲೀಟ್ ಮಾಡಿದ್ದೇವೆ. NREG ಯೋಜನೆಯಲ್ಲಿರುವ ಕೂಲಿಕಾರರಿಗೆ ಶೇ.91ರಷ್ಟು Aadhar Card linking ಆಗಿದೆ. ಉಳಿದಿರುವುದನ್ನು delete ಮಾಡುತ್ತಿದ್ದೇವೆ. ಆದರೆ ಶೇ.91ರಷ್ಟು ಕೂಲಿಕಾರರ Aadhar Card Link ಆಗಿದ್ದರೂ ಕೂಡ ಅವರ ಕೂಲಿಯನ್ನು ಬ್ಯಾಂಕ್‌ಗೆ ಕಳುಹಿಸಿದರೆ ಬ್ಯಾಂಕ್‌ರವರಿಗೆ ceiling ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಅವರು ಶೇ.43 ರಷ್ಟು ಮಾತ್ರ ಮಾಡುತ್ತಿದ್ದಾರೆ. ಅವರಿಗೆ ನಾವು ಸ್ಪಷ್ಟವಾದ ನಿರ್ದೇಶನ ಕೊಡುತ್ತಾ ಒತ್ತಡ ಹೇರುತ್ತಿದ್ದೇವೆ. ಎಷ್ಟು ಪ್ರಮಾಣದಲ್ಲಿ Aadhar Card Link ಆಗಿದೆ ಅಷ್ಟು ಪ್ರಮಾಣದಲ್ಲಿ ನೀವು Aadhar Card Link ಮಾಡಿಕೊಳ್ಳಬೇಕು. ಬಹುಶಃ ಶೇ.100 ರಷ್ಟು ಬ್ಯಾಂಕ್‌ರವರದ್ದು Aadhar Card Link ಆದರೆ ಹಣ ಕೊಡುವುದು ಹಾಗು ಇವರಿಗೆ ಕೊಡುವುದರಲ್ಲಿ ಆಗುತ್ತಿರುವ ಅವ್ಯವಹಾರಗಳು ಸಂಪೂರ್ಣವಾಗಿ ನಿಲ್ಲುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಹೆಚ್.ಕೆ. ಪಾಟೀಲ್‌ರವರೆ, ಏನಾಗಿದೆ ಎಂದರೆ, ತಾವು ಪುಸ್ತಕವನ್ನು ನೋಡಿಕೊಂಡು ಹೇಳುತ್ತಿದ್ದೀರಿ ಆದರೆ ನಾನು field ಗೆ ಹೋಗಿ ಮಾತನಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೋದ ದಿನ ಒಂದು ಕೆರೆಯನ್ನು ತೆಗೆದರು. ಒಂದಷ್ಟು ಜನ ಕೂಲಿಕಾರರನ್ನು ಕರೆದುಕೊಂಡು ಹೋದರು. ಮೂರು ದಿನಗಳ ನಂತರ ನಾನು ಹೋದೆ. ಮುಖ್ಯಮಂತ್ರಿಯವರು ಬೆಳಿಗ್ಗೆ ಹೋದರು ಮೂರು ದಿನಗಳ ನಂತರ ನಾನು ಹೋದೆ. ಅಲ್ಲಿ ಕೆಲಸ ನಡೆಯುತ್ತಿದೆ ಎಂದು ತೀರ್ಮಾನ ತೆಗೆದುಕೊಂಡು 12 ಗಂಟೆಗೆ ಹೊರಟೆ. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಎರಡು ಗಂಟೆಯಾಗಿತ್ತು. ದಡದಡ ಎಂದು ಒಂದಷ್ಟು ಜನ ಹೆಣ್ಣುಮಕ್ಕಳು ಬಂದರು. ಆಗ ಯಾವಾಗಿನಿಂದ ಈ ಕೆಲಸವನ್ನು ಪ್ರಾರಂಭ ಮಾಡಿದ್ದೀರಿ ಎಂದು ಕೇಳಿದೆ. 'ಮೂರು ದಿನಗಳ ಮುಂಚೆ ಯಾರೋ ಒಬ್ಬ ದೊಡ್ಡ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾಹೇಬರು ಬಂದಿದ್ದರು ಅವತ್ತು ಒಂದಷ್ಟು ಕೆಲಸ ಮಾಡಿ ಹೋಗಿದ್ದೆವು. ಈಗ ಯಾರೋ ಸಣ್ಣ ಸಾಹೇಬರು ಬರುತ್ತಿದ್ದಾರೆ ಬನ್ನಿ' ಎಂದು ಕರೆದರು ಅದಕ್ಕೆ ಈಗ ಬಂದೆವು ಎಂದು ಹೇಳಿದರು. ಪತ್ರಿಕೆಯವರು, ಮಾಧ್ಯಮದವರೆಲ್ಲರ ಎದುರಿಗೆ ಇದು ನಡೆಯಿತು. ಪಿಡಿಓ ಒಬ್ಬರನ್ನು ಕರೆದು ನಾನು ಯಾವ ಯಾವ ಭಾಷೆಯಲ್ಲಿ ಹೇಳಿದ್ದೇನೋ ಗೊತ್ತಿಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹೆಣ್ಣುಮಗಳನ್ನು ಕರೆದು ಎಷ್ಟು ಕೂಲಿ ಕೊಡುತ್ತಾರೆ ಎಂದು ಕೇಳಿದೆ. 100 ರೂಪಾಯಿಗಳನ್ನು ಕೊಟ್ಟು ನಮ್ಮ ಬಳಿಯೆಲ್ಲಾ ಸಹಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಇದನ್ನೇಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ, ಇದೆಲ್ಲಾ ಪುಸ್ತಕದಲ್ಲಿ ಇದೆ. ಕೇವಲ ಪುಸ್ತಕದಲ್ಲಿ ಇದ್ದರೆ ಸಾಕಾಗುವುದಿಲ್ಲ. ಇದು field ಗೆ ಇಳಿಯಬೇಕಾದರೆ; ಯಾದಗಿರಿ ಜಿಲ್ಲೆಯಲ್ಲಿ ಯಾವ ಕೆರೆ, ಯಾವ ಹಳ್ಳಿ ಎಂಬುದರ ಬಗ್ಗೆ ವಿವರಗಳನ್ನು ನಿಮಗೆ ಕೊಡುತ್ತೇನೆ. ಅದರ ಮೇಲೆ ಒಂದು ತನಿಖೆಯನ್ನು ಮಾಡಿಸಿ. ಒಂದು ಕಡೆ ತನಿಖೆಯಾದರೆ ಎಲ್ಲಾ ಕಡೆಯೂ ಬಿಗಿಯಾಗುತ್ತದೆ ಎನ್ನುವ ಲೆಕ್ಕದಲ್ಲಿ ನಾನು ಈ ವಿಚಾರವನ್ನು ಹೇಳಿದ್ದೇನೆ.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಹೇಳುವಾಗ ಮಾನ್ಯ ಸಚಿವರು ಇರಲಿಲ್ಲ. ಮಾನ್ಯ ಸಚಿವರೆ, ತಮ್ಮ ಪುಸ್ತಕದಲ್ಲಿರುವುದು ಸರಿ. RTGS ಮುಖಾಂತರ ಹಣ ಅವರ ಖಾತೆಗೆ ಹೋಗುವುದು, Aadhar Card Link ಮಾಡಲು ದಾಖಲೆಗಳನ್ನು ಕೊಡುವುದು ಸರಿ. ಅದರ ಬಗ್ಗೆ ನನ್ನ ಆಕ್ಷೇಪವಿಲ್ಲ. ಎಲ್ಲೋ ಒಂದು ಕಡೆ ಭಾರಿ ಪ್ರಮಾಣದಲ್ಲಿ NREG ಯೋಜನೆಯಲ್ಲಿ ಏಜೆಂಟರಿದ್ದಾರೆ. ಆ ಏಜೆಂಟರನ್ನು ನಾನು ಸೂಕ್ಷ್ಮವಾಗಿ ಗಮನಿಸಿದ್ದೇನೆ ಮತ್ತು ಅಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆಯು ನಾನು ಮಧ್ಯಾಹ್ನವೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಏನೆಂದರೆ, ಒಂದು ಊರಿನಲ್ಲಿ ಅಥವಾ ಒಂದು ಹೋಬಳಿ ಮಟ್ಟದಲ್ಲಿ, ಒಬ್ಬರು ಇಬ್ಬರು ಪ್ರಭಾವಿ ವ್ಯಕ್ತಿಗಳಿರುತ್ತಾರೆ. ಅವರ ಕೆಲಸವೇನೆಂದರೆ, ಯಾವ ಊರಿನಲ್ಲಿ ಕೆಲಸಗಳು ನಡೆಯುತ್ತಿವೆ; ಕೆರೆ, ರಸ್ತೆ, ಗಟಾರಗಳಿರಬಹುದು ಅಥವಾ NREG ಯೋಜನೆಯಲ್ಲಿ ಆಗುತ್ತಿರುವ ಕೆಲಸ ಕಾರ್ಯಗಳಿಗೆ ಅವರು ಸಂಪೂರ್ಣವಾಗಿ ಮನೆ ಮನೆಗೆ ಹೋಗುತ್ತಾರೆ. ಮನೆ ಮನೆಗೆ ಹೋಗಿ ಅವರ Ration Card, Aadhar Car, Bank Pass Book, Cheque Book, ATM Card ಇದ್ದರೆ ATM Card, ನನಗೆ ತಿಳಿದಮಟ್ಟಿಗೆ ATM Card ಇಲ್ಲ. ಆದರೆ Cheque Book ನಲ್ಲಿ advance ಆಗಿ ಸಹಿ ಮಾಡಿಸಿಕೊಳ್ಳುತ್ತಾರೆ. ಅವೆಲ್ಲವನ್ನೂ procedure ಪ್ರಕಾರವೇ ಮಾಡುತ್ತಾರೆ. ಒಂದು ದಿವಸ ವಾರಕ್ಕೋ, ಹದಿನೈದು ದಿವಸಕ್ಕೋ ಅಥವಾ 20 ದಿವಸಕ್ಕೋ ಹಣ ಜಮಾ ಆದಾಗ ಆ ಚೆಕ್ ಅನ್ನು ಕೊಟ್ಟು ಸ್ವತಃ ಹೋಗಿ ಹಣವನ್ನು ತೆಗೆಸಿಕೊಂಡು ಬರುತ್ತಾರೆ. 100 ರೂಪಾಯಿ ಕೂಲಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಇಂತಹ ವ್ಯವಹಾರಗಳಾಗಿದ್ದನ್ನು ನೋಡಿದ್ದೇನೆ. ಸುಮ್ಮನಿದ್ದೇವೆ ಅಷ್ಟೇ. ಯಾವಾಗ ಕೆಲಸಕ್ಕೆ ಹೋಗುವುದಿಲ್ಲ, 15 ದಿವಸ ಕೆಲಸ ಇದ್ದಾಗ 241 ರೂಪಾಯಿ ಕೊಡಬೇಕಾದಾಗ, 4-5 ದಿವಸಕ್ಕೆ ಕೆಲಸಕ್ಕೆ ಹೋದಾಗ 241 ರೂಪಾಯಿಗಳನ್ನು 300 ರೂಪಾಯಿಗಳನ್ನೂ ಕೊಡುತ್ತಾರೆ. ಅದು ಹೇಗೆ 241 ರೂಪಾಯಿಗಳನ್ನು ಕೊಡಬೇಕಾಗುತ್ತದೆ? ಲುಕ್ಸಾನು ಮಾಡಿಕೊಳ್ಳುತ್ತಾರೇನು ಎಂದು ತಾವು ಕೇಳಬಹುದು. ಆದರೆ 241-300 ರೂಪಾಯಿಗಳನ್ನು ಏಕೆ ಕೊಡುತ್ತಾರೆ, 2-3 ದಿವಸಗಳ ಕೆಲಸಕ್ಕೆ ಕೊಡುವರೇ? ಇನ್ನುಳಿದ 15 ದಿವಸಗಳ ಕೆಲಸಗಳಿಗೆ ಕೇವಲ ಸಹಿ ಮಾಡುವುದಕ್ಕೆ 100 ರೂಪಾಯಿಗಳನ್ನು ಕೊಡುತ್ತಾರೆ. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಿ. ಕೇವಲ ಸಹಿ ಮಾಡುವುದಕ್ಕೆ 100 ರೂಪಾಯಿಗಳನ್ನು ಕೊಡುತ್ತಾರೆ. ಇವತ್ತಿನ ಪರಿಸ್ಥಿತಿಯಲ್ಲಿ 241 ರೂಪಾಯಿಯ ಕೆಲಸವನ್ನು 100 ರೂಪಾಯಿಗೆ ಹೇಗೆ ಮಾಡುತ್ತಾರೆ? ಇಂದು ಎಲ್ಲರೂ ಬುದ್ಧಿವಂತರಾಗಿದ್ದಾರೆ, ವಿದ್ಯಾವಂತರಾಗಿದ್ದಾರೆ, ಎಲ್ಲರಿಗೂ ತಿಳುವಳಿಕೆ ಇದೆ. ಬ್ಯಾಂಕ್‌ನಲ್ಲಿ ಹಾಗೆ ಕೊಡುವುದಿಲ್ಲ ಎಂಬುದು ಸರಿ. ಆದರೆ ಸಹಿ ಮಾಡುವ ಸಲುವಾಗಿ 100 ರೂಪಾಯಿಗಳನ್ನು ಕೊಡುತ್ತಾರೆ, ಇದರಲ್ಲಿ ಕೋಟಿಗಟ್ಟಲೆ ಅವ್ಯವಹಾರಗಳಾಗಿವೆ. 100 ರೂಪಾಯಿಗಳನ್ನು ಏಕೆ ಕೊಡುತ್ತಾರೆ ಎಂದರೆ; ಕೆಲವರು ಹೀಗೆ ಹೇಳುತ್ತಾರೆ. Bank Pass Book, Cheque Book, ATM Card ಇವುಗಳೆಲ್ಲವನ್ನು ತೆಗೆದುಕೊಂಡು, ಒಂದು ವಾರಕ್ಕೆ ರೂ.750/- ಕೊಟ್ಟರೆ ಸಾಕು advance ಆಗಿ 15 ದಿವಸಗಳಿಗೆ ಮುಂಗಡವಾಗಿಯೇ ಸಹಿ ಮಾಡಿಕೊಡುತ್ತೇನೆ' ಎಂದು ಹೇಳುತ್ತಾರೆ. ಈ ರೀತಿ ಅವ್ಯವಹಾರಗಳು ಏಜೆಂಟರ ಮುಖಾಂತರ ನಡೆದಿವೆ. ಮತ್ತೊಂದು ವಿಚಾರವನ್ನು ಹೇಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸೋಮಣ್ಣರವರೆ, ಚುಟುಕಾಗಿ ಹೇಳಬೇಕು.

**ಶ್ರೀ ಸೋಮಣ್ಣ ಮ್ಯ. ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪುಸ್ತಕದ್ದಲ್ಲ, practical ಆಗಿ ನಡೆದಿರುವುದನ್ನು ಹೇಳುತ್ತಿದ್ದೇನೆ. NREG ಯೋಜನೆಗಳಲ್ಲಿ ಕೆಲಸ ಮಾಡುವವರಿಗೆ ವಾರಕ್ಕೊಮ್ಮೆ 15 ದಿವಸಕ್ಕೊಮ್ಮೆ ಪೇಮೆಂಟ್ ಮಾಡುತ್ತಾರೆ. ನಾನು ಹಿಂದೆ ಮಾನ್ಯ ದೇಶಪಾಂಡೆ ರವರು ಶಿಗ್ಗಾಂವಿ ತಾಲ್ಲೂಕಿನ ತಡಸ್ ಗ್ರಾಮಕ್ಕೆ ಬಂದಾಗ ಅಲ್ಲಿಂದ ಯಲುವಿಗಿ ಗ್ರಾಮದ ಮುಖಾಂತರ ಗದಗ ಜಿಲ್ಲೆಯಿಂದ ಸವಣೂರಿಗೆ ಬಂದಾಗ 3-4 ಹಳ್ಳಿಗಳಿಗೆ ಅವರು ಬಂದು 2-3 ತಿಂಗಳು ನಮಗೆ ಪೇಮೆಂಟ್ ಆಗಿಲ್ಲ ಎಂದು ಹೇಳಿದರು. ಇದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಾವು ಇದನ್ನು ನೋಟ್ ಮಾಡಿಕೊಳ್ಳಿ. ಶಿಗ್ಗಾಂವಿ ತಾಲ್ಲೂಕಿನ ತಡಸ್ ಗ್ರಾಮಪಂಚಾಯ್ತಿಯಲ್ಲಿರುವ ಮುತ್ತಳ್ಳಿ ಗ್ರಾಮದ ಪೇಮೆಂಟ್ ಮೂರುವರೆ ನಾಲ್ಕು ತಿಂಗಳಾದರೂ ಆಗಿಲ್ಲ. ಮಾನ್ಯ ತಾಲ್ಲೂಕು ಪಂಚಾಯ್ತಿಯ ಇಓ ರವರಿಗೆ, ಪಿಡಿಓ ರವರಿಗೆ ಮತ್ತು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹೇಳಿದರೂ ಪೇಮೆಂಟ್ ಆಗಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

860/20–6–2017/5.10/ಡಿಎಸ್–ಎಂಡಿ

**ಶ್ರೀ ಸೋಮಣ್ಣ ಮ.ಬೇವಿನಮರದ(ಮುಂದು)**

ಅದೇ ರೀತಿ ಶಿಗ್ಗಾಂವಿ ತಾಲ್ಲೂಕಿನ ಹಿರೇಮಣಿಕಟ್ಟೆ ಗ್ರಾಮ ಪಂಚಾಯಿತಿಯಲ್ಲಿ ಕೆರೆ ನಿರ್ಮಾಣ ಮಾಡಿದ್ದಾರೆ. ಅಲ್ಲಿಯ ಇಓ ಮತ್ತು ಪಿಡಿಓ ಹೋಗಿ ಅಲ್ಲಿ ಕೆಲಸಕಾರ್ಯ ಮಾಡತಕ್ಕಂಥವರನ್ನು inspection ಮಾಡಿದ್ದಾರೆ. ಅವರು ಎಲ್ಲಿ ಸರ್ವೆ ಮಾಡಿಸಿದ್ದಾರೆಂದು ನಾನು ಮೊನ್ನೆ ಹೇಳಿದೆ. ಅಂಕಿ–ಅಂಶಗಳನ್ನು, ಸರ್ವೆ ನಂಬರ್ ಮತ್ತು ಅವರ ಹೆಸರು ಇತ್ಯಾದಿಗಳ ಬಗ್ಗೆ ತಪ್ಪು ಮಾಹಿತಿ ನೀಡಿದ್ದಾರೆ. ಅಲ್ಲಿ ಸರ್ಕಾರಿ ಜಾಗದಲ್ಲಿ ಕೆರೆ ಇರುವುದನ್ನು ಬಿಟ್ಟು ಅದನ್ನು ಖಾಸಗಿ ಜಾಗದಲ್ಲಿ ತೋರಿಸಿರುವಂತಹ ಫೋಟೋ ಮತ್ತು records ಇವೆ. ಕೆಲಸ ಮಾಡಿಸಿದವರು ಸರ್ಕಾರಿ ಜಾಗದಲ್ಲಿ ಮಾಡಿಲ್ಲ, ಖಾಸಗಿ ಜಾಗದಲ್ಲಿ ಮಾಡಿದ್ದೀರಿ, ಕೂಲಿ ಕೊಡುವುದಿಲ್ಲ ಎಂದು ಇವತ್ತಿನವರೆಗೂ ಹೇಳುತ್ತಿದ್ದಾರೆ. ಪಿಡಿಓ ಮತ್ತು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷ ಸ್ವತಃ inspection ಮಾಡಿದ್ದಾರೆ. ಅದರ ಫೋಟೋ ಇವೆ. 8 ಅಡಿ, 10 ಅಡಿ ಕಟ್ಟಿ ಎಂದು ಹೇಳಿರುವುದು ಇದೆ. ಇವತ್ತಿನವರೆಗೂ ಪೇಮೆಂಟ್ ಆಗುತ್ತಿಲ್ಲ. ಆದರೆ ಎಲ್ಲಿಯೋ ಒಂದು ಕಡೆ ಸರ್ಕಾರಿ ಅಧಿಕಾರಿಗಳು ಪಿಡಿಓ, ತಾಲ್ಲೂಕು ಪಂಚಾಯಿತಿಯವರು, ಜಿಲ್ಲಾ ಪಂಚಾಯಿತಿ ಸಿಇಓ ಇರಬಹುದು, ಕೂಲಿಕಾರರಿಗೆ ಇವತ್ತಿನವರೆಗೂ ಪಗಾರ ಕೊಡುತ್ತಿಲ್ಲವೆಂದರೆ ಇದು ಯಾರ ತಪ್ಪು? ಕೂಲಿಗೆ ಹೋದವರ ತಪ್ಪೋ, ಮಾಡಿಸಿದವರ ತಪ್ಪೋ, ಪಿಡಿಓ ರವರ ತಪ್ಪೋ, ಸರ್ವೆ ಮಾಡಿರುವ ಅಧಿಕಾರಿಗಳ ತಪ್ಪೋ, ಜಿಲ್ಲಾ ಪಂಚಾಯಿತಿಯವರ ತಪ್ಪೋ, ಅಥವಾ ಸರ್ಕಾರದ ತಪ್ಪೋ ಎಂದು ನಾವು ಯಾರ ಎದುರಿಗೆ ಹೇಳಬೇಕು? ನಾನು ಸಾಕ್ಷಿ ಸಮೇತ ಹೇಳುತ್ತಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ಇದಕ್ಕೆ ಒಂದು ಸಮಿತಿ ರಚನೆ ಮಾಡಿ, ಸರ್ಕಾರದ ಉನ್ನತ ಮಟ್ಟದ ಅಧಿಕಾರಿಯನ್ನು ಕಳುಹಿಸಿಕೊಡಿ ಅಥವಾ ಚುನಾಯಿತ ಪ್ರತಿನಿಧಿಯನ್ನು ಕಳುಹಿಸಿಕೊಡಿ. ಎಲ್ಲಿ ತಪ್ಪಾಗಿದೆ ಅದನ್ನು ಸರಿಪಡಿಸುವುದಕ್ಕೆ ಇಡೀ ರಾಜ್ಯದಲ್ಲಿ ಮಾಹಿತಿ ಸಿಗುವ ಹಾಗೆ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಮಾನ್ಯ ಸಚಿವರು ಆಗಲೇ ಇರಲಿಲ್ಲ, ದಯಮಾಡಿ ಒಂದು ಸಮಿತಿಯನ್ನು ಮಾಡಿ ತನಿಖೆಗೆ ಕಳುಹಿಸಿ, ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡಾಗ ಸರ್ಕಾರದ ಯೋಜನೆಗಳು ಕೂಡ ಜನರಿಗೆ ತಲುಪುತ್ತವೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾನ್ಯ ಸಭಾಪತಿಯವರೆ, ನಾನು ಮತ್ತೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಸರ್ಕಾರದ ಅನೇಕ ಯೋಜನೆಗಳಿವೆ. ಯೋಜನೆಗಳು ಕೇವಲ ಶಾಸಕರ ಅಧ್ಯಕ್ಷತೆಯೊಳಗೆ ಇರಬಹುದು, ವಿಧಾನ ಪರಿಷತ್ತಿನ ಸದಸ್ಯರು ಉಪಾಧ್ಯಕ್ಷರಿರಬಹುದು, ಅವರು ಸಮಿತಿಯಲ್ಲಿ ಆಯ್ಕೆ ಮಾಡಿ ಕಳುಹಿಸುತ್ತಾರೆ. ಇದರ ಬಗ್ಗೆ ಉತ್ತರದಲ್ಲಿ ಯಾವುದೇ ಮಾಹಿತಿ ಇಲ್ಲ, ಅದಕ್ಕಾಗಿ ನಾನು ಕೇಳುತ್ತಿದ್ದೇನೆ. 2013-14, 2014-15, 2015-16 ಮತ್ತು 2016-17ನೇ ಸಾಲಿನ ಸರ್ಕಾರದ ಯೋಜನೆಗಳು ಎಲ್ಲಿ ತಲುಪಿವೆ ಎಂದರೆ ಕಾಗದದೊಳಗೆ ನಿಮಗೆ ಮಂಜೂರು ಮಾಡಲಾಗಿದೆ, ಇಂತಹ ಬ್ಯಾಂಕಿನಲ್ಲಿ ಇಷ್ಟು ಸಬ್ಸಿಡಿ ನಿಮಗೆ ಬರುತ್ತದೆ ಎಂದು ಹೇಳುತ್ತಾರೆ. ಆ ಬ್ಯಾಂಕಿಗೆ ಫಲಾನುಭವಿಗಳು ಬಹಳಷ್ಟು ಸಲ ಓಡಾಡಿದರೂ ಇವತ್ತಿನವರೆಗೂ ಸಿಗುತ್ತಿಲ್ಲ. ತಾಲ್ಲೂಕು ಅಧಿಕಾರಿಯನ್ನು ಭೇಟಿಯಾದರೆ ನಾವು ಆಯ್ಕೆ ಮಾಡಿ ಬ್ಯಾಂಕಿಗೆ ಕಳುಹಿಸಿದ್ದೇವೆ, ನೀವು ಅವರ ಕಡೆ ತೆಗೆದುಕೊಳ್ಳಿ ಎನ್ನುವ ಉತ್ತರ ಬರುತ್ತದೆ. ಫಲಾನುಭವಿಗಳು ಜಿಲ್ಲಾಧಿಕಾರಿಗಳಿಗಾಗಲಿ, ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳಿಗಾಗಲಿ ಭೇಟಿಯಾಗುವ ಹಾಗಿಲ್ಲ. ಅದಕ್ಕೆ ಅಧಿಕಾರಿಗಳಿಗೆ ಇವತ್ತೇ ಸೂಚನೆ ಕೊಡಿ, ಯಾವ ಯೋಜನೆಯಲ್ಲಿ ಎಷ್ಟು ಜನ ಫಲಾನುಭವಿಗಳಿದ್ದಾರೆ, ಯಾವ್ಯಾವ ಬ್ಯಾಂಕಿಗೆ ಕಳುಹಿಸಿಕೊಟ್ಟಿದ್ದಾರೆ. ಯಾವ್ಯಾವ ಬ್ಯಾಂಕಿನಿಂದ ಫಲಾನುಭವಿಗಳಿಗೆ ಎಷ್ಟು ಮಂಜೂರು ಆಗಿದೆ. ಅವರು ಉದ್ಯೋಗ ಮಾಡುತ್ತಾರೆಯೋ ಇಲ್ಲವೋ, ಬ್ಯಾಂಕ್‌ನವರಿಗೆ ಪ್ರಶ್ನೆ ಮಾಡಿ, ಅದೇನೆಂದರೆ ಏಕೆ ಕೊಟ್ಟಿಲ್ಲ, ಅವರು ಸರಿಯಾದ ದಾಖಲೆಗಳನ್ನು ಕೊಟ್ಟಿದ್ದಾರೆಯೋ ಇಲ್ಲವೋ, ಇದನ್ನು Lead Bank Manager ರವರಿಗೆ ಕೇಳಿದರೆ ಆಯಿತು, ಮುಂದಿನ ಸಲ ಮಾಡುತ್ತೇನೆ ಎಂದು ಹೇಳುತ್ತಾರೆ. ಎಲ್ಲಿಯೋ ಸರ್ಕಾರದ ಯೋಜನೆಗಳು ತಳಮಟ್ಟದಲ್ಲಿ ಸಂಪೂರ್ಣವಾಗಿ ಮುಟ್ಟುವುದಕ್ಕೆ ವಿಫಲರಾಗಿರುವುದಕ್ಕೆ ಕಾರಣ ಸರ್ಕಾರ ಅಲ್ಲ, ಅಧಿಕಾರಿಗಳಾಗಿದ್ದಾರೆ. ಅಂದರೆ ಸರ್ಕಾರದ ನಿಗಾ ಅಧಿಕಾರಿಗಳ ಮೇಲೆ ಇಲ್ಲ. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ, ತಾವೆಲ್ಲಾ ಅನುಭವಿ ಮಂತ್ರಿಗಳಾಗಿದ್ದೀರಿ. 1976ರ ಉದಾಹರಣೆಯನ್ನು ಹೇಳಿದರು, ಇಲ್ಲಿ 43 ವರ್ಷದ ಉದಾಹರಣೆಯನ್ನು ಹೇಳಿದ್ದಾರೆ. ಅದನ್ನೇ ಮುಂದುವರೆಸುವ ಕೆಲಸ ಕಾರ್ಯಗಳಾಗಬಾರದು. ಅದಕ್ಕೆ ಕಟ್ಟುನಿಟ್ಟಿನ ಆದೇಶ ಕೊಡಬೇಕೆಂದು ಹೇಳಬಯಸುತ್ತೇನೆ. ಎಲ್ಲಿಯೂ ಕೂಡ ತೋಟಗಾರಿಕಾ ಬೆಳೆ ಬಗ್ಗೆ ಇವರು ಮಾತನಾಡಿಲ್ಲ. ಬಹಳಷ್ಟು ಜನ ಈ ಸಲ ನಮ್ಮ ತೋಟಗಾರಿಕೆ ಬೆಳೆಗಳಾದಂತಹ ಮಾವು, ತೆಂಗು, ಅಡಕೆ ಇರಬಹುದು....

**ಉಪ ಸಭಾಪತಿಯವರು:-** ಮಾನ್ಯ ಸೋಮಣ್ಣನವರೆ, ಇವೆಲ್ಲಾ ತಾವು ಹೇಳಿದ್ದೀರಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ಇವರು ಉತ್ತರದಲ್ಲಿ ಹೇಳಿಲ್ಲ. ತೋಟಗಾರಿಕೆ ಬೆಳೆಗಾರರು ತೊಂದರೆಗೀಡಾಗಿದ್ದಾರೆ. ದಯವಿಟ್ಟು ಅದರ ಬಗ್ಗೆಯೂ ಗಮನ ಸೆಳೆಯಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೊಂದರೆಗೀಡಾಗಿರುವಂಥವರಿಗೆ ಸರ್ಕಾರ ಏನು ಕೊಡುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಲಿಖಿತ ರೂಪದಲ್ಲಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸೋಮಣ್ಣ ಬೇವಿನಮರದರವರು ಕೆಲವು ಉದಾಹರಣೆಗಳನ್ನು ತೆಗೆದುಕೊಂಡು ಹೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅವರು ಮಾತನಾಡಿರುವ ಬಗ್ಗೆ ನಾನು ಹೇಳುತ್ತೇನೆ. ಅವರು ಕೆಲವು ವರ್ಷಗಳ ಹಿಂದಿನ ವಿಚಾರಗಳನ್ನು ಹೇಳಿದ್ದಾರೆ. ಏಕೆಂದರೆ, ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ಏಕೆಂದರೆ, ಈಗ ನೂರು ರೂಪಾಯಿ ಕೂಲಿ ಕೊಟ್ಟರೆ ಯಾರು ಬರುವುದಿಲ್ಲ. ನೂರು ರೂಪಾಯಿಗೆ ಯಾರು ಸಹಿಯೂ ಮಾಡುವುದಿಲ್ಲ, ಅದನ್ನು ತಾವೆಲ್ಲರು ತಿಳಿದುಕೊಳ್ಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಚಿವರೆ, ನಾನು ಕಣ್ಣಿಂದ ನೋಡಿರುವುದನ್ನು ಹೇಳುತ್ತಿದ್ದೇನೆ. ನೀವು ಹೇಳಿದ ತಕ್ಷಣ ನಾನು ಒಪ್ಪಿಕೊಳ್ಳಬೇಕೆ?

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಹೇಳಿದ ತಕ್ಷಣ ತಾವು ಒಪ್ಪಿಕೊಳ್ಳಬೇಡಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಚಿವರೆ, ಸಂಪೂರ್ಣವಾಗಿ ತಳಮಟ್ಟದಲ್ಲಿರತಕ್ಕಂಥ ಕೆಲಸ ಕಾರ್ಯಗಳ ವಸ್ತುಸ್ಥಿತಿ ಮತ್ತು ಸತ್ಯ ಸಂಗತಿಗಳನ್ನು ತಮ್ಮ ಎದುರಿಗೆ ಹೇಳದೆ ಮತ್ತೆ ಯಾರ ಮುಂದೆ ಹೇಳಬೇಕು?

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಈಶ್ವರಪ್ಪನವರು ಆಗಲೇ ನಾನು ಎರಡು ಗಂಟೆಗೆ ಹೋದಾಗ ಯಾರ್ಯಾರನ್ನೋ ಕರೆದುಕೊಂಡು ಬಂದರು ಎಂದು ಹೇಳಿದರು. ನಾನು ಅವರಿಗೆ ಪ್ರಾಮಾಣಿಕವಾಗಿ ಹೇಳುತ್ತೇನೆ, ಆ ರೀತಿ ಎರಡು ಗಂಟೆಗೆ ಹೋದಾಗ ನೂರು ಮಂದಿ ಇದ್ದರು ಎಂದರೆ ಅದು ಅಪ್ರಮಾಣಿಕವಾಗಿರುವಂತಹ ಕೆಲಸವಾಗಿರುತ್ತದೆ. ಏಕೆಂದರೆ, ಮಂತ್ರಿಗಳು 11 ಗಂಟೆಗೆ ಬರುತ್ತೇವೆ ಎಂದು ಹೇಳಿದರೆ 11 ಗಂಟೆಗೆ ನೀವು ಬಂದರೆ ಯಾರು ಕೂಲಿಯವರು ಇರುವುದಿಲ್ಲ. ನಮ್ಮ ಭಾಗದಲ್ಲೇ ಅಲ್ಲ, ನಾವು 7 ಗಂಟೆಗೆ ಕೆಲಸ ಪ್ರಾರಂಭ ಮಾಡುತ್ತೇವೆ. ಹತ್ತು-ಹತ್ತೂವರೆ ಹೊತ್ತಿಗೆ ಮುಗಿಸಿಬಿಡುತ್ತಾರೆ. ಹತ್ತೂವರೆ ನಂತರ ಯಾರೊಬ್ಬರು ಸಿಗುವುದಿಲ್ಲ. ಅದಕ್ಕೆ ಕಾರಣವೇನೆಂದರೆ, ಆ ಬಿಸಿಲಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹತ್ತು ಗಂಟೆ ನಂತರ ನೀವು ಕೆಲಸ ಮಾಡಿ ಎಂದು ಹೇಳಿದರೆ ಆಗುವುದಿಲ್ಲ. ಮಾನ್ಯ ಸದಸ್ಯರು ಕೂಲಿ ಬಗ್ಗೆ ಹೇಳಿದರು. ನಿಜ, ಆರು ತಿಂಗಳ ಹಿಂದೆ ಆ ರೀತಿ ದೊಡ್ಡ ಸಮಸ್ಯೆ ಉದ್ಭವವಾಗಿತ್ತು. ಆಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ನಮಗೆ ಸುಮಾರು 500 ಕೋಟಿ ರೂಪಾಯಿಗಳನ್ನು ಮುಂಗಡ ಹಣ ಎಂದು ಬಿಡುಗಡೆ ಮಾಡಿದರು. *National eFMS (National Electronic Fund Management System)* ನಲ್ಲಿ ನಮಗೆ regular money available ಆಗುತ್ತಿದೆ. ಈಗ ತಮಗೆ ಆಶ್ಚರ್ಯವಾಗಬಹುದು, ಹದಿನೈದು ದಿವಸದೊಳಗೆ ನಾವು ಶೇಕಡ 79 ರಷ್ಟು ಕೂಲಿ ಕೊಡುತ್ತಿದ್ದೇವೆ. ನಮ್ಮ *eFMS link* ನೊಳಗೆ ಇರತಕ್ಕಂಥ ರಾಜ್ಯಗಳಲ್ಲಿ ನಮ್ಮ ರಾಜ್ಯ ಮುಂಚೂಣಿಯಲ್ಲಿದೆ. ಒಂದು, ಎರಡು, ಮೂರನೇ ಸ್ಥಾನದಲ್ಲಿ ನಮ್ಮ ರಾಜ್ಯ ಇದೆ. ಹದಿನೈದು ದಿವಸಕ್ಕಿಂತ ಕೂಲಿ ಕೊಡುವುದು ತಡವಾದರೆ ಆಗ ಅವರಿಗೆ ನಾವು ಬಡ್ಡಿಯನ್ನು ಪರಿಹಾರದ ರೂಪದಲ್ಲಿ ಕೊಡುತ್ತಿದ್ದೇವೆ. 0.05 percent compensation ಅನ್ನು ಆ ಕೂಲಿ ಹಣದ ಮೇಲೆ ನಾವು ಕೊಡುತ್ತಿದ್ದೇವೆ. ಅಂದರೆ it works out to little more than bank interest. ಅದರ ಜೊತೆಗೆ ಮಾನ್ಯ ಸೋಮಣ್ಣ ಬೇವಿನಮರದ ರವರಿಗೆ ಹೇಳುವುದೇನೆಂದರೆ, ಒಂದು ಸಮಯ ಇತ್ತು. ಖಾಸಗಿ ಜಾಗವನ್ನು ತೋರಿಸಿಬಿಟ್ಟರು, ಅಲ್ಲಿ ಆ ಕೆಲಸ ಮಾಡಿದರು, ಖಾಸಗಿಯವರ ಜಾಗದಲ್ಲೂ ಈಗ ಕೆರೆಕಟ್ಟೆಗಳನ್ನು ಕಟ್ಟುವುದಕ್ಕೆ ನಾವು ಅವಕಾಶ ಮಾಡಿಕೊಡುತ್ತೇವೆ. ಕೃಷಿ ಭೂ ಹಿಡುವಳಿ ಭೂ ಅಭಿವೃದ್ಧಿ ಕಾರ್ಯಕ್ರಮದಲ್ಲಿ ನಾವು ಖಾಸಗಿಯವರ ಹೊಲದಲ್ಲೇ ಕೆರೆ ಕಟ್ಟಿಸಿಕೊಳ್ಳಬಹುದು, ಒಳಗಟ್ಟಿ ಕಟ್ಟಿಕೊಳ್ಳಬಹುದು, ಒಳಗಟ್ಟಿಯನ್ನು ಅವನು ಮಾಡಿಕೊಂಡರೆ ಅವನಿಗೆ ಕೂಲಿ ಕೊಡುತ್ತೇವೆ, ಅಷ್ಟೇ ಅಲ್ಲ ಅವನಿಗೆ ಕಲ್ಲು, ಸಿಮೆಂಟ್‌ಗೆ ನಾವು ಮತ್ತೆ ಹಣವನ್ನು ಕೊಡುತ್ತೇವೆ. ಅಂದರೆ material and wage component ಕೊಡುತ್ತೇವೆ. ಅವನು ಅಲ್ಲೇನಾದರೂ ತೋಟ ಮಾಡಿಕೊಳ್ಳುತ್ತೇನೆಂದರೆ ತಗ್ಗು ತೆಗೆಯುವುದಕ್ಕೆ ಹಣ ಕೊಡುತ್ತೇವೆ, ಬದು ಹಾಕಿಕೊಳ್ಳುವುದಕ್ಕೆ ಹಣ ಕೊಡುತ್ತೇವೆ. ಅಂದರೆ, ಖಾಸಗಿಯವರ ಆಸ್ತಿ ಸೃಷ್ಟಿ ಮಾಡುವುದರ ಮೂಲಕ ಅದು ರಾಷ್ಟ್ರದ ಆಸ್ತಿಯಾಗುತ್ತದೆ. ನಾವು NREGS (National Rural Employment Guarantee Scheme) ಗೆ ಕೊಡುತ್ತೇವೆ. ಅದಕ್ಕೆ ಖಾಸಗಿಯವರ ಹೊಲದಲ್ಲಿ ಕೆಲಸ ನಡೆಯಿದೆ ಎನ್ನುವುದಲ್ಲ. ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಅದರ ಮೂಲಕ ನಾವು ಆಸ್ತಿ ಸೃಷ್ಟಿ ಮಾಡಬೇಕು, ಏನು pilferage ಇತ್ತು, ಆ pilferage ಕಡಿಮೆ ಮಾಡುವುದಕ್ಕೆ ಆ ರೀತಿಯಾಗಿರುವಂತಹ ವ್ಯವಸ್ಥಿತ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಆ ಕಾರ್ಯಕ್ರಮವನ್ನು ನಮ್ಮ ಕರ್ನಾಟಕದಲ್ಲಿ ನಾವು ಮಾಡಿದ್ದೇವೆ, ಅದಕ್ಕೆ ನಮ್ಮ ಕೂಸು ಚೆನ್ನಾಗಿದೆ ಎಂದಲ್ಲ. ಈ ಆಸ್ತಿ ಸೃಷ್ಟಿ ಹೇಗೆ ಮಾಡುತ್ತಾರೆಂದು ನೋಡುವುದಕ್ಕೆ ಮೊನ್ನೆ ಹರಿಯಾಣ, ಪಂಚಾಬ್ ರಾಜ್ಯದ ಮಂತ್ರಿಗಳು ಬಂದಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವೆಲ್ಲರೂ ಗಮನಿಸಿದ್ದೀರಿ, ನಾವು ಹಿಂದಿನ ವರ್ಷಗಳ ಹಾಗೆ ಈ ಕೃಷಿ ಕಾರ್ಮಿಕರಿಗೆ 'ಬನ್ನಿ ಕೆಲಸ ಮಾಡಿ ಕೂಲಿ ಕೊಡುತ್ತೇವೆ, ಮತ್ತೇನು ಇಲ್ಲ' ಎಂದು ಹೇಳುತ್ತಿದ್ದೆವು. ಆದರೆ ಈಗ ನಾವು ಧ್ವನಿಯನ್ನೇ ಬದಲಾವಣೆ ಮಾಡಿದ್ದೇವೆ. ಅವರು ಕೆಲಸಕ್ಕೆ ಬಂದರೆ ಅವರ ಸಣ್ಣ ಮಕ್ಕಳನ್ನು ಎತ್ತಿಕೊಂಡು ಬಂದಿರುತ್ತಾರೆ. ಅವರಿಗೆ ನೆರಳು ಮಾಡಿಕೊಡಬೇಕು. ಮಕ್ಕಳಿಗಾಗಿ ಆಡುವುದಕ್ಕೆ, ಕುಳಿತುಕೊಳ್ಳುವುದಕ್ಕೆ creche ಮಾಡಬೇಕು. ಅಲ್ಲಿ ಶುದ್ಧ ಕುಡಿಯುವ ನೀರನ್ನು ತಂದುಕೊಡಬೇಕು. ಅಷ್ಟೇ ಅಲ್ಲ, ಪ್ರತಿ ದಿವಸ ಅಲ್ಲಿಗೆ ಸರ್ಕಾರಿ ವೈದ್ಯರು ಅಥವಾ ಖಾಸಗಿ ವೈದ್ಯರು ಭೇಟಿ ನೀಡುವಂತಹ ವ್ಯವಸ್ಥೆಯಾಗಬೇಕು.

**ಶ್ರೀ ಸೋಮಣ್ಣ ಮ.ಬೇವಿನ ಮರದ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳುತ್ತಿರುವುದು ಶೇಕಡ ನೂರರಷ್ಟು ಸರಿಯಿದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಎಲ್ಲಿಯೋ ಒಂದು ಕಡೆ ಇವು ಇನ್ನು ನಡೆಯುತ್ತಿವೆ. ಸುಧಾರಣೆಯಾಗಿಲ್ಲ ಎಂದು ನಾನು ಖಂಡಿತ ಹೇಳುತ್ತಿಲ್ಲ. ನಾನು ಆಗಲೇ ಹೇಳಿದ್ದೇನೆ, ಸರ್ಕಾರದ ಯೋಜನೆಗಳನ್ನು ತಳಮಟ್ಟದವರೆಗೂ ತರುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾನ್ಯ ಸಚಿವರು ಮಾಡಿದ್ದಾರೆ.

(ಮುಂದು)

(861) 20.06.2017/ 5.20/ ಕೆಹೆಚ್/ಎಕೆ

**ಶ್ರೀ ಸೋಮಣ್ಣ ಮ. ಬೇವಿನಮರದ(ಮುಂದು)**

ಆದರೆ, ಅದು ಫಲಾನುಭವಿಗಳಿಗೆ ಮುಟ್ಟುತ್ತಿಲ್ಲ. ಅದಕ್ಕೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ನೂರಕ್ಕೆ ನೂರರಷ್ಟು ಅನುಷ್ಠಾನ ಮಾಡಿದ್ದೇವೆ ಎಂಬ ಆತ್ಮವಿಶ್ವಾಸ ಮತ್ತು ಶಕ್ತಿ ಇನ್ನಷ್ಟು ಬರಬೇಕೆಂದರೆ, ನಾವು ಹೇಳಿದಂತಹ ಎಲ್ಲಾ ಅವ್ಯವಹಾರಗಳಿಗೆ ಕಡಿವಾಣ ಹಾಕಬೇಕಾದರೆ ಇದನ್ನು ತನಿಖೆ ಮಾಡುವುದಕ್ಕೆ ಒಂದು ಸಮಿತಿ ರಚನೆ ಮಾಡಿ ಕಳುಹಿಸುವುದರಲ್ಲಿ ತಪ್ಪೇನಿದೆ?

**ಶ್ರೀ ಎಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸೋಮಣ್ಣನವರೆ, ನೀವು ಹೇಳಿರುವಂತಹ ಅಂಶಗಳನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೇನೆ. ಕಾರಣವೇನೆಂದರೆ, ದುರುದ್ದೇಶದಿಂದ ನೀವು ಈ ಮಾತನ್ನು ಹೇಳುತ್ತಿದ್ದೀರಿ ಎನ್ನುವಂತಹ ಒಂದು ಭಾವನೆ ನಮಗೆ ಒಂದು ಗುಲಗಂಜಿ ತೂಕದಷ್ಟು ಸಹಿತ ಇಲ್ಲ. ಮಾನ್ಯ ಸದಸ್ಯರು ಇದರ ಬಗ್ಗೆ ಹೇಳುತ್ತಿದ್ದಾರೆ ಎಂದರೆ ಅಲ್ಲಿ ಏನಾದರೂ ಆಗಿರಬೇಕು ಅಥವಾ ಮಾನ್ಯ ಸದಸ್ಯರಿಗೆ ತಪ್ಪು ಮಾಹಿತಿ ಬಂದಿರಬೇಕು. ಈಗ ನಮ್ಮ ಅಧಿಕಾರಿಗಳು ಜೊತೆಯಲ್ಲಿ ಇದ್ದಾರೆ. ಮಾನ್ಯ ಸದಸ್ಯರು ಶಿಗ್ಗಾಂವಿ ತಾಲ್ಲೂಕಿನ ಬಗ್ಗೆ ಹೇಳಿದ್ದಾರೆ. Immediately after this...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬಹಳ ವರ್ಷಗಳಿಂದ ನನ್ನನ್ನು ನೋಡಿದ್ದಾರೆ. ಈ ಚರ್ಚೆ ಮುಗಿದ ನಂತರ ನಾನು ಹೇಳಿರುವ ಎರಡು ಊರುಗಳ ಬಗ್ಗೆ ದೂರವಾಣಿ ಮೂಲಕ ಅಧಿಕಾರಿಗಳನ್ನು ಕೇಳಿ, ನಾನು ಹೇಳಿದ್ದು ಸುಳ್ಳು ಎಂದಾದರೆ ನೀವು ಹೇಳಿದ ಹಾಗೆ ಕೇಳುತ್ತೇನೆ. ಹೌದು ಎಂದು ಹೇಳಿದರೆ, ಏಕೆ ಮಾಡಿಲ್ಲ? ಮಾನ್ಯ ಸೋಮಣ್ಣ ಮ.ಬೇವಿನಮರದರವರು ದೂರಿದ್ದಾರೆಂದು ಹೇಳಿ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸದಸ್ಯರೇ ಸಿ.ಇ.ಓ. ರವರಿಗೆ ಕಳುಹಿಸಬೇಕೋ ಅಥವಾ ಡಿ.ಸಿ. ಯವರಿಗೆ ಕಳುಹಿಸಬೇಕೋ ಎಂಬುದನ್ನು ಹೇಳಬೇಕು.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಯಾರನ್ನು ಕಳುಹಿಸಿದರೆ ಸಮಸ್ಯೆ ಪರಿಹಾರವಾಗುತ್ತದೆಯೋ ಅವರನ್ನು ಕಳುಹಿಸಲಿ. ನಾನು ಇಂಥವರನ್ನೇ ಕಳುಹಿಸಿ ಕೊಡಿ ಎಂದು ಹೇಳುವುದಿಲ್ಲ. ಒಂದು ಸಣ್ಣ ತಾಲ್ಲೂಕು ಪಂಚಾಯಿತಿಯಲ್ಲಿರುವ ಗುಮಾಸ್ತನನ್ನಾದರೂ ಕಳುಹಿಸಿ, ಅಲ್ಲಿ ಕೆಲಸವಾಗಬೇಕು ಅಷ್ಟೇ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಆ ಎರಡು ಊರಿನ ಹೆಸರನ್ನು ಮತ್ತೊಮ್ಮೆ ಹೇಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೆ, ಶಿಗ್ಗಾಂವಿ ತಾಲ್ಲೂಕಿನ ಹಿರೇಮಣಿಕಟ್ಟಿ ಗ್ರಾಮ ಪಂಚಾಯಿತಿಯ ಹಿರೇಮಣಿಕಟ್ಟಿ ಮತ್ತು ಶಿಗ್ಗಾಂವಿ ತಾಲ್ಲೂಕಿನ ತಡಸ ಗ್ರಾಮ ಪಂಚಾಯಿತಿಯಲ್ಲಿ ಬರುವಂತಹ ಮುತ್ತಳ್ಳಿ ಗ್ರಾಮ. ಈ ಎರಡು ಊರಿನ ಹೆಸರನ್ನು ಬರೆದುಕೊಳ್ಳಿ. ಹಿಂದೆ ಮಾನ್ಯ ಆರ್.ವಿ.ದೇಶಪಾಂಡೆಯವರು ಈ ಊರುಗಳಿಗೆ ಭೇಟಿಕೊಟ್ಟಾಗ ಮಾನ್ಯ ಸಚಿವರು ಕೂಡ ಇದ್ದರು ಎಂದು ನಾನು ತಿಳಿದಿದ್ದೇನೆ. ಉಸ್ತುವಾರಿ ಸಚಿವರ ಸಮಕ್ಷಮದಲ್ಲಿ ರಸ್ತೆಯಲ್ಲಿ ಜಗಳವಾಯಿತು. ಇವತ್ತಿನ ದಿವಸದವರೆಗೂ ಅಲ್ಲಿ ದುಡಿಯುವಂತಹವರಿಗೆ payment ಆಗಿಲ್ಲ. Payment ಏಕೆ ಆಗಿಲ್ಲವೆಂದು ವಿಚಾರಣೆ ಮಾಡಿ. ಅದು ತಪ್ಪಿದೆಯೋ, ಸರಿಯಿದೆಯೋ ಎನ್ನುವುದರ ಬಗ್ಗೆ ಗೊತ್ತಿಲ್ಲ. ದಯಮಾಡಿ, ಅಲ್ಲಿ ದುಡಿದಂತಹವರಿಗೆ ಕೂಲಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ದಯವಿಟ್ಟು, ಆ ಎರಡು ಊರಿನ ಹೆಸರನ್ನು ಬರೆದುಕೊಳ್ಳಿ. ಇನ್ನೂ ಬೇಕಾದಷ್ಟು ಊರುಗಳಿವೆ. ಆ ಊರುಗಳಿಗೆ ಹೋಗಿ ಅದರ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಇದರ ಮಧ್ಯೆ ಒಂದು ಚಿಕ್ಕ ವಿಷಯ. ಮೂರು ದಿನದ ಹಿಂದೆ ರಾಯಚೂರು ಜಿಲ್ಲೆಯಲ್ಲಿ ನರೇಗಾ ಕೆಲಸಕ್ಕೆ ಹೋಗುತ್ತಿದ್ದಂತಹ ಕಾರ್ಮಿಕರನ್ನು ಟ್ರ್ಯಾಕ್ಟರ್‌ನಲ್ಲಿ ವಾಪಸ್ಸು ಕರೆದುಕೊಂಡು ಬರಬೇಕಾದರೆ ಅಪಘಾತವಾಯಿತು. ನರೇಗಾ ಕೆಲಸದ ಕಾರ್ಮಿಕರು ಅಪಘಾತದಲ್ಲಿ ಸತ್ತು ಹೋದರು. ಆದರೆ ಅವರ ಹತ್ತಿರ ಜಾಬ್ ಕಾರ್ಡ್ ಇಲ್ಲವೆಂದರೆ ಸತ್ತು ಹೋದ ಕಾರ್ಮಿಕರಿಗೆ ಪರಿಹಾರ ಸಿಗುವುದಿಲ್ಲವೆಂದು ಹೇಳುತ್ತಿದ್ದಾರೆ. ಇದಕ್ಕೆ ಏನು ಮಾಡಬೇಕು? ಏಕೆ ಅವರಿಗೆ ಜಾಬ್ ಕಾರ್ಡ್ ಸಿಕ್ಕಿಲ್ಲ ಎನ್ನುವುದರ ಬಗ್ಗೆ ನಾನು ಕೇಳುವುದಕ್ಕೆ ಹೋಗಲಿಲ್ಲ. ಇದರ ಬಗ್ಗೆ ಮಾಜಿ ಸಂಸದರಾದ ಶ್ರೀ ವಿರೂಪಾಕ್ಷರವರು ಒಂದು ಚೀಟಿಯನ್ನು ಕಳುಹಿಸಿದ್ದಾರೆ. ದಯವಿಟ್ಟು, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಗಮನವನ್ನು ಹರಿಸಿ.

**ಶ್ರೀ ಎಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಹಂಪನಗೌಡರವರು ಹಾಗೂ ಜನತಾ ದಳದ ಶ್ರೀ ನಾಡಗೌಡರವರು ಕೂಡ ನನಗೆ ದೂರವಾಣಿಯನ್ನು ಮಾಡಿದ್ದರು. ಅವರಿಗೆ ತಕ್ಷಣ 25,000 ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದರು. ಆದರೆ ಆ ಹಣ ಸಾಕಾಗುವುದಿಲ್ಲವೆಂದು ಹೇಳಿ, ಒಂದು ಕಡೆ ಎಲ್ಲರನ್ನೂ ಕರೆದುಕೊಂಡು ಬಂದು ಕೆಲಸ ಮಾಡಿಸಬೇಕಾಗಿರುವುದರಿಂದ, ಅವರಿಗೆ ಹೆಚ್ಚಿನ ಪರಿಹಾರ ಕೊಡಬೇಕೆಂದು ನಾವು ಈಗಾಗಲೇ ಆಯುಕ್ತರಿಗೆ ಪರಿಶೀಲನೆಯನ್ನು ಮಾಡಿ ಎಂದು ನಿರ್ದೇಶನವನ್ನು ಕೊಟ್ಟಿದ್ದೇವೆ. ನನಗೆ ಈಗಾಗಲೇ ಅವರು ವರದಿಯನ್ನು ಕೊಟ್ಟಿದ್ದಾರೆ. ನರೇಗಾದಲ್ಲಿರುವ ಪ್ರಾವಿಷನ್ ಕೆಳಗಡೆ ಇಂತಹ ಸಂದರ್ಭಗಳಲ್ಲಿ 75,000 ರೂಪಾಯಿಗಳವರೆವಿಗೂ ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಮತ್ತು ಅಪಘಾತಕ್ಕೀಡಾದ ಕಾರ್ಮಿಕರ ಕುಟುಂಬಕ್ಕೆ 75,000 ರೂಪಾಯಿಗಳ ಪರಿಹಾರವನ್ನು ತಲುಪಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಸನ್ಮಾನ್ಯ ಈಶ್ವರಪ್ಪನವರು ಮಾತನಾಡುವಾಗ M.V.S. (Multi Village Scheme) ಯೋಜನೆಯ ಬಗ್ಗೆ ಮಾತನಾಡಿದರು. ಈ ವಿಷಯದ ಬಗ್ಗೆ ತಮ್ಮ ಗಮನಕ್ಕೆ ತರುವುದೇನೆಂದರೆ, 2013–14 ರಿಂದ ಇಲ್ಲಿಯವರೆಗೂ ಒಟ್ಟು 208 ಎಂ.ವಿ.ಎಸ್. ಯೋಜನೆಗಳನ್ನು ನಮ್ಮ ಸರ್ಕಾರ ಬಂದ ಮೇಲೆ ನಾವು ಪೂರ್ಣಗೊಳಿಸಿರುವಂತಹ ಯೋಜನೆಗಳು. ಅದರ ಜೊತೆಗೆ 123 ಯೋಜನೆಗಳು ಪ್ರಗತಿಯಲ್ಲಿವೆ. ಈಗಾಗಲೇ ವಿಶೇಷವಾಗಿ ಒಂದು ಯೋಜನೆಯನ್ನು ಮಾಡಿದ್ದೇವೆ. ಶೇಕಡಾ 90 ರಷ್ಟು project ಅನ್ನು ಯಾರು ಪೂರ್ಣಗೊಳಿಸುತ್ತಾರೋ, ಅವರಿಗೆ ಶೇಕಡಾ 90 ರಷ್ಟು ಹಣವನ್ನು ಕೊಡುತ್ತೇವೆ. ಶೇಕಡಾ 75 ಕ್ಕಿಂತ ಕಡಿಮೆ ಯೋಜನೆಯನ್ನು ಯಾರು ಪೂರ್ಣಗೊಳಿಸುತ್ತಾರೋ, ಅವರಿಗೆ ಶೇಕಡಾ 65 ರಷ್ಟು ಹಣವನ್ನು ಮಾತ್ರ ಕೊಡುತ್ತೇವೆ. ಶೇಕಡಾ 50 ರಷ್ಟು ಯೋಜನೆಯನ್ನು ಯಾರು ಪೂರ್ಣಗೊಳಿಸುತ್ತಾರೋ, ಅವರಿಗೆ ಶೇಕಡಾ 50

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಷ್ಟು ಹಣವನ್ನು ಮಾತ್ರ ಕೊಡುತ್ತೇವೆ. ಅವರು ಬಿಲ್ಲಿನ ಮೊತ್ತವನ್ನು ಎಷ್ಟು ಸಲ್ಲಿಸುತ್ತಾರೋ ಅಷ್ಟನ್ನು ಪೇಮೆಂಟ್ ಮಾಡುತ್ತೇವೆ. ಶೇಕಡಾ 50 ಕ್ಕಿಂತ ಕಡಿಮೆ ಯೋಜನೆಯನ್ನು ಯಾರು ಪೂರ್ಣಗೊಳಿಸುತ್ತಾರೋ, ನಾವು ಅವರಿಗೆ ಎಚ್ಚರಿಕೆಯನ್ನು ಕೊಟ್ಟು ಪೇಮೆಂಟ್ ಮಾಡುವುದಿಲ್ಲ ಎನ್ನುವ ಗೈಡ್‌ಲೈನ್ ಹಾಕಿಕೊಂಡಿದ್ದೇವೆ. ಆದಾದ ಮೇಲೆ M.V.S. project ನಲ್ಲಿ ಸಾಕಷ್ಟು ಪ್ರಗತಿಯಾಗುತ್ತಿದೆ. ಇನ್ನು ಬಹಳಷ್ಟು ಯೋಜನೆಗಳನ್ನು S.L.S.S.C. (State Level Scheme Sanctioning Committee) ಇದರಲ್ಲಿ ಈಗಾಗಲೇ ಕೆಲವು execution ಪ್ರಾರಂಭವಾಗಿದೆ. ಆದರೆ ಬಹಳಷ್ಟು ಕಡೆ ಪ್ರಾರಂಭವಾಗದೆ ಇರುವುದನ್ನು ಸಹ ಗಮನಿಸುತ್ತಿದ್ದೇವೆ. ಬರುವ ದಿವಸಗಳಲ್ಲಿ ಹೆಚ್ಚಿನ ಒತ್ತನ್ನು ಕೊಡುತ್ತೇವೆಂದು ಹೇಳುತ್ತೇನೆ. ನಮಗೆ ಬಹಳ ದೊಡ್ಡ ಮಟ್ಟದ ಹಣ ಬೇಕು. ನಮಗೆ ಇರುವಂತಹ ಬೇಡಿಕೆಯನ್ನು ನೋಡಿದರೆ ನಾನು ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡುವಾಗ ಮತ್ತು ಬಜೆಟ್ ತಯಾರು ಮಾಡುವ ಸಂದರ್ಭದಲ್ಲೂ ಕೂಡ ಹೇಳುತ್ತಿದ್ದೆ. ನಮ್ಮ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿ ಮೇಲ್ಮೈ ಜಲ ಮೂಲದಿಂದ ಕುಡಿಯುವ ನೀರಿನ ಸಂಪೂರ್ಣ ವ್ಯವಸ್ಥೆಯಾಗಬೇಕು. Surface water source ನಿಂದ ಕೊಡಬೇಕಾದರೆ ಸುಮಾರು 45 ಸಾವಿರ ಕೋಟಿ ರೂಪಾಯಿಗಳ ಹಣದ ಅವಶ್ಯಕತೆ ಇದೆ. ಗದಗ ಜಿಲ್ಲೆಯನ್ನು ಮಾತ್ರ ತೆಗೆದುಕೊಂಡರೆ 1040 ಕೋಟಿ ರೂಪಾಯಿಗಳ ಕೆಲಸ ನಡೆದಿದೆ. ನಮಗೆ ಆ ಗಾತ್ರದಲ್ಲಿ ಹಣ ಬೇಕಾಗಿದೆ. ಆದ್ದರಿಂದ ಎಂ.ವಿ.ಎಸ್. ಯೋಜನೆಗಳು ಎಲ್ಲ ಎಂ.ಎಲ್.ಎ., ಗಳಿಗೂ ಮತ್ತು ಎಂ.ಎಲ್.ಸಿ. ಗಳಿಗೂ ಒಂದಲ್ಲ, ನಾಲ್ಕು, ಎಂಟೆಂಟು ಬಾಕಿಯಿದೆ. ಅದು ಏಕೆ ಆಗಿಲ್ಲವೆಂದು ಒತ್ತಡವಿತ್ತು. ಆ ಒತ್ತಡಕ್ಕೆ ಕಾರಣವೇನೆಂದರೆ ಅದರ ಅವಶ್ಯಕತೆಯಿದೆ. ಆದರೆ ಅದನ್ನು ಮಾಡುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಹಣಕಾಸು ಬೇಕಾಗುತ್ತದೆ. N.R.D.W.P. (National Rural Drinking Water Programme) ಒಳಗೆ ಈ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದೇವೆ. ಸನ್ಮಾನ್ಯ ಈಶ್ವರಪ್ಪನವರು ಪ್ರೀತಿಯಿಟ್ಟು ಗಮನಿಸಬೇಕು. ನಿಮ್ಮ ಮಧ್ಯಸ್ಥಿಕೆ ಕೂಡ ಇದರೊಳಗೆ ಅವಶ್ಯಕತೆಯಿದೆ. ಕೇಂದ್ರ ಸರ್ಕಾರದವರು N.R.D.W.P. ಒಳಗೂ ಸಹ 1ನೇ ಏಪ್ರಿಲ್ ನಿಂದ ಯಾವುದೇ ಹೊಸ ಎಂ.ವಿ.ಎಸ್. ಯೋಜನೆಗಳನ್ನು ತೆಗೆದುಕೊಳ್ಳಬಾರದು ಎಂದು ನಮಗೆ ನಿರ್ದೇಶನವನ್ನು ಕೊಟ್ಟಿದ್ದಾರೆ. Somehow we must all see that this programme should commence. ನಾವು ಪತ್ರವನ್ನು ಬರೆದು, ಕೇಂದ್ರ ಸಚಿವರಾದ ಶ್ರೀ ರಮೇಶ್ ಜಿಗಜಿಣಗಿಯವರ ಗಮನಕ್ಕೆ ತಂದಿದ್ದೇನೆ. ಇದನ್ನು ನಾವು ಮತ್ತೆ ವಾಪಸ್ಸು ಪಡೆದುಕೊಂಡು ಹೋದರೆ, ತೆಲಂಗಾಣದಂತಹ ರಾಜ್ಯದೊಳಗೆ ಸಂಪೂರ್ಣ ರಾಜ್ಯಕ್ಕೆ ಮೇಲ್ಮೈ ನೀರು ತೆಗೆದುಕೊಂಡು ಬರುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಭಗೀರಥ ಯೋಜನೆಯಲ್ಲಿ ಹುಡ್ಕೋದವರು 25 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟರು ಎಂದು ಪತ್ರಿಕೆಗಳಲ್ಲಿ ಬಂದಿದೆ. ಅವರಿಗೆ ಕೊಡುವುದಕ್ಕೆ ಯಾವುದೇ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯ ನಮ್ಮ ತಕರಾರು ಇಲ್ಲ. N.R.D.W.P. ಯೋಜನೆಯಡಿಯಲ್ಲಿ ಉಳಿದ ರಾಜ್ಯದೊಳಗೆ ಏನು ಎಂ.ವಿ.ಎಸ್. ಯೋಜನೆಗಳು ನಡೆಯುತ್ತಿವೆ, ಅದಕ್ಕೂ ಸಹ ನಿಲುಗಡೆಯಾಗುತ್ತಿರುವುದರಿಂದ ಅದು ನಮ್ಮೆಲ್ಲರಿಗೂ disturb ಮಾಡಿದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಕೆ.ಎಸ್. ಈಶ್ವರಪ್ಪನವರು ಹಾಗೂ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಈಗಾಗಲೇ ಶುದ್ಧ ಕುಡಿಯುವ ನೀರಿನ ಘಟಕಗಳು ಬಹಳಷ್ಟು ಕಡೆಗಳಲ್ಲಿ ಕೆಟ್ಟು ಹೋಗಿದೆ ಎಂದು ದೂರಿದ್ದಾರೆಂದು ಕೇಳಿದ್ದೇನೆ. ಈ ಘಟಕಗಳು ಮೋಟಾರು ಕಾರು ಇದ್ದ ಹಾಗೆ. ಕಾರು ನಿಂತು ಹೋದರೆ ಅದನ್ನು ರಿಪೇರಿ ಮಾಡಬೇಕು. ಪ್ರತಿ ದಿವಸ ಸಾವಿರ ಸಾವಿರ ಲೀಟರ್‌ಗಳಷ್ಟು ನೀರಿನ ಶುದ್ಧೀಕರಣ ಮಾಡುವಾಗ, ಅದರಲ್ಲಿ ಹತ್ತಾರು component ಗಳು ಇರುವಾಗ ರಿಪೇರಿಗೆ ಬರುತ್ತದೆ. But more than ten percent repair is not just accepted. ಅದಕ್ಕೆ ಯಾವ ರೀತಿಯಾಗಿ ಅದರಲ್ಲಿ ಕಡಿಮೆಗೊಳಿಸಬಹುದು ಎನ್ನುವುದರ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆ. ಮೊದಲಿನ ಹಾಗೆ ನೀವೇ ನೋಡಿಕೊಂಡು ಬಂದು ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯೊಳಗೆ ಆರೋಪ ಮಾಡಬೇಕೆಂದು ಇಲ್ಲ. ಮಾನ್ಯ ಸಂಕನೂರ ರವರ ಮನೆ ಮುಂದೆ ಒಂದು ಘಟಕವಿದೆ. ಅಲ್ಲಿ ಒಂದು ತಾಸು ನಿಂತು ಹೋಯಿತೆಂದರೆ ಅವರಿಗೆ ಊಟ ಮಾಡುವುದಕ್ಕೂ ಬಿಡುವುದಿಲ್ಲ. ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಗಳಲ್ಲ. ಅಲ್ಲಿ ಯಾರು Water boy ಇರುತ್ತಾನೆ, ಆ Water boy ನ ಮನೆಗೆ ಹೋಗಿ ಅವನನ್ನು ಹಿಡಿದುಕೊಂಡು ಬರುತ್ತಾನೆ. It means that is the requirement of the day today. ಪ್ರತಿ ಹಳ್ಳಿಯಲ್ಲೂ ಕೂಡ ಶುದ್ಧ ಕುಡಿಯುವ ನೀರು ಇರಲಿಲ್ಲವೆಂದರೆ, ಅದನ್ನು ತಕ್ಷಣ ರಿಪೇರಿ ಮಾಡಿಸಿಕೊಳ್ಳಬೇಕು. ಇವತ್ತಿನ ದಿವಸ ಅದೇ ನೀರು ನಮಗೆ ಬೇಕು ಎನ್ನುವಂತಹ ಬೇಡಿಕೆ ಪ್ರಾರಂಭವಾಗಿರುವುದರಿಂದ, ಎಲ್ಲಾದರೂ ಘಟಕಗಳು ಕೆಟ್ಟರೂ ಸಹ ಅದನ್ನು ರಿಪೇರಿ ಮಾಡಿಕೊಳ್ಳಬೇಕಾದ ಅವಶ್ಯಕತೆಯಿದೆ. ರಾಜ್ಯ ಸರ್ಕಾರವು ಆ ಕಾರಣಕ್ಕಾಗಿ ರಿಪೇರಿ ಮಾಡುವುದಕ್ಕೆ ಎಲ್ಲಿಯೂ ಸಹ ಹಿಂದೆ ಮುಂದೆ ನೋಡುವುದಿಲ್ಲ. ಈಗ ಕೆಲವು ಘಟಕಗಳನ್ನು K.R.I.D.L. (Karnataka Rural Infrastructure Development Limited) ನವರು ಸ್ಥಾಪಿಸಿದರು. ಆದರೆ O & M (Operation and Maintenance) ಅನ್ನು ಪಂಚಾಯಿತಿಗೆ ಕೊಡಬೇಕೆಂದು ಹೇಳಿದ್ದೇವೆ. ಪಂಚಾಯಿತಿಯವರು O & M Agreement ಮಾಡಿ, ಆ ತಂತ್ರಜ್ಞಾನದ ಜೊತೆಗೆ ಹೋರಾಟ ಮಾಡುವುದಕ್ಕೆ ಆಗುತ್ತದೋ, ಇಲ್ಲವೋ ಎಂದು ಹೇಳಿ. K.R.I.D.L. ನವರಿಗೆ O & M ಅನ್ನು ಜೂನ್ 30ನೇ ದಿನಾಂಕದವರೆಗೆ ನೀವೇ ಮಾಡಿ ಎಂದು ಹೇಳಿದ್ದೇವೆ. ಈಗ ಜೂನ್ 30ನೇ ದಿನಾಂಕ ಮುಗಿಯುತ್ತಾ ಬಂದಿದೆ. K.R.I.D.L. ನವರು ಇನ್ನು 6 ತಿಂಗಳು O & M ಅವರೇ ಮಾಡಬೇಕಾಗಿರುವಂತಹ ಅಗತ್ಯತೆ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ಸರ್ಕಾರದಿಂದ ಆದೇಶವನ್ನು ತಕ್ಷಣ ಹೊರಡಿಸಿ, ಜುಲೈ 1ನೇ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಾರೀಖಿನಿಂದ O & M ಏನಿದೆ K.R.I.D.L. ನವರು ಹಾಕಿರುವಂತಹ ಘಟಕವನ್ನು ಮತ್ತು ನಮ್ಮ R.W.S.S. (Rural Water Supply and Sanitation) ಕಡೆಯಿಂದ ಹಾಕಿರುವಂತಹ ಘಟಕಗಳನ್ನು ನಮ್ಮ ಇಂಜಿನಿಯರಿಂಗ್ ವಿಭಾಗದಿಂದ ಆ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆಂಬ ಮಾತನ್ನು ಹೇಳುತ್ತೇನೆ. ಒಟ್ಟಾರೆಯಾಗಿ ಶುದ್ಧ ಕುಡಿಯುವ ನೀರಿನ ಘಟಕದ ಮೂಲಕ ನಾವು ಕರ್ನಾಟಕದಲ್ಲಿ ಒಂದೂವರೆ ಕೋಟಿ ಜನರಿಗೆ, ಅವರಿದ್ದ ಊರಿನಲ್ಲಿ ಶುದ್ಧ ಕುಡಿಯುವ ನೀರು ಲಭ್ಯವಾಗುವಂತಹ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ.

(ಮುಂದು)

862/20-06-2017/5-30/bkp-ak

**ಶ್ರೀ ಹೆಚ್.ಕೆ.ಪಾಟೀಲ್(ಮುಂದು)**

ಬಹಳಷ್ಟು ಜನರು ಅದನ್ನು ಉಪಯೋಗ ಮಾಡುತ್ತಿರುವುದರಿಂದ ನನಗೆ ಬಹಳ ಸಂತೋಷವೆನಿಸಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಶುದ್ಧ ಕುಡಿಯುವ ನೀರನ್ನೊದಗಿಸುವಂತಹ ಕೆಲಸ ನಡೆಯಿತು ಎಂದು ಹೇಳಿದರೆ, ಇಷ್ಟು ದೊಡ್ಡ ಬರಗಾಲದಲ್ಲಿಯೂ ಸಹ ನೀವು ಎಲ್ಲಿಯೂ ಸಹ ಒಂದು ಕಾಲರ ಅಥವಾ ವಾಂತಿ–ಭೇದಿ ಪ್ರಕರಣದ ಬಗ್ಗೆ ಕೇಳಿಲ್ಲ. ಬೇಸಿಗೆಯಲ್ಲಿ ನೀರಿನಿಂದ ಹರಡುತ್ತಿದ್ದ ಬಹಳಷ್ಟು ರೋಗಗಳು ಕಡಿಮೆಯಾಗಿದೆ. ಈ ಶುದ್ಧ ಕುಡಿಯುವ ನೀರಿನ ಘಟಕ ಹೇಗೆ ಕೆಲಸ ಮಾಡುತ್ತಿದೆ ಎಂದರೆ, ನೀವು ಹೋಗಿ ಶುದ್ಧ ನೀರಿನ ಘಟಕವನ್ನು ನೋಡಬೇಕಾಗಿಲ್ಲ. ಆ ಊರಿನಲ್ಲಿ ಇರತಕ್ಕಂತಹ ವೈದ್ಯರು, ಅವರು ಆಯುರ್ವೇದಿಕ್ ಇರಲಿ, ಹೋಮಿಯೋಪತಿ ಇರಲಿ ಅಥವಾ ಅಲೋಪತಿ ಇರಲಿ, ಆ ವೈದ್ಯರನ್ನು ರೋಗಿಗಳ ಸಂಖ್ಯೆ ಜಾಸ್ತಿಯಾಗಿದೆಯೋ, ಕಡಿಮೆಯಾಗಿದೆಯೋ ಎನ್ನುವ ಬಗ್ಗೆ ಕೇಳಿದರೆ ಸಾಕು. ಕಡಿಮೆಯಾಗಿದೆ ಎನ್ನುತ್ತಾರೆ. ಎಷ್ಟು ಕಡಿಮೆಯಾಗಿದೆ ಎಂದರೆ, occurence of waterborne diseases ಹೇಗೆ ಇದೆ ಎಂದು ಕೇಳಿದರೆ ಅದರ ಮೀಟರ್ ಸಿಕ್ಕಿದಂತಾಗುತ್ತದೆ. ಆದರೆ, ಇದರಲ್ಲಿ ಸುಧಾರಣೆಯಾಗಬೇಕಾಗಿರುವುದು ಬಹಳಷ್ಟು ಇದೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಅದಕ್ಕೋಸ್ಕರ ಉಳಿಕೆಯಾದವುಗಳು ಜಿಯೋ ಟ್ಯಾಗ್, ಆಮೇಲೆ ಗಾಂಧಿ ಸಾಕ್ಷಿ ತಂತ್ರಾಂಶ, ಪಂಚ ತಂತ್ರಾಂಶ, ಇವುಗಳ ರೀತಿಯಲ್ಲಿ ಹೇಗೆ ಮಾಡಿದ್ದೇವೆ, ಹಾಗೆಯೇ ಪ್ರತಿಯೊಂದು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಪ್ರತಿದಿನ ಹೇಗೆ ಇದೆ ಎನ್ನುವುದನ್ನು ನಮ್ಮ ಮೊಬೈಲ್‌ನಲ್ಲಿಯೇ ಸಿಗುವ ಹಾಗೆ, ನಮ್ಮ ಕಚೇರಿಯ ಕಂಪ್ಯೂಟರ್‌ನಲ್ಲಿ ಸಿಗುವ ರೀತಿಯಲ್ಲಿ ತಂತ್ರಜ್ಞಾನವನ್ನು upgrade ಮಾಡಿಕೊಳ್ಳುವುದಕ್ಕೂ ಸಹ ನಾವು ಸಿದ್ಧತೆ ನಡೆಸಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಬರದ ಬಗ್ಗೆ ಪ್ರಸ್ತಾಪ ಮಾಡತಕ್ಕಂತಹ ಸಂದರ್ಭದಲ್ಲಿ ಮಳೆಯಿಲ್ಲದೆ, ನೀರಿಲ್ಲದೆ, ಅಡಕೆ, ತೆಂಗು, ನಿಂಬೆ ಎಲ್ಲಾ ತೋಟಗಳು ನಾಶವಾಗಿರುವ ಅಂಶವವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅವರಿಗೇನಾದರೂ ಪರಿಹಾರ ಕೊಡುವ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಿದೆಯೇ?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಈ ಅಡಿಕೆ ಮತ್ತು ತೆಂಗು ಮರಗಳು ಏನು ಹಾಳಾಗಿವೆ, ಇದರ ಬಗ್ಗೆ ನಾವು ಕ್ಯಾಬಿನೆಟ್ ಸಬ್-ಕಮಿಟಿಯಲ್ಲಿ ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ವರದಿಯನ್ನು ತರಿಸಿಕೊಳ್ಳುತ್ತೇವೆ. ವರದಿ ಬಂದ ಮೇಲೆ ಅದಕ್ಕೆ ಪರಿಹಾರ ಕೊಡುವ ಬಗ್ಗೆ ಒಂದು ತೀರ್ಮಾನ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಪರಿಹಾರ ಏನು ಕೊಡುತ್ತೀರಿ, ಎಕರೆಗೆ ಎಷ್ಟು ಪರಿಹಾರ ಕೊಡುತ್ತೀರಿ ಎನ್ನುವ ಬಗ್ಗೆ ಯೋಚನೆ ಮಾಡಿದ್ದೀರಾ?

**ಶ್ರೀ ಕಾಗೋಡು ತಿಮ್ಮಪ್ಪ:-** ಸರ್ವೆ ಕಾರ್ಯ ನಡೆಯುತ್ತಿದೆ. ಪರಿಹಾರವನ್ನು ಎಕರೆಗೆ ಇಂತಿಷ್ಟು ಎಂದು ಕೊಡಬೇಕೋ, ಮರಕ್ಕೆ ಇಂತಿಷ್ಟು ಎಂದು ಆ ಪ್ರಕಾರ ಕೊಡಬೇಕೋ ಎನ್ನುವ ಬಗ್ಗೆ ಅಮೇಲೆ ತೀರ್ಮಾನ ಮಾಡುತ್ತೇವೆ. ಏಕೆಂದರೆ, ಒಂದು ಕಡೆ ಒಂದು ಎಕರೆಗೆ 10 ಮರ ಇರಬಹುದು, ಮತ್ತೊಂದು ಕಡೆ 20 ಮರಗಳು ಇರಬಹುದು. ಅದಕ್ಕೋಸ್ಕರ ವರದಿ ಬಂದಾದ ಮೇಲೆ ನಮ್ಮ ತಜ್ಞರನ್ನು ಕರೆಸಿಕೊಂಡು, ಅವರುಗಳ ಸಲಹೆಗಳನ್ನು ಪಡೆದುಕೊಂಡು ಪರಿಹಾರ ಕೊಡುವಲ್ಲಿ ತೀರ್ಮಾನ ಮಾಡುತ್ತೇವೆ.

**ಶ್ರೀ ಕೃಷ್ಣ ಬೈರೇಗೌಡ(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ಸಂಪುಟ ಉಪ ಸಮಿತಿ ಸಭೆಯನ್ನು ಅಧಿವೇಶನದ ಮೊದಲ ವಾರದಲ್ಲಿ ಮಾಡಿದ್ದೇವೆ. ಅಲ್ಲದೆ ಆ ಇಲಾಖೆಯವರಿಗೆ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪ್ರದೇಶ ನಷ್ಟವಾಗಿದೆ, ಅದನ್ನು ಸರ್ವೆ ಮಾಡಿ ತಕ್ಷಣ ವರದಿ ಕೊಡಬೇಕೆಂದು ಹೇಳಿದ್ದೇವೆ. ವರದಿ ಬಂದ ಮೇಲೆ ಯಾವ ರೀತಿಯಲ್ಲಿ ಪರಿಹಾರ ಕೊಡುವುದು ಎನ್ನುವ ಬಗ್ಗೆ ಚರ್ಚೆ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈ ಕುಡಿಯುವ ನೀರಿನ ಅಭಾವ ಎಷ್ಟರಮಟ್ಟಿಗೆ ಇದೆ ಎಂದರೆ ವಿಶೇಷವಾಗಿ ದೇವದುರ್ಗ ತಾಲ್ಲೂಕಿನಲ್ಲಿ 46 ಕೋಟಿ ರೂಪಾಯಿಗಳ ಕುಡಿಯುವ ನೀರಿನ ಯೋಜನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ಣಗೊಂಡಿದೆ. ಆದರೆ ಲೋಕಾರ್ಪಣೆ ಮಾತ್ರ ಮಾಡಿಲ್ಲ. ಅದು ಆಗಬೇಕೆಂದು 12ನೇ ತಾರೀಖಿನಿಂದ ಬಿ.ಜೆ.ಪಿ. ವತಿಯಿಂದ ಧರಣಿ ಕುಳಿತಿದ್ದಾರೆ. ಕೆಲಸ ಪೂರ್ಣವಾಗಿದೆ. ಆದರೆ, ಅದನ್ನು ಲೋಕಾರ್ಪಣೆ ಮಾಡಲಿಕ್ಕೆ ಆಗುತ್ತಿಲ್ಲ. ಆದ್ದರಿಂದ, ಸರ್ಕಾರ ಇದರ ಬಗ್ಗೆ ಗಮನಕೊಡಬೇಕೆಂದು ಹೇಳಿ, ಈ ವಿಚಾರವಾಗಿ ಇರುವಂತಹ ಮಾಹಿತಿಯನ್ನು ಮಾನ್ಯ ಸಭಾಪತಿಗಳ ಮೂಲಕ ತಮಗೆ ಕಳುಹಿಸಿ ಕೊಡುತ್ತೇನೆ.

ಕೊನೆಯದಾಗಿ, ಹೇಳುವುದಾದರೆ, ಈ ಸರ್ಕಾರ ಮಾಡಿರುವಂತಹ ಯಾವುದೇ ಕೆಲಸವೂ ಸಹ ನಮಗೆ ಸಮಾಧಾನವಾಗಿರುವುದಿಲ್ಲ. ಏಕೆಂದರೆ, ಟಾಸ್ಕ್‌ಫೋರ್ಸ್ ಬಗ್ಗೆ ಹೇಳುವುದಾದರೆ, ಅದು ತುಂಬಾ ಸ್ಪಷ್ಟ ಇದೆ. ಆ ಟಾಸ್ಕ್‌ಫೋರ್ಸ್ ಬಗ್ಗೆಯಾದರೂ ಸಹ ಕ್ಲಿಯರ್ ಮಾಡಿ.

**ಶ್ರೀ ಕಾಗೋಡು ತಿಮ್ಮಪ್ಪ:–** ಟಾಸ್ಕ್‌ಫೋರ್ಸ್ ಮಾಡಿದ್ದಾರೆ. ಈಗ ತಾವು ಒಂದು ಸಲಹೆಯನ್ನು ಕೊಟ್ಟಿದ್ದೀರಿ. ಅದರಲ್ಲಿ ನಾಲ್ಕು ಜನರನ್ನು ಸೇರಿಸುವುದರಿಂದ ತಪ್ಪೇನೂ ಆಗುವುದಿಲ್ಲ. ಆದ್ದರಿಂದ, ಈ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಕುಳಿತುಕೊಂಡು ಮಾತನಾಡಿ, ಅದಕ್ಕೆ ಯಾರ್ಯಾರನ್ನು ಸೇರಿಸಬೇಕೋ ಅದರ ಬಗ್ಗೆ ನಾನು ಪ್ರಯತ್ನ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸೇರಿಸುವುದರ ಬಗ್ಗೆ ಅಷ್ಟೇ ಅಲ್ಲ. ಅದರ ಬಗ್ಗೆ ನಿಮಗೆ ಅನುಭವ ಇದೆ. ಅಲ್ಲಿ ಎಂಎಲ್ಎ ಮೀಟಿಂಗ್ ಕರೆಯುವುದಿಲ್ಲ, ಆ ಅಧಿಕಾರವನ್ನು ನೀವು ಅಧಿಕಾರಿಗೆ ಕೊಡಿ. 15 ದಿವಸಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ನೀವು ಸಭೆ ಕರೆಯಲಿಲ್ಲವೆಂದರೆ ನಿಮ್ಮ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ. ಆಗ ಏನಾಗುತ್ತದೆ ಎಂದರೆ, ಆ ಮೀಟಿಂಗ್ ರೆಗ್ಯೂಲರ್ ಆಗಿ ನಡೆಯುತ್ತದೆ. ಇಲ್ಲವೆಂದರೆ, ಅವರು ಎಂಎಲ್ಎ ಮೀಟಿಂಗ್ ಕರೆಯುವುದಿಲ್ಲ. ಆಗ ನೀವು ಏನು ಮಾಡುತ್ತೀರಿ?

**ಶ್ರೀ ಕೃಷ್ಣ ಬೈರೇಗೌಡ:–** ತಾವು ಕಂದಾಯ ಸಚಿವರು ಇದ್ದಾಗಿನಿಂದಲೂ ಈ ಟಾಸ್ಕ್‌ಫೋರ್ಸ್ ಇದೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಇದ್ದಾಗ, ನೀವು ಈ ಕಡೆ ವಿರೋಧ ಪಕ್ಷದಲ್ಲಿದ್ದುಕೊಂಡು ಒಳ್ಳೆಯ ಸಲಹೆಗಳನ್ನು ಕೊಡಲಿಲ್ಲ. ಸಲಹೆಗಳನ್ನು ಕೊಟ್ಟಿದ್ದರೆ ನಾವು ಮಾಡುತ್ತಿದ್ದೇವೇನೋ ಗೊತ್ತಿಲ್ಲ. ಈಗ ನಾವು ಸಲಹೆಗಳನ್ನು ಕೊಡುತ್ತಿದ್ದೇವೆ, ಈ ಕೆಲಸವನ್ನು ನೀವು ಮಾಡಿ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭಾನುಪ್ರಕಾಶ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಒಂದು ವಿಷಯವನ್ನು ಹೇಳಲಿಕ್ಕೆ ಬಯಸುತ್ತೇನೆ. ಏನೆಂದರೆ, ಬಹಳ ಸಿದ್ಧತೆ ಮಾಡಿಕೊಳ್ಳುವುದರಲ್ಲಿ ಸಾಕಷ್ಟು ಮಾಹಿತಿಗಳನ್ನು ಸರ್ಕಾರ ಕೊಟ್ಟಿದೆ. ಎರಡು ವಿಚಾರದಲ್ಲಿ ಸರಿಯಾದ ಸಿದ್ಧತೆ ಆಗಲಿಲ್ಲವೆನ್ನುವುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಬರಗಾಲ ಸಮಯದಲ್ಲಿ ಭೂಮಿ ಬಹಳ ಒಣಗಿತ್ತು. ಮುಂದಿನ ವರ್ಷ ಮಳೆ ಬಂದರೆ ಬರಗಾಲ ಹೋಗುತ್ತದೆ. ಇಲ್ಲದಿದ್ದರೆ ಬಹಳ ಸಮಸ್ಯೆ ಇದೆ. ಹಿಂದಿನ ವರ್ಷಗಳಲ್ಲಿ ಮಾಡಿರುವಂತಹ ತಪ್ಪನ್ನು ಮುಂದೆ ಮಾಡಬಾರದು ಎಂದರೆ, ಎನ್.ಆರ್.ಇ.ಜಿ. ಅಡಿಯಲ್ಲಿ ಕೆಲಸವನ್ನು ಮಾಡಬೇಕಾದರೆ ಅಲ್ಲಿಗೆ ಹೆಣ್ಣು ಮಕ್ಕಳು ಹೋಗುತ್ತಾರೆ. ಅಲ್ಲಿ ಅವರಿಗೆ ಗಟ್ಟಿಯಾಗಿರುವಂತಹ ನೆಲವನ್ನು ಅಗೆಯಲಿಕ್ಕೆ ಆಗುವುದಿಲ್ಲ. ಎನ್.ಆರ್.ಇ.ಜಿ. ನಲ್ಲಿ ಯಂತ್ರೋಪಕರಣಗಳನ್ನು ಉಪಯೋಗ ಮಾಡಲಿಕ್ಕೆ ಆಗುವುದಿಲ್ಲ. ಅದಕ್ಕೆ ಏನಾದರೂ ಕಾನೂನನ್ನು ಸಡಿಲ ಮಾಡಿ, ಈ ಸಂದರ್ಭದಲ್ಲಿ ಸ್ವಲ್ಪ ಜಾಸ್ತಿ ಎಕರೆಯಲ್ಲಿ ನೀರು ನಿಲ್ಲುವಂತಹ ಪ್ರಯತ್ನವನ್ನು ಯಂತ್ರೋಪಕರಣಗಳಿಂದ ಮಾಡಿಕೊಂಡಿದ್ದರೆ ಬಹಳ ಒಳ್ಳೆಯದಿತ್ತು ಎನ್ನುವುದು ನನ್ನ ಭಾವನೆ.

ಎರಡನೆಯದಾಗಿ, ತಾವು ನಾಡಿನ ಬಗ್ಗೆ ಯೋಚನೆ ಮಾಡಿದ್ದೀರಿ. ನಮ್ಮ ಕಾಡಿನಿಂದ ಪ್ರಾಣಿಗಳೆಲ್ಲವೂ ಬರುತ್ತಿವೆ. ಕಾಡಿನೊಳಗಡೆ ಹೋಗುವುದಕ್ಕೆ ನಮಗೆ ಪ್ರವೇಶವಿಲ್ಲ. ನೀವೇನೋ ನಮಗೆ ಟ್ಯಾಂಕರ್‌ನಲ್ಲಿ ನೀರು ಕೊಡುತ್ತೀರಿ, ಬೋರ್‌ವೆಲ್‌ನಲ್ಲಿ ನೀರು ಕೊಡುತ್ತೀರಿ, ಎಲ್ಲಿಂದಲಾದರೂ ನೀರನ್ನು ಕೊಡುತ್ತೀರಿ. ಕಾಡಿನೊಳಗಡೆ ಇರುವಂತಹದ್ದನ್ನು ಗಮನಿಸಬೇಕು. ಇತ್ತೀಚೆಗೆ ನಾನು ಮೈಸೂರಿನ ಕಬಿನಿ ಜಲಾಶಯದ ಪ್ರದೇಶಕ್ಕೆ ಹೋಗಿ ನೋಡಿದೆ. ಪ್ರಾಣಿಗಳು ಬರುವಂತಹ ಕಡೆಗಳಿಗೆ ನಮ್ಮನ್ನು ಕರೆದುಕೊಂಡು ಹೋಗುತ್ತಾರೆ. ಆ ಒಂದು ಜಾಗದಲ್ಲಿರುವಂತಹ ಕೆರೆ-ಕುಂಟೆಗಳಲ್ಲಿ ಹೂಳು ತುಂಬಿದೆ. ಈಗ ಅದನ್ನು ಕ್ಲೀನ್ ಮಾಡಿಸಿದರೆ ಯಾವ ಸಂದರ್ಭದಲ್ಲಿ ಹೇಗೆ ಎಂದು ಸರ್ಕಾರ ಮನಸ್ಸು ಮಾಡಿ ಅದನ್ನು ಕ್ಲೀನ್ ಮಾಡಿಸಿ, ಜಾಸ್ತಿ ನೀರು ತುಂಬುವ ಹಾಗೆ ಮಾಡಿದರೆ ಪ್ರಾಣಿಗಳು ಅಲ್ಲಿ ನೀರು ಕುಡಿಯಲು ಅನುಕೂಲವಾಗುತ್ತಿತ್ತು. ಇಲ್ಲದಿದ್ದರೆ, ನಮ್ಮ ಚಿಕ್ಕಮಗಳೂರು ಭಾಗದಲ್ಲಿ, ಶಿವಮೊಗ್ಗ ಭಾಗದಲ್ಲಿರುವಂತಹ ಸಾಕಷ್ಟು ಕಾಡಿನ ಪ್ರಾಣಿಗಳು, ನಾವೇ ನಿಭಾಯಿಸುವಂತಹ ಪ್ರಾಣಿಗಳು ಬಂದರೆ ಪರವಾಗಿಲ್ಲ. ನಾವು ನಿಭಾಯಿಸದೇ ಇರುವಂತಹ ಪ್ರಾಣಿಗಳು ಅಂದರೆ ಆನೆ, ಹುಲಿ, ಸಿಂಹಗಳು ಬಂದರೆ ಹೇಗೆ? ಜಿಂಕೆ ಬಂದರೆ ಹಿಡಿದುಕೊಂಡು ಬಂದು ನೀರು ಕೊಡಬಹುದು. ಆದರೆ ಆನೆ, ಹುಲಿ, ಸಿಂಹಗಳು ಬಂದರೆ ಸಾಧ್ಯವಿಲ್ಲ. ಅದರ ಬಗ್ಗೆಯೂ ಸಹ ವಿಶೇಷ ಗಮನಹರಿಸಬೇಕೆಂದು ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮಂತ್ರಿಗಳು ರಾಜ್ಯಾಂಗ ಏನು ಹೇಳುತ್ತದೆ ಎಂದು ಕೇಳುತ್ತಿದ್ದಾರೆ. ಆದುದರಿಂದ, ರಾಜ್ಯಾಂಗದ ಅಡಿಯಲ್ಲಿ ರೂಪುಗೊಂಡಿರುವಂತಹ ಎರಡು ನೋಟಿಫಿಕೇಷನ್ಸ್ ಇವೆ. ಒಂದು ಎಸ್.ಡಿ.ಆರ್.ಎಫ್. ಮತ್ತೊಂದು ಎನ್.ಡಿ.ಆರ್.ಎಫ್. ನಾನು ಸವಿಸ್ತಾರವಾಗಿ ಮಾತನಾಡಬೇಕಾದರೆ ಹೇಳಿದ್ದೆ. ಎಸ್.ಡಿ.ಆರ್.ಎಫ್. ಗೆ contributory factors ಏನೆಂದರೆ, 75% ಕೇಂದ್ರ ಸರ್ಕಾರದ್ದು, 25% ರಾಜ್ಯ ಸರ್ಕಾರದ್ದು. ಎನ್.ಡಿ.ಆರ್.ಎಫ್. ಗೆ 100% ಕೇಂದ್ರ ಸರ್ಕಾರದ್ದು. ಈಗ ಎಸ್.ಡಿ.ಆರ್.ಎಫ್. ಪ್ರಾರಂಭದಲ್ಲಿ 5 ವರ್ಷ, 2015-16 ರಿಂದ 2019-20 ರವರೆಗೆ ಏನು amount/quantum ಅನ್ನು ನಿಗದಿ ಮಾಡಿದ್ದಾರೆ, ಅದರಲ್ಲಿ 10% ಮಾತ್ರ ಖರ್ಚು ಮಾಡುವಂತಹದ್ದು ಇದೆ. ಇನ್ನು ನಂತರ ಬರುವಂತಹ ಈ ಪರಿಹಾರ ನಾವು ನಿಗದಿ ಮಾಡುತ್ತೇವೆ, ಹೆಚ್ಚುವರಿಯಾಗಿ ಕೊಡುವಂತಹದ್ದು ರಾಜ್ಯ ಸರ್ಕಾರಕ್ಕೆ ಬಿಟ್ಟ ವಿಷಯ. ಆದರೆ, ನಿಯಮಾವಳಿಗಳ ರೀತ್ಯಾ ಖಾಯಂ ಆಗಿ ಏನು ರಿಲೀಫ್ ಕೊಡಬೇಕಾಗಿದೆ; ಬೆಳೆ ನಾಶವಾಗಿದ್ದರೆ, ಮನೆ ನಾಶವಾಗಿದ್ದರೆ, ದನಕರುಗಳಿಗೆ ಹಾನಿಯಾಗಿದ್ದರೆ ಇದರಲ್ಲಿ ಅದು ಆ ಗೈಡ್‌ಲೈನ್ಸ್‌ನಲ್ಲಿದೆ. ಆ ಗೈಡ್‌ಲೈನ್ಸ್ ಪ್ರಕಾರ so far as S.D.R.F. is concerned, final compensation ಎನ್.ಡಿ.ಆರ್.ಎಫ್. ಪ್ರಕಾರ ಕೊಡಬೇಕು. ಆದುದರಿಂದ, ಈ ಎರಡು ಅಂಶಗಳ ಅರಿವಿನ ಹಿನ್ನೆಲೆಯಲ್ಲಿ ಈ ಪರಿಹಾರವನ್ನು ಹೇಗೆ ನೀವೇ ಕೊಡುತ್ತೀರಾ? ಏಕೆಂದರೆ ನನ್ನ ಪ್ರಕಾರ, ನನಗಿಂತ ಹೆಚ್ಚಾಗಿ norms ಪ್ರಕಾರ ಕೇಂದ್ರ ಸರ್ಕಾರದ ರಿಲೀಫ್ ಕೊಡಬೇಕಾಗಿರುವುದು ಕಾನೂನಿನಲ್ಲಿ ಇರುವಂತಹದ್ದಾಗಿದೆ. ಈ ವಿಚಾರದಲ್ಲಿ ಸರ್ಕಾರ ಏನು ಮಾಡುತ್ತದೆ ಎನ್ನುವುದರ ಬಗ್ಗೆ ಬೆಳಕನ್ನು ಚೆಲ್ಲಬೇಕು. ರಿಲೀಫ್ ಅನ್ನು ಕೊಡಿಸಲಿಕ್ಕೆ ಕೇಂದ್ರ ಸರ್ಕಾರದ ಮೇಲೆ ಯಾವ ರೀತಿಯಲ್ಲಿ ಒತ್ತಡ ತರುತ್ತೀರಿ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರದಲ್ಲಿ ಗೈಡ್‌ಲೈನ್ಸ್ ಇವೆ. ಆ ಗೈಡ್‌ಲೈನ್ಸ್ ಪ್ರಕಾರ ಅವರು ಪರಿಹಾರವನ್ನು ಕೊಡುತ್ತಿದ್ದಾರೆ. ನಾವು ನಮ್ಮ ಬೇಡಿಕೆಯನ್ನು ಸಲ್ಲಿಸಬೇಕಾದರೆ ಅದರ ಪ್ರಕಾರವೇ ವರ್ಕ್‌ಔಟ್ ಮಾಡುತ್ತೇವೆ. ಆದರೆ, ಅವರದ್ದೇ ಆದಂತಹ ಒಂದು ಟೀಮ್ ಬಂದು ಪರಿಶೀಲನೆ ಮಾಡಿ, ಎಲ್ಲೆಲ್ಲಿ ಏನೇನು ಆಗಿದೆ ಎಂದು ನೋಡಿಕೊಂಡು ಅದರ ಬಗ್ಗೆ ವರದಿಯನ್ನು ಅವರು ಕೊಡುತ್ತಾರೆ. ಅದಕ್ಕೆ ಒಂದು ಕಮಿಟಿ ಇದೆ. ಆ ಕಮಿಟಿಯಲ್ಲಿ ಒಂದು ತೀರ್ಮಾನ ಮಾಡುತ್ತಾರೆ. ಅದಕ್ಕೆ ಗೃಹ ಸಚಿವರೇ ಅಧ್ಯಕ್ಷರು ಇರುತ್ತಾರೆ, ಕೃಷಿ ಸಚಿವರು ಮತ್ತು ಹಣಕಾಸಿನ ಸಚಿವರು ಅದರಲ್ಲಿ ಇರುತ್ತಾರೆ. ಅವರ ಅಧ್ಯಕ್ಷತೆಯಲ್ಲಿ ಒಂದು ತೀರ್ಮಾನವಾಗುತ್ತದೆ. ಆ ತೀರ್ಮಾನದ ಪ್ರಕಾರ ಒಪ್ಪಿಕೊಂಡು ಇದನ್ನು ನಾವು ತೆಗೆದುಕೊಳ್ಳುತ್ತೇವೆ. ಇದರೊಳಗೆ ಹೆಚ್ಚು ಕಡಿಮೆ discretionary power ಇದ್ದ ರೀತಿಯಲ್ಲಿ ಇರುತ್ತದೆ. ನಾವು ಅಲ್ಲಿಗೆ ಹೋಗಿ ಕುಳಿತುಕೊಂಡು ಇನ್ನು ಸ್ವಲ್ಪ ಜಾಸ್ತಿ ಕೊಡಿ ಎಂದು ಹೇಳಿ, ಒತ್ತಾಯ ಮಾಡುವುದರ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೂಲಕ ತೆಗೆದುಕೊಳ್ಳುತ್ತೇವೆ. ಇದಕ್ಕೆ ಲೀಗಲ್ ಆಗಿ ಇಷ್ಟು ಹಣವನ್ನು ಕೊಡಲೇಬೇಕೆಂದು ಹೇಳುವುದಕ್ಕೆ ಇದರಲ್ಲಿ ಬರುವುದಿಲ್ಲ.

(ಮುಂದು)

(863) 20.06.2017 ಎಸ್‌ಪಿಆರ್/ಆರ್‌ಎನ್ 5:40

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನಾನು ಇದನ್ನು ಹೇಳಿಬಿಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಚಿವರೆ, ನಾನು ಹೇಳುವುದನ್ನೂ ಸೇರಿಸಿ ಹೇಳಿಬಿಡಿ. ಈಗ ಕೆಲವು ಕಡೆಗಳಲ್ಲಿ ಮಳೆ ಸರಿಯಾಗಿ ಆಗಿಲ್ಲದ ಕಾರಣದಿಂದ ಅಲ್ಲಿನ ಪ್ರದೇಶದ ಜಾನುವಾರುಗಳಿಗೆ ಮೇವು ಇಲ್ಲದೆ ಗೋಶಾಲೆಗಳನ್ನು ಮುಚ್ಚಲಾಗುತ್ತಿದೆ. ಆದರೆ ಗೋಶಾಲೆಗಳನ್ನು ಮುಚ್ಚದೆ ಅಲ್ಲಿನ ಜಾನುವಾರುಗಳಿಗೆ ಅಗತ್ಯವಿರುವ ಮೇವನ್ನು ತಲುಪಿಸಬೇಕು. ಈ ದಿಕ್ಕಿನಲ್ಲಿಯೂ ಸಹ ತಾವು ಸ್ಪಷ್ಟೀಕರಣವನ್ನು ಕೊಡಬೇಕು.

**ಶ್ರೀ ಕೃಷ್ಣ ಬೈರೇಗೌಡ:-** ಮಾನ್ಯ ಸಭಾಪತಿಯವರೆ, NDRF (National Disaster Response Fund) ವಿಚಾರಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ Drought Manual ಎಂಬುದಾಗಿ ಇದೆ. ಕಾಯ್ದೆಯಡಿ Drought Manual ಬರುತ್ತದೆ. Drought Manual ನಲ್ಲಿನ ಅಂಶಗಳು ನಮಗೆ ಬೈಂಡಿಂಗ್ ಆಗುತ್ತವೆ. ನಾವು ಮನವಿಗಳನ್ನು ಸಲ್ಲಿಸುವಾಗ Drought Manualನಲ್ಲಿ ಯಾವ ಅಂಶಗಳು ನಮೂದಾಗಿದೆ ಅವುಗಳ ಪ್ರಕಾರವಾಗಿ ಮನವಿಗಳನ್ನು ಸಲ್ಲಿಸಬೇಕಾಗುತ್ತದೆ. ಕೇಂದ್ರ ಸರ್ಕಾರವು ಪ್ರತಿಯೊಂದು ಅಂಶಗಳಿಗೂ ಕೂಡ ಪರಿಹಾರವನ್ನು ನಿಗದಿ ಮಾಡಿದ್ದಾರೆ. ಬೆಳೆ ಹಾನಿಗೆ, ಮನೆ ಹಾನಿಗೆ, ಬೋರ್‌ವೆಲ್‌ಗಳಿಗೆ, ಮಳೆಯು ಹೆಚ್ಚಾಗಿ ಬಂದು ಕುಡಿಯುವ ನೀರಿನ ಮೂಲಗಳು ನಾಶವಾದರೆ ಇನ್ನೂ ಮುಂತಾದವುಗಳಿಗೆ ಇಂತಿಷ್ಟು ಹಣವನ್ನು ನಿಗದಿಪಡಿಸಿದ್ದಾರೆ. ತೋಟಗಾರಿಕಾ ಬೆಳೆಗಳಿಗೆ, ನೀರಾವರಿ ಬೆಳೆಗಳಿಗೆ ಹಾಗೂ ಖುಷ್ಕಿ ಬೆಳೆಗಳಿಗೆ ಹೀಗೆ ಪ್ರತಿಯೊಂದಕ್ಕೂ ಇಂತಿಷ್ಟು ಹಣವನ್ನು ನಿಗದಿಪಡಿಸಿದ್ದಾರೆ. ನಾವೂ ಸಹ ಇದೇ ಪ್ರಕಾರವಾಗಿ ಲೆಕ್ಕವನ್ನು ಹಾಕುತ್ತೇವೆ. ಯಾವ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೂ ಹಾಗೂ ಕೇಂದ್ರ ಸರ್ಕಾರಕ್ಕೂ ವ್ಯತ್ಯಾಸವುಂಟಾಗುತ್ತದೆ ಎಂದರೆ ಅವರು ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಎಂಬ ಮಾನದಂಡವನ್ನು ಇಟ್ಟುಕೊಂಡಿದ್ದಾರೆ. Small and marginal farmers ಎಂಬುದಾಗಿ ಹೇಳುತ್ತಾರೆ. ನಾವುಗಳು ಸಮೀಕ್ಷೆಯನ್ನು ಮಾಡಿದಾಗ ನಾವು ರಾಜ್ಯದ ರೈತರುಗಳಿಗೆ ಭೇದಭಾವವನ್ನು ಮಾಡಬಾರದು. ಕೆಲವರಿಗೆ ಕೊಟ್ಟು ಇನ್ನು ಕೆಲವರಿಗೆ ಬಿಡುವುದಕ್ಕೆ ಆಗುವುದಿಲ್ಲ. ಈ ಕಾರಣಕ್ಕಾಗಿ ಸಣ್ಣ ಮತ್ತು ಅತೀ ಸಣ್ಣ ರೈತರ ಜೊತೆಗೆ ಮಧ್ಯಮ ಮತ್ತು ದೊಡ್ಡ ರೈತರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂಬುದಾಗಿ ಸೇರಿಸಿ ಎಲ್ಲರಿಗೂ ಪರಿಹಾರವನ್ನು ಕೊಡುತ್ತೇವೆ. ಹಿಡುವಳಿಯ ಮಿತಿಯನ್ನು ನಾವು ಅಳವಡಿಸುವುದಿಲ್ಲ. ನಾವು ಎಲ್ಲಾ ರೀತಿಯ ರೈತರಿಗೆ ಪರಿಹಾರವನ್ನು ಕೊಡುತ್ತೇವೆ, ಆದರೆ ಕೇಂದ್ರ ಸರ್ಕಾರವು ಬರ ಪರಿಹಾರದ ತೀರ್ಮಾನವನ್ನು ಮಾಡುವಾಗ ಈ ರೀತಿಯಾದ criteria ಅಥವಾ ಮಾನದಂಡವನ್ನು ಅನ್ವಯಿಸುತ್ತಾರೆ. ಅವರುಗಳು ಮಧ್ಯಮ ಮತ್ತು ದೊಡ್ಡ ರೈತರುಗಳನ್ನು ತೆಗೆದು ಹಾಕಿ ಸಣ್ಣ ಮತ್ತು ಅತೀ ಸಣ್ಣ ರೈತರು ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂದು ನೋಡಿಕೊಂಡು ಅದರ ಆಧಾರದ ಮೇಲೆ ಪರಿಹಾರದ ಮೊತ್ತವನ್ನು ಅಧಿಕಾರಿಗಳ ಹಂತದಲ್ಲಿ ತೀರ್ಮಾನ ಮಾಡುತ್ತಾರೆ. ಇದಾದ ನಂತರ ಮಾನ್ಯ ಕಂದಾಯ ಸಚಿವರು ಹೇಳಿದ ಹಾಗೆ ಅಲ್ಲಿ ಕೇಂದ್ರ ಸಚಿವರ ಹಂತಕ್ಕೆ ಹೋದಾಗ ಅವರಿಗೆ ಪರಿಹಾರ ಮೊತ್ತವನ್ನು ಹೆಚ್ಚು ಅಥವಾ ಕಡಿಮೆ ಮಾಡುತ್ತಾರೆ. ಮೊದಲು ಇಲ್ಲವೆಂದು ಹೇಳಿ ನಂತರದಲ್ಲಿ ಮಾಡುತ್ತಾರೆ. ಈ ಬಗ್ಗೆ ನಮಗೆ ಹಲವಾರು ನಿದರ್ಶನಗಳಿವೆ ಹಾಗೂ ಈ ಸಂಬಂಧ ನಾವು ಉದಾಹರಣೆಗಳನ್ನು ಕೊಡಬಹುದು. ಅವರಿಗೆ ಬೇಕೆಂದ ಸಂದರ್ಭದಲ್ಲಿ ಪರಿಹಾರದ ಮೊತ್ತವನ್ನು ಜಾಸ್ತಿಯಾಗಿ ನೀಡುತ್ತಾರೆ ಹಾಗೂ ಬೇಡವೆಂದಲ್ಲಿ ಕಡಿಮೆ ಮೊತ್ತವನ್ನು ನೀಡುತ್ತಾರೆ. ಇಂತಹ ಪ್ರಕರಣಗಳಿವೆ. ಆದರೆ ಮೂಲವಾಗಿ ಪರಿಹಾರದ ಮೊತ್ತದಲ್ಲಿ ಎಲ್ಲಿ ವ್ಯತ್ಯಾಸವುಂಟಾಗುತ್ತದೆ ಎಂದರೆ NDRFನ ಪ್ರಕಾರ ಮಧ್ಯಮ ಮತ್ತು ದೊಡ್ಡ ರೈತರು ಬರ ಪರಿಹಾರ ಮೊತ್ತವನ್ನು ಪಡೆಯಲು ಅರ್ಹರಲ್ಲ. ಆದರೆ ನಾವು ರಾಜ್ಯ ಸರ್ಕಾರದವರು ಆ ರೀತಿಯ ಬೇಧಭಾವಗಳನ್ನು ಮಾಡುವುದಕ್ಕಾಗುವುದಿಲ್ಲ. ಎಲ್ಲಾ ರೀತಿಯ ರೈತರುಗಳಿಗೆ ನಾವು ಪರಿಹಾರ ಮೊತ್ತವನ್ನು ಕೊಡಬೇಕಾಗುತ್ತದೆ. ಹೀಗಾಗಿ ನಮ್ಮ ಲೆಕ್ಕಾಚಾರಕ್ಕೂ ಅವರ ಲೆಕ್ಕಾಚಾರಕ್ಕೂ ಸ್ವಲ್ಪ ವ್ಯತ್ಯಾಸಗಳುಂಟಾಗುತ್ತವೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನನಗೆ ಇಬ್ಬರು ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನಗೆ ಈಗಲೂ ಸ್ಪಷ್ಟೀಕರಣ ಬೇಕಾಗಿರುವ ಅಂಶ ಯಾವುದೆಂದರೆ ಎಸ್‌ಡಿಆರ್‌ಎಫ್‌ನ ನಿಧಿ ಯಾರದ್ದು? ಇದರಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಕೊಡುಗೆಗಳೆಷ್ಟು? ನಿಧಿಯ ಕಾಯ್ದೆಯ ಪ್ರಕಾರ ಐದು ವರ್ಷಗಳಿಗೊಮ್ಮೆ ಮೊತ್ತವನ್ನು ನಿಗದಿಪಡಿಸುತ್ತಾರೆ. ನನಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯ ಸರ್ಕಾರಕ್ಕೆ ಸುಮಾರು 1500 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೊತ್ತವನ್ನು 15 ರಿಂದ 20 ವರ್ಷಗಳ ವರೆಗೆ ನಿಗದಿಪಡಿಸಿದ್ದಾರೆ. ಹೀಗೆ ನಿಗದಿಪಡಿಸಿದ ಎಲ್ಲಾ ಮೊತ್ತವನ್ನು ಒಂದೇ ವರ್ಷದಲ್ಲಿ ಬಳಕೆ ಮಾಡುವುದಕ್ಕೆ ಅವಕಾಶವಿಲ್ಲ. ಆದರೆ ಶೇಕಡ 10 ರಷ್ಟನ್ನು ಮಾತ್ರವೇ ಬಳಸಲಿಕ್ಕೆ ಅವಕಾಶವುಂಟು. ಇದು ನಿಯಮಾವಳಿಗಳಲ್ಲಿ ಇದೆ. ಆದರೆ ಸದರಿ ನಿಧಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು 75:25 ರ ಅನುಪಾತದಲ್ಲಿ ಕೊಡುಗೆಗಳನ್ನು ನೀಡಬೇಕು. ಆದರೆ ಎನ್‌ಡಿಆರ್‌ಎಫ್‌ನಲ್ಲಿರುವ ನಿಧಿಗೆ 100 ಕ್ಕೆ ನೂರರಷ್ಟು ಕೇಂದ್ರ ಸರ್ಕಾರವು ಕೊಡುಗೆಯನ್ನು ನೀಡಬೇಕು. ಇದಕ್ಕೆ ರಾಜ್ಯ ಸರ್ಕಾರದ ಕೊಡುಗೆ ಇಲ್ಲ. ಹೀಗಾಗಿ ಎನ್‌ಡಿಆರ್‌ಎಫ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಡಿಯಲಲಿ ಪರಿಹಾರವನ್ನು ಕೊಡುವಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಹಣ ಎನ್ನುವ ಪ್ರಶ್ನೆಯು ಉದ್ಭವಿಸುವುದಿಲ್ಲ. SDRF (State Disaster Response Fund) ನಡಿ ಪರಿಹಾರವನ್ನು ಕೊಡುವಂತಹ ಸಂದರ್ಭದಲ್ಲಿ ಶೇಕಡ 25 ರಷ್ಟು ಕೊಡುಗೆಯಿದೆ. ಈ ಕಾರಣಕ್ಕಾಗಿ ನಾನು ಹೇಳುವುದೇನೆಂದರೆ ಒಂದು ಕಡೆ Disaster Management Authority ಅಧ್ಯಕ್ಷರು ಪ್ರಧಾನ ಮಂತ್ರಿಗಳಾಗಿರುತ್ತಾರೆ. ಇನ್ನೊಂದು ಸಮಿತಿಗೆ ಹಣಕಾಸಿನ ಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. SDRF ನಡಿ ಇವತ್ತಿನ ದಿವಸ, ರೈತರಿಗೆ ಅವರ ಹಸು, ದನ, ಕುರಿ ಇತ್ಯಾದಿ ಪ್ರಾಣಿಗಳು ಸತ್ತುಹೋದರೆ ಇಂತಿಷ್ಟು ಪರಿಹಾರ ಎಂಬುದಾಗಿ ಹಾಗೂ ಅದೇ ರೀತಿಯಾಗಿ ತೋಟ, ಮನೆ ಇತ್ಯಾದಿಗಳಿಗೆ ಹಾನಿಯುಂಟಾದರೆ ಇಂತಿಷ್ಟು ಪರಿಹಾರ ಎಂಬ ಅಂಶಗಳು ಅದರಲ್ಲಿ ನಮೂದಾಗಿವೆ. ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ಗಳ ಅಡಿಯಲ್ಲಿ ಪರಿಹಾರವನ್ನು ಯಾರು ನೀಡಬೇಕು ಎಂಬುದು ಸ್ಪಷ್ಟವಾಗಿದೆ. ಎನ್‌ಡಿಆರ್‌ಎಫ್ ನಿಧಿಯಡಿ exclusive ಆಗಿ ಕೇಂದ್ರ ಸರ್ಕಾರವು ಪರಿಹಾರ ಮೊತ್ತವನ್ನು ನೀಡಬೇಕು. ಆದ್ದರಿಂದ ದಯಮಾಡಿ ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್ ನಿಧಿಯನ್ನು ರಾಜ್ಯ ಸರ್ಕಾರಕ್ಕೆ ತರುವಂತಹ ದೃಷ್ಟಿಯಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಈಶ್ವರಪ್ಪ ಅವರನ್ನು ಮಾನ್ಯ ಸಂಸದರಾದ ಶ್ರೀ ಬಿ.ಎಸ್.ಯಡಿಯೂರಪ್ಪ ಹಾಗೂ ಇನ್ನಿತರೆ ಕೇಂದ್ರ ಮಂತ್ರಿಗಳ ಸೇವೆಗಳನ್ನು ಯಾವ ರೀತಿಯಾಗಿ ಬಳಸಿಕೊಳ್ಳುತ್ತೀರಿ ಎಂಬುದನ್ನು ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೃಷ್ಣಬೈರೇಗೌಡ:–** ಮಾನ್ಯ ಸಭಾಪತಿಯವರೆ, ಎಲ್ಲಾ ಅಂಶಗಳನ್ನು ಮಾನ್ಯ ಸದಸ್ಯರಾದ ಶ್ರೀ ವಿ.ಎಸ್.ಉಗ್ರಪ್ಪ ನವರೇ ಹೇಳಿದ್ದಾರೆ. ಎಸ್‌ಡಿಆರ್‌ಎಫ್‌ನ ನಿಧಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 75:25 ರ ಅನುಪಾತದಲ್ಲಿ ಕೊಡುಗೆಯನ್ನು ನೀಡುವಂತಹದ್ದು ಆದರೆ ಎನ್‌ಡಿಆರ್‌ಎಫ್‌ನ ನಿಧಿಗೆ ಸಂಪೂರ್ಣವಾಗಿ ಕೇಂದ್ರ ಸರ್ಕಾರವು ಕೊಡುಗೆಯನ್ನು ನೀಡಬೇಕು. ನಮ್ಮ ರಾಜ್ಯದಲ್ಲಿ ಮಾತ್ರವೇ ಪದೇ ಪದೇ ಪ್ರಕೃತಿ ವಿಕೋಪಗಳು ಉಂಟಾಗುತ್ತಿರುವುದರಿಂದ ಬೇರೆ ರಾಜ್ಯಗಳಿಗಿಂತ ವಿಭಿನ್ನವಾಗಿ ನಾವು ನಮ್ಮ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಹೆಚ್ಚುವರಿಯಾಗಿ ರೂಪಾಯಿ 225 ಕೋಟಿಗಳಷ್ಟು ಹಣವನ್ನು ಎಸ್‌ಡಿಆರ್‌ಎಫ್ ನಿಧಿಗೆ ಆಯವ್ಯಯದಲ್ಲಿ ಮೀಸಲಿಟ್ಟಿದ್ದೇವೆ. In addition to our twenty-five percent, ರೂಪಾಯಿ 225 ಕೋಟಿಗಳಷ್ಟು ಹಣವನ್ನು ನಾವು ನಿಧಿಗೆ ಕೊಡುಗೆಯಾಗಿ ನೀಡಿದ್ದೇವೆ. ಇದು ನಾವು ಹೊಸದಾಗಿ ಮಾಡಿಕೊಂಡಿರುವ ವ್ಯವಸ್ಥೆಯಾಗಿದೆ. ಏಕೆಂದರೆ ಪ್ರಕೃತಿ ವಿಕೋಪಗಳು ಜಾಸ್ತಿಯಾಗುತ್ತಿವೆ ಈ ಕಾರಣದಿಂದಾಗಿ ನಾವು ಮೀಸಲು ನಿಧಿಯಲ್ಲಿ ಹೆಚ್ಚಳ ಮಾಡಿಕೊಂಡಿದ್ದೇವೆ. ಈ ಮೊತ್ತವನ್ನು ನಾವು ಎನ್.ಡಿ.ಆರ್.ಎಫ್. ಅಥವಾ ಎಸ್.ಡಿ.ಆರ್.ಎಫ್. ಯಾವುದಕ್ಕೆ ಬೇಕಾದರೂ ಅಳವಡಿಸಿಕೊಳ್ಳಬಹುದು. ಎನ್.ಡಿ.ಆರ್.ಎಫ್. ನಿಧಿಯು ಸಂಪೂರ್ಣವಾಗಿ ಕೇಂದ್ರ ಸರ್ಕಾರದಿಂದ ಬರುವಂತಹ ಹಣವಾಗಿದೆ. ಮುಂಗಾರಿಗೆ ಸಂಬಂಧಪಟ್ಟ ಹಾಗೆ ನಾವು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂಪಾಯಿ 4,702 ಕೋಟಿಗಳ ಪರಿಹಾರ ಮೊತ್ತಕ್ಕಾಗಿ memorandum ಕೊಟ್ಟಿದ್ದೇವೆ. ಆ ಪೈಕಿ ನಮಗೆ 1,685 ಕೋಟಿ ರೂಪಾಯಿಗಳ ಬರ ಪರಿಹಾರ ಮೊತ್ತವು ಬಿಡುಗಡೆಯಾಗಿದೆ. Memorandum applies exclusively to NDRF, ರೂಪಾಯಿ 4,702 ಕೋಟಿಗಳ ಬೇಡಿಕೆಗೆ ಪ್ರತಿಯಾಗಿ ಕೇಂದ್ರ ಸರ್ಕಾರವು ರೂಪಾಯಿ 1,782 ಕೋಟಿ ರೂಪಾಯಿಗಳಷ್ಟು ಹಣವನ್ನು ಮಂಜೂರು ಮಾಡಿದ್ದು ಆ ಪೈಕಿ ರೂಪಾಯಿ 1,685 ಕೋಟಿಗಳಷ್ಟು ಹಣ ಮಾತ್ರವೇ ಬಿಡುಗಡೆಯಾಗಿದೆ. ಹಿಂಗಾರಿಗೆ ಸಂಬಂಧಪಟ್ಟ ಹಾಗೆ ನಾವು ರೂಪಾಯಿ 3,310 ಕೋಟಿಗಳಷ್ಟು ಹಣದ ಮನವಿಯನ್ನಿಟ್ಟಿದ್ದು, ಈ ಬಗ್ಗೆ ಇನ್ನೂ ಇತ್ಯರ್ಥವಾಗಿಲ್ಲ. ಈ ವರ್ಷದಲ್ಲಿ ಎನ್.ಡಿ.ಆರ್.ಎಫ್. ಅಡಿಯಲ್ಲಿ ನಮಗೆ 1,685 ಕೋಟಿ ರೂಪಾಯಿಗಳ ಬರ ಪರಿಹಾರ ಮೊತ್ತವು ಬಿಡುಗಡೆಯಾಗಿದೆ. ನಾವು ಪ್ರಧಾನ ಮಂತ್ರಿಗಳ ಹತ್ತಿರ ಸರ್ವ ಪಕ್ಷಗಳ ನಿಯೋಗವನ್ನು ಕಳೆದ ವರ್ಷದ ಡಿಸೆಂಬರ್ 27 ಹಾಗೂ 28 ರಂದು ಕರೆದುಕೊಂಡು ಹೋಗಿದ್ದೆವು. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರದ ಎಲ್ಲಾ ಸಚಿವರುಗಳು ಅಂದರೆ, ಮಾನ್ಯ ಸಂಸದರುಗಳಾದ ಶ್ರೀ ಅನಂತ ಕುಮಾರ್, ಶ್ರೀ ಸದಾನಂದ ಗೌಡರು ಹಾಗೂ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರುಗಳೆಲ್ಲರನ್ನೂ ಒಳಗೊಂಡಂತೆ ನಿಯೋಗವನ್ನು ಪ್ರಧಾನ ಮಂತ್ರಿಗಳ ಹತ್ತಿರ ಕರೆದುಕೊಂಡು ಹೋಗಲಾಗಿತ್ತು. ಸದರಿ ಸಂಸದರುಗಳ ಸೇವೆಗಳನ್ನು ಬಳಕೆ ಮಾಡುವಂತಹ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಮೆಮೋರಂಡಮ್ ಬಗ್ಗೆಯೂ ಸಹ ಸದರಿ ಸಂಸದರುಗಳಿಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ನಮ್ಮ ಕಡೆಯಿಂದ ಸದರಿ ಸಂಸದರುಗಳನ್ನು ಈ ವಿಚಾರದಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಕೊನೆಯದಾಗಿ ಬೆಳಿಗ್ಗೆಯಿಂದ ಕಂಠ...

**ಸಭಾಪತಿಯವರು:-** ನೀವು ಏನನ್ನಾದರೂ ಕೇಳುವುದಿದ್ದರೆ ಒಂದೇ ಬಾರಿಗೆ ಕೇಳಿಬಿಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಂತ್ರಿಗಳು ಮಧ್ಯೆ ಮಧ್ಯೆ ಮಾನ್ಯ ಸದಸ್ಯರುಗಳಿಗಿಂತ ಜೋರಾಗಿ ನಿಂತುಕೊಂಡು ಮಾತನಾಡುತ್ತಿದ್ದರೆ, ನಾನೇನು ಮಾಡುವುದಕ್ಕಾಗುತ್ತದೆ? ಮಾನ್ಯ ಸದಸ್ಯರುಗಳು ನೀವು ಹೇಳಿದ ತಕ್ಷಣ ಕುಳಿತುಕೊಳ್ಳುತ್ತಾರೆ, ಆದರೆ ಮಂತ್ರಿಗಳನ್ನು ಕೂಡಿಸುವ ಅಧಿಕಾರ ನಿಮಗೂ ಇಲ್ಲ...

**ಸಭಾಪತಿಯವರು:-** ಇಲ್ಲ ಮಂತ್ರಿಗಳನ್ನೂ ಕೂಡಿಸುತ್ತೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೀವು ಅವರನ್ನು ಏನು ಕೂಡಿಸುತ್ತಿರೋ? ಏಕೆಂದರೆ ಒಂದು ನಿಮಿಷ ಮಾತನಾಡಿ ಎಂದು ಹೇಳಿದರೆ 15 ನಿಮಿಷಗಳಷ್ಟು ಮಾತನಾಡುತ್ತಾರೆ.

**ಸಭಾಪತಿಯವರು:–** ಮಂತ್ರಿಗಳು ಉತ್ತರವನ್ನು ಕೊಡಬೇಕಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರೊಂದಿಗೆ ನಾವು ಹಾಗೂ ನೀವುಗಳೂ ಸಹ ಅನುಭವಿಸಬೇಕಲ್ಲವೇ?

**ಸಭಾಪತಿಯವರು:–** ನಿಮ್ಮ ಪ್ರಶ್ನೆಗೆ ಮಂತ್ರಿಗಳು ಉತ್ತರವನ್ನು ಕೊಡಬೇಕಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹಾಗಿದ್ದರೆ ಬಿಟ್ಟುಬಿಡಿ, ಎಲ್ಲವೂ ವಿಚಾರಗಳನ್ನು ನೀವೇ ಹೇಳುತ್ತೀರಿ. ನನ್ನನ್ನು ಕೇಳಿದರೆ ನಾನೇನು ಹೇಳುವುದಕ್ಕಾಗುತ್ತದೆ?

ಮಾನ್ಯ ಕಾಗೋಡು ತಿಮ್ಮಪ್ಪನವರೇ ಕಷ್ಟಪಟ್ಟು ಹೋರಾಟ ಮಾಡಿಕೊಂಡು ಬಂದು ನೀವು ಕಂದಾಯ ಮಂತ್ರಿಗಳಾಗಿದ್ದೀರಿ. 46 ವರ್ಷಗಳ ನಂತರ ಈ ರೀತಿಯ ಭೀಕರ ಬರಗಾಲ ಪರಿಸ್ಥಿತಿಯುಂಟಾಗಿದೆ. ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ಗಳೆರಡರಲ್ಲೂ ಇದೇ ಉತ್ತರವನ್ನು ಕೊಡುತ್ತಾ ಬಂದಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಇಡೀ ಕರ್ನಾಟಕ ರಾಜ್ಯದಲ್ಲಿ ಹೋದಲೆಲ್ಲಾ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಅವರನ್ನು ತೋರಿಸಿ, ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದರೆ ನಾವು ಹಣವನ್ನು ನೀಡುತ್ತೇವೆ ಎಂಬುದಾಗಿ ಹೇಳುತ್ತಿದ್ದಾರೆ. ಇಲ್ಲಿಯೂ ಸಹ ಇದೇ ಉತ್ತರವನ್ನು ನೀಡುತ್ತಿದ್ದಾರೆ. ನಿಜವಾಗಿಯೂ ಸಹ ರಾಜ್ಯದ ರೈತರ ಬಗ್ಗೆ ಈ ಸರ್ಕಾರಕ್ಕೆ ಕಳಕಳಿಯಿದ್ದರೆ ರೈತರಿಗೆ ಸಂಬಂಧಪಟ್ಟಂತೆ ಸಹಕಾರಿ ಕ್ಷೇತ್ರದಲ್ಲಿ ಬಾಕಿಯಿರುವ ಒಟ್ಟು 10,760 ಕೋಟಿ ರೂಪಾಯಿಗಳಷ್ಟು ಸಾಲವನ್ನು ಮನ್ನಾ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ನಿಮ್ಮ ಪ್ರಭಾವವನ್ನು ಬೀರಿ ಇನ್ನುಳಿದ ವಿಚಾರ ಬೇರೆ... ದೇಶದ ಪಂಜಾಬ್, ಮಹಾರಾಷ್ಟ್ರ, ಉತ್ತರ ಪ್ರದೇಶ ರಾಜ್ಯಗಳಲ್ಲಿ ಸಾಲ ಮನ್ನಾ ಮಾಡಿದ್ದರೆ ನೀವು ಏಕೆ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲ? ಸಭಾಧ್ಯಕ್ಷರಾಗಿದ್ದಂತಹ ಸಂದರ್ಭದಲ್ಲಿ ನೀವು ಹುಲಿಯ ರೀತಿಯಲ್ಲಿ ಇದ್ದಿರಿ...

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಈಗ ಶ್ರೀ ಕಾಗೋಡು ತಿಮ್ಮಪ್ಪನವರು ಇಲಿ ಹಾಗೆ ಆಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಲಿ ಅಲ್ಲ ಹುಲಿ; ಆದರೆ ಈಗ ಕಾಗದದ ಹುಲಿಯಂತೆ ಆಗಬೇಡಿ. ಇಲಿಯು ಗಣಪತಿಯ ವಾಹನವಾಗಿದೆ. ಹೀಗಾಗಿ ನಾನು ಇಲಿಯೊಂದಿಗೆ ಹೋಲಿಕೆಯನ್ನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. 10,760 ಕೋಟಿ ರೂಪಾಯಿಗಳಷ್ಟು ಸಾಲವನ್ನು ನೀವು ಮನ್ನಾ ಮಾಡಲಿಕ್ಕೆ ಆಗುತ್ತದೆಯೋ, ಇಲ್ಲವೋ? ಏಕೆಂದರೆ ಇಡೀ ರಾಜ್ಯದ ಜನ... ಏಕೆಂದರೆ ನಾವು ಬೇರೆ ರಾಜ್ಯಗಳೊಂದಿಗೆ ಹೋಲಿಕೆಯನ್ನು ಮಾಡುತ್ತೇವೆ. ಇವತ್ತಿನ ದಿವಸ ಪಂಜಾಬ್ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಕಾಂಗ್ರೆಸ್ ಸರ್ಕಾರವು ಅಲ್ಲಿನ ರೈತರ ಸಾಲವನ್ನು ಮನ್ನಾ ಮಾಡಿರುವುದು ತುಂಬಾ ಸಂತೋಷದ ವಿಚಾರವಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಕೊಟ್ಟಿರಬೇಕಾದರೆ ನಾನು ರೈತರ ಸಾಲವನ್ನು ಮನ್ನಾ ಮಾಡುತ್ತೇವೆ ಎಂಬುದಾಗಿ ಹೇಳುವುದಕ್ಕೆ ಬರುವುದಿಲ್ಲ. ನಿಮ್ಮ ಅನಿಸಿಕೆಗಳನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಈ ವಿಚಾರವನ್ನು ನಿಮಗೆ ಏಕೆ ಹೇಳಿದ್ದೇನೆಂದರೆ, ಬೇರೆ ಇನ್ನಾರೋ ಮಂತ್ರಿಗಳು ಕಂದಾಯ ಸಚಿವರಾಗಿದ್ದರೆ, ಅವರು ನೀಡುತ್ತಿದ್ದ ಇಂತಹ ಉತ್ತರವನ್ನು ನಾನು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಿದ್ದೆನು. ಶ್ರೀ ಕಾಗೋಡು ತಿಮ್ಮಪ್ಪನವರನ್ನು ನಾನು ಚಿಕ್ಕಂದಿನಿಂದ ನೋಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಬಳಿ ಹೋಗಿ ಕುಳಿತುಕೊಂಡು ರಾಜ್ಯದ ಪರಿಸ್ಥಿತಿಯನ್ನು ವಿವರಿಸಿ. ಕೇಂದ್ರ ಸರ್ಕಾರದ ವಿರುದ್ಧ ಪದೇ ಪದೇ ಆರೋಪ ಮಾಡಲಿಕ್ಕೆ ಹೋಗಬೇಡಿ. ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ಪಂಜಾಬ್ ರಾಜ್ಯ ಸರ್ಕಾರಗಳು ರೈತರ ಸಾಲವನ್ನು ಮನ್ನಾ ಮಾಡಿವೆ, ನೀವು ಏಕೆ ರೈತರ ಸಾಲವನ್ನು ಮನ್ನಾ ಮಾಡುತ್ತಿಲ್ಲ; ಮಾಡುವುದಕ್ಕೆ ತೊಂದರೆ ಏನು ಎಂದು ಮಾನ್ಯ ಕಂದಾಯ ಸಚಿವರು ಮುಖ್ಯಮಂತ್ರಿಗಳನ್ನು ಬಿಗಿಯಾಗಿ ಕೇಳುವುದಕ್ಕೆ ತೊಂದರೆ ಏನು?

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(864) 20.06.2017 MSS-RN 5.50**

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದುದು)**

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲವನ್ನು ಮನ್ನಾ ಮಾಡುತ್ತಾರೆಯೋ ಬಿಡುತ್ತಾರೆಯೋ ಅದು ಬೇರೆ. ಆದರೆ ಮಾನ್ಯ ಕಂದಾಯ ಸಚಿವರು ಮಾನ್ಯ ಮುಖ್ಯಮಂತ್ರಿಗಳನ್ನು ಆ ರೀತಿಯಾಗಿ ಬಿಗಿಯಾಗಿ ಕೇಳಿ ಸಾಲವನ್ನು ಮನ್ನಾ ಮಾಡುತ್ತಾರೆಯೇ?

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರ ಮನಸ್ಸಿನ ಅನಿಸಿಕೆಗಳನ್ನು ಮಾನ್ಯ ಮುಖ್ಯಮಂತ್ರಿಗಳ ಕಿವಿಗೆ ಹಾಕುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನನ್ನ ಮನಸ್ಸಿನ ಭಾವನೆಗಿಂತಲೂ ಮಾನ್ಯ ಕಾಗೋಡು ತಿಮ್ಮಪ್ಪನವರ ಮನಸ್ಸಿನ ಭಾವನೆಗಳೇನು ಕಡಿಮೆಯೇ? ಅವರು ರೈತರ ಪರವಾಗಿ ಕಡಿಮೆ ಹೋರಾಟವನ್ನು ಮಾಡಿಲ್ಲ, ಬಹಳಷ್ಟು ಹೋರಾಟವನ್ನು ಮಾಡಿದ್ದಾರೆ. ಅವರು ಇವತ್ತಿನ ದಿವಸ ಮಂತ್ರಿ ಮಂಡಲದಲ್ಲಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಂತ್ರಿಗಳಾಗಿ ಸರ್ಕಾರದಲ್ಲಿ ಕೆಲಸವನ್ನು ಮಾಡಿದ್ದಾರೆ. ಯಾವ ವಿಚಾರವನ್ನು ಯಾರು ಎಲ್ಲಿ ಹೇಳಬೇಕು ಎನ್ನುವುದು ಅವರಿಗೆ ಗೊತ್ತಿದೆ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅವರ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ವಿಧಾನಸಭೆಯಲ್ಲಿಯೂ ಕೂಡ ಹೇಳಿದ್ದಾರೆ, ಹಿಂದೆ ಈ ಸದನದಲ್ಲಿಯೂ ಕೂಡ ಹೇಳಿದ್ದಾರೆ. ಹಾಗಿದ್ದಾಗ ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರು ರೈತರ ಸಾಲವನ್ನು ಮನ್ನಾ ಮಾಡಿ ಎಂದು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬರುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್.ಉಗ್ರಪ್ಪನವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾವೇನು ನೋಟ್ ಪ್ರಿಂಟ್ ಮಾಡುವಂತಹ ಯಂತ್ರವನ್ನು ಇಟ್ಟುಕೊಂಡಿರುತ್ತೇವೆಯೇ ಎಂದು ಹೇಳಿದಂತಹ, ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಅವರ ಹತ್ತಿರ ಹೋಗಿ ಕುಳಿತು, ಅವರಿಗೆ ಒಪ್ಪಿಸಿ ರೈತರ 25,000 ರೂಪಾಯಿಗಳ ವರೆಗಿನ ಸಾಲವನ್ನು ಮನ್ನಾ ಮಾಡಿಸಿದ್ದೇವೆ. ಅದೇ ರೀತಿಯಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದವರು ರೈತರ ಸಾಲ ಮನ್ನಾ ಮಾಡಬೇಕೆಂದು ಕೂಗುತ್ತಿದ್ದಾಗಲೇ ಮಾನ್ಯ ಅಧ್ಯಕ್ಷರ ಹತ್ತಿರ ಮನವಿ ಮಾಡಿ, ಸದನವನ್ನು ಅರ್ಧ ಗಂಟೆ ಮುಂದೂಡಿ ಅಲ್ಲಿಯೇ ಸಚಿವ ಸಂಪುಟ ಸಭೆಯನ್ನು ಮಾಡಿ, ರೈತರ 25,000 ರೂಪಾಯಿಗಳ ವರೆಗಿನ ಸಾಲವನ್ನು ಮನ್ನಾ ಮಾಡಿದರು. ನಾನು ಅದಕ್ಕೆ ಏನು ಹೇಳುತ್ತಿದ್ದೇನೆಂದರೆ, ಕಂದಾಯ ಸಚಿವರು ಮತ್ತು ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರ ಕನಿಷ್ಠ ರೈತರು ಸಹಕಾರ ಸಂಘಗಳಲ್ಲಿ ಮಾಡಿರುವಂತಹ ಸಾಲವಾದ 10,000 ಕೋಟಿ ರೂಪಾಯಿಗಳನ್ನಾದರೂ ಮನ್ನಾ ಮಾಡುವುದಕ್ಕೆ ಸಾಧ್ಯವಾದರೆ ಅಷ್ಟನ್ನಾದರೂ ಮನ್ನಾ ಮಾಡಬೇಕು. ‘ಇಲ್ಲ, ನಮ್ಮ ಸರ್ಕಾರದ ಹತ್ತಿರ ಇಷ್ಟು ಹಣವನ್ನೂ ಕೂಡ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಅಭಿಪ್ರಾಯವನ್ನು ತಿಳಿಸುತ್ತೇನೆ’ ಎಂದು ಮಾನ್ಯ ಕಂದಾಯ ಸಚಿವರು ಹೇಳುತ್ತಿರುವುದು ನಿಜಕ್ಕೂ ಕೂಡ ಈ ಸರ್ಕಾರಕ್ಕೆ ಶೋಭೆಯನ್ನು ತರುವಂಥದ್ದಲ್ಲ. ಈ ಸರ್ಕಾರ ರೈತರ ಪರವಾಗಿಲ್ಲ. ಇಡೀ ಕರ್ನಾಟಕ ರಾಜ್ಯದ ರೈತರನ್ನು ವಿಧಾನಸೌಧಕ್ಕೆ ಕರೆದುಕೊಂಡು ಬಂದು ಮುತ್ತಿಗೆ ಹಾಕಿಸುತ್ತೇವೆ, ಸಾಲ ಮನ್ನಾ ಮಾಡಿಸುತ್ತೇವೆ. ಅದಕ್ಕೋಸ್ಕರವಾಗಿ ಈ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ, ನಾನು ಮತ್ತು ನಮ್ಮ ಪಕ್ಷದವರು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಬಿಜೆಪಿಯ ಎಲ್ಲಾ ಸದಸ್ಯರುಗಳು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)**

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಸಾಲದ ಬಗ್ಗೆಯೇ ಕೇಳುತ್ತಿದ್ದೇನೆ. ಈಗ ಎರಡು ರೀತಿಯ ಸಾಲ ಇದೆ. ಒಂದು ರೈತರು ಸಹಕಾರ ಸಂಘಗಳ ಮುಖಾಂತರ ತೆಗೆದುಕೊಂಡಿರುವಂತಹ ಸಾಲ. ಇನ್ನೊಂದು ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ವಾಣಿಜ್ಯ ಬ್ಯಾಂಕ್‌ಗಳಲ್ಲಿ ರೈತರು ಬೆಳೆ ಸಾಲವನ್ನು ಮಾಡಿರುವಂಥದ್ದು ಇದೆ. ಸಹಕಾರ ಸಂಘಗಳ ಮುಖಾಂತರ ರೈತರು ಮಾಡಿರುವಂತಹ ಸಾಲ 22% ಮಾತ್ರ ಇದೆ. ಇನ್ನು 78% ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ತೆಗೆದುಕೊಂಡಿರುವಂತಹ ಸಾಲ. 42,000 ಕೋಟಿ ರೂಪಾಯಿಗಳ ರೈತರ ಸಾಲ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದಿರುವುದಾಗಿದ್ದು, 10,000 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೊತ್ತದ ಸಾಲವನ್ನು ರೈತರು ಸಹಕಾರ ಸಂಘಗಳಲ್ಲಿ ಮಾಡಿರುವಂಥದ್ದು ಸಹ ಬಾಕಿ ಇದೆ. ತಮ್ಮ ಮುಖಾಂತರ ಕೇಳುವುದೇನೆಂದರೆ, ದಯಮಾಡಿ ಸಹಕಾರ ಸಂಘಗಳ ಸಾಲವನ್ನಾದರು ರಾಜ್ಯ ಸರ್ಕಾರ ಅಕಸ್ಮಾತ್ ಮನ್ನಾ ಮಾಡಿದರೆ. ಇನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ/ವಾಣಿಜ್ಯ ಬ್ಯಾಂಕ್‌ಗಳಲ್ಲಿ ರೈತರು ಸಾಲ ಮಾಡಿರುವುದು ಅದನ್ನು ಮನ್ನಾ ಮಾಡುವುದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದು. ರಾಷ್ಟ್ರೀಕೃತ ಬ್ಯಾಂಕ್/ವಾಣಿಜ್ಯ ಬ್ಯಾಂಕ್‌ಗಳಲ್ಲಿರುವ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವುದಕ್ಕೆ ನನಗನ್ನಿಸಿದಂತೆ ಎರಡೂ ಸದನಗಳು ಸರ್ವಾನುಮತದಿಂದ ಒಂದು ನಿರ್ಣಯವನ್ನು ಪಾಸ್ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕ್/ವಾಣಿಜ್ಯ ಬ್ಯಾಂಕ್‌ಗಳಲ್ಲಿರುವಂತಹ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುವಂತಹ ಪ್ರಯತ್ನ ಮಾಡಬೇಕು. ಈ ವಿಚಾರದಲ್ಲಿ ಎರಡು ಸದನಗಳಲ್ಲಿ ಒಂದು ಸರ್ವಾನುಮತದ ನಿರ್ಣಯವನ್ನು ತರುವುದಕ್ಕೆ ಸರ್ಕಾರ ಚಿಂತನೆ ಮಾಡಬೇಕು.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಪ್ರಮುಖವಾಗಿ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಚರ್ಚೆಯಾಗುತ್ತಿದೆ. ಚರ್ಚೆ ಮೇಲೆ ಮಾನ್ಯ ಕಂದಾಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಟ್ಟಿದ್ದಾರೆ. ನಾವು ಒಂದು ಪ್ರಾದೇಶಿಕ ಪಕ್ಷವಾಗಿ ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಸಹಕಾರ ಸಂಘಗಳಲ್ಲಿ ರೈತರು ಮಾಡಿರುವಂತಹ ಅಲ್ಪಾವಧಿ 14,300 ಕೋಟಿ ರೂಪಾಯಿಗಳು ಮಾತ್ರ. ರಾಷ್ಟ್ರೀಕೃತ ಬ್ಯಾಂಕ್/ವಾಣಿಜ್ಯ ಬ್ಯಾಂಕ್‌ಗಳಲ್ಲಿ ರೈತರು ಮಾಡಿರುವಂತಹ ಸಾಲ ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ಹೇಳಿದರೆ ತಪ್ಪಾಗುತ್ತದೆ. ವಾಣಿಜ್ಯ ಬ್ಯಾಂಕ್‌ಗಳಲ್ಲಿ ಸಾಲವನ್ನು ಮಾಡಿರುವವರು ನಮ್ಮ ರಾಜ್ಯದ ರೈತರೇ. ನಮ್ಮ ರಾಜ್ಯದ ರೈತರು ಸಹಕಾರ ಸಂಘಗಳ ಮುಖಾಂತರ ಮತ್ತು ರಾಷ್ಟ್ರೀಕೃತ ಬ್ಯಾಂಕ್/ವಾಣಿಜ್ಯ ಬ್ಯಾಂಕ್ ಈ ಎಲ್ಲ ಮೂಲಗಳಿಂದ ಮಾಡಿರುವಂತಹ ಬೆಳೆ ಸಾಲ ಸುಮಾರು 56,000 ಕೋಟಿ ರೂಪಾಯಿಗಳಾಗುತ್ತದೆ. ಅದಕ್ಕೆ ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಸರ್ಕಾರ ಒಂದು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಬೇಕು. ಕಳೆದ ಸಾಲಿನಲ್ಲಿ ಸುಮಾರು 1,500 ಜನ ರೈತರು ಸಾಲವನ್ನು ತೀರಿಸುವುದಕ್ಕಾಗದೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ರೈತರ ಸಾಲವನ್ನು ಮನ್ನಾ ಮಾಡುವ ತೀರ್ಮಾನಕ್ಕೆ ಬರಬೇಕು ಎನ್ನುವಂತಹ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾತನಾಡುವಂತಹ ಸಂದರ್ಭದಲ್ಲಿ ನಮಗೆ ಹಣಕಾಸಿನ ತೊಂದರೆ ಇದೆ. ಕೇಂದ್ರ ಸರ್ಕಾರ ಅರ್ಧ ಮೊತ್ತವನ್ನು ಭರಿಸಿದರೆ ನಾವು ಇನ್ನುಳಿದ ಅರ್ಧ ಮೊತ್ತವನ್ನು ಭರಿಸಿ ರೈತರ ಸಾಲ ಮನ್ನಾ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಮುಂಚೆ ನಮ್ಮ ರಾಜ್ಯ ಸರ್ಕಾರ ನಮ್ಮ ರೈತರು ಸಹಕಾರ ಸಂಘಗಳಲ್ಲಿ ಮಾಡಿರುವಂತಹ ಅಲ್ಪಾವಧಿ ಸಾಲವನ್ನು ಅಂದರೆ ಬೆಳೆ ಸಾಲ ಎಂದು ನಾವೇನು ಕರೆಯುತ್ತೇವೆ, ಆ 14,300 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವ ತೀರ್ಮಾನವನ್ನು ತೆಗೆದುಕೊಂಡರೆ, ಇವತ್ತು ಆಡಳಿತ ಪಕ್ಷದ ಸದಸ್ಯರು ಏನು ಎರಡೂ ಸದನಗಳು ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಸರ್ವಾನುಮತದಿಂದ ನಿರ್ಣಯವನ್ನು ಮಾಡಿ, ಅದನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಬೇಕೆಂದು ಹೇಳಿದ್ದಾರೆ. ಅದಕ್ಕೆ ನಾವು ಸಹಾ endorse ಮಾಡುತ್ತೇವೆ. ಇಲ್ಲಿರತಕ್ಕಂತಹ ಪ್ರಶ್ನೆ ಏನೆಂದರೆ, ರಾಜ್ಯ ಸರ್ಕಾರ ತನ್ನ ಕೆಲಸವನ್ನು ಜವಾಬ್ದಾರಿಯಿಂದ ಮಾಡದೇ, ಕೇಂದ್ರ ಸರ್ಕಾರದ ಕಡೆಗೆ ಕೈ ತೋರಿಸುವಂಥದ್ದು. ಕೇಂದ್ರ ಸರ್ಕಾರದ ಹಣಕಾಸಿನ ಸಚಿವರು ನಾವು ರೈತರ ಸಾಲವನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುತ್ತಿರುವುದರಿಂದ ನಮ್ಮ ರಾಜ್ಯದ ರೈತರು ಬಲಿಪಶುಗಳಾಗುತ್ತಿದ್ದಾರೆ. ಅದುದರಿಂದ ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ರಾಜ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿ, ನಮ್ಮ ರಾಜ್ಯದ ರೈತರ ಸಾಲ ಮನ್ನಾ ಮಾಡುವ ತೀರ್ಮಾನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬರಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಪ್ರತಿ ರೈತರ 25,000 ರೂಪಾಯಿಗಳ ವರೆಗೆ ಸಾಲವನ್ನು ಮಾಡಿದ್ದರು. ಆದರೆ ಅದನ್ನು ಇಂಪ್ಲಿಮೆಂಟ್ ಮಾಡಿದ್ದು ನಾವು ಎಂದು ಕಾಂಗ್ರೆಸ್ ಪಕ್ಷದವರು ಹೇಳಿದರು. ಚುನಾವಣೆ ಹತ್ತಿರ ಬಂದಾಗ ರೈತರ ಸಾಲವನ್ನು ಮಾಡಿದ್ದೇವೆಂದು ಇವರು ಘೋಷಣೆ ಮಾಡುವುದು, ನಂತರ ನಮ್ಮ ಸರ್ಕಾರ ಬಂದ ಮೇಲೆಯೂ ಇಂಪ್ಲಿಮೆಂಟ್ ಮಾಡುವುದು. ದಯಮಾಡಿ ಇದಕ್ಕೆ ಅವಕಾಶವನ್ನು ಕೊಡಬೇಡಿ. ನಿಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕೆ ನಾವು ಕ್ರೆಡಿಟ್ ಕೊಡುವುದಕ್ಕೆ ತಯಾರಿದ್ದೇವೆ. ರೈತರ ಸಾಲವನ್ನು ಈಗಲೇ ಮಾಡಿ ನಿಮಗೆ ಅಭಿನಂದನೆಯನ್ನು ಕೊಡುವುದಕ್ಕೆ ತಯಾರಿದ್ದೇವೆ. ದಯಮಾಡಿ ರೈತರ ಸಾಲ ಮನ್ನಾ ಮಾಡಿ. 14,300 ಕೋಟಿ ರೂಪಾಯಿಗಳು ಏನು ಸಹಕಾರ ಸಂಘಗಳಲ್ಲಿ ರೈತರ ಸಾಲ ಬಾಕಿ ಇದೆ ಇದನ್ನು ಮನ್ನಾ ಮಾಡುವ ತೀರ್ಮಾನಕ್ಕೆ ಬನ್ನಿ. ನೆನ್ನೆಯ ದಿವಸ ಜಿಎಸ್‌ಟಿ ಬಿಲ್ ಪಾಸ್ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಜಿಎಸ್‌ಟಿ ಬಂದಮೇಲೆ ರಾಜ್ಯ ಸರ್ಕಾರದ ಆದಾಯ ಹೆಚ್ಚಾಗುತ್ತದೆಂದು ಹೇಳಿದ್ದಾರೆ. ರೈತರ ಸಾಲವನ್ನು ಮನ್ನಾ ಮಾಡಿದರೆ ನಮ್ಮ ಪಕ್ಷದಿಂದ ನಾವೇ ಮೊದಲು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ನಮಗೆ ಏನೆಂದರೆ, ರೈತರ ಪ್ರಾಣ ಉಳಿಯಬೇಕು. ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಂತಹ ಸಮಯದಲ್ಲಿ ಸರ್ಕಾರ ಇಚ್ಛಾಶಕ್ತಿಯನ್ನು ತೋರಿಸಬೇಕಾಗುತ್ತದೆ. ಕೇಂದ್ರ ಸರ್ಕಾರದ ತಪ್ಪನ್ನು ಒಪ್ಪಿಕೊಳ್ಳುತ್ತೇವೆ. ದಯಮಾಡಿ ರಾಜ್ಯ ಸರ್ಕಾರ ರೈತರು ಸಹಕಾರ ಸಂಘಗಳಲ್ಲಿ ಮಾಡಿರುವಂತಹ ಅಲ್ಪಾವಧಿ ಬೆಳೆ ಸಾಲವನ್ನು ಮನ್ನಾ ಮಾಡುವಂತಹ ಘೋಷಣೆಯನ್ನು ಇದೇ ಅಧಿವೇಶನದಲ್ಲಿ ಮಾಡಬೇಕೆಂದು ನಮ್ಮ ಪಕ್ಷದ ಪರವಾಗಿ ರಾಜ್ಯ ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಆದರ ಮೇಲೆ ನಾನು ಹೇಳುವುದಕ್ಕೆ ಬರುವುದಿಲ್ಲ.

**ಉಪ ಸಭಾಪತಿಯವರು:–** ಈಗ ಬರಗಾಲದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಮುಕ್ತಾಯಗೊಂಡಿದೆ.

**11. ಚುನಾವಣಾ ಪ್ರಸ್ತಾವಗಳು**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ,

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 259(1)ನೇ ನಿಯಮದ ಅನುಸಾರವಾಗಿ ಈ **ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ** ಒಂಭತ್ತು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 250(1)ನೇ ನಿಯಮದ ಅನುಸಾರವಾಗಿ ಈ ಸಭೆ **ಹಕ್ಕುಬಾಧ್ಯತಾ ಸಮಿತಿಗೆ** ಏಳು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 349(2)ನೇ ಉಪನಿಯಮದ ಅನುಸಾರವಾಗಿ ಈ **ವಸತಿ ಸಮಿತಿಗೆ** ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಈ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 261(1)ನೇ ನಿಯಮದ ಅನುಸಾರವಾಗಿ ಈ ಸಭೆ **ಸದಸ್ಯರುಗಳ ಖಾಸಗಿ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಗೆ** ಎಂಟು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಉ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 245(1)ನೇ ನಿಯಮದ ಅನುಸಾರವಾಗಿ ಈ **ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ** ಏಳು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಊ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 254(1)ನೇ ನಿಯಮದ ಅನುಸಾರವಾಗಿ ಈ **ಅಧೀನ ಶಾಸನ ರಚನಾ ಸಮಿತಿಗೆ** ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಋ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 248ನೇ ನಿಯಮದ ಅನುಸಾರವಾಗಿ ಈ **ಸಾರ್ವಜನಿಕ ಉದ್ಯಮಗಳ ಸಮಿತಿಗೆ** ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಎ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 264ನೇ ನಿಯಮದ ಅನುಸಾರವಾಗಿ ಈ **ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ** ಐದು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 267ನೇ ನಿಯಮದ ಅನುಸಾರವಾಗಿ ಈ **ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಗೆ** ಏಳು ಜನ ಸದಸ್ಯರನ್ನು ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ವರ್ಗಾಯಿಸಬಹುದಾದ ಏಕಮತದ ಮೂಲಕ ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

(ಮುಂದು)

(865) 20.06.2017 06.00 SV-VK

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶ್ರೀಯುತರುಗಳಾದ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ, ಎಂ.ಕೆ.ಪ್ರಾಣೇಶ್, ಭಾನುಪ್ರಕಾಶ್, ಆರ್.ಪ್ರಸನ್ನ ಕುಮಾರ್ ಹಾಗೂ ಇತರರು ಗ್ರಾಮ ಪಂಚಾಯ್ತಿಗಳಲ್ಲಿನ ತೆರಿಗೆ ಬಾಕಿ, ಬಾಪೂಜಿ ಸೇವಾ ಕೇಂದ್ರಗಳನ್ನು ಶಕ್ತಿಯುತಗೊಳಿಸುವುದು, ಸಿಬ್ಬಂದಿಗಳ ವೇತನ ಹಾಗೂ ಪಿಡಿಓಗಳ ಹುದ್ದೆಗಳನ್ನು ಅಪ್‌ಗ್ರೇಡ್ ಗೇರಿಸುವುದು ಇತ್ಯಾದಿ ವಿಷಯಗಳ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಉತ್ತರಗಳನ್ನು ಒದಗಿಸಿಕೊಡಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಪರವಾಗಿ ಕಂದಾಯ ಮಂತ್ರಿಗಳು ಉತ್ತರಿಸುತ್ತಾರೆಯೇ? ವಾಸ್ತವಿಕವಾಗಿ ನಾನು ಹೇಳಿದ್ದು, ಅವರೇ ಇದಕ್ಕೆ ಉತ್ತರ ಕೊಡುವುದಾದರೆ ನಾನು ಚರ್ಚೆಯನ್ನು ಪ್ರಾರಂಭ ಮಾಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕೆಳಮನೆಯಲ್ಲಿ ಮಸೂದೆಯನ್ನು ಮಂಡಿಸುತ್ತಿದ್ದಾರೆ.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೆ, ಮುಂದಿನ ವಿಷಯವನ್ನು ತೆಗೆದುಕೊಂಡಲ್ಲಿ ಬೇರೆ ಸಚಿವರು ಉತ್ತರಿಸಲು ಸಿದ್ಧರಿದ್ದಾರೆ.

**ಉಪ ಸಭಾಪತಿಯವರು:–** ಬೇರೆ ಸಚಿವರು ಸಿದ್ಧರಿರುವುದಲ್ಲ. ಮಾನ್ಯ ಸಚಿವರೆ, ಇದು ಸತತವಾಗಿ 5 ದಿನಗಳಿಂದ ಕಾರ್ಯ ಕಲಾಪಗಳ ಪಟ್ಟಿಯಲ್ಲಿ ಬರುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಮಂತ್ರಿಗಳಿಗೆ ಬಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ತರಿಸುವ ಸೌಜನ್ಯತೆಯೇ ಇಲ್ಲ ಎಂದರೆ ಸದನ ಹೇಗೆ ನಡೆಯಬೇಕು? ಮಾನ್ಯ ಸದಸ್ಯರು ಇದನ್ನು ಏಕೆ ಕಳುಹಿಸುತ್ತಾರೆ?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಅದು ಏನೆಂದರೆ ಒಟ್ಟಿಗೆ ಕೆಳಮನೆಯಲ್ಲಿಯೂ ಇದೆ; ಇಲ್ಲಿಯೂ ಇದೆ. ಈಗ ನನ್ನನ್ನು ಅಲ್ಲಿಗೆ ಕರೆಯುತ್ತಿದ್ದಾರೆ. ಹೀಗಾಗಿ ತೊಂದರೆಯಾಗಿದೆ. ನಾನು ಹೋಗಿ ಅವರನ್ನು ಕಳಿಸಿಕೊಡುತ್ತೇನೆ.

**ಉಪ ಸಭಾಪತಿಯವರು:-** ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಡವಾದರೂ ಸಹ ಪರವಾಗಿಲ್ಲ, ಕಾಯುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಪೂಜಾರಿ ಅವರೆ, ಅವರು ಬರುವ ತನಕ ಇಲ್ಲಿ ಕಾಯುವುದಕ್ಕಾಗುವುದಿಲ್ಲ. ಆದ್ದರಿಂದ ನಾವೀಗ ಗಮನ ಸೆಳೆಯುವ ಸೂಚನೆಯಡಿಯಲ್ಲಿನ ಮುಂದಿನ ವಿಷಯಕ್ಕೆ ಹೋಗೋಣ.

12. <u>**ಗಮನ ಸೆಳೆಯುವ ಸೂಚನೆ**</u>

**"ಸರ್ಕಾರದ ಹಾಗೂ ಖಾಸಗಿಯವರಿಂದ ನಡೆಸುತ್ತಿರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳು ಹಾಗೂ ಅವುಗಳು ಸಂಸ್ಕರಣೆ ಮಾಡುತ್ತಿರುವ ಘನತ್ಯಾಜ್ಯದ ಪ್ರಮಾಣ ಹಾಗೂ ವಿಲೇವಾರಿಗಾಗಿ ಮೀಸಲಿಟ್ಟಿರುವ ಹಣದ ಕುರಿತು."**

\- - -

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಸರ್ಕಾರದ ಹಾಗೂ ಖಾಸಗಿಯವರಿಂದ ನಡೆಸುತ್ತಿರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳು ಹಾಗೂ ಅವುಗಳು ಸಂಸ್ಕರಣೆ ಮಾಡುತ್ತಿರುವ ಘನತ್ಯಾಜ್ಯದ ಪ್ರಮಾಣ ಹಾಗೂ ವಿಲೇವಾರಿಗಾಗಿ ಮೀಸಲಿಟ್ಟಿರುವ ಹಣದ ಕುರಿತು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಈಶ್ವರ ಬಿ. ಖಂಡ್ರೆ (ಪೌರಾಡಳಿತ ಸಚಿವರು):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಲಾಗಿದೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಬೆಂಗಳೂರು ನಗರವೂ ಸೇರಿದಂತೆ ರಾಜ್ಯದ 30 ಜಿಲ್ಲೆಗಳಲ್ಲಿ ಈ ಘನತ್ಯಾಜ್ಯ ಘಟಕಗಳು ಸರ್ಕಾರ ಮತ್ತು ಖಾಸಗಿಯವರಿಂದ ಹೇಗೆ ನಡೆಯುತ್ತಿವೆ? ಇದರ ವೆಚ್ಚ ಯಾರು ನಿರ್ವಹಣೆ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಆದರೆ ಇವರು ಕೇವಲ ಏಳು ಜಿಲ್ಲೆಗಳ ಮಾಹಿತಿಗಳನ್ನು ಕೊಟ್ಟಿರುತ್ತಾರೆ. ಆ 7 ಜಿಲ್ಲೆಗಳಲ್ಲಿ ಸುಮಾರು 919 ಸಂಸ್ಕರಣಾ ಘಟಕಗಳಿದ್ದು, ಅಲ್ಲಿರುವ ಬಹುತೇಕ ಎಲ್ಲಾ ಖಾಸಗಿಯವರಿಂದ ನಿರ್ವಹಣೆ ಮಾಡಲಾಗುತ್ತಿವೆ. ಉಡುಪಿ, ಗೋಕಾಕ್, ಕುಂದಾಪುರ ಮೂರು ಬಿಟ್ಟರೆ ಮಿಕ್ಕವೆಲ್ಲಾ ಖಾಸಗಿ ಎಂದು ಹೇಳಿದ್ದಾರೆ. ಈಗ ವಿಶ್ವದಲ್ಲಿ ಸುಮಾರು 700 ಕೋಟಿ ಜನಸಂಖ್ಯೆ ಇದೆ. ಬೆಂಗಳೂರಿನಲ್ಲಿಯೂ ಸುಮಾರು 1 – 1.5 ಕೋಟಿಯಷ್ಟು ಜನಸಂಖ್ಯೆ ಇದೆ. ಸುಮಾರು 800 ಚ.ಕಿ.ಮೀ. ಪ್ರದೇಶದಲ್ಲಿ ಬೆಂಗಳೂರು ಹರಡಿದೆ. ಬೆಂಗಳೂರಿನಲ್ಲಿ ಪ್ರತಿನಿತ್ಯ ಸುಮಾರು 3,500 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಈ 3,500 ಟನ್ ತ್ಯಾಜ್ಯವನ್ನು ಯಾವ ರೀತಿ ನಿರ್ವಹಣೆ ಮಾಡಲಾಗುತ್ತಿದೆ; ಇದರ ವಿಲೇವಾರಿಗೆ ಆಗುವಂತಹ ವೆಚ್ಚವನ್ನು ಯಾವುದರಿಂದ ಭರಿಸಲಾಗುತ್ತಿದೆ; ಇದನ್ನು ನಿರ್ವಹಣೆ ಮಾಡುವಂತಹ ಸಂಘ ಸಂಸ್ಥೆಗಳು ಯಾವುವು? ಆ ಬೇಸ್‌ನಲ್ಲಿ ಎಲ್ಲಿ segregation ಮಾಡುತ್ತಿದ್ದಾರೆ; ಎಲ್ಲಿ ವಿಲೇವಾರಿ ಮಾಡುತ್ತಿದ್ದಾರೆ; ಅದಕ್ಕೆ ತಗಲುವ ವೆಚ್ಚ ಎಷ್ಟು? 2016ರ ನಿಯಮಗಳ ಅಡಿಯಲ್ಲಿ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಣೆ ಮಾಡಲು 189 ಒಣತ್ಯಾಜ್ಯ ಕೇಂದ್ರಗಳನ್ನು ಬಿಬಿಎಂಪಿಯಿಂದ ಸ್ಥಾಪಿಸಲಾಗಿದೆ. ತ್ಯಾಜ್ಯ ಉತ್ಪಾದನೆಯಾಗುವಂತಹ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಕಲ್ಯಾಣ ಮಂಟಪಗಳು, ಅಪಾರ್ಟ್‌ಮೆಂಟ್‌ಗಳು ಉತ್ಪಾದನೆ ಮಾಡುವ ತ್ಯಾಜ್ಯವನ್ನು ಹೇಗೆ ವಿಲೇವಾರಿ ಮಾಡಲಾಗುತ್ತಿದೆ? ಅದರ ಮೇಲೆ ಸರ್ಕಾರಕ್ಕಿರುವಂತಹ ಅಥವಾ ಸ್ಥಳೀಯ ಸಂಸ್ಥೆಗಳಿಗಿರುವಂತಹ ನಿಯಂತ್ರಣವಾದರೂ ಏನು?

(ಮುಂದು)

(866) 20.06.2017 6.10 RC-VK

**ಶ್ರೀ ವಿ.ಎಸ್.ಉಗ್ರಪ್ಪ(ಮುಂದು)**

ಈ ರೀತಿ ಬೆಂಗಳೂರು ನಗರದಲ್ಲಿ ಸುಮಾರು 7 ಕಡೆ ವಿಲೇವಾರಿಗೋಸ್ಕರ ಸ್ಥಳಗಳನ್ನು ನಿಗದಿ ಮಾಡಿದ್ದಾರೆ. ಈಗ 13 ಸ್ಥಳಗಳಲ್ಲಿ Biomethanation ಘಟಕಗಳನ್ನು ಸ್ಥಾಪನೆ ಮಾಡಿದ್ದಾರೆ. ಅದರಲ್ಲಿ ಈಗ 11 ಘಟಕಗಳು ಮಾತ್ರ ನಡೆಯುತ್ತಿವೆ. 2016ರಲ್ಲಿ ಉಚ್ಚ ನ್ಯಾಯಾಲಯದ Writ Petition No. 24709/2012 ರ ಪ್ರಕಾರ clean-up marshals ಇದಕ್ಕೆ ಏನೆಲ್ಲಾ ಮಾಡಬೇಕೆಂದು directions ಕೊಟ್ಟಿದ್ದಾರೆ. ಅದಕ್ಕೆ ವಾರ್ಷಿಕ ಸುಮಾರು 7 ಕೋಟಿ 66 ಲಕ್ಷ 27 ಸಾವಿರದ 725 ರೂಪಾಯಿಗಳ ವೆಚ್ಚ ಮಾಡುವುದಕ್ಕೆ ನಿಗದಿಪಡಿಸಲಾಗಿತ್ತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಉಗ್ರಪ್ಪನವರು ಗಮನ ಸೆಳೆಯುವ ಸೂಚನೆಯಲ್ಲಿ ರಾಜ್ಯದಲ್ಲಿ ಘನತ್ಯಾಜ್ಯ ಸಂಸ್ಕರಣಾ ಘಟಕಗಳು ಹಾಗೂ ಅವುಗಳು ಸಂಸ್ಕರಣೆ ಮಾಡುತ್ತಿರುವ ಘನತ್ಯಾಜ್ಯದ ಪ್ರಮಾಣ ಹಾಗೂ ವಿಲೇವಾರಿಗಾಗಿ ಮೀಸಲಿಟ್ಟಿರುವ ಹಣದ ಬಗ್ಗೆ ಕೇಳಿದ್ದಾರೆ. ಆದರೆ ಮಾನ್ಯ ಸಚಿವರು ಉತ್ತರ ಕೊಡಬೇಕಾದರೆ ಪ್ರಸ್ತುತ ರಾಜ್ಯದಲ್ಲಿ 130 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಮುಖವಾಗಿ 7 ನಗರ ಸ್ಥಳೀಯ ಸಂಸ್ಥೆಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ಬರುತ್ತಿರುವಂತಹ ಸಂದೇಹವೇನೆಂದರೆ, ಮಾನ್ಯ ಸದಸ್ಯರು ಬೆಂಗಳೂರಿನ ಬಗ್ಗೆ ಉಲ್ಲೇಖ ಮಾಡಿದ್ದರು, ಮಾನ್ಯ ಸಚಿವರು 130 ಸಂಸ್ಕರಣಾ ಘಟಕಗಳಲ್ಲಿ ಕೇವಲ 7 ಪ್ರಮುಖ ಸಂಸ್ಕರಣಾ ಘಟಕಗಳ ಬಗ್ಗೆ ಮಾತ್ರ ಹೇಳಿದ್ದಾರೆ. ಆದರೆ 130 ಸಂಸ್ಕರಣಾ ಘಟಕಗಳ ಬಗ್ಗೆಯೂ ಸಹ ಮಾಹಿತಿ ನೀಡಬೇಕಾಗಿತ್ತು. ಏಕೆಂದರೆ ಮಾನ್ಯ ಸದಸ್ಯರು ಇಡೀ ರಾಜ್ಯದ ಬಗ್ಗೆ ಕೇಳಿದ್ದಾರೆ. ಇದರಲ್ಲಿ ಬೆಂಗಳೂರನ್ನೇ ಬಿಟ್ಟಿದ್ದಾರೆ. ಇದಕ್ಕೆ ಏನು ಕಾರಣ?

**ಶ್ರೀ ಈಶ್ವರ್ ಖಂಡ್ರೆ(ಪೌರಾಡಳಿತ ಸಚಿವರು):–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಸುಮಾರು 775 ಸ್ಥಳೀಯ ಸಂಸ್ಥೆಗಳಿವೆ. ಬಿಬಿಎಂಪಿ ಒಂದು ಹಾಗೂ ಹತ್ತು ಮಹಾನಗರ ಪಾಲಿಕೆಗಳೇನಿವೆ ಅವು ನನ್ನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಪೌರಾಡಳಿತ ವ್ಯಾಪ್ತಿಯಲ್ಲಿ 265 ಸ್ಥಳೀಯ ಸಂಸ್ಥೆಗಳು ಬರುತ್ತವೆ. ಆ 265 ಸ್ಥಳೀಯ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ನಾನು ಮಾನ್ಯ ಗೌರವಾನ್ವಿತ ಸದಸ್ಯರಿಗೆ ಕೊಟ್ಟಿದ್ದೇನೆ. ಬೆಂಗಳೂರಿನ ಮಾಹಿತಿ ನನ್ನ ಬಳಿ ಇಲ್ಲ. ಏಕೆಂದರೆ ಬಿಬಿಎಂಪಿಗೆ ಮಾನ್ಯ ಕೆ.ಜೆ.ಜಾರ್ಜ್ ಅವರು ನಗರಾಭಿವೃದ್ಧಿ ಸಚಿವರಾಗಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಇಲ್ಲಿ ಬಂದಿರುವಂತಹ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿರುವಂತಹ 130 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕೇವಲ 7 ನಗರ ಸ್ಥಳೀಯ ಸಂಸ್ಥೆಗಳ ಹೆಸರುಗಳನ್ನು ಮಾತ್ರ ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರು ಇಡೀ ರಾಜ್ಯದ ಬಗ್ಗೆ ಗಮನ ಸೆಳೆದಿದ್ದಾರೆ.

**ಶ್ರೀ ಈಶ್ವರ್ ಖಂಡ್ರೆ:–** ಮಾನ್ಯ ಸಭಾಪತಿಯವರೆ, ನಾನು ಕೊಟ್ಟಿರುವಂತಹ 130 ರಲ್ಲಿ ರಾಜ್ಯದಲ್ಲಿ ಈಗ ಸುಮಾರು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಿದ್ದಾರೆ. ಸುಮಾರು 115 ಪುರಸಭೆಗಳಿವೆ. ಮತ್ತು 10 ಮಹಾನಗರ ಪಾಲಿಕೆಗಳಿವೆ. ಸುಮಾರು 27 ನಗರ ಸಭೆಗಳಿವೆ. ಸುಮಾರು 89 ಪಟ್ಟಣ ಪಂಚಾಯಿತಿಗಳಿವೆ. ಅಂದರೆ ಇದರಲ್ಲಿ ಮೇಲ್ದರ್ಜೆಗೇರಿಸಲ್ಪಟ್ಟಿರುವ ಗ್ರಾಮ ಪಂಚಾಯಿತಿಗಳು ಸಹ ಸೇರಿವೆ. ಇದೆಲ್ಲಾ ಸೇರಿಸಿದರೆ ಸುಮಾರು 275 ಸ್ಥಳೀಯ ಸಂಸ್ಥೆಗಳಿವೆ. ಇದರಲ್ಲಿ 265 ಸ್ಥಳೀಯ ಸಂಸ್ಥೆಗಳು

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನನ್ನ ವ್ಯಾಪ್ತಿಗೆ ಬರುತ್ತವೆ. ಈ ಸ್ಥಳೀಯ ಸಂಸ್ಥೆಗಳಲ್ಲಿ ಹೊಸದಾಗಿ ಏನು ಮೇಲ್ದರ್ಜೆಗೇರಿಸಿದಂತಹ ಸುಮಾರು 89 ಪಟ್ಟಣ ಪಂಚಾಯಿತಿಗಳಿವೆ, ಅವೆಲ್ಲಾ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿ ಆಗಿದ್ದಂತಹ ಸ್ಥಳೀಯ ಸಂಸ್ಥೆಗಳು. ಅದರಲ್ಲಿ ಇನ್ನೂ ಯಾವುದೇ ಘನತ್ಯಾಜ್ಯ ವಿಲೇವಾರಿ ಮಾಡುವಂಥದ್ದು, land fill site ಗಳಲ್ಲಿ ಇರುವಂಥದ್ದು, ಅದರ ಬಗ್ಗೆ ಇನ್ನೂ ಸಹ ಯಾವುದೇ ರೀತಿಯಾದಂತಹ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ಈಗಿರುವಂತಹ ನಗರ ಪಾಲಿಕೆಗಳು ಮತ್ತು ಪುರಸಭೆಗಳೇನಿವೆ, ಅದರಲ್ಲಿ ಈಗ ಹಂತ ಹಂತದಲ್ಲಿ ಅಂದರೆ, ಈಗ ಸ್ವಚ್ಛ ಭಾರತ ಮಿಷನ್ ಬಂದಮೇಲೆ ವ್ಯವಸ್ಥಿತವಾದ ರೀತಿಯಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕೆಂದು ಹೇಳುತ್ತಿದ್ದೇವೆ. ಆದುದರಿಂದ ವಿಸ್ತೃತವಾದಂತಹ ಒಂದು ಯೋಜನಾ ವರದಿಯನ್ನು ತಯಾರು ಮಾಡುವುದಕ್ಕೆ ಈಗ ನಾವು ಕ್ರಮ ಕೈಗೊಂಡಿದ್ದೇವೆ. ಆದುದರಿಂದ ಈಗ 130 ಸ್ಥಳೀಯ ಸಂಸ್ಥೆಗಳನ್ನು ಏನು ಕೊಡಲಾಗಿದೆ, ಅವುಗಳಿಗೆ DPR (Detailed Project Report) (ವಿಸ್ತೃತ ಯೋಜನೆಯನ್ನು) ತಯಾರು ಮಾಡಲು ನಾವು ಕ್ರಮ ಜರುಗಿಸುತ್ತಿದ್ದೇವೆ. ಅದಕ್ಕೆ ಯಾರು ಮುಂದೆ ಬಂದು DPR ಅನ್ನು ನಮ್ಮ ಪೌರಾಡಳಿತ ನಿರ್ದೇಶನಾಲಯಕ್ಕೆ ಕಳುಹಿಸಿಕೊಟ್ಟಿದ್ದಾರೆ, ಸ್ಥಳೀಯ ಮಟ್ಟದಲ್ಲಿ ನಮ್ಮ ತಜ್ಞರ ಒಂದು High Level Committee ಇದೆ. ಮಾನ್ಯ ಮುಖ್ಯ ಕಾರ್ಯದರ್ಶಿಯವರು ಅದರ ಅಧ್ಯಕ್ಷರಾಗಿದ್ದಾರೆ. ನಮ್ಮ ಕಾರ್ಯದರ್ಶಿ ಅದಕ್ಕೆ ಸಂಯೋಜನೆ ಮಾಡುತ್ತಾರೆ. ಅದೆಲ್ಲವನ್ನೂ ಪರಿಶೀಲನೆ ಮಾಡಿ ಈಗೇನು DPR ತಯಾರು ಮಾಡಿದ್ದಾರೆ, ಅದು feasible ಇದೆಯೇ ಅಥವಾ ಇಲ್ಲವೆ? ಈ ವಿಸ್ತೃತ ಯೋಜನಾ ವರದಿಯಲ್ಲಿ ಅಂದಾಜು ಪಟ್ಟಿಯನ್ನು ತಯಾರು ಮಾಡಿ ಕಳುಹಿಸಿದ್ದಾರೆ. ಯಾವ ರೀತಿಯಲ್ಲಿ ವಿಲೇವಾರಿ ಮಾಡುತ್ತಾರೆ, ಈ ವಿಲೇವಾರಿ ಮಾಡುವಂಥದ್ದರ ಬಗ್ಗೆ ಮಾನ್ಯ ಉಗ್ರಪ್ಪನವರು ಹೇಳಿದ್ದರು. ಅದರಲ್ಲಿ base ನಲ್ಲಿಯೇ segregate ಮಾಡುವಂಥದ್ದು, dry waste ಏನಿದೆ, wet waste ಏನಿದೆ, ತಕ್ಷಣ ಅದನ್ನು ಸಾಗಾಣಿಕೆ ಮಾಡುವಂಥದ್ದು, ಅನಂತರ ಅದನ್ನು process ಮಾಡುವಂಥದ್ದು. ಇದೆಲ್ಲವನ್ನೂ ನಾವು ನೋಡುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 5 ವರ್ಷದಲ್ಲಿ ಇದಕ್ಕಾಗಿ ಆಗಿರುವಂತಹ ಖರ್ಚಿನ ಬಗ್ಗೆ ಕೇಳಿದ್ದಾರೆ. ಆ ಮಾಹಿತಿಯನ್ನು ಕೊಟ್ಟಿಲ್ಲ, ಅದೇ ರೀತಿ ಎಷ್ಟು ಉಳಿತಾಯ ಆಗಿದೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಸಹ ಮಾಹಿತಿ ಕೊಟ್ಟಿಲ್ಲ. ಮಹಾನಗರ ಪಾಲಿಕೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳುತ್ತಾರೆ, ಆದರೆ ಮೈಸೂರು ಮಹಾನಗರ ಪಾಲಿಕೆ, ಮಂಗಳೂರು ಮಹಾನಗರ ಪಾಲಿಕೆ, ಬೆಳಗಾವಿ ಮಹಾನಗರ ಪಾಲಿಕೆ, ಅಲ್ಲಿಯ ವಿವರಗಳನ್ನು ಕೊಟ್ಟಿದ್ದೀರಿ. ಅಲ್ಲಿಯ ವಿವರಗಳನ್ನು ಕೊಡುವಾಗ ಉಳಿದಂತಹ ಪಾಲಿಕೆಗಳ ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ತುಂಬ ಪ್ರಮುಖವಾದಂತಹ ಸಂಗತಿಯನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಉಗ್ರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ ಉತ್ತರ ಎಲ್ಲೋ ಸಮಂಜಸವಾಗಿಲ್ಲ, ಇದು ಅಪೂರ್ಣವಾದ ಉತ್ತರವಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಸರ್ಕಾರವನ್ನು ಪಂಚಾಯತ್ ಇಲಾಖೆ ಅಥವಾ ಪೌರಾಡಳಿತ ಇಲಾಖೆಗೆ ಅಥವಾ ನಗರ ಪಾಲಿಕೆಯ ಬಗ್ಗೆ intentionally entire state ಬಗ್ಗೆ ಕೇಳಿದ್ದೆ. ಆದರೆ ಇಲ್ಲಿ ಸರಿಯೋ, ತಪ್ಪೋ ಗೊತ್ತಿಲ್ಲ. ಮಾನ್ಯ ಸಚಿವರು ಈ ವಿಷಯ ನನ್ನ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಮಂಗಳೂರು ಮಹಾನಗರ ಪಾಲಿಕೆ ಅವರಿಗೆ ಬರುವುದಿಲ್ಲ ಆದರೂ ಅದರ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಮೈಸೂರು ಮಹಾನಗರ ಪಾಲಿಕೆ, ಬೆಳಗಾವಿ ಮಹಾನಗರ ಪಾಲಿಕೆಯ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ನೀವು ಕೊಟ್ಟಿರುವಂತಹ ನೋಟೀಸ್‌ನಲ್ಲಿಯೂ ತಪ್ಪಿದೆ, ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು ಸಹ ತಪ್ಪಿದೆ. ನೀವು ಹಿರಿಯ ಸದಸ್ಯರಿದ್ದೀರಿ. ನಿಮ್ಮ ನೋಟೀಸ್‌ನಲ್ಲಿ ಪೌರಾಡಳಿತ ಇಲಾಖೆಯ ವ್ಯಾಪ್ತಿಗೆ ಸೀಮಿತವಾಗಿ ಕೇಳಬಹುದಾಗಿತ್ತು ಅಥವಾ ನೀವು ಬೆಂಗಳೂರು ಮಹಾನಗರಕ್ಕೆ ಸೀಮಿತವಾಗಿರುವಂತೆ ಕೇಳಬೇಕಾಗಿತ್ತು. ಈಗ ಇಲಾಖೆಗಳು ಹಾಗೂ ಖಾತೆಗಳು ಬೇರೆ ಬೇರೆ ಇರುವಾಗ ನೀವು ಒಟ್ಟಾರೆ ರಾಜ್ಯದ ಬಗ್ಗೆ ವಿವರ ಕೇಳಿದರೆ ಮಾನ್ಯ ಸಚಿವರು ಹೇಗೆ ಉತ್ತರ ಕೊಡುತ್ತಾರೆ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ತ್ಯಾಜ್ಯ ವಿಲೇವಾರಿ ನಗರಕ್ಕಾಗಲಿ, ಪಟ್ಟಣಕ್ಕಾಗಲಿ ಅಥವಾ ಮಹಾನಗರಕ್ಕಾಗಲಿ ಒಂದೇ ವಿಷಯ.

**ಉಪ ಸಭಾಪತಿಯವರು:–** ಆ ರೀತಿ ಆಗುವುದಿಲ್ಲ. ನೀವು ಹಿರಿಯ ಸದಸ್ಯರಿದ್ದೀರಿ. ಹಾಗಾದರೆ ಬೆಂಗಳೂರು ಮಹಾ ನಗರ ಪಾಲಿಕೆಯನ್ನು ಪೌರಾಡಳಿತ ಇಲಾಖೆ ನಿರ್ವಹಣೆ ಮಾಡುತ್ತದೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇಲಾಖೆಗಳು ಅಧಿಕಾರ ವ್ಯಾಪ್ತಿಯನ್ನು divide ಮಾಡಿಕೊಂಡಿದ್ದಾರೆ. ಆದರೆ issue ಏನಿದೆ, ಇದು ಒಂದೇ issue. ತ್ಯಾಜ್ಯ ವಿಲೇವಾರಿ ಮಾಡುವಂಥದ್ದು ಹೇಗಿದೆ? ನಾನು ಈಗಾಗಲೇ ಹೇಳಿದಂತೆ ಇವತ್ತು ವಿಶ್ವದಲ್ಲಿ 700 ಕೋಟಿ ಜನಸಂಖ್ಯೆ ಇದೆ. ಜರ್ಮನಿ ಮತ್ತು ನೆದರ್‌ಲ್ಯಾಂಡ್‌ನಲ್ಲಿ best management ಮಾಡುತ್ತಿದ್ದಾರೆ. ನೆದರ್‌ಲ್ಯಾಂಡ್ ಮತ್ತು ಜರ್ಮನಿಯಲ್ಲಿ



“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ರೀತಿ ಉತ್ತಮವಾಗಿ ನಿರ್ವಹಣೆ ಮಾಡುತ್ತಿದ್ದಾರೆ ಆ ರೀತಿ ನಮ್ಮ ಕರ್ನಾಟಕದಲ್ಲಾಗಲಿ, ಭಾರತದಲ್ಲಾಗಲಿ ಏಕೆ ತ್ಯಾಜ್ಯ ವಿಲೇವಾರಿ ಮಾಡುತ್ತಿಲ್ಲ? ಇವತ್ತು ರಾಜ್ಯದಲ್ಲಿ ಎಲ್ಲಿಯೇ ತೆಗೆದುಕೊಂಡರು ಅದು ತುಮಕೂರಿನಲ್ಲಿರಬಹುದು, ಮಂಗಳೂರಿನಲ್ಲಿರಬಹುದು, ಬೆಳಗಾವಿಯಲ್ಲಿರಬಹುದು ಅಥವಾ ಗುಲ್ಬರ್ಗಾದಲ್ಲಿರಬಹುದು. ಈ ಎಲ್ಲಾ ಕಡೆಗಳಲ್ಲಿಯೂ ಏಕೆ mismanagement ಆಗುತ್ತಿದೆ? ಒಂದು ಕಡೆ 'ಸ್ವಚ್ಛ ಭಾರತ' ಎಂದು ಹೇಳುತ್ತಿದ್ದೇವೆ. ಒಂದು ಹಂತದಲ್ಲಿ ಬೆಂಗಳೂರು ನಗರವನ್ನು 'Garden City' ಎಂದು ಕರೆಯುತ್ತಿದ್ದೆವು. ಆದರೆ ಇವತ್ತಿನ ದಿವಸ ಒಂದು ಹಂತದಲ್ಲಿ ಮಾಧ್ಯಮ ಸ್ನೇಹಿತರು 'Garbage City' ಎಂದು ಕರೆಯುವಂತಹ ಸಂದರ್ಭ ಬಂದಿದೆ. ಆದುದರಿಂದ ನಾನು ಗ್ರಾಮ ಪಂಚಾಯಿತಿಯಲ್ಲಿ ಮುನಿಸಿಪಾಲಿಟಿಯಲ್ಲಿ, ಸಿಎಂಸಿ, ಕಾರ್ಪೊರೇಶನ್‌ಗಳಲ್ಲಿ ಹೇಗೆ ಮಾಡುತ್ತಿದ್ದೀರಿ ಎಂದು ಚರ್ಚೆ ಮಾಡುವುದಕ್ಕಿಂತ ಒಟ್ಟಾರೆಯಾಗಿ ಸರ್ಕಾರ ಈ ತ್ಯಾಜ್ಯ ವಿಲೇವಾರಿ ಮಾಡುವಂಥದ್ದರಲ್ಲಿ ಹೇಗೆ ನಡೆದಿದೆ? ಯಾವ ಕ್ರಮಗಳನ್ನು ಜರುಗಿಸಿದ್ದೀರಿ? ಬೆಂಗಳೂರಿನಲ್ಲಿ ನಡೆದಿರುವಂತಹ ಅವ್ಯವಹಾರಗಳೇನು? ಎಷ್ಟು ಹಣ ಆಗಿದೆ ಎಂದು ಕೇಳುವಂತಹ ಉದ್ದೇಶ ನನಗಿತ್ತು. ಈ ಹಿನ್ನೆಲೆಯಲ್ಲಿ ನಾನು ಕೇಳುತ್ತಿದ್ದೇನೆಯೇ ಹೊರತು ಸೀಮಿತವಾಗಿ ನಾನೇನು ಕೇಳುತ್ತಿಲ್ಲ. ಏಕೆಂದರೆ, ದಿನನಿತ್ಯ ಬೆಂಗಳೂರಿನಲ್ಲಿ ಮತ್ತು ಇನ್ನಿತರ ಕಡೆಗಳಲ್ಲಿ ಜನರ ಆಕ್ರೋಶವನ್ನು ಕಾಣುತ್ತಿದ್ದೇವೆ. ಎಲ್ಲವನ್ನೂ ನಾನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನನಗೆ ಸಮಯದ ಮಹತ್ವ ತಿಳಿದಿದೆ. ಡಾ||ಆನಂದ್ ಕುಮಾರ್, ಕೆ.ಸಿ.ಡಿ.ಸಿ ಅಧ್ಯಕ್ಷರಾಗಿದ್ದರು. ಅವರು ಬೆಂಗಳೂರಿನಲ್ಲಿ ಆಗಿರುವಂಥದ್ದರ ಬಗ್ಗೆ ಒಂದು ಪತ್ರವನ್ನು ಬರೆಯುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಉಗ್ರಪ್ಪನವರೆ, ದಯವಿಟ್ಟು ತಪ್ಪು ತಿಳಿಯಬೇಡಿ. ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ಪ್ರಸ್ತಾಪ ಮಾಡಿರುವಂತಹ ವಿಷಯವೇನಿದೆ ಅದು ಬಹಳ ಪ್ರಮುಖವಾಗಿರುವಂತಹ ವಿಷಯ. ಆದರೆ ಇವತ್ತಿನ ದಿವಸ ಅದಕ್ಕೆ ಉತ್ತರವನ್ನು ಯಾರು ಕೊಡುತ್ತಾರೆ? ಬೆಂಗಳೂರು ಮಹಾನಗರ ಪಾಲಿಕೆಯ ಪ್ರತಿನಿತ್ಯ ಸಂಗ್ರಹವಾಗುವಂತಹ ಮೂರೂವರೆ ಸಾವಿರ ಟನ್ ಘನತ್ಯಾಜ್ಯ ಏನಿದೆ, ಅದನ್ನು ವಿಲೇವಾರಿ ಮಾಡುವ ಬಗ್ಗೆ ಸನ್ಮಾನ್ಯ ಮಂತ್ರಿಗಳು ಖಂಡಿತವಾಗಿಯು ಉತ್ತರ ಕೊಡುವುದಿಲ್ಲ. ತಾವು ಉಲ್ಲೇಖ ಮಾಡಿದಂತೆ ಈ ಪ್ರಶ್ನೆಯಲ್ಲಿಯೇ ಗೊಂದಲವಿದೆ. ಏಕೆಂದರೆ ಅವರು ನೇರವಾಗಿ ಪೌರಾಡಳಿತ ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆಂದು ಹೇಳಿದ್ದಾರೆ. ಅದರಂತೆಯೇ ಅವರ ಖಾತೆಗೆ ಸೀಮಿತವಾಗಿಯೇ ಅವರು ಉತ್ತರ ಕೊಡಬೇಕು. ಉತ್ತರ ಕೊಡಬೇಕಾದರೆ ಮಹಾನಗರ ಪಾಲಿಕೆಗೆ ಸಂಬಂಧಪಟ್ಟಿರುವಂತಹ ಉತ್ತರವನ್ನು ಸಹ ಕೊಟ್ಟಿದ್ದಾರೆ. ಆದರೆ

ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಯಾರು ಉತ್ತರ ಕೊಡಬೇಕು? ಒಂದು ಕಡೆಯಿಂದ ಉತ್ತರ ಸರಿ ಇಲ್ಲ ಮತ್ತು ಮಾನ್ಯ ಸದಸ್ಯರು ಈ ಸಚಿವರಿಗೆ ಸೀಮಿತವಾಗಿಯೇ ಪ್ರಶ್ನೆ ಕೇಳಿದ್ದಾರೆ.

(ಮುಂದು)

(867) 20.06.2017 KG.BNS 6.20

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಮುಂದುವರೆದುದು)**

ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನೆಂದರೆ, ಇದು ಬಹಳ ಪ್ರಮುಖವಾದಂತಹ ವಿಷಯವಾಗಿರುವುದರಿಂದ ಮಾನ್ಯ ಸಚಿವರು ತಪ್ಪು ತಿಳಿದುಕೊಳ್ಳದೆ ಈ ಉತ್ತರವನ್ನು ಹಿಂಪಡೆದುಕೊಂಡು ವಿವರವಾದ ಉತ್ತರವನ್ನು ಕೊಟ್ಟರೆ ಚರ್ಚೆ ಮಾಡುವುದಕ್ಕೆ ಅವಕಾಶ ಇರುತ್ತದೆ. ಇಲ್ಲವೆಂದರೆ, ಮಾನ್ಯ ಸದಸ್ಯರು ಕೇಳುವಂತಹ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಲ್ಲಿ ಇದನ್ನು ಮತ್ತೊಮ್ಮೆ ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಈಶ್ವರ್ ಖಂಡ್ರೆ (ಪೌರಾಡಳಿತ ಸಚಿವರು):–** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರ ಪಾಲಿಕೆಯ ವಿಷಯಕ್ಕೆ ಸಂಬಂಧಪಟ್ಟಂತೆ, ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಕೆ.ಜೆ.ಜಾರ್ಜ್‌ರವರು ಉತ್ತರಿಸಬೇಕಾಗುತ್ತದೆ. ಮಹಾನಗರ ಪಾಲಿಕೆಗಳು ನನ್ನ ವ್ಯಾಪ್ತಿಗೆ ಬರದಿದ್ದರೂ ಸಹ, ಇಲ್ಲಿ ಉತ್ತರ ಕೊಡುವಂತಹ ಉದ್ದೇಶ ಏನೆಂದರೆ, ನಮ್ಮ ಕಾರ್ಯದರ್ಶಿಯವರು ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತು ಪಡಿಸಿ, ಮಹಾನಗರ ಪಾಲಿಕೆ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಅಧಿಕಾರಿ ಆಗಿದ್ದಾರೆ. ಆ ಒಂದು ನಿಟ್ಟಿನಲ್ಲಿ ನಮ್ಮ ಕಾರ್ಯದರ್ಶಿಯವರು ಮಹಾನಗರ ಪಾಲಿಕೆಗಳನ್ನು ಸೇರಿಸಿಕೊಂಡು ಈ ಉತ್ತರವನ್ನು ಕೊಟ್ಟಿದ್ದಾರೆ. ಈಗ over all ಆಗಿ ಹೇಳಬೇಕೆಂದರೆ, ಬೆಂಗಳೂರಿನಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುವಂತಹ ಮತ್ತು ಅದನ್ನು ಸಂಸ್ಕರಣೆ ಮಾಡುವಂತಹ ಕೆಲಸ ನಡೆಯುತ್ತಿದೆ. ಉದಾಹರಣೆಗೆ, ಮಂಗಳೂರು, ಬೆಳಗಾವಿ, ಶಿವಮೊಗ್ಗ, ಉಡುಪಿ, ಗೋಕಾಕ್ ಮತ್ತು ಕುಂದಾಪುರ ಈ ನಗರಗಳ ಬಗ್ಗೆ ಹೇಳಿರುವಂತಹ ಉದ್ದೇಶ ಏನೆಂದರೆ, ಇಲ್ಲಿ ಬಹಳ ಯಶ್ವಸಿಯಾಗಿ ಘನತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ಅದರಿಂದ ಏನು compost ಅಥವಾ manure ಬರುತ್ತದೆ ಅದನ್ನು ಮಾರಾಟ ಮಾಡುವಂತಹ ಮತ್ತು ಯಶ್ವಸಿಯಾಗಿ ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗುವಂತಹ ಕೆಲಸ ಕಾರ್ಯಗಳು ಸಮಗ್ರವಾಗಿ ನಡೆಯುತ್ತಿವೆ ಎಂದು ಹೇಳುವ ಉದ್ದೇಶಕ್ಕಾಗಿ ಈ ಏಳು ಸ್ಥಳಗಳನ್ನು ಉದಾಹರಣೆ ರೀತಿಯಲ್ಲಿ ಕೊಟ್ಟಿದ್ದೇವೆ. ಇದನ್ನು ಬೇರೆ ಯಾವುದೇ ಉದ್ದೇಶಕ್ಕೆ ಕೊಟ್ಟಿರುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರ ಪಾಲಿಕೆಯ ವಿಚಾರವಾಗಿ ಮಾನ್ಯ ಸಚಿವರು ತಿಳಿಸಿರುವ ವಿಚಾರವನ್ನು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಮಾನ್ಯ ಸಚಿವರು ಕೊಡುವುದಕ್ಕೆ ಆಗುವುದಿಲ್ಲ. ಇನ್ನುಳಿದ ಎಲ್ಲಾ ಸ್ಥಳೀಯ ಸಂಸ್ಥೆಗಳ ಪೈಕಿ ಈ ಏಳು ನಗರಗಳಲ್ಲಿ ಮಾತ್ರ ಘನತಾಜ್ಯ ವಿಲೇವಾರಿ ಆಗುತ್ತಿದೆಯೇ, ಬೇರೆ ಎಲ್ಲಿಯೂ ಸಹ ಆಗುತ್ತಿಲ್ಲವೇ ಎಂಬುದು ನನ್ನ ಪ್ರಶ್ನೆ.

**ಶ್ರೀ ಈಶ್ವರ್ ಖಂಡ್ರೆ–** ಮಾನ್ಯ ಸಭಾಪತಿಯವರೇ, ಬೇರೆ ಕಡೆಯೂ ನಡೆಯುತ್ತಿದೆ. ಇದನ್ನು ಉದಾಹರಣೆಗೆಂದು ಕೊಟ್ಟಿದ್ದೇವೆ. ಆದರೆ, ಬೇರೆ ಕಡೆ ಅಷ್ಟೊಂದು ಸಮರ್ಪಕವಾಗಿ ನಡೆಯುತ್ತಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಆ ರೀತಿ ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ನಾವು ಇಡೀ ರಾಜ್ಯದ ಮಾಹಿತಿಯನ್ನು ಕೇಳಿದ್ದೇವೆ. ಮಾನ್ಯ ಸಚಿವರು ಅವರ ಇಲಾಖೆಯ ಪೂರ್ತಿ ಮಾಹಿತಿಯನ್ನು ಕೊಡಬೇಕು ಅಲ್ಲವೇ? ಈ ಏಳು ನಗರಗಳ ಮಾಹಿತಿಯನ್ನು ಉದಾಹರಣೆಗೆ ಕೊಟ್ಟಿದ್ದೇವೆಂದರೆ ಹೇಗೆ? ಮೊದಲು ಮಾನ್ಯ ಸಚಿವರು ಬೆಂಗಳೂರು ಮಹಾನಗರ ಪಾಲಿಕೆ ನನ್ನ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಿದ್ದಾರೆ. ಈಗ ನಮ್ಮ ಕಾರ್ಯದರ್ಶಿಯವರು ಉತ್ತರ ಕೊಟ್ಟಿದ್ದಾರೆ, ಅದು ನಮಗೆ ಬರುತ್ತದೆ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಮಾನ್ಯ ಸಚಿವರ ಉತ್ತರ ಅಪೂರ್ಣವಾಗಿದೆ.

**ಶ್ರೀ ಈಶ್ವರ್ ಖಂಡ್ರೆ:–** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವವಾದಂತಹ ವಿಷಯವಾಗಿದ್ದು, ಈ ಉತ್ತರ ಸರಿ ಇದೆ. ಆ ನಿಟ್ಟಿನಲ್ಲಿ ಬೆಂಗಳೂರು ನಗರವನ್ನು ಸೇರಿಸಿಕೊಂಡು ಮುಂದೆ ಸಮಗ್ರವಾದ ಉತ್ತರವನ್ನು ಕೊಡುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡುತ್ತದೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಈ ಉತ್ತರವನ್ನು ಹಿಂಪಡೆಯುತ್ತೀರಾ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಉತ್ತರವನ್ನು ಹಿಂಪಡೆದು ಸಮಗ್ರವಾದ ಒಂದು ಉತ್ತರವನ್ನು ಒಟ್ಟಿಗೆ ಕೊಡುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಈಗ ಈ ಉತ್ತರವನ್ನು ಹಿಂಪಡೆಯಲೇಬೇಕು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಈಶ್ವರ್ ಖಂಡ್ರೆ:–** ಮಾನ್ಯ ಸಭಾಪತಿಯವರೇ, ಈ ಉತ್ತರವನ್ನು ಹಿಂಪಡೆಯುವಂತಹ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಬೆಂಗಳೂರನ್ನು ಸೇರಿಸಿಕೊಂಡು ಪರಿಷ್ಕೃತವಾದಂತಹ ಮತ್ತು ಸಮಗ್ರವಾದಂತಹ ಉತ್ತರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಈಗ ಸರಿಯಾದಂತಹ ಉತ್ತರವನ್ನೇ ಕೊಟ್ಟಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಕೇಳುವುದಿದ್ದರೆ ಕೇಳಬಹುದು.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬೇರೊಂದು ಸಮಗ್ರವಾದ ಉತ್ತರವನ್ನು ಕೊಡುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಮಾನ್ಯ ಸಚಿವರು ಆ ರೀತಿ ಹೇಳಿದ ಮೇಲೆ ಈ ಉತ್ತರವನ್ನು ಹಿಂಪಡೆದ ಹಾಗೆ. ಹೀಗಾಗಿ, ಇನ್ನೊಂದು ಹೊಸ ಉತ್ತರವನ್ನು ಕೊಡಲೇಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದಂತಹ ವಿಚಾರ. ಮಾನ್ಯ ಸದಸ್ಯರಾದ ವಿ.ಎಸ್.ಉಗ್ರಪ್ಪನವರು ಹೇಳಿರುವಂತೆ ಇದು ಇಡೀ ರಾಜ್ಯವನ್ನು ಕಾಡುವಂತಹ ಸಮಸ್ಯೆ ಆಗಿದೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆಗೆ ಅವಕಾಶ ಕೊಟ್ಟು, ಇದಕ್ಕೆ ಒಂದು ಪರಿಹಾರ ನೀಡುವಂತಹ ಅವಶ್ಯಕತೆ ಇದೆ. ಮಾನ್ಯ ಸಚಿವರು ಉತ್ತರವನ್ನು ಮಂಡಿಸಿದ್ದಾರೆ. ಮಾನ್ಯ ಸಚಿವರು ಮಂಡಿಸಿರುವಂತಹ ಉತ್ತರವನ್ನು ನಾವು ಸ್ವೀಕರಿಸುತ್ತೇವೆ. ಪರಿಷ್ಕೃತವಾದಂತಹ ಉತ್ತರವನ್ನು ಸದನ ಮುಗಿಯುವುದರೊಳಗೆ ಕೊಡುತ್ತಾರೆಯೇ? ಇದನ್ನು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು?

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಮ್ಮ ವ್ಯವಸ್ಥೆಯಲ್ಲಿ ಇದೊಂದು ದೊಡ್ಡ ಪಿಡುಗಾಗಿದೆ. ಇದಕ್ಕೆ ನಾವೆಲ್ಲರೂ ಸೇರಿ ಏನಾದರೊಂದು ಪರಿಹಾರವನ್ನು ರೂಪಿಸಬೇಕು. ಇದರಲ್ಲಿ ಇರುವಂತಹ loopholes ಮತ್ತು ಭ್ರಷ್ಟಾಚಾರದ ಬಗ್ಗೆ ಅನೇಕ ಮಾಹಿತಿಗಳು ನನ್ನ ಬಳಿ ಇವೆ. ಹೀಗಾಗಿ, ಇದನ್ನು ಯಾವ ರೀತಿ ತಡೆಯಬೇಕು ಮತ್ತು ಹೇಗೆ ನಿಗ್ರಹಿಸಬೇಕು ಎಂಬ ಉದ್ದೇಶದಿಂದ ನಾನು ಕೇಳಿದ್ದೇನೆ. ಈಗ ಮಾನ್ಯ ಸಚಿವರು ಅಲ್ಪ ಸ್ವಲ್ಪ ಮಾಹಿತಿಯನ್ನು ಕೊಟ್ಟಿದ್ದಾರೆ. ಅದು ಇರಲಿ. ನಾನು ಮಾನ್ಯ ಉಪ ಸಭಾಪತಿಯವರ ಮೂಲಕ ಮಾನ್ಯ ಪೌರಾಡಳಿತ ಸಚಿವರಲ್ಲಿ ಬೆಂಗಳೂರು ನಗರ ಮತ್ತು ರಾಜ್ಯದ ಇನ್ನಿತರ ಪಟ್ಟಣಗಳಲ್ಲಿ ತಾಜ್ಯ ಉತ್ಪಾದನೆಯನ್ನು ನಿರ್ವಹಣೆ ಮಾಡುವಂತಹ ದೃಷ್ಟಿಯಲ್ಲಿ ಸರ್ಕಾರ ತೆಗೆದುಕೊಂಡಿರುವ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕ್ರಮಗಳ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರಿಗೆ ಇದಕ್ಕೆ ಬಹುಶಃ ನಾಳೆ ಏನಾದರೂ ಉತ್ತರ ಕೊಡಲಿಕ್ಕೆ ಸಾಧ್ಯವಾದರೆ ಕೊಡಲಿ ಎಂದು ಹೇಳಬಯಸುತ್ತೇನೆ. ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಈ ಬಗ್ಗೆ ವಿಸ್ತೃತವಾದ ಚರ್ಚೆ ಮಾಡುವುದಕ್ಕೆ ಸೂಕ್ತವಾಗುತ್ತದೆಂದು ನಾನು ಭಾವಿಸುತ್ತೇನೆ.

**ಶ್ರೀ ಈಶ್ವರ್ ಖಂಡ್ರೆ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರವನ್ನು ಹೊರತುಪಡಿಸಿ ಸಮಗ್ರವಾದ ಉತ್ತರವನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದನ್ನು ನಾಳೆ ಕೊಡುವುದಕ್ಕೆ ಸೂಚಿಸುತ್ತೇನೆ. ಬೆಂಗಳೂರು ನಗರವನ್ನು ಸೇರಿಸಿ ಉತ್ತರ ಕೊಡಬೇಕು. ಅಂದರೆ, ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಕೆ.ಜೆ.ಜಾರ್ಜ್‌ರವರ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ. ಇದಕ್ಕೆ ಮತ್ತೆ ಸಮಯಾವಕಾಶ ಬೇಕಾಗಬಹುದು. ಬೆಂಗಳೂರು ನಗರಾಭಿವೃದ್ಧಿ ಸಚಿವರ ಜೊತೆಗೆ ಚರ್ಚೆ ಮಾಡಿದ ನಂತರ ಇದನ್ನು ನಾನು ಹೇಳುವುದಕ್ಕೆ ಮಾತ್ರ ಸಾಧ್ಯವಾಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಪೌರಾಡಳಿತ ಸಚಿವರು ಈ ಬಗ್ಗೆ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಕೆ.ಜೆ.ಜಾರ್ಜ್‌ರವರ ಬಳಿ ಚರ್ಚೆ ಮಾಡಲಿ. ಒಂದು ವೇಳೆ, ನಾಳೆ ಮಾಹಿತಿ ಬಂದರೆ ಸದರಿ ಮಾಹಿತಿಯನ್ನು ಸದನದ ಮುಂದೆ ಇಡುತ್ತೇನೆ. ಏಕೆಂದರೆ, ನಾನು ವ್ಯವಸ್ಥೆಯನ್ನು ಸರಿಪಡಿಸಬೇಕೆಂಬ ಉದ್ದೇಶದಿಂದ ಈ ಪ್ರಶ್ನೆಯನ್ನು ಕೇಳಿದ್ದೇನೆ. ದಯಮಾಡಿ ಮಾನ್ಯ ಪೌರಾಡಳಿತ ಸಚಿವರು ಇದನ್ನು ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಕೆ.ಜೆ.ಜಾರ್ಜ್‌ರವರ ಗಮನಕ್ಕೆ ತರಲಿ. ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಸಹ ನಾಳೆ ಸದನಕ್ಕೆ ಬರಲಿ. ಇದನ್ನು ಮತ್ತೆ ವಿಸ್ತೃತವಾಗಿ ಚರ್ಚೆ ಮಾಡೋಣವೆಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಈಶ್ವರ್ ಖಂಡ್ರೆ:-** ಮಾನ್ಯ ಸಭಾಪತಿಯವರೇ, ಇದನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಕೆ.ಜೆ.ಜಾರ್ಜ್‌ರವರ ಗಮನಕ್ಕೆ ತರುತ್ತೇನೆ. ಮತ್ತೆ ನನ್ನ ವ್ಯಾಪ್ತಿಗೆ ಬರುವಂತಹ ಸ್ಥಳೀಯ ಸಂಸ್ಥೆಗಳ ಬಗ್ಗೆ ಸಮಗ್ರವಾದ ಚರ್ಚೆ ಮಾಡುತ್ತೇವೆಂದು ಹೇಳಿದರೆ, ಅದಕ್ಕೆ ನಾನು ನಾಳೆ ತಯಾರಿದ್ದೇನೆ.

**ಸಭಾಪತಿಯವರು:-** ಇದನ್ನು ನಾಳೆ ತೆಗೆದುಕೊಳ್ಳಲಾಗುತ್ತದೆ. ಈಗ ಒಂದು ಲಘು ಪ್ರಕಟಣೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 13. ಪ್ರಕಟಣೆಗಳು

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:–

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104 ರ ಮೇರೆಗೆ ವಿಧಾನಸಭೆಯು ದಿನಾಂಕ 20.06.2017 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ, 2017

2. ಕರ್ನಾಟಕ ರಾಜ್ಯ ಡಾ॥ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

3. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕ, 2017

ಆ) ಕರ್ನಾಟಕ ವಿಧಾನ ಮಂಡಲದ ತರಬೇತಿ ಸಂಸ್ಥೆ ವತಿಯಿಂದ ಬುಧವಾರ, ದಿನಾಂಕ 21.06.2017 ರಂದು ಬೆಳಿಗ್ಗೆ 6.30 ರಿಂದ 8.00 ಗಂಟೆಯವರೆಗೆ ಶಾಸಕರ ಭವನದ ಸಮ್ಮೇಳನಾ ಸಭಾಂಗಣದಲ್ಲಿ ಮಾನ್ಯ ಸದಸ್ಯರುಗಳಿಗೆ ಯೋಗ ಗುರು ಶ್ರೀ ಡಿ.ನಾಗರಾಜ್‌ರವರಿಂದ ಯೋಗ, ಧ್ಯಾನ, ಪ್ರಾಣಾಯಾಮ ಕಾರ್ಯಕ್ರಮಗಳನ್ನು ಆಯೋಜಿಸಲಾಗಿರುತ್ತದೆ. ಸದರಿ ಯೋಗ ಶಿಬಿರದಲ್ಲಿ ಮಾನ್ಯ ಸದಸ್ಯರುಗಳು ಭಾಗವಹಿಸಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ನಾಳೆ ಬೆಳಿಗ್ಗೆ ಅಂದರೆ, ದಿನಾಂಕ 21ನೇ ಜೂನ್ ಮಾಹೆ 2017ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"